ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶುಕ್ರವಾರ, ದಿನಾಂಕ ೨ನೇ ಆಗಸ್ಟ್ ೧೯೮೫ ಶ್ರಾವಣ ೧೧ ೧೯೦೭ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ, ಬೆಳಿಗ್ಗೆ ೯–೦೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್ ರವರು) ಪೀಠವನ್ನು ಅಲಂಕರಿಸಿದ್ದರು

ವಿತ್ತೀಯ ಕಾರ್ಯಕಲಾಪಗಳು

೧೯೮೫–೮೬ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

(ಚರ್ಚೆ ಮುಂದುವರಿದುದು)

ಅಧ್ಯಕ್ಷರು.—ಮಾನ್ಯ ಶ್ರೀನಿವಾಸ್ ರವರೆ ಚರ್ಚೆಯು ೧೧-೩೦ ಗಂಟೆಗೆ ಮುಗಿಯಬೇಕಾಗಿರುವುದರಿಂದ ತಾವು ೧೫ ನಿಮಿಷದಲ್ಲಿ ನಿಮ್ಮ ಭಾಷಣವನ್ನು ಮುಗಿಸಿ. ಏಕೆಂದರೆ ಕಾಂಗ್ರೆಸ್ (ಐ) ಪಕ್ಷದವರು ೪೮೩ ನಿಮಿಷ ಮಾತನಾಡಿದ್ದಾರೆ. ಜನತಾ ಪಕ್ಷದವರು ೧೩೮ ನಿಮಿಷ ಮಾತನಾಡಿದ್ದಾರೆ. ಸಿ. ಪಿ. ಐ. (ಎಂ) ನವರು ೩೭ ನಿಮಿಷ ಮಾತನಾಡಿದ್ದಾರೆ. ಬಿ. ಜೆ. ಪಿ. ಪಕ್ಷದವರು ೩೩ ನಿಮಿಷ ಮಾತನಾಡಿದ್ದಾರೆ. ಹೀಗೆಲ್ಲಾ ಇರುವುದರಿಂದ, ತಾವು ಬೇಗ ಮುಗಿಸಬೇಕು.

† ಶ್ರೀ ಕೆ. ಎಚ್. ಶ್ರೀನಿವಾಸ್ (ಶಿವಮೊಗ್ಗ ಕ್ಷೇತ್ರ).—ಸನ್ಮಾನ್ಯ ಅಧ್ಯಕ್ಷರೆ, ೧೯೮೫–೮೬ರ ಆಯವ್ಯಯದ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ನನ್ನ ಮಾತುಗಳನ್ನು ಹೇಳುವುದಕ್ಕಿಂತ ಮುಂಚಿತವಾಗಿ ಈ ಬಗ್ಗೆ ಪೀಠಿಕೆಯಾಗಿ ಹೇಳಬಹುದಾದ ಟೀಕೆ ಟಿಪ್ಪಣಿಗಳನ್ನು ನನಗಿಂತ ಇನ್ನೂ ಸಮರ್ಥವಾಗಿ, ಇನ್ನೂ ಅರ್ಥಪೂರ್ಣವಾದ ಶಬ್ದಗಳಲ್ಲಿ ಕೆಲವಾರು ಪತ್ರಿಕೆಗಳವರು ತಮ್ಮ ಅಗ್ರ ಲೇಖನಗಳಲ್ಲಿ ಹೇಳಿದ್ದಾರೆ. ಅವುಗಳ ಬಗ್ಗೆ ಪ್ರಪ್ರಥಮವಾಗಿ ತಮ್ಮ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತೇನೆ. ಮೊದಲನೆಯದಾಗಿ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ ಬರೆದಿರತಕ್ಕಂತಹದ್ದು.—

MR. HEGDE RIDES AGAIN

"The latest Karnataka budget has revealed the deft tactician in Mr. Ramakrishna Hegde. He has swallowed some of his own words and figures presented in his interim account last March. He has also resorted to the familiar jam-tomorrow technique in dealing with water and power, the segments that inflict the maximum damage to life and progress in Karnataka. Through it all, however, he has artfully managed to project the image of Uncle Hegde who is

good to all and bad to none. This exercise in deficit financing without appearing to punch large holes in any pocket will enhance Mr. Hegde 's reputation for political astuteness and budgetary expertise. It may also help the Janata party extend its roots by an extra inch or two, espe cially among government servants who have been given a virtual treasure trove of goodies. Whether it will also make life as hade easier in Karnataka is an altogether different matter.

Chances are that it will not. Mr. Hegde who spent a good deal of his time criticising the inflationary potential of the Central Government 's budgetary thrust, has only given that dreaded spiral a further twist of his own with his budget.

The s-les tax "rationalisation"for example is a progressive step while the relief measures provided will elicit hurrahs from all round. But the hidden threat is the levy of "a 10 percent development cess on basic sales tax". This will trigger a general price. rise So will other proposals the experienced Mr. Hegde has written between the lines......

At another level, he is depending too much on Central Government relief. Even the Rs. 221-crore loan converted from overdraft has been written into the relief amount. This may be a clever exercise in terms of headline budgetting, but it also suggests that the actual deficit could be much higher than the Rs. 74 crore Mr. Hegde has announced. At yet another level, Mr. Hegde has cut capital outlay while increasing revenue expenditure. This means less for development."

Further Sir, "THE TIMES" has observed thus :

> "Two things about Mr. Hegde's Budget speech are noteworthy. One is that it is fortunately bereft of the rhetoric and romanticism of his earlier Budgets. There is certainly a greater degree of realism in the 1985-86 Budget, which, incidentally go s againts the background of what may be the third successive drought in Karnataka. The other notable feature is Mr Hegde's continued oppositsion to many Central Policies."

ಮುಂಗಾರು ಪತ್ರಿಕೆಯಲ್ಲಿ ಒಂದು ಮಾತು ಬರೆದಿದ್ದಾರೆ ಅದು ಈ ರೀತಿ ಇದೆ.

"ಎರಡು ವರ್ಷಗಳ ಜನತಾ ಪಕ್ಷದ ಆಳ್ವಿಕೆಯಲ್ಲಿ ಹೇರಲಾದ ಒಟ್ಟು ತೆರಿಗೆಯ ಮೊತ್ತ ೧೩೭ ಕೋಟಿ ರೂಪಾಯಿಗಳು. ಅದಕ್ಕೆ ಮೊದಲು ಮೂರು ವರ್ಷಗಳ ಅವಧಿಯಲ್ಲಿ ಹೇರಲಾದ ಹೆಚ್ಚುವರಿ ತೆರಿಗೆಯ ಮೊತ್ತ ಒಟ್ಟು ೫೫ ಕೋಟಿ ರೂಪಾಯಿಗಳು. ಈ ಅಂಕಿ ಅಂಶಗಳೇ ರಾಜ್ಯದ ಹಣಕಾಸಿನ ಪರಿಸ್ಥಿತಿ ಸುಗಮವಾಗಿಲ್ಲ ವೆಂಬುದನ್ನು ಸೂಚಿಸುತ್ತವೆ.

ಹೀಗೆ ಆರ್ಥಿಕ ಸ್ಥಿತಿ ಕೆಟ್ಟು ಹೋದುದಕ್ಕೆ ಸರ್ಕಾರಕ್ಕೆ ಆಡಳಿತ ವೆಚ್ಚದ ಮೇಲೆ ನಿಯಂತ್ರಣ ತಪ್ಪಿಹೋಗಿರುವುದೇ ಕಾರಣ. ಅಭಿವೃದ್ಧಿಗಾಗಿ ಹಣ ವೆಚ್ಚ ಮಾಡಿದೆಯಲ್ಲ ಹಾಗಾದರೂ ಮಾಡಿದ್ದರೆ ಅದರಿಂದ ಕೊರತೆಯು ಹಣ ಏಕು ಹೆಚ್ಚಿನ ತೆರಿಗೆಯು ಬಂದಿದ್ದರೆ ಜನ ಸಹಿಸಿ ಕೊಳ್ಳುತ್ತಿದ್ದರು. ಈಗ ಅಭಿವೃದ್ಧಿ ಯೋಜನೆಗಳಿಗೆ ಹಣ ಹೆಚ್ಚಿಸಲಾಗಿಲ್ಲ. ಅದು ಕಳೆದ ವರ್ಷದಷ್ಟೇ ಇರುವುದೆಂದು ಮುಖ್ಯ ಮಂತ್ರಿಗಳು ಪ್ರಕಟಿಸಿದ್ದಾರೆ. ಹಾಗಿದ್ದರೆ ಕೊರತೆ ಯಾದ ೭೪ ಕೋಟಿ ರೂಪಾಯಿ ಹಾಗೂ ಹೆಚ್ಚಿನ ತೆರಿಗೆಯಾದ ೫೦ ಕೋಟಿ ರೂಪಾಯಿ ಯಾವ ಪೊಟರೆಯಲ್ಲಿ ಮಾಯವಾಗುತ್ತದೆ? ಈ ಆಡಳಿತ ವೆಚ್ಚ ಹೆಚ್ಚಲಿಕ್ಕೆ ಯಾರು ಹೊಣೆ ಎಂದು ಕೇಳುವ ಹಕ್ಕು ಜನರಿಗಿದೆ.’

ಇದನ್ನೆಲ್ಲಾ ಒಟ್ಟು ಮಾಡಿ ತಾತ್ಪರ್ಯ ರೂಪವಾಗಿ ಪ್ರಜಾವಾಣಿ ಪತ್ರಿಕೆ ಒಂದು ಮಾತು ಬರೆದಿದೆ. ಅದು ಈ ರೀತಿ ಇದೆ:

‘‘ಹೆಗಡೆಯವರ ಆಯವ್ಯಯ ಒಂದು ನಿರ್ಧಿಷ್ಟ ವ್ಯಾಖ್ಯೆಗೆ ಸಿಗಲಾರದು, ಅದಕ್ಕೆ ಕಾರಣ, ಮೂಲಭೂತ ಪರಿವರ್ತನೆಯನ್ನು ತರುವಂಥ ಹೊಸದೇನು ಈ ಆಯವ್ಯಯಲ್ಲಿ ಕಾಣುತ್ತಿಲ್ಲ. ಯಾವುದೇ ದಿಕ್ಕಿನಲ್ಲಿ ದೂರ ಹೋಗಲಾರದೆ ಹಿಂಜರಿಯುವ ಪ್ರವೃತ್ತಿ ಆಯವ್ಯಯದ ಉದ್ದಕ್ಕೂ ಕಂಡುಬರುತ್ತದೆ. ಈಗ ಅವರ ಪಕ್ಷ ಗಟ್ಟಿ ನೆಲದ ಮೇಲೆ ನಿಂತಿರುವುದರಿಂದ ಹೆಚ್ಚು ಧೈರ್ಯ ಮಾಡಬಹುದಾಗಿತ್ತು. ಮಹಿಳೆಯರ ಆಸ್ತಿ ಹಕ್ಕು ಹೊರತು ಉಳಿದಂತೆ ಹೊಸದೇನು ಕಂಡುಬರುತ್ತಿಲ್ಲ ಐದು ದಿನಗಳ ವಾರದಂಥ ನಿರ್ಧಾರ ಕೇಂದ್ರದ ಅನುಕರಣೆ’’.

ಮಾನ್ಯ ಅಧ್ಯಕ್ಷರೆ, ಇವುಗಳೆಲ್ಲದರ ತಾತ್ಪರ್ಯ ಏನು ಎಂದರೆ ಈ ಆಯವ್ಯಯಕ್ಕೆ ಯಾವುದೇ ನಿರ್ದಿಷ್ಟವಾದ ಗೊತ್ತುಗುರಿಗಳು ಇಲ್ಲ. ಇವರ ಹಿಂದೆ, ಒಂದು ಸಮಗ್ರ ದೃಷ್ಟಿಕೋನದಿಂದ ಕರ್ನಾಟಕದ ಜನತೆ ಎದುರಿಸಿರತಕ್ಕ ಸಂಕಷ್ಟಗಳ ನೈಜ ಕಲ್ಪನೆ, ಒಂದು ಪ್ರಾಮಾಣಿಕ ಚಿಂತನೆಯನ್ನು ಹರಿಸಿ ನಮ್ಮ ಮುಂದಿರತಕ್ಕ ಸಮಸ್ಯೆಗಳನ್ನು ಎದುರಿಸತಕ್ಕ ಯಾವುದೇ ವಿಚಾರ ಈ ಆಯವ್ಯಯದಲ್ಲಿ ಇಲ್ಲ. ‘‘ಥಿಂಕ್ ಟ್ಯಾಂಕ್’’ ಎಂದು ಹೇಳುತ್ತಿದ್ದರು, ಅದು ಏನಾಯಿತೋ ಗೊತ್ತಿಲ್ಲ. ಯಾರು ಆ ಹೆಸರನ್ನು ಮುಖ್ಯ ಮಂತ್ರಿಗಳಿಗೆ ಹೇಳಿದರೋ ಆ ಬೃಹಸ್ಪತಿಗಳಿಗೆ ನಮಸ್ಕಾರ ಹೇಳಬೇಕು. ಟ್ಯಾಂಕ್ ಅಂದರೆ ನಿಂತ ನೀರಿಗೆ ಕರೆಯತಕ್ಕ ಹೆಸರು. ನಿಂತ ನೀರಿಗೂ ಚಿಂತನೆಗೂ......

ಶ್ರೀ ಎ. ಲಕ್ಷ್ಮೀಸಾಗರ್.—ಅದು ಹೊರಗಡೆಯಿಂದ ಬರಬೇಕು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಹೊರಗಡೆಯಿಂದ ಬಂದ ನೀರಿಗೆ ಅಲ್ಲ, ನಿಂತ ನೀರಿಗೆ ಟ್ಯಾಂಕು ಕಟ್ಟುವುದು. ನಿಮ್ಮ ಥಿಂಕ್ ಟ್ಯಾಂಕು ಕೂಡ ನಿಂತ ನೀರಿಗೆ ಪ್ರತೀಕವಾಗಿ ಇರತಕ್ಕದ್ದಾಗಿದೆ. ಅದ ಕೋಸ್ಕರ ಇಂಥ ಒಂದು ಆಯವ್ಯಯ ಆ ಚಿಂತನೆಯ ಫಲವಾಗಿ ಬಹುಶಃ ಈ ರಾಜ್ಯಕ್ಕೆ ದೊರಕಿದೆ. ಈ ಆಯವ್ಯಯದಲ್ಲಿ ಕೇವಲ ಅಂಕಿಸಂಖ್ಯೆಗಳ ದೊಂಬರಾಟ ಇದೆಯೇ ಹೊರತು ತಾತ್ಪರ್ಯ ಏನೂ ಇಲ್ಲ. ಇಕನಾಮಿಕ್ ಸರ್ವೆ ಏನಿದೆ ಅದನ್ನು ಇಟ್ಟುಕೊಂಡು ಈ ಆಯವ್ಯಯವನ್ನು ನೋಡಬೇಕಾಗುತ್ತದೆ. ಆದರೆ ಈಗ ಸಮಯ ಇಲ್ಲದಿರುವುದರಿಂದ ಅದನ್ನೆಲ್ಲ ಓದಿ ಹೇಳುವುದಕ್ಕೆ ಹೋಗುವುದಿಲ್ಲ. ಪತ್ರಿಕೆಯಲ್ಲಿ ಸಾಕಷ್ಟು ಬಂದಿದೆ. ಮೊನ್ನೆ ಥ್ರಿಡಿ ಒಂದು ಸಿನೇಮಾ ಬಂದಿತ್ತು. ಅದಕ್ಕೆ ಕನ್ನಡಕ ಹಾಕಿ ಕೊಳ್ಳದಿದ್ದರೆ ಸರಿಯಾಗಿ ಕಾಣಿಸುತ್ತಿರಲಿಲ್ಲ. ಎರಡೂ ತರಹ ಚಿತ್ರಗಳ ಹೊಂದಾಣಿಕೆ ಆದಾಗ ಮಾತ್ರ ಗೊತ್ತಾಗುತ್ತದೆ. ಹಾಗೆ ಈ ಆಯವ್ಯಯ ಅರ್ಥವಾಗಬೇಕಾದರೆ ಇಕನಾಮಿಕ್ ಸರ್ವೆಯನ್ನು ಕೂಡ ಓದಬೇಕಾಗುತ್ತದೆ. ಯಾವುದೇ ವಿಚಾರವನ್ನು ತೆಗೆದುಕೊಳ್ಳಿ. ಸರ್ಕಾರದ ಪ್ರಯತ್ನದಿಂದ ಏನಾದರೂ ಸಾಧನೆಯಾಗಿದೆ ಎಂದು ಇದರಲ್ಲಿ ಎಲ್ಲಿಯೂ ಇಲ್ಲ. ಎಣ್ಣೆಕಾಳಿನ ಉತ್ಪಾದನೆ ಪ್ರಶ್ನೆ ಇರಬಹುದು, ನೀರಾವರಿಯನ್ನು ಹೆಚ್ಚು ಮಾಡತಕ್ಕದ್ದು ಇರಬಹುದು. ವಿದ್ಯುಚ್ಛಕ್ತಿ ವಿಚಾರ ಇರಬಹುದು, ಎಲ್ಲವೂ ಅಲ್ಲಲ್ಲೆ ಇವೆ, ಒಂದು ಹೆಜ್ಜೆ ಕೂಡ ಮುಂದೆ ಹೋಗಿಲ್ಲ ಸಾಕಷ್ಟು ಕ್ಷೇತ್ರದಲ್ಲಿ ಹಿಂಜರಿತ ಉಂಟಾಗಿದೆ. ಆದ್ದರಿಂದ, ಈ ಆಯವ್ಯಯ ಕೇವಲ ಇಲ್ಲವೆ ಇದ್ದಂತಹ ಒಂದು ಸ್ಥಿತಿಯನ್ನು ತೋರಿಸುವುದಕ್ಕೆ ಮಾಡಿರತಕ್ಕ ಪ್ರಯತ್ನ. ಒಬ್ಬ ಕಲಾವಿದ ಪ್ರಪಂಚದಲ್ಲಿರತಕ್ಕ ಕೆಲವಾರು ಸುಂದರವಾದ ಅಂಗಾಂಗಗಳನ್ನು

ಅಂದರೆ ಸುಂದರವಾದ ಮೂಗು ಸುಂದರವಾದ ಕಣ್ಣು, ಸುಂದರವಾದ ಕಿವಿ, ಸುಂದರವಾದ ನಡು ಹೀಗೆ ಎಲ್ಲವನ್ನು ಆರಿಸಿಕೊಂಡು ಒಟ್ಟು ಸೇರಿಸಿ ಚಿತ್ರ ಬರೆದಾಗ ತುಂಬಾ ವಿಕಾರ ಚಿತ್ರವಾಯಿತು. ಆ ಪರಿಸ್ಥಿತಿ ಆಯವ್ಯಯಕ್ಕೆ ಒದಗಿದೆ. ಹೆಗಡೆಯವರು ಸ್ವಂತಿಕೆ ಯಿಂದ ನಮ್ಮ ನೆಲದ ಮೇಲೆ ನಿಂತು ಯೋಚನೆ ಮಾಡಿ ನಮ್ಮ ಸಮಸ್ಯೆಗಳ ಬಗ್ಗೆ ಆಳವಾಗಿ ಚಿಂತಿಸಿ ಆಯವ್ಯಯವನ್ನು ರೂಪಿಸಲಿಲ್ಲ. ಅಲ್ಲಿ ಇಲ್ಲಿ ಎಲ್ಲೆಲ್ಲಿ ಚೆನ್ನಾಗಿ ಕಾಣುತ್ತದೆ ಅದನ್ನೆಲ್ಲ ತೆಗೆದುಕೊಂಡು ಬಂದು ತುಂಬಿ ಒಳ್ಳೆಯ ಆಯವ್ಯಯ ಎನ್ನುವ ಭಾವನೆ ಬರುವ ರೀತಿಯಲ್ಲಿ ಭಾಷಣವನ್ನು ತಯಾರು ಮಾಡಿ ಓದಿದ್ದಾರೆ. ಅಂದರೆ ಸತ್ತು ಹೋದ ಪ್ರಾಣಿಗಳನ್ನು ಅದರೊಳಗೆ ಇರತಕ್ಕದ್ದನ್ನು ತೆಗೆದು ಅರಳೆ, ಚಿಂದಿ ಎಲ್ಲ ತುಂಬಿ ಹೊಲಿದು ಜೀವಂತವಾಗಿ ಕಾಣುವಂತೆ ಮಾಡುವ ಚರ್ಮ ಪ್ರಸಾಧನ (Taxidermy) ಕಲೆ ಇದೆ. ಅಂಥ ಕಲೆಯಲ್ಲಿ ಇವರು ಪ್ರಾವೀಣ್ಯತೆ ತೋರಿಸಿದ್ದಾರೆ. ಸತ್ತುಹೋದಂತಹ ಅರ್ಥವ್ಯವಸ್ಥೆ ಅದು ಬದುಕಿದೆ ಎಂದು ತೋರಿಸುವ ಪ್ರಯತ್ನ ಮಾಡಿದ್ದಾರೆಯೇ ಹೊರತು ಅರ್ಥ ವ್ಯವಹಾರದಲ್ಲಿ ಅವರ ಪ್ರಾವೀಣ್ಯತೆಯನ್ನು ತೋರಿಸಲಿಲ್ಲ. ನೀವು ಯಾವ ಪತ್ರಿಕೆಯನ್ನಾದರೂ ನೋಡಿ ಅದರಲ್ಲಿ ಇವರ ಬುದ್ಧಿವಂತಿಕೆ, ಚಾಣಕ್ಯೆಯ ಬಗ್ಗೆ ಪ್ರಶಂಸೆ ಮಾಡಿದ್ದಾರೆ. ಮುಖ್ಯ ಮಂತ್ರಿಗಳು ದಡ್ಡರಾಗಿರಬೇಕೆಂದು ಅಲ್ಲ, ಬುದ್ಧಿವಂತರಾಗಿರಬೇಕು, ಆದರೆ ಕೇವಲ ಬುದ್ಧಿವಂತಿಕೆಯಿಂದ ಜನರನ್ನು ಮುನ್ನಡೆಸತಕ್ಕದ್ದು ಸಾಧ್ಯವಿಲ್ಲ. ಅತಿ ಬುದ್ಧಿವಂತಿಕೆ ತನ್ನನ್ನೇ ತಾನು ಮೋಸಗೊಳಿಸತಕ್ಕ ಸ್ಥಿತಿಗೆ ಬಂದು ನಿಲ್ಲುತ್ತದೆ. ಆಗ ಇನ್ನೂ ಅಪಾಯಕಾರಿಯಾಗುತ್ತದೆ. ಅಂಥ ಬುದ್ಧಿವಂತಿಕೆ ಮಾಡಿದರೆ ಪ್ರಯೋಜನವಿಲ್ಲ. ಅದಕ್ಕಿಂತ ಹೆಚ್ಚಾಗಿ ನಾವು ರಾಜ್ಯ ಮುಖ್ಯ ಮಂತ್ರಿಗಳಿಂದ ಮತ್ತು ಅರ್ಥ ಮಂತ್ರಿಗಳಿಂದ ಪ್ರಾಮಾಣಿಕತೆಯನ್ನು ನಿರೀಕ್ಷಿಸುತ್ತೇವೆ. ರಾಜ್ಯದ ಆರ್ಥಿಕ ಸ್ಥಿತಿ ಏನಾಗಿದೆ?

ನಾವೆಲ್ಲಾ ಕೆಲವು ವಿಚಾರಗಳನ್ನು ಕೇಳಿದ್ದೇವೆ. ಯಾವ ರೀತಿ ಚೆಕ್‌ಗಳು ತಿರಸ್ಕೃತವಾಯಿತು. ಯಾವ ರೀತಿ ಹಣಕಾಸಿನ ಪರಿಸ್ಥಿತಿ ಬಿಗಡಾಯಿಸಿತು, ಸಂಬಳಕ್ಕೂ ದುಡ್ಡಿಲ್ಲದ ಪರಿಸ್ಥಿತಿ ಬಂದಿತ್ತು ಎಂಬುದು ಪತ್ರಿಕೆಯಲ್ಲಿ ಬಂದಿದೆ. ಅದರ ಬಗ್ಗೆ ಹೇಳಿದರೆ ಮುಖ್ಯಮಂತ್ರಿಗಳಿಗೆ ಕೋಪ ಬರಬಹುದು. ಒಂದು ಸಂದರ್ಭದಲ್ಲಿ ಅದೆಲ್ಲಾ ಸರಿಯಿಲ್ಲ, ಅದೆಲ್ಲಾ ಸ್ವಕಪೋಲ ಕಲ್ಪನೆ ಎಂದು ಹೇಳಿದರು. ನಾನು ನನ್ನ ಮಾತಿಗಿಂತ ಹೆಚ್ಚಾಗಿ ಮಾನ್ಯ ಮುಖ್ಯ ಮಂತ್ರಿಗಳು ಹಿಂದೆ ವಿರೋಧ ಪಕ್ಷದ ನಾಯಕರಾಗಿದ್ದಾಗ ಏನೇನು ಮಾತುಗಳನ್ನು ಇಂಥ ವಿಚಾರದಲ್ಲಿ ಹೇಳಿದ್ದರು ಎಂಬ ಬಗ್ಗೆ ಅವರ ಗಮನ ಸೆಳೆಯಲಿಕ್ಕೆ ಬಯಸುತ್ತೇನೆ. ೧೯೭೧ರಲ್ಲಿ ಇದೇ ರೀತಿ ಆಯವ್ಯಯದ ಮೇಲೆ ಮಾತನಾಡುತ್ತಾ ಮಾನ್ಯ ಮುಖ್ಯಮಂತ್ರಿಗಳು ಅಪ್ಪಣೆ ಕೊಡಿಸಿರತಕ್ಕ ಮಾತುಗಳನ್ನು ಉಲ್ಲೇಖಿಸುತ್ತೇನೆ.

> ''ಎಂದೇ ಆಗಲಿ, ಯಾರೇ ಆಗಲಿ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ವಹಿಸಿಕೊಳ್ಳತಕ್ಕವರು ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಮುಚ್ಚಿಡುವುದಕ್ಕೆ ಹೋಗಬಾರದು. ಅದರಿಂದ ಅವರ ಕೀರ್ತಿಗೆ ಬಹಳ ಧಕ್ಕೆ ಬರುತ್ತದೆ. ಅಷ್ಟೇ ಅಲ್ಲದೆ ಅದರಿಂದ ಅವರ ಘನತೆಗೂ ಧಕ್ಕೆ ಬರುತ್ತದೆ. ಅದರಿಂದ ರಾಜ್ಯಕ್ಕೂ ಲಾಭವಿಲ್ಲ ನಾವು ಎಂದಿದ್ದರೂ ಹಾಸಿಗೆ ಇದ್ದಷ್ಟು ಕಾಲನ್ನು ಚಾಚಬೇಕು.
>
> ಆಗಲೂ ಇದೇ ಪರಿಸ್ಥಿತಿ ನಿರ್ಮಾಣವಾಗಿತ್ತು ಆಗ ಏನು ಹೇಳಿದರೆಂದರೆ:—
> ''ಸರ್ಕಾರದವರು ಟ್ರೆಜರಿಗೆ ಆರ್ಡರ್ ಮಾಡಿದ್ದು ಪೇಪರಿನಲ್ಲಿ ಬಂದಿದೆ. ಸಂಬಳ ಮತ್ತು ಪೆನ್‌ಷನ್ ಹೊರತು ಬಾಕಿ ಎಲ್ಲಾ ಪೇಮೆಂಟ್ಸ್ ನಿಲ್ಲಿಸಬೇಕು ಎಂದು ಆರ್ಡರ್ ಹೋಗಿತ್ತು. ದೊಡ್ಡ ದೊಡ್ಡ ಕಂಟ್ರಾಕ್ಟರನ್ನು ಬಿಟ್ಟುಬಿಡೋಣ. ಸಂಬಳ ಮತ್ತು ಪೆನ್‌ಷನ್ ಎರಡೂ ಬಿಟ್ಟರೆ ಬಾಕಿ ಪೇಮೆಂಟ್ ನಿಲ್ಲಿಸತಕ್ಕಂಥಾದ್ದು ಎಂದು ಸರ್ಕಾರದಿಂದ ಆರ್ಡರ್ ಹೋಗಿದೆ. ಅದು ಪೇಪರಿನಲ್ಲಿ ಬಂದಿದೆ.''
>
> ''ನಾನು ಮಾನ್ಯ ಘೋರ್ಪಡೆಯವರಿಗೆ ನೇರವಾಗಿ ಒಂದು ಪ್ರಶ್ನೆಯನ್ನು ಕೇಳಬೇಕೆಂದಿದ್ದೇನೆ. ಕಳೆದ ಆಗಸ್ಟ್ ತಿಂಗಳಿನಿಂದ ಅವರು ರಾಜ್ಯದ ಹಣಕಾಸಿನ ಇಲಾಖೆಯನ್ನು ವಹಿಸಿಕೊಂಡ ನಂತರ ಅಂದರೆ ಆ ವರ್ಷದಿಂದ ಅವರು ರಾಜ್ಯದ ಹಣಕಾಸಿನ ವಿಚಾರದಲ್ಲಿ ಬಹಿರಂಗವಾಗಿ ವ್ಯಕ್ತಪಡಿಸುತ್ತಾ ಬಂದಿದ್ದಾರೆ. ಅದು ಹೇಗಿಗೆಯೆಂದರೆ ಈ ತಿಂಗಳಲ್ಲಿ ತಪ್ಪದೆ ಶುಕ್ಲಪಕ್ಷ ಮತ್ತು ಕೃಷ್ಣಪಕ್ಷಗಳು ಹೇಗೆ ಬರುತ್ತಿದೆಯೋ ಹಾಗೆ ಇವರು ಕೂಡ

ಶುಕ್ಲಪಕ್ಷದಲ್ಲಿ ರಾಜ್ಯದ ಹಣಕಾಸಿನ ಪರಿಸ್ಥಿತಿ ಉತ್ತಮವಾಗಿದ್ದಂತೆಯೂ ಮತ್ತು ಕೃಷ್ಣ ಪಕ್ಷದಲ್ಲಿ ಕ್ಲಿಷ್ಟಕರವಾಗಿದ್ದಂತೆಯೂ ಹೇಳಿಕೆಗಳನ್ನು ಕೊಡುತ್ತಾ ಬಂದಿದ್ದಾರೆ. The State finances are not very sound the State finances are in critical position. Why does not the Finance Minister makeup his mind in regard to the soundness or otherwise of the State's finance? Let him take a consistant stand.''

ಮುಂದಿನ ವಾಕ್ಯ ಬಹಳ ಮುಖ್ಯವಾದುದು.

''Otherwise, it will shake the very confidence of the people and the financial stability of the State,''

ಇದನ್ನೇ ನಾವು ಹೇಳುತ್ತಾ ಇರತಕ್ಕದ್ದು. ಮಾನ್ಯ ಯಡಿಯೂರಪ್ಪನವರು ದುಡ್ಡಿದೆಯೋ ಇಲ್ಲವೋ ಹೇಳಿಬಿಡಿ ಎಂದು ಹೇಳುತ್ತಿದ್ದರು ಬಜೆಟ್ ಅಧಿವೇಶನಕ್ಕೆ ಎರಡು ದಿವಸ ಮುಂಚೆ ಎಲ್ಲಾ ಸರಿಯಾಗಿದೆ ಎಂದು ಮುಖ್ಯಮಂತ್ರಿಗಳು ಹೇಳುತ್ತಿದ್ದರು. ಶುಕ್ಲಪಕ್ಷ ಕೃಷ್ಣಪಕ್ಷ ಹೋಗಲಿ, ಒಂದೇ ದಿವಸ ಅಮಾವಾಸ್ಯೆ ಹುಣ್ಣಿಮೆ ಮಾಡುತ್ತಿದ್ದಾರೆ ಇವರು. ಮಾನ್ಯ ಘೋರ್ಪಡೆಯವರು ೧೫ ದಿವಸವಾದರೂ ಟ್ರಿಪ್ ತೆಗೆದುಕೊಳ್ಳುತ್ತಿದ್ದರು. ಒಂದು ಕಡೆ ಮುಖ್ಯಮಂತ್ರಿಯವರು ರಾಜ್ಯದ ಆರ್ಥಿಕ ಪರಿಸ್ಥಿತಿ ಸರಿಯಾಗಿದೆ ಎಂದು ಹೇಳುತ್ತಿದ್ದರೆ ಪ್ರಶ್ನೋತ್ತರ ವೇಳೆಯಲ್ಲಿ ಹತ್ತಾರು ದಿವಸಗಳಿಂದ ಒಬ್ಬರಲ್ಲ ಒಬ್ಬರು ಮಂತ್ರಿಗಳು ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲ ಎಂದು ಉತ್ತರ ಹೇಳುತ್ತಿದ್ದಾರೆ. ನಮ್ಮ ಊರಿಗೆ ಹೋದರೆ ಪ್ರೈಮರಿ ಶಾಲೆ ಬಿದ್ದು ಹೋಗುತ್ತಿದೆ. ಮಕ್ಕಳ ಮೇಲೆ ಬೀಳುತ್ತದೆ. ರಿಪೇರಿ ಮಾಡಿಸಿ ಎಂದರೆ ಹಣ ಇಲ್ಲ ಎಂದು ಹೇಳುತ್ತಾರೆ. ಕೇಂದ್ರಸರ್ಕಾರದ ಎನ್. ಆರ್. ಇ. ಪಿ. ಹಣ ಬರದಿದ್ದರೆ ಸರ್ಕಾರದ ಬಂಡವಾಳ ಇನ್ನೂ ಬೇಗ ಹೊರಬರುತ್ತಿತ್ತು. ಆರ್ಥಿಕ ಪರಿಸ್ಥಿತಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ೧೦ ವರ್ಷದ ಕೆಳಗೆ ಏನು ಅಪ್ಪಣೆ ಕೊಡಿಸಿದ್ದಾರೋ ಆ ವಿಚಾರವನ್ನು ಜಾರಿಗೆ ತಂದರೆ ಸದನವನ್ನು ಪ್ರಾಮಾಣಿಕವಾಗಿ ವಿಶ್ವಾಸಕ್ಕೆ ತೆಗೆದುಕೊಂಡರೆ ಆಗ ಆಯವ್ಯಯದ ಬಗ್ಗೆ ಭಾಷಣ ಮಾಡುವುದು ಅರ್ಥಪೂರ್ಣವಾಗುತ್ತದೆ. ಸುಮ್ಮನೆ ಅಂಕಿ ಸಂಖ್ಯೆ ಕೊಟ್ಟು ದಾರಿ ತಪ್ಪಿಸಿ ಹೌದು ಎಂದು ನಾವು ಅಂದುಕೊಂಡು ಎಲ್ಲಾ ಪಾಸ್ ಮಾಡಿ ಊರಿಗೆ ಹೋದರೆ ಯಾರಿಗೂ ಯಾವುದಕ್ಕೂ ಹಣ ಇಲ್ಲ ಎನ್ನುವ ಪರಿಸ್ಥಿತಿ ಬಂದರೆ ಇಡೀ ಆಯವ್ಯಯ ಅಧಿವೇಶನ ನಿರರ್ಥಕವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ.

ಅಧ್ಯಕ್ಷರು.— ೯-೩೦ರ ಒಳಗೆ ದಯವಿಟ್ಟು ಮುಗಿಸಿ. ನೀವು ಚೆನ್ನಾಗಿ ಮಾತನಾಡುತ್ತೀರಿ. ಅದಕ್ಕಾಗಿಯೇ ಸಾಕಷ್ಟು ಕಾಲಾವಕಾಶ ತಮಗೆ ಎಲ್ಲ ಕಾಲದಲ್ಲೂ ಕೊಟ್ಟಿದ್ದೇನೆ. ಡಿಮ್ಯಾಂಡ್ಸ್ ಮೇಲೆ ಮಾತನಾಡುವುದಕ್ಕೆ ಇನ್ನೂ ಅವಕಾಶವಿದೆ. ಬೇರೆಯವರು ಬಜೆಟ್ ಮೇಲೆ ಮಾತನಾಡುವವರಿರುವುದರಿಂದ ದಯವಿಟ್ಟು ಆದಷ್ಟು ಬೇಗ ಮುಗಿಸಿ.

ಶ್ರೀ ಕೆ. ಎಚ್. ಶ್ರೀನಿವಾಸ್.— ಹಾಗಾದರೆ ನಾನು ಮಾತನಾಡುವುದೇ ಇಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ — ಹೊಸ ವಿಚಾರ ಹೇಳುತ್ತಿದ್ದಾರೆ. ಅವಕಾಶ ಕೊಡಿ.

ಶ್ರೀ ಶಿವನಂಜಪ್ಪ.— ನಮ್ಮ ಟೈಂ ಅವರಿಗೇ ಕೊಡುತ್ತೇವೆ. ಹನ್ನೊಂದೂವರೆ ಒಳಗೆ ಮುಗಿಸೋಣ.

ಅಧ್ಯಕ್ಷರು — ಅಷ್ಟು ಸಹಕಾರ ಕೊಟ್ಟರೆ ಸಂತೋಷ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಟ್ರೆಜರಿಗೆ ಏನು ಆರ್ಡರ್ ಕೊಟ್ಟಿದ್ದೇನೆ ಅದನ್ನೆಲ್ಲಾ ಸಭೆ ಮುಂದೆ ಇಡುತ್ತೇನೆ. ಎಂದು ಹೇಳಿದ್ದರು. ಇಟ್ಟಿದ್ದಾರೋ ಬಿಟ್ಟಿದ್ದಾರೋ ಗೊತ್ತಿಲ್ಲ ಆದರೆ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು. ಟ್ರೆಜರಿ ಇಲಾಖೆಯವರು ಅತೀ ಉತ್ಸಾಹದಿಂದ ಕೆಲವು ತಪ್ಪುಗಳನ್ನು ಮಾಡಿದ್ದಾರೆ ಎಂದು ಹೇಳಿದ್ದಾರೆ. ಮುಖ್ಯಮಂತ್ರಿಗಳು ಈ ರೀತಿಯ ಮಾತುಗಳನ್ನು ಆಡಬಾರದು ಆ ರೀತಿ ಮಾತನಾಡುವುದು ಮುಖ್ಯಮಂತ್ರಿಸ್ಥಾನವನ್ನು ಹಲ್ಲರೆಯನ್ನಾಗಿಸುತ್ತದೆ. ಮುಖ್ಯಮಂತ್ರಿಯಾಗಿ ಅವರು ಜವಾಬ್ದಾರಿ ತೆಗೆದುಕೊಳ್ಳಬೇಕಾಗುತ್ತದೆ. ತಪ್ಪಿರಲಿ ಸರಿಯಿರಲಿ ತಮ್ಮ ಮೇಲೆ ಜವಾಬಾಯನ್ನು ತೆಗೆದುಕೊಳ್ಳಬೇಕೇ ಹೊರತು ಇಲಾಖೆಯ ಮೇಲೆ ತಪ್ಪು ಹೊರಿಸುವುದು ಭೂಷಣವಲ್ಲ.

ಇವತ್ತು ತಾತ್ಕಾಲಿಕ ಬಜೆಟ್ ಮತ್ತು ಪರಿಪೂರ್ಣವಾದ ಬಜೆಟ್ ನಮ್ಮ ಮುಂದೆ ಏನು ಬಂದಿದೆ. ಈ ಎರಡರ ಮಧ್ಯದಲ್ಲಿ ಬೇಕಾದಷ್ಟು ಗೋಲ್‌ಮಾಲ್ ಆಗಿಹೋಗಿದೆ. ಇದ್ದಕ್ಕಿದ್ದ ಹಾಗೆ ೬೩೨ ಕೋಟಿ ರೂಪಾಯಿನ ಕೊರತೆ ೭೩ ಕೋಟಿ ರೂಪಾಯಿಗೆ ಹೇಗೆ ಇಳಿಯಿತು ಎಂಬ ಪ್ರಶ್ನೆಗೆ ಇನ್ನೂ ಕೂಡ ಸಮಾಧಾನಕರವಾದ ಉತ್ತರ ಸಿಗಲಿಲ್ಲ. ಯಾವುಯಾವುದೋ ಅಂಕಿಸಂಖ್ಯೆಗಳನ್ನು ಪಟ್ಟಿಮಾಡಿ ಹೇಳಿದ್ದಾರೆ. ಆದರೆ ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳು ಪ್ರಶ್ನೆಗೆ ಉತ್ತರ ಕೊಡುತ್ತಾ ಏನು ಹೇಳಿದ್ದಾರೆಂದರೆ ೨೩೨.೨೦ ಕೋಟಿ ರೂಪಾಯಿಗಳಷ್ಟು ವೆಚ್ಚದಲ್ಲಿ ಕಡಿಮೆಯಾಗಿದೆ ಎಂದಿದ್ದಾರೆ. ೨೨೨ ಕೋಟಿ ರೂಪಾಯಿ ಯಾವಾಗಲಿಂದ ಕಡಿಮೆಯಾಗಿರುವುದು? ಇವರು ಏನು ತಾತ್ಕಾಲಿಕ ಆಯವ್ಯಯ ಮಂಡಿಸಿ ನಂತರ ಪರಿಪೂರ್ಣವಾದ ಬಜೆಟ್ ಮಂಡಿಸಿದ್ದಾರೆ ಈ ಮಧ್ಯದಲ್ಲಿ ಆಗಿರುವ ಕಡಿತ ಅದು. ಇದನ್ನು ಮಾಡುವುದಕ್ಕೆ ಏನು ಅಧಿಕಾರ ಇದೆ? ತಾತ್ಕಾಲಿಕ ಬಜೆಟ್ ಪ್ರೆಸೆಂಟ್ ಮಾಡಿ ಈ ರೀತಿ ನಂತರ ಗೋಲ್‌ಮಾಲ್ ಮಾಡುವುದಾದರೆ ಈ ಆಯವ್ಯಯಕ್ಕೆ ಏನು ಪಾವಿತ್ರ್ಯತೆ ಉಳಿಯಿತು? ಇಲ್ಲಿ ಒಂದು ತರಹ ಹೇಳಿ ಆಮೇಲೆ ನಿಮಗೆ ಎಷ್ಟು ಬೇಕೋ ಅಷ್ಟು ಸೊನ್ನೆ ಸೇರಿಸಬಹುದು, ತೆಗೆಯಬಹುದು ಎಂದು ಹೇಳುವುದಾದರೆ ಆಯವ್ಯಯಕ್ಕೆ ಏನು ಬೆಲೆ ಬಂತು? ಮಾನ್ಯ ಮುಖ್ಯಮಂತ್ರಿಗಳು ತಮ್ಮ ಆಯವ್ಯಯ ಪತ್ರದ ೪೯ನೇ ಪ್ಯಾರಾದಲ್ಲಿ ಒಂದು ಮಾತನ್ನು ಹೇಳಿದ್ದಾರೆ.

> "೪೯. ಯೋಜನೇತರ ಕಾರ್ಯಕ್ರಮಗಳು.— ಸರ್ಕಾರದ ವಿವಿಧ ಇಲಾಖೆಗಳಲ್ಲಿ ಅನೇಕ ಯೋಜನೇತರ ಯೋಜನೆಗಳಿವೆ. ಅವು ಯಾವುದೇ ಪ್ರಯೋಜನ ಉದ್ದೇಶವನ್ನು ಈಡೇರಿಸುವುದಿಲ್ಲ. ಯೋಜನೇತರ ವೆಚ್ಚವನ್ನು ತಗ್ಗಿಸುವ ದೃಷ್ಟಿಯಿಂದ ಅವುಗಳನ್ನು ನಿಲ್ಲಿಸಲು ಪ್ರಸ್ತಾವಿಸುತ್ತೇನೆ.

ಮಾನ್ಯ ಅಧ್ಯಕ್ಷರೆ, ನಾನು ಮುಖ್ಯಮಂತ್ರಿಗಳನ್ನು ಕೇಳಲಿಕ್ಕೆ ಬಯಸುತ್ತೇನೆ, ಇದು ಯಾವ ಯಾವ ಯೋಜನೆಗಳು? ಯಾವ ಕಾರಣಕ್ಕಾಗಿ ಇವು ನಿರರ್ಥಕ ಎಂಬ ತೀರ್ಮಾನಕ್ಕೆ ಬಂದಿರಿ? ಇದರಿಂದಾಗಿ ತಾವು ಉಳಿತಾಯ ಮಾಡಿರತಕ್ಕದ್ದು ಎಷ್ಟು ಎಂಬುದನ್ನು ಈ ಸದನಕ್ಕೆ ಸ್ಪಷ್ಟೀಕರಣ ನೀಡಬೇಕೆಂದು ಪ್ರಾಸ್ತಾವಿಕವಾಗಿ ಹೇಳಬಯಸುತ್ತೇನೆ. ಹಿಂದೊಮ್ಮೆ ಮಾನ್ಯ ಮುಖ್ಯಮಂತ್ರಿಗಳು ಅಧಿಕಾರದಲ್ಲಿ ಇಲ್ಲದೆ ಇದ್ದಾಗ ಏನು ಮಾಡುತ್ತೀರಿ ಎಂಬ ಪ್ರಶ್ನೆಗೆ ಉತ್ತರ ಕೊಡುತ್ತಾ ಹೇಳಿದ್ದಾರೆ. "ನಾನು ಹಿಂದೆ ಮಂತ್ರಿಯಾಗಿದ್ದಾಗ ಕೇಂದ್ರಸರ್ಕಾರದಿಂದ ರಾಜ್ಯಕ್ಕೆ ಲಾಭದಾಯಕವಾಗತಕ್ಕ ಕೆಲವಾರು ಯೋಜನೆಗಳನ್ನು ಹೇಗೆ ಒದಗಿಸಿ ಕೊಟ್ಟೆ ಎಂಬ ಬಗ್ಗೆ ಪುಸ್ತಕ ಬರೆಯುತ್ತೇನೆ" ಎಂದು ಹೇಳಿದ್ದರು. ನಾನು ಆ ರೀತಿಯ ಪಠ್ಯಪುಸ್ತಕ ಅವರಿಂದ ಬರುತ್ತದೆ ಎಂದು ನಿರೀಕ್ಷೆ ಮಾಡಿದ್ದೆ. ಈಗ ಅದು ತಿರುಗುಮುರುಗ ಆಗಿ ಕೇಂದ್ರದಿಂದ ಬರಬೇಕಾದ ಹಣಗಳು ಬರದಂತೆ ಹೇಗೆ ಮಾಡಬೇಕು ಎಂಬ ಬಗ್ಗೆ ಪುಸ್ತಕ ಬರೆಯುವುದಕ್ಕೆ ಹೊರಟ ಹಾಗೆ ಕಾಣಿಸುತ್ತಿದೆ.

ಇವತ್ತಿನ ದಿವಸ ರಾಜ್ಯ ಮತ್ತು ಕೇಂದ್ರದ ವ್ಯವಹಾರ, ಪತ್ರದ ವ್ಯವಹಾರದ ಗ್ರಂಥಾಲಯವನ್ನು ಬಿಟ್ಟು ಹೋಗತಕ್ಕ ಯೋಜನೆಯನ್ನು ಮಾಡುತ್ತಿದ್ದಾರೆಯೋ ಹೊರತು ರಾಜ್ಯದ ಯಾವುದೇ ವಿಚಾರವನ್ನು ಸಾಧಿಸತಕ್ಕ ವಿಚಾರವನ್ನು ಇವರು ಮಾಡುತ್ತಾ ಇಲ್ಲ. ಇವತ್ತು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಅತ್ತೆ-ಸೊಸೆ, ಅಮ್ಮ-ಮಗಳು, ಮೇಲು-ಕೀಳು ಎಂಬುದು ಇಲ್ಲ. ಇವೆರಡೂ ಕೂಡಾ ಸಂವಿಧಾನ ದತ್ತವಾಗಿ ಕೆಲಸ ಮಾಡಬೇಕಾಗುತ್ತದೆ. ಹೀಗೆ ಕೆಲಸ ಮಾಡುವಾಗ ಕೆಲವು ತೊಡಕುಗಳು ಬರುತ್ತವೆ. ಅನೇಕ ವಿಚಾರಗಳಲ್ಲಿ ಆರ್ಥಿಕವಾಗಿ ಅನೇಕ ಗಂಭೀರವಾದಂತಹ ಪ್ರಶ್ನೆಗಳೂ ಕೂಡಾ ಇರುತ್ತವೆ. ಅವುಗಳ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡಬಾರದು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನಾನು ಪದೇ ಪದೇ ಕೇಳುತ್ತಿರುವುದು ಏನೆಂದರೆ, ಯಾವ ವಿಚಾರವನ್ನು ಎಲ್ಲಿ, ಹೇಗೆ ಪ್ರಸ್ತಾಪ ಮಾಡಬೇಕೋ ಆ ಒಂದು ಔಚಿತ್ಯವನ್ನು ಬಿಟ್ಟು ಇಲ್ಲಿ ಕೇಂದ್ರದ ಪ್ರತಿನಿಧಿಗಳು ಯಾರೂ ಇಲ್ಲದಿರುವಾಗ ಇಲ್ಲಿ ಕೇಂದ್ರ ಸರ್ಕಾರದ ನೀತಿಯನ್ನು ಚರ್ಚೆ ಮಾಡುವುದಕ್ಕೆ ದಿನಬೆಳಗಾದರೆ ಪ್ರಯತ್ನ ಮಾಡಿದರೆ, ಈ ವೇದಿಕೆಯನ್ನು ಕೇಂದ್ರ ಸರ್ಕಾರವನ್ನು ದೂಷಣೆ ಮಾಡುವುದಕ್ಕೆ ಹೋದರೆ ಅದು ಸರಿಹೋಗುವುದಿಲ್ಲ. ಇವತ್ತು ಆರ್ಥಿಕ ವಿಷಯದ ಬಗ್ಗೆ ವಿಚಾರ ಬಂದಾಗ ಒಂದೇ ಪಕ್ಷದ ಸರ್ಕಾರ ಇದ್ದರೂ ಸಹಾ ಅಂತಹ ಸರ್ಕಾರಗಳು ಕೇಂದ್ರವನ್ನು ಟೀಕಿಸಿದ್ದು ಇದೆ. ಮುಖ್ಯ ಮಂತ್ರಿಯಾದವರು ಕೇಂದ್ರ ಸರ್ಕಾರವನ್ನು ಟೀಕಿಸಬಾರದು ಎಂದು ನಾನು ಹೇಳುವುದಿಲ್ಲ. ಆದರೆ ಅದಕ್ಕೆ ಒಂದು ಕ್ರಮ ಬೇಡವೇ? ಔಚಿತ್ಯ ಬೇಡವೇ ಎನ್ನುವ ಪ್ರಶ್ನೆಯನ್ನು ಕೇಳುತ್ತೇನೆ. "ಮಾತುಬಲ್ಲವನಿಗೆ ಜಗಳವಿಲ್ಲ,

ಊಟ ಬಲ್ಲವನಿಗೆ ರೋಗವಿಲ್ಲ" ಎಂದು ಗಾದೆ ಇದೆ. ಮಾನ್ಯ ಮುಖ್ಯ ಮಂತ್ರಿಯವರಿಗೆ ಮಾತನಾಡುವುದಕ್ಕೆ ಗೊತ್ತಿಲ್ಲ ಎಂದು ಹೇಳುವುದಕ್ಕೆ ನಾನು ತಯಾರು ಇಲ್ಲ. ಜಗಳ ಆಗುವ ರೀತಿಯಲ್ಲೇ ಅವರು ಮಾತನಾಡುತ್ತಾರೆ. ಆದರೂ ಈ ರೀತಿ ಅವರು ಏಕೆ ಮಾತನಾಡುತ್ತಿದ್ದಾರೆ? ಜಗಳ ಆಗಬೇಕು ಎನ್ನುವ ಉದ್ದೇಶದಿಂದ ಇವರು ಮಾತನಾಡುತ್ತಿದ್ದಾರೆ ಜಗಳ ಆಗಬೇಕು ಎಂದು ಏಕೆ ಬಂದಿದೆ ಎಂದರೆ, ಇವರಿಗೆ ಕರ್ನಾಟಕ ರಾಜ್ಯದ ಹಿತಾಸಕ್ತಿಗಿಂತಲೂ ರಾಷ್ಟ್ರದ ರಾಜಕಾರಣದಲ್ಲಿ ತಮ್ಮ ವ್ಯಕ್ತಿತ್ವದ ಮುದ್ರೆಯನ್ನು ಒತ್ತತಕ್ಕ ರಾಷ್ಟ್ರೀಯ ಮಹತ್ವಾಕಾಂಕ್ಷೆಯೇ ಇದಕ್ಕೆ ಕಾರಣ. ಕೇಂದ್ರ ಸರ್ಕಾರದ ಜೊತೆ ದಿನವೂ ಜಗಳವಾದರೆ ಅವರ ವ್ಯಕ್ತಿತ್ವ ಮೇಲಕ್ಕೆ ಹೋಗುತ್ತದೆ ಎನ್ನುವ ಹಾಗೆ ಭಾವನೆ ಮಾಡಿಕೊಂಡಿದ್ದಾರೆ. ಅಧ್ಯಕ್ಷರೇ, ಮಹಾತ್ವಾಕಾಂಕ್ಷೆ ಅವರಿಗೆ ಬೇಡ ಎಂದು ನಾನು ಹೇಳುವುದಿಲ್ಲ. ಆದರೆ ಅದಕ್ಕೋಸ್ಕರ ಇಡೀ ರಾಜ್ಯವನ್ನು ಬಲಿಕೊಟ್ಟು ರಾಜ್ಯದ ಅಭಿವೃದ್ಧಿಯನ್ನು ಹತ್ತಾರು ವರ್ಷಗಳ ಹಿಂದಕ್ಕೆ ತಳ್ಳಿಬಿಟ್ಟರೆ ಹೇಗೆ? ಇವತ್ತು ಪ್ರಧಾನ ಮಂತ್ರಿಯವರು ೨೧ನೇ ಶತಮಾನಕ್ಕೆ ಕಾಲು ಇಡಬೇಕೆಂದು ಹೇಳಿದ್ದಾರೆ. ಅವರು ಆ ಬಗ್ಗೆ ಪ್ರಸ್ತಾಪ ಮಾಡಿದ್ದು ತಪ್ಪೇ? ಇವತ್ತು ನಿಜವಾಗಿಯೂ ಒಂದು ಕಡೆ ಮುಂದಿನ ಶತಮಾನಕ್ಕೆ ಹೋಗುತ್ತಿದ್ದೇವೆ, ಇನ್ನೊಂದು ಕಡೆ ಹಿಂದಿನ ಶತಮಾನದಲ್ಲೇ ನಾವು ಇರುವುದು ಕೂಡಾ ಕಟುಸತ್ಯವಾದ ವಿಚಾರವಾಗಿದೆ. ನಾವು ಎಷ್ಟೋ ಸಾರಿ ವಿಮಾನ ಯುಗದಲ್ಲಿ ಇದ್ದೇವೆಂದು ಹೇಳಿಕೊಂಡರೂ ಕೂಡಾ ಹಳ್ಳಿಗಳಲ್ಲಿ ಎತ್ತಿನ ಗಾಡಿಗಾಗಿ ಕೊಟ್ಟಂತಹ ಸಾಲದಲ್ಲಿ ಆತ ಎತ್ತು ಗಾಡಿಯನ್ನು ತೆಗೆದುಕೊಳ್ಳುವ ಪರಿಸ್ಥಿತಿಯಲ್ಲಿ ಇಲ್ಲ. ನಾವು ವಿಮಾನ ಯುಗದಲ್ಲಿ ಇದ್ದೇವೆಂದು ಹೇಳಿದರೆ ತಪ್ಪಾಗುತ್ತದೆಯೇ? ಅವರು ಯಾವುದೋ ಕಾಂಟೆಕ್ಸ್ಟ್‌ನಲ್ಲಿ ಹೇಳಿದ್ದನ್ನು ಇಲ್ಲಿ ತಂದುಬಿಟ್ಟು ಹೇಳುವುದು ಸರಿಹೋಗುತ್ತದೆಯೇ?

> "ಇಂತಹ ಪರಿಸ್ಥಿತಿಯಲ್ಲಿ ಕಂಪ್ಯೂಟರ್ ಯುಗಕ್ಕೆ ಉಪಕ್ರಮಿಸುವ ಕಲ್ಪನೆ ಕೇವಲ ಹಾಸ್ಯಾಸ್ಪದ; ಆದ್ದರಿಂದ ೨೧ನೇ ಶತಮಾನದ ಸಾಗಲು ನಾವು ಅತ್ಯಾಧುನಿಕ ತಂತ್ರಜ್ಞಾನ ಮತ್ತು ವೈಜ್ಞಾನಿಕ ಅಭಿವೃದ್ಧಿಯ ಪೂರ್ಣ ಲಾಭವನ್ನು ಪಡೆಯುವುದಕ್ಕಾದರೂ ಈ ಜನರನ್ನು ಕಡೆಗಣಿಸಿ ಅವರನ್ನು ೧೯ನೇ ಶತಮಾನದಲ್ಲೇ ಉಳಿಸುವುದು ಸಾಧ್ಯವಿಲ್ಲ.

ಹೀಗೆಂದು ಹೇಳಿ ಕೊನೆಯಲ್ಲಿ ಒಂದು ಒಳ್ಳೆಯ ಮಾತನ್ನು ಹೇಳಿದ್ದಾರೆ.

> "ಆರ್ಥಿಕ ಅಭಿವೃದ್ಧಿಯ ಬಗೆಗಿನ ನಮ್ಮ ಧೋರಣೆಯು ಗಾಂಧೀಜಿಯವರು ಪ್ರತಿಪಾದಿಸಿದ ಧೋರಣೆಯಾಗಿರಬೇಕು"

ಈಗ ನಾನು ಕೇಳುತ್ತೇನೆ. ಇವರಿಗೆ ೨೧ನೇ ಶತಮಾನಕ್ಕೆ ಹೋಗುವುದು ಹಾಸ್ಯಾಸ್ಪದವಾದರೆ ಇವತ್ತು ಏನಾಗಿದೆ? ಇವತ್ತು ಊರಿನ ತುಂಬಾ ಹೆಂಡದ ಅಂಗಡಿಯನ್ನು ಮಾಡಿದ್ದೀರಿ. ಮಾನ್ಯ ಪಟೇಲ್ ಅವರಂತೂ ಈ ಖಾತೆಯನ್ನು ವಹಿಸಿಕೊಂಡ ಮೇಲೆ ಈ ಬಗ್ಗೆ ಬಹಳ ಲಿಬರಲ್ ಆದರು. ಇದನ್ನೆಲ್ಲಾ ಮಾಡಿಬಿಟ್ಟು ಒಂದು ಕಡೆ ಎಕ್ಸೈಜ್ ಮೂಲಕ ಜನರ ರಕ್ತವನ್ನು ಹೀರಿ ಮತ್ತೊಂದು ಕಡೆ ಅವರಿಗೆ ರಕ್ತ ಬರಲು ಟಾನಿಕ್, ಮಾತ್ರೆಗಳನ್ನು ಕೊಡುತ್ತಿದ್ದೀರಿ. ಈ ರೀತಿಯ ಪರಿಸ್ಥಿತಿಯನ್ನು ಉಂಟು ಮಾಡಿ ಗಾಂಧೀಜಿಯವರ ಬಗ್ಗೆ ಮಾತನಾಡುವ ನಿಮ್ಮ ಮಾತು ಇನ್ನೂ ಹೆಚ್ಚು ಹಾಸ್ಯಾಸ್ಪದ ಎಂದು ನಾನು ಹೇಳಬಯಸುತ್ತೇನೆ. ಇನ್ನು ಉದ್ಯೋಗದ ಬಗ್ಗೆ ತೆಗೆದು ಕೊಳ್ಳೋಣ. ಈ ಬಗ್ಗೆ ತಾವು ಏನು ಹೇಳಿದ್ದೀರಿ ? ಇವತ್ತು ಉದ್ಯೋಗವನ್ನು ಏನೂ ನಿರ್ಮಾಣ ಮಾಡಿಲ್ಲ. ಕಂಪ್ಯೂಟರ್‌ಯುಗಕ್ಕೆ ಉಪಕ್ರಮಿಸುವ ಕಲ್ಪನೆ ಹಾಸ್ಯಾಸ್ಪದ ಎಂದು ಹೇಳಿದ ನೀವು ಮುಂದೆ

> "ಬೆಂಗಳೂರಿನಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಕ್ಕೆ ನಾವು ಈಗಾಗಲೇ ಕಂಪ್ಯೂಟರನ್ನು ಅಳವಡಿಸಿದ್ದೇವೆ. ಇತರ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹಂತ ಹಂತವಾಗಿ ಕಂಪ್ಯೂಟರ್ ಅಳವಡಿಸಲು ಪ್ರಸ್ತಾವಿಸುತ್ತೇವೆ.

ಇದು ಗಾಂಧೀಜಿಯವರು ಪ್ರತಿಪಾದಿಸಿದ ಅರ್ಥವ್ಯವಸ್ಥೆಗೆ ಬುನಾದಿ. ಉದ್ಯೋಗ ಒದಗಿಸುವುದರ ಬಗ್ಗೆ ಎಲ್ಲಿ ಇದೆ? ಇವತ್ತು ಇರುವ ಉದ್ಯೋಗವನ್ನೇ ಕಳೆದಿದ್ದೀರಿ. ಕೆಲವು ಇಲಾಖೆಗಳಲ್ಲಿ ಏನು ತಾತ್ಕಾಲಿಕವಾಗಿ ಕೆಲಸ ಮಾಡುತ್ತಿದ್ದರು ಅವರ ಮೇಲೆ ಹಿಂದಿನ ಸರ್ಕಾರದ ಬ್ಯಾನ್ ಆರ್ಡರ್ ಇತ್ತು. ಬ್ಯಾನ್ ಆರ್ಡರ್ ಇದ್ದರೆ, ಸ್ಟೇ ಆರ್ಡರ್ ಇದ್ದರೆ, ಅದನ್ನು ತಪ್ಪಿಸಿ ಯಾರು ಕೆಲಸ ಮಾಡಿಸಿದರು ಅಂಥವರನ್ನು ನೀವು ಮನೆಗೆ ಕಳುಹಿಸಬೇಕು. ಆದರೆ ಅದನ್ನು ಬಿಟ್ಟು ಕೆಲಸಕ್ಕೆ ಯಾರನ್ನು ತೆಗೆದುಕೊಂಡಿದ್ದರು

ಅವರನ್ನು ಮನೆಗೆ ಕಳುಹಿಸಿದ್ದೀರಿ. ಇವರ ಒಂದು ತಪ್ಪಿಗೆ ಅವರನ್ನು ತೆಗೆದುಹಾಕಿದ್ದೀರಿ. ಈ ದಿವಸ ಉದ್ಯೋಗದಲ್ಲಿ ಇರುವವರನ್ನೇ ಮನೆಗೆ ಕಳುಹಿಸುತ್ತಿರುವಾಗ ಉದ್ಯೋಗ ಇಲ್ಲದಿರುವವರಿಗೆ ಉದ್ಯೋಗ ವನ್ನು ಕೊಡುತ್ತೀರಿ ಎಂದು ಯಾವ ದೃಷ್ಟಿಯಿಂದ ನಂಬಬಹುದು ಎನ್ನುವ ಪ್ರಶ್ನೆ ನನಗೆ ಕಾಡುತ್ತಿದೆ. ಇವತ್ತು ನಾನು ಹೇಳುತ್ತಾ ಇದೆ, ಕೇಂದ್ರ ಸರ್ಕಾರದ ಬಗ್ಗೆ ಮಾತನಾಡುವುದಕ್ಕೆ. ಹೇಳಿಕೆ ಕೊಡುವುದಕ್ಕೆ ಮುಖ್ಯ ಮಂತ್ರಿಯವರಿಗೆ ಹಕ್ಕು ಇದೆ ಎಂದು ಅವರಿಗೆ ಮಾತು ಹೇಗೆ ಆಡಬೇಕೆಂದು ಗೊತ್ತಿದೆ. ಇವತ್ತು ಆರ್ಥಿಕ ಹಾಗೂ ಇನ್ನಿತರ ವಿಚಾರಗಳ ಬಗ್ಗೆ ಅವರು ಮಾತನಾಡುವುದಕ್ಕೆ ರಾಷ್ಟ್ರ ಮಟ್ಟದಲ್ಲಿ ಅನೇಕ ವೇದಿಕೆಗಳು ಇವೆ ಅಲ್ಲಿ ಅವರು ಆ ಬಗ್ಗೆ ಮಾತನಾಡಲಿ ನಾವೂ ಕೂಡಾ ಆ ಬಗ್ಗೆ ರಾಜ್ಯದ ಅಭಿವೃದ್ಧಿ ಬಗ್ಗೆ ಅವರು ಮಾತನಾಡುವ ಬಗ್ಗೆ ಕೇಳಿ ಸಂತೋಷಪಡುತ್ತೇವೆ. ಆದರೆ ಕೇಂದ್ರ ಸರ್ಕಾರ ವನ್ನು ರಾಜಕೀಯವಾಗಿ ದುರ್ಬಲಗೊಳಿಸತಕ್ಕ ಮಾತನ್ನು ಆಡಿದಾಗ ಮಾತ್ರ ನಮ್ಮ ನಮ್ಮಲ್ಲಿ ಘರ್ಷಣೆಗೆ ಆಸ್ಪದ ಆಗುತ್ತದೆಯೇ ಹೊರತು ಇನ್ನು ಯಾವ ಸಂದರ್ಭದಲ್ಲೂ ಇದು ಆಗುವುದಿಲ್ಲ ಆದ್ದರಿಂದ ಈ ಒಂದು ಹವ್ಯಾಸಕ್ಕೆ ಮನಸ್ಸು ಮಾಡದೇ ಕೊನೇ ಪಕ್ಷ ಈ ಬಗ್ಗೆ ವಿಧಾನಸಭೆಯ ವೇದಿಕೆಯನ್ನಾದರೂ ಬಳಸದೇ ಇದ್ದರೆ ರಾಜ್ಯದ ದೃಷ್ಟಿಯಿಂದ ಬಹಳ ಒಳ್ಳೆಯದೆಂದು ನಾನು ಹೇಳುತ್ತೇನೆ.

ಅಧ್ಯಕ್ಷರು.—ವೇಳೆ ಆಯಿತು. ಭಾಷಣವನ್ನು ಸ್ಪೀಡಪ್ ಮಾಡಿ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ ೬ನೇ ಪುಟದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಒಂದು ಮಾತನ್ನು ಹೇಳಿದ್ದಾರೆ.

"ಅಭಿವೃದ್ಧಿಯ ಪ್ರಯೋಜನಗಳು ಅಥವಾ ಲಾಭಗಳು ಕೆಲವು ವರ್ಗಗಳ ಜನತೆಗೆ ಮಾತ್ರವೇ ಮೀಸಲಾಗಿಟ್ಟಿದೆ. ಈಗಾಗಲೇ ಪ್ರಯೋಜನ ಪಡೆದವರು ತಾವು ಮಾತ್ರ ಹೆಚ್ಚಿನ ಪ್ರಯೋಜನಗಳನ್ನು ಪಡೆಯಲು ಕೂಗಾಡುತ್ತಿರುವ ಹಾಗೂ ಆ ಕಾರ್ಯದಲ್ಲಿ ಯಶಸ್ವಿ ಯಾಗುತ್ತಿರುವ ಅಹಿತಕರ ಪ್ರವೃತ್ತಿಯನ್ನು ನಾವು ನೋಡುತ್ತಿದ್ದೇವೆ. ಈಗಾಗಲೇ ಲಾಭದಾಯಕವಾದ ಉದ್ಯೋಗಗಳಲ್ಲಿರುವವರು ಅಧಿಕ ವೇತನಗಳನ್ನು ಕೋರುತ್ತಿದ್ದಾರೆ ಮತ್ತು ಆಗಾಗ ನಿರುದ್ಯೋಗಿಗಳು ಮತ್ತು ಉದ್ಯೋಗರಹಿತ ಜನರನ್ನು ಸಂಪೂರ್ಣವಾಗಿ ಉಪೇಕ್ಷಿಸಿ ಅವರ ಹಿತಾಸಕ್ತಿಗಳಿಗೆ ಹಾನಿಯುಂಟು ಮಾಡಿ ಅವುಗಳನ್ನು ಪಡೆಯುತ್ತಾರೆ.''
ಎಂದು ಹೇಳಿ

೧೯೭೪ ರಲ್ಲೂ ಸಹಾ ಇವರು ಇದೇ ಮಾತನ್ನು ಹೇಳಿದ್ದಾರೆ.

'ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಾದರೆ ಇವೊತ್ತು ನಮ್ಮ ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಒಂದು ಲಕ್ಷ ಏನಿದೆ ಅಂದರೆ ಆರ್ಗನೈಸ್ ಲೇಬರ್ಸ್ ಏನಿದ್ದಾರೆ ಅವರ ಯೋಗಕ್ಷೇಮ ನೋಡುವುದು ೧೦ ಪಾಯಿಂಟ್ ಹೆಚ್ಚು ಆದ ತಕ್ಷಣ ಸರ್ಕಾರಿ ನೌಕರರಿಗೆ ಅಡಿಷನಲ್ ಡಿಯರ್‌ನೆಸ್ ಅಲೋಯನ್ಸ್ ಕೊಡುವುದು. ಸರ್ಕಾರಿ ನೌಕರರಿಗೆ ಅಡಿಷನಲ್ ಡಿಯರ್‌ನೆಸ್ ಕೊಟ್ಟ ಕೂಡಲೇ ಸರ್ಕಾರದ ಕಂಟ್ರೋಲ್ ಇರತಕ್ಕ ಪ್ರತಿಯೊಂದು ಕಾರ್ಖಾನೆ ಮತ್ತು ಪ್ರತಿಯೊಂದು ಎಸ್ಟಾಬ್ಲಿಷ್‌ಮೆಂಟಿನ ನೌಕರರ ಸಂಬಳ ಏರಿಸುವುದು ರಾಜ್ಯ ಸರ್ಕಾರದ ನೌಕರರ ಸಂಬಳ ಏರಬೇಕು ಅಷ್ಟೇ ಅಲ್ಲ ಖಾಸಗಿ ವಲಯ ದಲ್ಲಿ ಇರತಕ್ಕ ನೌಕರರ ಸಂಬಳ ಕೂಡ ಏರಬೇಕು. ಇಡೀ ದೇಶವನ್ನು ತೆಗೆದುಕೊಂಡರೆ ಸರ್ಕಾರಿ ನೌಕರರು ಕೂಲಿಗಾರರು ಮತ್ತು ಆರ್ಗನೈಸ್ಡ್ ಲೇಬರ್ ಶೇಕಡ ಮೂರು ಇದ್ದಾರೆ. ಬಾಕಿ ೯೭ ಪರ್‌ಸೆಂಟ್ ಜನ ಏನು ಮಾಡಬೇಕು. ಅವರನ್ನು ಹೇಳುವವರು ಕೇಳುವವರು ಇಲ್ಲ.

ಹೀಗೆ ಹೇಳಿ ಮುಂದೆ

"ಕೇವಲ ೧೦೦ ರಲ್ಲಿ ಒಬ್ಬರಿಗೆ ಅಧನ್ನು ಕೊಡುವಂಥ ಪಾಲಿಸಿ ಏನು ಇದೆ ಅದನ್ನು ನಾನು ಖಂಡಿಸುತ್ತೇನೆ. ರಸ್ತೆಯಲ್ಲಿ ಕೆಲಸ ಮಾಡುವವರು ಏನು ಮಾಡಬೇಕು. ಹಳ್ಳಿಯಲ್ಲಿ ರೈತ ಕೂಲಿಗಾರ ಏನು ಮಾಡಬೇಕು, ಮಧ್ಯಮ ವರ್ಗದವರು, ಲೋಯರ್ ಕ್ಲಾಸ್ ಜನ ಏನು ಮಾಡಬೇಕು?"

ಹಿಂದೆ ಕೂಡಾ ಈ ರೀತಿ ಅವರು ಹೇಳಿದ್ದಾರೆ. ವಿಧಾನ ಪರಿಷತ್ತಿನಲ್ಲಿ ೧೨-೩-೧೯೭೮ರಲ್ಲಿ ಈ ರೀತಿ ಹೇಳಿದ್ದಾರೆ. ಆದರೆ ಈಗ ಅವರು ಮಾಡಿರತಕ್ಕದ್ದು ಏನು? ಈ ಬಡ್ಜೆಟ್ಟಿನಿಂದ ನಿಜವಾಗಿ ಏನಾದರೂ ಲಾಭ ಸಿಕ್ಕಿದ್ದರೆ ಅದು ಸರ್ಕಾರಿ ನೌಕರರಿಗೆ ಮಾತ್ರ ಎಂದು ನಾನು ಹೇಳುತ್ತೇನೆ. ಇದು ಕಣ್ಣಿಗೆ ಕಾಣುವಂಥ, ಕೈಗೆ ಎಟಕದಿರುವಂಥ ಲಾಭ. ಇನ್ನುಳಿದದ್ದು ಕನ್ನಡಿಯೊಳಗಿನ ಗಂಟು. ಅದು ಎಷ್ಟರಮಟ್ಟಿಗೆ ಸಿಕ್ಕುತ್ತದೋ, ಏನೋ ಗೊತ್ತಿಲ್ಲ, ತಾವೇ ಹೇಳಿರುವಂತೆ ಈ ಬಡಕ್ಕೂ ಆ ತುದಿಗೂ ಇಷ್ಟೊಂದು ವ್ಯತ್ಯಾಸ ಈಗಲೇ ಇರಬೇಕಾದರೆ ಇನ್ನು ಮುಂದೆ ಹೇಗೆ ? ಜನತಾ ವಲಯ ಎಂದರೆ ಏನು ಎಂಬುದನ್ನು ತಾವೇ ವಿವರಿಸಿ ಹೇಳಬೇಕು. ಇದು ಯಾರಿಗಾದರೂ ಅರ್ಥವಾಗಿದೆಯೋ ಎಂದು ನಾನು ಕೆಲವರನ್ನು ಕೇಳಿದಾಗ ನಮಗೆ ಯಾರಿಗೂ ಅರ್ಥವಾಗಿಲ್ಲವೆಂದು ಅವರು ಹೇಳಿದರು. ಹೋಗಲಿ ಶ್ರೀ ವಿ.ಕೆ.ಆರ್.ವಿ. ರಾವ್‌ರವರಿಗೆ ಏನಾದರೂ ಅರ್ಥವಾಗಿದೆಯೋ ಎಂದರೆ ಅವರು ನನಗೂ ಅರ್ಥವಾಗಿಲ್ಲವೆಂದು ಹೇಳಿದರು. ಇದು ಯಾರಿಗೂ ಅರ್ಥವಾಗಿಲ್ಲ ಎಂದು ಹೇಳುವುದಾದರೆ ಸ್ವತಃ ಮುಖ್ಯ ಮಂತ್ರಿಗಳಿಗೇ ಇದು ಏನಾದರೂ ಗೊತ್ತಿದ್ದರೆ ದಯವಿಟ್ಟು ಹೇಳಬೇಕು. ಒಂದುವೇಳೆ ಅವರು ಹೇಳದೇ ಹೋದರೆ ಅದಕ್ಕಾಗಿ ನಾನು ಅವರನ್ನು ಬಲಾತ್ಕಾರ ಮಾಡುವುದಿಲ್ಲ. ಪ್ರತಿಯೊಂದಕ್ಕೂ "ಜನತಾ, ಜನತಾ" ಎಂದು ಸೇರಿಸುತ್ತಾರೆ. ಅವರು ಸೇರಿಸುವುದರಿಂದ ನನ್ನ ಅಭ್ಯಂತರ ಏನೂ ಇಲ್ಲ. ಹಿಂದೆ ಜನತಾ ಸರ್ಕಾರ ಅಧಿಕಾರದಿಂದ ಹೋದ ಮೇಲೆ ಅವರು ಮಾಡಿದ್ದ ಕೆಲವು ಕೆಲಸ ಕಾರ್ಯಗಳನ್ನು ನಮ್ಮ ಕಾಂಗ್ರೆಸ್ ಸರ್ಕಾರ ಬಂದಮೇಲೆ ಅದನ್ನು ನಾವೇನೂ ಬದಲಾವಣೆ ಮಾಡಲಿಲ್ಲ ಉದಾಹರಣೆಗೆ ಜನತಾ ಹೌಸಿಂಗ್ ಸ್ಕೀಂ ಎಂದು ಇದೆ. ಇದು ಒಂದು ರೀತಿಯಲ್ಲಿ ಜನರನ್ನು ಪೊಲಿಟಿಸೈಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು ನನಗನಿಸುತ್ತದೆ. ಈ ವಿಚಾರದಲ್ಲಿ ನಾನು ಮಾನ್ಯ ಮುಖ್ಯ ಮಂತ್ರಿಯವರಿಗೆ ಎಚ್ಚರಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಇನ್ನು ಮಾನ್ಯ ಮುಖ್ಯಮಂತ್ರಿಯವರು ತಮ್ಮ ಆಯವ್ಯಯ ಪತ್ರದ ಭಾಷಣದಲ್ಲಿ ಪ್ರಸ್ತಾಪ ಮಾಡುತ್ತಾ,

> "ಸಮೃಸ್ಥಿತಿಯನ್ನು ಆದಷ್ಟು ತ್ವರಿತವಾಗಿ ಸಾಧಿಸುವ ಸಲುವಾಗಿ ನಾವು 'ಸಿ'' ಅಂಡ್ "ಡಿ'' ವರ್ಗದ ಸರ್ಕಾರೀ ಜಮೀನುಗಳನ್ನು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ನಿರುದ್ಯೋಗಿ ಪದವೀಧರರಿಗೆ ಮತ್ತು ಇತರ ಪದವೀಧರರಿಗೆ ವನ ನಿರ್ಮಾಣ ಕಾರ್ಯವನ್ನು ಕೈಗೊಳ್ಳುವ ಸಲುವಾಗಿ ಗುತ್ತಿಗೆ ಆಧಾರದ ಮೇಲೆ ನೀಡಲು ಉದ್ದೇಶಿಸಿದ್ದೇವೆ.''

ಎಂದು ಹೇಳಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ನಾನು ಇದರ ಬಗ್ಗೆ ಸೆಳೆಯಬಯಸುತ್ತೇನೆ. ದೇಶದಲ್ಲಿ ಅರಣ್ಯವನ್ನು ಸಂರಕ್ಷಣೆ ಮಾಡಬೇಕು. ಇದರ ಬಗ್ಗೆ ಕೇಂದ್ರ ಸರ್ಕಾರದ ನೀತಿ ಬಿಗಿಯಾಗಿದೆ. ಅಂತೆಯೇ ಕಾನೂನೂ ಕೂಡ ಬಹಳ ಬಿಗಿಯಾಗಿಯೇ ಇದೆ. ಆದರೆ ಹಲವಾರು ವರ್ಷಗಳಿಂದ ಅರಣ್ಯಕ್ಕೆ ಸೇರಿದ ಭೂಮಿಯನ್ನು ಕೆಲವಾರು ಜನ ಸಾಗುವಳಿಯನ್ನು ಮಾಡುತ್ತಿರುವುದು ಗೊತ್ತಿದೆ. ಅನೇಕ ಕಡೆ 'ಸಿ ಆಂಡ್ ಡಿ' ಲ್ಯಾಂಡ್ ಇದೆ. ಅದರಲ್ಲೂ ನಮ್ಮ ಮಲೆನಾಡು ಪ್ರದೇಶದಲ್ಲಿ ಮನೆಯಿಂದ ಒಂದು ಕಾಲು ಹೊರಗಡೆ ಇಟ್ಟರೂ ಕೂಡ ಅದು 'ಸಿ ಅಂಡ್ ಡಿ' ಲ್ಯಾಂಡ್ ಆಗುತ್ತದೆ. ಇದು ಒಂದು ಕಡೆ ಆದರೆ ಇನ್ನೊಂದು ಕಡೆ. ಒಂದು ಪಿಕಪ್ ಆಗಬೇಕಾಗಿರುತ್ತದೆ. ಆ ಪಿಕಪ್ ಆದರೆ ಅದರಿಂದ ೬೦೦ ಎಕರೆ ನೀರಾವರಿ ಆಗುತ್ತದೆ ಎಂದು ಇಟ್ಟುಕೊಳ್ಳೋಣ. ಆದರೆ ಅದೇ ಸಂದರ್ಭದಲ್ಲಿ ೩೦ ಎಕರೆ ಪ್ರದೇಶ ಮುಳುಗಡೆಯಾಗುತ್ತದೆ. ಈಗ ಈ ೩೦ ಎಕರೆ ಪ್ರದೇಶ ಮುಳುಗಡೆಯಾಗುವುದನ್ನು ತಪ್ಪಿಸಲು ೬೦೦ ಎಕರೆಗೆ ನೀರಾವರಿ ಒದಗಿಸತಕ್ಕ ಪಿಕಪ್‌ನ್ನೇ ನಿಲ್ಲಿಸಬೇಕಾಗಿದೆ. ಇವತ್ತು ಅಂಥ ಪರಿಸ್ಥಿತಿ ಇದೆ. ನಮ್ಮ ಮಲೆನಾಡು ಪ್ರದೇಶದಲ್ಲಿ ದಿನನಿತ್ಯ ಒಂದು ರೀತಿಯಲ್ಲಿ ಯುದ್ಧದಂತೆ ರೈತರಿಗೂ ಮತ್ತು ಅರಣ್ಯ ಇಲಾಖೆಯವರಿಗೂ ನಡೆಯುತ್ತಿದೆ. ಈ ವಿಚಾರದಲ್ಲಿ ನಾನು ಶಾಸಕನಾಗಿ ಹೇಳುವಂತೆಯೂ ಇಲ್ಲ, ಅಥವಾ ಹೇಳದಿರುವಂತೆಯೂ ಇಲ್ಲ. ಆದ್ದರಿಂದ ಸರ್ಕಾರ ಇದರ ಬಗ್ಗೆ ಏನಾದರೊಂದು ತೀವ್ರ ಕ್ರಮವನ್ನು ತೆಗೆದುಕೊಳ್ಳಬೇಕು. ಇಷ್ಟು ಜಾಗ ಜನರು ಇರತಕ್ಕದ್ದು, ಇಷ್ಟು ಜಾಗ ಅರಣ್ಯ ಇಲಾಖೆಯದು ಎಂದು ಮಾಡಬೇಕು ಇಲ್ಲದೇ ಹೋದರೆ ಬಹಳ ಅನಾಹುತಗಳಾಗುತ್ತವೆ. ಇದನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಕ್ರಮ ಕೈಗೊಳ್ಳಬೇಕು.

ಪದವೀಧರರಿಗೆ ಅರಣ್ಯವನ್ನು ಬೆಳೆಸುವುದಕ್ಕೆ ಜಾಗವನ್ನು ಕೊಟ್ಟರೆ ಅವರು ತಮ್ಮ ಜೀವನವನ್ನು ಯಾವರೀತಿ ನಡೆಸಬೇಕು ? ಅದರ ಮೈನ್‌ಟೆನೆನ್ಸ್ ಯಾವ ರೀತಿ ಎಂಬುದನ್ನು ತಾವು ದಯವಿಟ್ಟು ಹೇಳಬೇಕು. ಇದಕ್ಕೆ ಸ್ಪಷ್ಟವಾದ ರೂಪುರೇಷೆಗಳು ಇಲ್ಲದಿದ್ದರೆ ಈ ಮಾತಿಗೆ ಯಾವ ಮಹತ್ವವೂ ಇರುವುದಿಲ್ಲ ಎಂದು ಹೇಳಬಯಸುತ್ತೇನೆ.

ಇನ್ನು ರಾಜ್ಯದ ಅಭಿವೃದ್ಧಿ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಬಜೆಟ್ ಭಾಷಣ ದಲ್ಲಿ ಏನು ಹೇಳಿದ್ದಾರೆಂದರೆ :

> "ಸಂಪನ್ಮೂಲ ನಿರ್ಬಂಧಗಳು ನಮ್ಮ ರಾಜ್ಯವೊಂದಕ್ಕೇ ಸೀಮಿತವಾಗಿರದಿದ್ದರೂ, ಅವುಗಳಿಂದಾಗಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಕಳೆದ ವರ್ಷದ ಬಜೆಟ್‌ನಲ್ಲಿ ಮಾಡಿದ ಏರ್ಪಾಡಿಗಿಂತ ಹೆಚ್ಚು ಬಜೆಟ್ ಹಂಚಿಕೆ ಮಾಡಲು ಸಾಧ್ಯವಾಗದಿದ್ದುದಕ್ಕೆ ನಾನು ವಿಷಾದಿಸುತ್ತೇನೆ. ನಮ್ಮ ಆರ್ಥಿಕ ಪರಿಸ್ಥಿತಿ ಸುಧಾರಿಸಿದ ಹಾಗೆ, ವಿಶೇಷವಾಗಿ ಪ್ರಮುಖ ವಲಯಗಳಲ್ಲಿ ಈ ಬಜೆಟ್ ಏರ್ಪಾಡಂಗಳನ್ನು ಹೆಚ್ಚಿಸಲು ನಾನು ಸಿದ್ಧನಿದ್ದೇನೆ."

ಎಂದು ಹೇಳಿದ್ದಾರೆ. ಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು ಇಷ್ಟು ಹೇಳಿದ ಮೇಲೆ ನಾನು ಈ ಬಜೆಟ್ ವಿಚಾರದಲ್ಲಿ ಇನ್ನೇನು ಹೇಳಬೇಕಾಗಿದೆ. ಮುಖ್ಯವಾದ ಕಾರ್ಯಗಳಿಗೆ ಹಣವನ್ನೊದಗಿಸಲು ಸಾಧ್ಯವಿಲ್ಲ ಎಂದರೆ, ಏನು ಮಾಡಬೇಕು ? ನದಿ ನೀರನ್ನು ಉಪಯೋಗಿಸಿಕೊಳ್ಳಲು ಹಣವನ್ನು ಖರ್ಚು ಮಾಡಲು ಸಾಧ್ಯವಿಲ್ಲ ಎಂದರೆ ನಾವು ಏನು ಮಾಡಬೇಕು ? ನದಿ ನೀರನ್ನು ನಾವು ಬಳಕೆ ಮಾಡಿಕೊಳ್ಳ ಬೇಕಾದರೆ ಏನು ಮಾಡಬೇಕು ? ನದಿ ನೀರು ಹಾಗೆಯೇ ಉಳಿಯುವುದಿಲ್ಲ. ಆ ನೀರನ್ನು ಉಪಯೋಗ ಮಾಡಿಕೊಳ್ಳಲಿ ಮಾಡಿಕೊಳ್ಳದಿರಲಿ ಸುಮ್ಮನೆ ಹರಿದು ಹೋಗುತ್ತಿರುತ್ತದೆ. ಇದು ಸಮುದ್ರಕ್ಕೆ ಸೇರುವುದು ಒಂದು ವಿಚಾರವಾದರೆ, ಇನ್ನೊಂದು ವಿಚಾರ ಯಾರು ಮೊದಲು ಉಪಯೋಗ ಮಾಡಿ ಕೊಳ್ಳುತ್ತಾರೆ ಅದು ಅವರಿಗೆ ಸೇರುತ್ತದೆ. ಎಕ್ಸಿಸ್ಟಿಂಗ್ ಯುಟಿಲಿಟಿಯನ್ನು ಪ್ರೊಟೆಕ್ಟ್ ಮಾಡಬೇಕು ಅದನ್ನು ಮಾಡದೇ ಹೋದರೆ ನಾವು ಅಂತರರಾಷ್ಟ್ರೀಯ ನ್ಯಾಯಾಲಯಕ್ಕೆ ಹೋದರೂ ಅದು ನಮಗೆ ಸಿಕ್ಕದಿರತಕ್ಕ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಮೊದಲು ನೀರಾವರಿ ಮತ್ತು ವಿದ್ಯುಚ್ಛಕ್ತಿ ಇಲಾಖೆ ಗಳಿಗೆ ಹೆಚ್ಚಿನ ಹಣವನ್ನೊದಗಿಸಬೇಕು. ಈ ದಿಸೆಯಲ್ಲಿ ಬೇರೆ ಇಲಾಖೆಗಳಿಗೆ ಖರ್ಚು ಮಾಡತಕ್ಕ ಹಣವನ್ನು ಕಡಿಮೆ ಮಾಡಿದರೂ ಪರವಾಗಿಲ್ಲ. ಅದು ಬಿಟ್ಟು ಕೇವಲ ಅಗ್ಗದ ಜನಪ್ರಿಯತೆಯನ್ನು ತರತಕ್ಕ ವಿಚಾರಗಳ ಕಡೆಗೆ ಗಮನ ಕೊಟ್ಟು ಅತಿಮುಖ್ಯವಾಗಿ ನೀರಾವರಿ ಮತ್ತು ವಿದ್ಯುಚ್ಛಕ್ತಿ ಇಲಾಖೆ ಗಳಿಗೆ ಈಗ ಹಣವನ್ನು ಕೊಡದೆ ಮುಂದೆ ಯಾವಾಗಲಾದರೂ ಕೊಡುತ್ತೇನೆಂದು ಹೇಳುವುದು ಅಕ್ಷಮ್ಯ ಅಪರಾಧವಾಗುತ್ತದೆ. ಈ ಸಂದರ್ಭದಲ್ಲಿ ಒಂದು ಅಂಶವನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಅದು ಏನೆಂದರೆ ೧೯೬೫ರಲ್ಲಿ ನಾವು ಇದೇ ಸಭೆಯಲ್ಲಿ ಒಂದು ನಿರ್ಣಯವನ್ನು ಒಮ್ಮತದಿಂದ ಏನು ಮಾಡಿದ್ದೇವೆಂದರೆ, ರಸ್ತೆ ಕೆಲಸವಾಗಲಿ ಸೇತುವೆಗಳ ಕೆಲಸವಾಗಲಿ, ಅಥವಾ ಬೇರೆ ಕೆಲಸವಾಗಲಿ ಅದನ್ನೆಲ್ಲಾ ಬದಿಗಿಟ್ಟು, ಅದಕ್ಕೆ ಖರ್ಚು ಮಾಡತಕ್ಕ ಹಣವನ್ನು ನೀರಾವರಿ ಹಾಗೂ ವಿದ್ಯುಚ್ಛಕ್ತಿ ಇಲಾಖೆಗಳಿಗೆ ಖರ್ಚುಮಾಡಬೇಕು. ಇದರಿಂದ ಮುಂದೆ ನಮ್ಮ ರಾಜ್ಯಕ್ಕೆ ತುಂಬಾ ಉಪಯೋಗವಾಗುತ್ತದೆಂದು ನಿರ್ಣಯವನ್ನು ಒಮ್ಮತದಿಂದ ಮಾಡಿದ್ದೇವೆ. ಆಂಧ್ರ ಮತ್ತು ತಮಿಳ್ನಾಡಿನಲ್ಲಿ ವಿದ್ಯುಚ್ಛಕ್ತಿ ಮತ್ತು ನೀರಾವರಿಗಾಗಿ ಬಹಳಷ್ಟು ಹಣವನ್ನು ಮೊದಲೇ ಖರ್ಚು ಮಾಡಿದ್ದಾರೆ. ಮತ್ತೆ ಇದಕ್ಕಾಗಿ ಅವರು ಹಣವನ್ನು ಖರ್ಚು ಮಾಡತಕ್ಕ ಅವಶ್ಯಕತೆ ಇಲ್ಲ. ಅಂದ ಮೇಲೆ ಅವರು ಬೇರೆ ಬೇರೆ ಯೋಜನೆಗಳಿಗೆ ಈಗ ಎಷ್ಟು ಬೇಕಾದರೂ ಹಣವನ್ನು ಖರ್ಚು ಮಾಡಲು ತಯಾರಿದ್ದಾರೆ ಆದರೆ ಈಗ ನಾವು ಇದನ್ನು ಮಾಡುವುದಕ್ಕೆ ಹೋದರೆ ಹುಲಿ ಬಣ್ಣಕ್ಕೆ ಬರಲು ನರಿ ಮೈ ಸುಟ್ಟುಕೊಂಡಂತಾಗುತ್ತದೆ. ತಾವು ಉತ್ಪಾದನೆಗಾಗಿ ಹಣವನ್ನು ತೊಡಗಿಸಬಹುದು, ಆದರೆ ಅದರಿಂದ ಉತ್ಪಾದನೆ ಆಗದೇ ಹೋದರೆ ಅದರಿಂದ ಏನಾಗಬಹುದು ಎಂಬುದನ್ನು ತಾವೇ ಯೋಚನೆ ಮಾಡಬೇಕು.

ಇನ್ನು ಕನ್ನಡ ಮತ್ತು ಸಂಸ್ಕೃತಿಯ ಬಗ್ಗೆ ಕೆಲವಾರು ಒಳ್ಳೆಯ ಕಾರ್ಯಕ್ರಮಗಳನ್ನು ಮಾನ್ಯ ಮುಖ್ಯ ಮಂತ್ರಿಯವರು ತಮ್ಮ ಬಜೆಟ್ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ ಇದರ ಬಗ್ಗೆ ನನ್ನ ಸಂತೋಷವನ್ನು ವ್ಯಕ್ತಪಡಿಸುತ್ತೇನೆ. ಆದರೆ ರಂಗಮಂದಿರಗಳ ಬಗ್ಗೆ, ವೃತ್ತಿ ನಾಟಕ ಕಲೆಗಳಿಗೆ

ಸಂಬಂಧಪಟ್ಟಂತೆ ಸರಿಯಾದ ಯೋಜನೆಯನ್ನು ಹಾಕಿಕೊಂಡಿಲ್ಲ. ನಮ್ಮ ರಾಜ್ಯದಲ್ಲಿ ಸುಮಾರು ೨೦-೩೦ ಒಳ್ಳೆಯ ನಾಟಕ ನಡೆಯುವಂಥಾದ್ದು ಇರಬಹುದು. ಅಂಥ ಕಡೆಗಳಲ್ಲಾದರೂ ರಂಗಮಂದಿರಗಳನ್ನು ಕಟ್ಟಿಸಬೇಕು. ಇವತ್ತು ಏನಾಗಿದೆ ಎಂದರೆ ರಂಗಮಂದಿರಗಳು ಇಲ್ಲದಿರುವುದರಿಂದ ವೃತ್ತಿ ನಾಟಕ ಕಂಪೆನಿಗಳು ಸತ್ತು ಹೋಗುತ್ತಿವೆ. ಉದಾಹರಣೆಗೆ ಹೇಳುವುದಾದರೆ ಗುಬ್ಬಿ ಕಂಪೆನಿ ಬೆಂಗಳೂರಿಗೆ ಬಂದಾಗ ಅದು ನೂರು ವರ್ಷಗಳಾದರೂ ಬದುಕಲಿ ಎನ್ನುವ ದೃಷ್ಟಿಯಿಂದ ಅದಕ್ಕೆ ಸ್ವಲ್ಪ ಹಣ ಸಹಾಯವನ್ನು ಕೊಟ್ಟಿದ್ದೆವು ಆದರೆ ಈ ರೀತಿ ಕೇವಲ ಒಂದೆರಡು ಕಡೆಗಳಲ್ಲಿ ಹಣವನ್ನು ನೀಡಿದರೆ ಸಾಲದು. ಹಣವನ್ನು ಕೊಡುತ್ತೇವೆಂದು ಕೇವಲ ಕಡಿಮೆ ಹಣವನ್ನು ಕೊಡುವುದೂ ಬೇಡ. ಅಥವಾ ಅತಿ ಹೆಚ್ಚಾಗಿ ಹಣವನ್ನು ಕೊಡುವುದೂ ಬೇಡ. ಅದರ ಇತಿಮಿತಿಯನ್ನು ನೋಡಿಕೊಡುವುದು ಒಳ್ಳೆಯದೆಂದು ಹೇಳಬಯಸುತ್ತೇನೆ.

ಇದೇ ರೀತಿಯಲ್ಲಿ ಚಲನಚಿತ್ರೋದ್ಯಮದ ವಿಚಾರದಲ್ಲೂ ಮಾನ್ಯ ಮುಖ್ಯಮಂತ್ರಿಯವರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ ಅದು ಸಬ್ಸಿಡಿ ವಿಚಾರ. ಮತ್ತು ತೆರಿಗೆಯ ರಿಯಾಯಿತಿ ವಿಚಾರ. ಇವರು ಹೊಸ ಅಲೆಯ ಚಿತ್ರಗಳಿಗೆ ಪ್ರೋತ್ಸಾಹವನ್ನು ಕೊಡತಕ್ಕ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇದನ್ನು ನಾನು ಸ್ವಾಗತಿಸುತ್ತೇನೆ.

ಆದರೆ ಸಿನಿಮಾವನ್ನು ಸರ್ಕಾರದವರು ಸರಿಯಾದ ರೀತಿಯಲ್ಲಿ ಅರ್ಥೈಸಿಕೊಳ್ಳಬೇಕಾದ್ದು ಬಹಳ ಅಗತ್ಯ ವಿರುತ್ತದೆ. ಎರಡು ದೃಷ್ಟಿಯಲ್ಲಿ ಇದನ್ನು ನೋಡಬೇಕು ಸಿನಿಮಾ ಎಂದರೆ ಇದು ಒಂದು ಕೈಗಾರಿಕೆ ಇದು ಕೈಗಾರಿಕೆಯಾಗಿರುವುದರಿಂದ ಹತ್ತಾರು ಜನರಿಗೆ ಅನ್ನ ಮತ್ತು ಉದ್ಯೋಗಕ್ಕೆ ಅನುಕೂಲ ವಾಗುವಂತೆ ಇದನ್ನು ದೃಢಪಡಿಸಿಕೊಂಡು ಇದಕ್ಕೆ ಪ್ರೋತ್ಸಾಹವನ್ನು ಕೊಡಬೇಕು. ಅದಕ್ಕಿಂತ ಹೆಚ್ಚಿಗೆ ಸರ್ಕಾರದವರು ಗಮನ ಹರಿಸಬೇಕಾದಂಥ ವಿಚಾರವೆಂದರೆ ಸಿನಿಮಾ ಒಂದು ಅತ್ಯಂತ ಪ್ರಭಾವಯುತ ಮಾಧ್ಯಮವಾಗಿದೆ. ಈವತ್ತು ಭಾರತದೇಶ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಸಿನಿಮಾಗಳನ್ನು ತಯಾರು ಮಾಡತಕ್ಕಂಥ ರಾಷ್ಟ್ರಗಳಲ್ಲಿ ಒಂದಾಗಿದೆ. ಆದರೆ ಪರಿಸ್ಥಿತಿ ಏನಾಗಿದೆ ಎಂದರೆ ಒಂದು ಸಾವಿರ ಜನರಿಗೆ ಐದು ಜನ ಸಿನಿಮಾಗಳನ್ನು ನೋಡತಕ್ಕಂಥ ಪರಿಸ್ಥಿತಿ ಇದೆ. ೧೦೦ಕ್ಕೆ ೮೦ ಜನರಿಗೆ ಸಿನಿಮಾ ಇನ್ನೂ ತಲುಪಿಲ್ಲ. ಎಲ್ಲರೂ ಸಿನಿಮಾವನ್ನು ನೋಡಬಯಸುತ್ತಾರೆ. ಹೀಗಿರುವಾಗ ಮಾನ್ಯ ಜೆ. ಹೆಚ್. ಪಟೇಲ್‌ರವರು ಅದನ್ನು ಬಂದ್ ಮಾಡಬೇಕೆಂದು ಹೇಳಿದರು. ಇನ್ನು ನಮ್ಮ ರಾಜ್ಯದಲ್ಲಿ ೧೦೦ಕ್ಕೆ ೮೦ ಜನರಿಗೆ ಸಿನಿಮಾ ತಲುಪಿಲ್ಲ. ಈವತ್ತು ಸಿನಿಮಾ ಒಂದು ಪ್ರಭಾವಿ ಮಾಧ್ಯಮವಾಗಿದೆ ಇದು ಕೇವಲ ಮನರಂಜನೆಗೆ ಮಾತ್ರವಲ್ಲ. ಇದನ್ನು ಶೈಕ್ಷಣಿಕ ಉದ್ದೇಶಗಳಿಗೋಸ್ಕರವಾಗಿಯೂ ಬಳಸತಕ್ಕಂಥ ಸಾಧ್ಯತೆ ಇದೆ. ಈವತ್ತು ಇಂಗ್ಲೆಂಡಿನಲ್ಲಿ, ಫ್ರಾನ್ಸ್‌ನಲ್ಲಿ. ಕೆನಡಾದಲ್ಲಿ ಈರೀತಿ ವ್ಯಾಪಕ ವಾಗಿ ಬಳಸುತ್ತಿದ್ದಾರೆ. ಇದಕ್ಕೆ ಬೇಕಾಗುಂಥ ತಂತ್ರಜ್ಞಾನ ರೂಪಿಸಿಕೊಂಡಿರುತ್ತಾರೆ. ೧೬ ಎಂ.ಎಂ. ಸಿನಿಮಾ ತಂತ್ರಜ್ಞಾನವನ್ನು ಬಳಸುತ್ತಿದ್ದಾರೆ. ಆದರೆ ನಮ್ಮ ದೇಶಕ್ಕೆ ೧೬ ಎಂ.ಎಂ. ತಂತ್ರಜ್ಞಾನ ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಅದಕ್ಕಾಗಿ ಈ ರಾಜ್ಯದಲ್ಲಿ ಒಂದು ಸಿನಿಮಾ ಕೈಗಾರಿಕಾ ಅಭಿವೃದ್ಧಿ ನಿಗಮ ಇದೆ. ಈ ನಿಗಮವು ಈಗ ದುರವಸ್ಥೆಯಲ್ಲಿದೆ ಎಂದು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಬಯಸುತ್ತೇನೆ. ಇದರಲ್ಲಿ ಶೇರ್ ವ್ಯಾಲ್ಯು ಸೊನ್ನೆಯಾಗಿ ಇರುತ್ತದೆ ಕೆಲವುಜನ ಖಾಸಗಿ ಸಿನಿಮಾ ಮಾಲೀಕರು ಶೇರುದಾರರಾಗಿರುತ್ತಾರೆ ಈ ಒಂದು ನಿಗಮ ಕೇರಳಾದಲ್ಲಿ ಇರತಕ್ಕಂಥ ರೀತಿಯಲ್ಲಿ ಸಂಪೂರ್ಣವಾದ ಸರ್ಕಾರಿ ನಿಗಮದಂತೆ ಪರಿವರ್ತಿಸಬೇಕು. ಮತ್ತು ಸರ್ಕಾರ ಸಿನಿಮಾ ನೀತಿಯನ್ನು ಕಾರ್ಯಗತ ಮಾಡುವುದಕ್ಕೆ ೧೬ ಎಂ.ಎಂ. ತಂತ್ರಜ್ಞಾನ ಜನರಿಗೆ ಸುಲಭವಾಗಿ ಒದಗಿಸುವುದಕ್ಕೆ ಸೃಜನಾತ್ಮಕ ರೀತಿಯಲ್ಲಿ ಕೆಲಸ ಮಾಡಿ ಶೈಕ್ಷಣಿಕ ಮಾಧ್ಯಮವಾಗಿ ಬಳಕೆಗೆ ತರಬೇಕು ಎನ್ನುವ ಅಂಶವನ್ನು ಒತ್ತಾಯಪೂರ್ವಕವಾಗಿ ಹೇಳಬಯಸುತ್ತೇನೆ. ಇದೇ ರೀತಿಯಲ್ಲಿ ಫಿಲಮ್ ಸೊಸೈಟಿಗಳೆಂದು ಇರುತ್ತದೆ. ಅವು ಇಂಥ ಸಿನಿಮಾ ಮಾಧ್ಯಮದ ಉಪಯುಕ್ತತೆಯನ್ನು ಗಮನಕ್ಕೆ ತೆಗೆದುಕೊಂಡಿರತಕ್ಕಂಥ ಸಂಸ್ಥೆಗಳು. ಈ ಸಂಸ್ಥೆಗಳು ನಾನಾ ರೀತಿಯಲ್ಲಿ ಕಿರುಕುಳಕ್ಕೆ ಪ್ರಾಪ್ತವಾಗಿದೆ. ಆ ಟ್ಯಾಕ್ಸ್ ಈ ಟ್ಯಾಕ್ಸ್ ಎಂದು ಕಿರುಕುಳಕ್ಕೆ ಒಳಪಡಿಸಿರತಕ್ಕಂಥ ಈ ಸಂಸ್ಥೆಗಳನ್ನು ಮುಕ್ತಗೊಳಿಸ ತಕ್ಕಂಥ ಪ್ರಯತ್ನ ಮಾಡಬೇಕು. ೧೯೭೦ನೇ ಇಸವಿಯಲ್ಲಿ ಚೀನಾ ದೇಶದಲ್ಲಿ ಸುಮಾರು ಅರವತ್ತು ಸಾವಿರ ತಂಡಗಳು ೮.೭೫ ಎಂ.ಎಂ. ಪ್ರೊಜೆಕ್ಟರ್‌ಗಳನ್ನು ಇಟ್ಟುಕೊಂಡು ಗ್ರಾಮಾಂತರ ಪ್ರದೇಶಗಳಲ್ಲಿ ತೋರಿಸತಕ್ಕಂಥ ಒಂದು ಏರ್ಪಾಡು ಇತ್ತು, ಅದು ಮುಂದುವರಿಯುತ್ತಿದೆಯೋ ಇಲ್ಲವೋ ಗೊತ್ತಿಲ್ಲ.

ಈ ಒಂದು ವ್ಯಾಪಕವಾದ ಕಾರ್ಯಕ್ರಮವನ್ನು ಸರ್ಕಾರ ಬಳಕೆಗೆ ತರಲು ಮನಸ್ಸು ಮಾಡಬೇಕು. ಕೇವಲ ಆ ಲಾಬಿ, ಈ ಲಾಬಿಯನ್ನು ತೃಪ್ತಿಪಡಿಸುವುದಕ್ಕೂ ಮತ್ತು ಸಬ್ಸಿಡಿಯನ್ನು ಕೊಡುವುದರಲ್ಲಿ ರಾಜಕೀಯ ಮಾಡುವುದರಿಂದ ಯಾವ ಪ್ರಯೋಜನವೂ ಇಲ್ಲ. ಮೂಲಭೂತವಾಗಿ ಈ ಒಂದು ಮಾಧ್ಯಮಕ್ಕೆ ಏನು ಮಾಡಬೇಕೋ ಅದನ್ನು ಮಾಡಲು ಚಿಂತಿಸಬೇಕೆಂದು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.

ಅದೇ ರೀತಿಯಲ್ಲಿ ಕನ್ನಡ ಚಿತ್ರಗಳನ್ನು ಕಡ್ಡಾಯವಾಗಿ ಪ್ರದರ್ಶನ ಮಾಡುವುದರ ಬಗ್ಗೆಯೂ ಅಧಿಕಾರಿಗಳು ಮತ್ತು ಮಂತ್ರಿಗಳು ಏಕಾಏಕಿಯಾಗಿ ಆಜ್ಞೆಯನ್ನು ಹೊರಡಿಸಿದ್ದಾರೆ. ಆದರೆ ಇದು ಇನ್ನೂ ಕಾರ್ಯಗತವಾಗುವುದಕ್ಕೆ ಸಾಧ್ಯವಾಗಿಲ್ಲವೆಂದರೆ ನಿಮ್ಮ ಬಗ್ಗೆ ನಾವು ನಿಜವಾಗಿಯೂ ಬಯಸತಕ್ಕಂಥದ್ದು ಮತ್ತೆ ಏನು ಎನ್ನುವ ಪ್ರಸಂಗ ಬಂದಿದೆ,

ಶ್ರೀ ರಾಮಕೃಷ್ಣ ಹೆಗಡೆ.—ಈ ವಿಚಾರ ಕೋರ್ಟಿನಲ್ಲಿರುತ್ತದೆ,

ಶ್ರೀ ಕೆ. ಎಚ್. ಶ್ರೀನಿವಾಸ್.—ತಮಿಳನಾಡಿನಲ್ಲಿ, ಆಂಧ್ರ ಪ್ರದೇಶದಲ್ಲಿ ಕಾರ್ಯಗತವಾಗದೆ ಇರಬಹುದು. ಪ್ರತಿಯೊಂದು ಕೋರ್ಟಿಗೆ ಹೋಗೇ ಹೋಗುತ್ತದೆ. ಕೋರ್ಟಿಗೆ ಹೋಗತಕ್ಕಂಥದ್ದನ್ನು ತಪ್ಪಿಸುವುದಕ್ಕೆ ಸಾಧ್ಯವೇ ಇಲ್ಲ. ಆದರೆ ಆಡಳಿತವನ್ನು ನಡೆಸತಕ್ಕಂಥವರು ಜಿಲ್ಲಾಧಿಕಾರಿಗಳಿಗೆ ಆಜ್ಞೆಯನ್ನು ಕಾರ್ಯಗತ ಮಾಡತಕ್ಕಂಥ ಸಂಪೂರ್ಣವಾದ ಅಧಿಕಾರವನ್ನು ಕೊಟ್ಟರೆ ತನಗೆ ತಾನೆ ಸರಿಹೋಗುತ್ತದೆ. ಅವರು ಲೈಸೆನ್ಸ್‌ನಿಂದ ಸಿಕ್ಕಿಕೊಳ್ಳುತ್ತಾರೆ. ಆಗ ಈ ಕೆಲಸವನ್ನು ಹೀಗೆಯೇ ಮಾಡಬೇಕೆಂದು ಅವರಿಗೆ ಆಜ್ಞೆಯನ್ನು ಮಾಡಿದರೆ ಅವರು ಬಾಯಿಮುಚ್ಚಿಕೊಂಡು ಮಾಡುತ್ತಾರೆ. ಆರೀತಿ ಮಾಡದಿದ್ದರೆ ಕನ್ನಡ ಕಡ್ಡಾಯ ತರಲು ಸಾಧ್ಯವಾಗುವುದೇ ಇಲ್ಲ. ನೀವು ಯಾವುದೋ ಹೇಳಿದರೆ ಅವರು ಯಾವುದನ್ನೋ ಸೇರಿಸಿಬಿಡುತ್ತಾರೆ. ಆದ್ದರಿಂದ ಇಂಥ ವಿಚಾರಗಳನ್ನು ಕಣ್ಣಿಟ್ಟು ನೋಡಿ ಸರಿಯಾದ ರೀತಿಯಲ್ಲಿ ಸಾಧನೆ ಮಾಡಬೇಕೇ ಹೊರತು ಕೋರ್ಟ್ ಆಜ್ಞೆ ಎಂದು ಹೇಳಿ ಕೈ ಎತ್ತತಕ್ಕಂಥದಲ್ಲವೆಂದು ಪ್ರಸ್ತಾಪ ಮಾಡಬಯಸುತ್ತೇನೆ.

ಇನ್ನು ನಾನು ಮೊದಲೇ ಹೇಳಿದಂತೆ ನನಗೆ ಈ ಸರ್ಕಾರದ ಅರ್ಥನೀತಿ ಏನು ಎಂಬುದು ಅರ್ಥವಾಗಿಲ್ಲ. ಇದನ್ನು ಮಾಡುತ್ತೇವೆ, ಅದನ್ನು ಮಾಡುತ್ತೇವೆ, ಸ್ಯಾರಿ ಹಂಚುತ್ತೇವೆ. ಧೋತಿ ಹಂಚುತ್ತೇವೆ, ಪಠ್ಯಪುಸ್ತಕಗಳನ್ನು ಹಂಚುತ್ತೇವೆಂದು ಹೇಳುತ್ತಾರೆಯೇ ಹೊರತು, ಒಟ್ಟಿನಲ್ಲಿ ಜನರು ಇವತ್ತಿನದಿವಸ ಇರತಕ್ಕಂಥ ಪರಿಸ್ಥಿತಿಯಲ್ಲಿ ಯಾವರೀತಿ ಅರ್ಥೈಸಿಕೊಳ್ಳುತ್ತಾರೆ, ಅದಕ್ಕೆ ಏನು ನೀತಿ ನಿರೂಪಣೆಗಳನ್ನು ರೂಪಿಸಿಕೊಳ್ಳಬೇಕು ಎನ್ನುವ ಬಗ್ಗೆ ಎಲ್ಲೂ ಪ್ರಸ್ತಾಪ ಮಾಡಿಲ್ಲ. ಕಾಂಗ್ರೆಸ್‌ನಿಂದ ಏನೂ ಆಗಿಲ್ಲ ಎಂದು ಹೇಳುತ್ತಾರೆಯೇ ಹೊರತು ಕಾಂಗ್ರೆಸ್ ನೀತಿಗೆ ಪರ್ಯಾಯವಾದಂಥ ಯಾವ ನೀತಿಯನ್ನು ನೀಡಬಯಸಿದ್ದಾರೆ ಎಂಬುದನ್ನು ನೋಡಿದರೆ ಈ ಬಜೆಟ್‌ನಲ್ಲಿ ಅಂಥದ್ದು ಯಾವುದು ಕಂಡುಬರಲಿಲ್ಲ. ನಾನು ರಾಜ್ಯಪಾಲರ ಭಾಷಣದಲ್ಲಿಯೂ ಕೂಡ ಏನಾದರೂ ಇರುತ್ತದೆಯೇ ಎಂದೂ ನೋಡಿದೆ ಈ ಹಂಗಾಮಿ ಬಡ್ಜೆಟ್ ಎಂದು ಏನು ನೀಡಿದರು, ಅದನ್ನೂ ಕೂಡ ನೋಡಿದೆ. ಅದರಲ್ಲೂ ಏನು ಸಿಕ್ಕಲಿಲ್ಲ. ಇಲ್ಲಿ ಒಂದು ಮಾತನ್ನು ಹೇಳಿದ್ದಾರೆ ಜನತಾ ಪಕ್ಷವು ವಚನವಿತ್ತಂತೆ ಪಕ್ಷದ ಪ್ರಣಾಳಿಕೆ ಸರ್ಕಾರಿ ಕಾರ್ಯಕ್ರಮವಾಗಿದೆ ಎಂದು ಹೇಳಿದ್ದಾರೆ. ಇದು ಕೇವಲ ಪಕ್ಷದ ಕಾರ್ಯಕ್ರಮವಲ್ಲ. ಆದ್ದರಿಂದ ನಾನು ಜನತಾ ಪಕ್ಷದ ಪ್ರಣಾಳಿಕೆಯನ್ನು ಒದಗಿಸಿಕೊಡಬೇಕೆಂದು ಕೇಳಿದೆ. ಏತಕ್ಕೆಂದರೆ ಈ ಬಡ್ಜೆಟ್ ಭಾಷಣವನ್ನು ಓದಿದರೆ ಏನು ಅರ್ಥವಾಗುವುದಿಲ್ಲ, ನಾವು ಕೂಡ ಇದನ್ನು ಓದಿ ಅರ್ಥ ಮಾಡಿಕೊಳ್ಳತಕ್ಕಂಥ ಅವಶ್ಯಕತೆ ಇರುತ್ತದೆ. ಎಲ್ಲೋ ಒಂದು ಪ್ರತಿಯನ್ನು ಪ್ರೆಸ್‌ನಿಂದ ತರಿಸಿಕೊಂಡೆ ಬೇರೆ ಕಡೆ ಎಲ್ಲೂ ಇದು ಸಿಗುವುದಿಲ್ಲ. ಇದರಲ್ಲಿ ತುಂಬಾ ಭರವಸೆಗಳನ್ನು ಪುಂಖಾನುಪುಂಖವಾಗಿ ಕೊಟ್ಟಿದ್ದಾರೆ ಬಜೆಟ್‌ನಲ್ಲಿ ಇನ್ನೂ ಅನೇಕ ವಿಚಾರಗಳನ್ನು ಹೇಳಿದ್ದಾರೆ, ಐದು ವರ್ಷಗಳದಮೇಲೆ ಇವನ್ನೆಲ್ಲ ಮಾಡುತ್ತೇವೆಂದು ಹೇಳಬಹುದು. ಆಯವ್ಯಯದ ಮೂಲಕ ಸರ್ಕಾರಿ ಕಾರ್ಯಕ್ರಮ ಏನು ಇರುತ್ತದೋ ಅದನ್ನು ಪ್ರತ್ಯೇಕವಾಗಿ ನಮಗೆ ತಿಳಿಸಬೇಕಾಗಿತ್ತು. ನಮ್ಮ ನೀತಿ ಇದು ಎಂದು ಹೇಳಿದ್ದರೆ, ನಾವು ನಿಮ್ಮ ನೀತಿಯ ವಿಫಲತೆಯನ್ನು ಎತ್ತಿ ತೋರಿಸಬಹುದಾಗಿತ್ತು. ನಿಮ್ಮ ಪಕ್ಷದ ವಿಫಲತೆಯನ್ನು ಜನತಾಪಕ್ಷದ ಅಧ್ಯಕ್ಷರನ್ನು ಕೇಳುವುದಕ್ಕೆ ಆಗುವುದಿಲ್ಲ ಮಾನ್ಯ ಮುಖ್ಯಮಂತ್ರಿಗಳಾದ ತಮ್ಮನ್ನು ಕೇಳಬೇಕಾಗುತ್ತದೆ. ಇಂಥ ಪರಿಸ್ಥಿತಿಯನ್ನು ತಂದಿಟ್ಟಿದ್ದೀರಿ. ನಿಮ್ಮ ಪಕ್ಷದ ನಿರ್ದಿಷ್ಟವಾದ ನೀತಿ ಏನು ? ನಿಮ್ಮ ಮನಸ್ಸಿನಲ್ಲಿರತಕ್ಕಂಥ ವಿಚಾರ ಏನು ಎನ್ನುವುದು ಒಂದು ಅರ್ಥ

ವಾಗುತ್ತಿಲ್ಲ. ಸಂದರ್ಭಾನುಸಾರ ಏನು ಬೇಕೋ ಅದನ್ನು ಬದಲಾವಣೆ ಮಾಡಿಕೊಳ್ಳುವಂಥ ವಿಚಾರಗಳನ್ನು ಶಬ್ದಗಳನ್ನು ಬಳಕೆ ಮಾಡಿದ್ದೀರಿ ಒಟ್ಟಿನಲ್ಲಿ ಜನರಿಗೆ ಅನುಕೂಲವಾಗಬೇಕೆಂಬುದೇ ನಮ್ಮ ಅಭಿಪ್ರಾಯವಾಗಿರುತ್ತದೆ. ಈವತ್ತು ಸ್ಯಾರಿ ಹಂಚತಕ್ಕಂಥದ್ದು, ಧೋತ್ರವನ್ನು ಹಂಚತಕ್ಕಂಥದ್ದು ಪಠ್ಯಪುಸ್ತಕಗಳನ್ನು ಹಂಚತಕ್ಕಂಥ ಉದ್ದೇಶ ಏನು ಇರುತ್ತದೋ ಅದು ಒಂದು ಒಳ್ಳೆಯ ಉದ್ದೇಶವಾಗಿರುತ್ತದೆ. ಏಕೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಹೆಣ್ಣು ಮಕ್ಕಳು ಹರಿದುಹೋದ ಸೀರೆಯನ್ನು ಉಟ್ಟುಕೊಂಡು ಬಂದಾಗ ಸೀರೆಯನ್ನು ಕೊಡಬೇಕು ಅನ್ನ ಕೊಡತಕ್ಕದಲ್ಲ ಅದಕ್ಕೆ ಯಾವುದೇ ಬಣ್ಣವಿರಲಿ, ಜನತಾ ಬಣ್ಣವಿರಲಿ, ಯಾವುದೇ ಬಣ್ಣವಿರಲ್ಲಿ, ಒಟ್ಟಿನಲ್ಲಿ ಒಳ್ಳೆಯ ಸೀರೆಯನ್ನು ಉಟ್ಟುಕೊಂಡರೆ ಒಳ್ಳೆಯದು. ಆದರೆ ಇದೇ ಸಂದರ್ಭದಲ್ಲಿ ಸರ್ಕಾರದವರ ಜವಾಬ್ದಾರಿಯೂ ಕೂಡ ಇರುತ್ತದೆ. ಅವರು ಅರ್ಥೈಸಿಕೊಂಡು ಹೋಗಬೇಕು. ಸೀರೆಯನ್ನು ಕೊಡುತ್ತೇವೆಂದರೆ ಎಲ್ಲಿಯತನಕ ಕೊಡಲು ಸಾಧ್ಯವಾಗುತ್ತದೆ. ತಾವು ಬಟ್ಟೆಯನ್ನು ಕೊಂಡುಕೊಳ್ಳತಕ್ಕಂಥ, ಪುಸ್ತಕಗಳನ್ನು ತಮ್ಮ ಮಕ್ಕಳಿಗೆ ಕೊಂಡುಕೊಳ್ಳತಕ್ಕಂಥ ಶಕ್ತಿಯನ್ನು ನಿರ್ಮಾಣ ಮಾಡುವ ದಿಸೆಯಲ್ಲಿ ಯಾವ ಪ್ರಯತ್ನವನ್ನು ಮಾಡಿದ್ದೀರಿ ಎಂದು ಕೇಳಬೇಕಾಗುತ್ತದೆ. ಈ ಪ್ರಯತ್ನವಿಲ್ಲದೆ ಹೋದರೆ ಕೊನೆಗೆ ಏನು ಆಗುತ್ತದೋ ಹೇಳುವುದಕ್ಕೆ ಆಗುವುದಿಲ್ಲ. ಇದನ್ನು ನಾವು ಹೇಳಿದರೆ ಏನೋ ರಾಜಕೀಯ ಕ್ಕೋಸ್ಕರ ಹೇಳುತ್ತಿದ್ದಾರೆ ಎನ್ನುವ ಭಾವನೆ ಬರುತ್ತದೆ. ಇದನ್ನು ಹೇಳುತ್ತಿದ್ದರೆ ಬೇರೆ ರೀತಿಯಲ್ಲಿ ಅರ್ಥವಾಗುವುದಕ್ಕೆ ಅವಕಾಶವಾಗುತ್ತದೆ. ನಿಮ್ಮ ಪಕ್ಷದ ಅಧ್ಯಕ್ಷರು ಒಂದು ಮಾತನ್ನು ಹೇಳಿದರು. ನಮ್ಮಲ್ಲಿ ಬಡವರು, ಶ್ರೀಮಂತರು ಎನ್ನುವ ಭೇದ ಇಲ್ಲ. ಎಲ್ಲರಿಗೂ ಒಂದೇ, ಎಲ್ಲರಿಗೂ ಟೆಕ್ಸ್ಟ್ ಬುಕ್ಸನ್ನು ಕೊಡುತ್ತಿದ್ದೇವೆಂದು ಹೇಳಿದರು.

೧೦-೦೦ ಎ.ಎಂ.

ಇದೇ ನಿಮ್ಮ ನೀತಿಯಾಗಿದ್ದರೆ, ಎಲ್ಲಾ ವಿಚಾರಕ್ಕೂ ಬಡವರು ಮತ್ತು ಶ್ರೀಮಂತರು ಎನ್ನುವ ಭೇದವಿಲ್ಲದೆ ಒಂದೇ ನೀತಿಯಿದ್ದರೆ, ದೇಶದಲ್ಲಿ ಅಸಮಾನತೆ ಇರುವುದನ್ನು ಸಮಾನವಾಗಿ ಕಾಣಲಿಕ್ಕೆ ಪ್ರಾರಂಭ ಮಾಡಿದರೆ, ಆ ನೀತಿಯೇ ಬರುವುದಾದರೆ ತುಂಬಾ ದೊಡ್ಡ ಅನಾಹುತಕ್ಕೆ ಇದು ಕಾರಣವಾಗುತ್ತದೆ. ಆದ್ದರಿಂದ ನಿಮ್ಮ ನೀತಿ ಏನು ಎಂದು ಕೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಬೇರೆ ರೀತಿಯಲ್ಲಿ ಯೋಚನೆ ಮಾಡುವುದಕ್ಕೇ ಪ್ರಯತ್ನ ಮಾಡಿಲ್ಲ. ಇವತ್ತು ಜನರಿಗೆ ಬರೇ ಉತ್ಪಾದನೆ ದೃಷ್ಟಿಯಿಂದ ಸಾಲ ಸಿಗುತ್ತಿರಬಹುದು. ನಾವು ಹಿಂದೆ ಋಣ ವಿಮೋಚನಾ ಕಾಯಿದೆಯನ್ನು ಮಾಡಿದೆವು. ಒಂದು ಕ್ರೆಡಿಟ್ ಗ್ಯಾಪ್ ಉಂಟಾಗಿದೆ. ಬಳಕೆ ಸಾಲ ದೊರೆಯುವುದೇ ಇರತಕ್ಕಂಥ ಪರಿಸ್ಥಿತಿಯಲ್ಲಿ ಯಾರೂ ಸಾಲ ಕೊಡುವುದಕ್ಕೆ ತಯಾರಿಲ್ಲ. ಬಳಕೆ ಸಾಲ ದೊರೆಯದೆ ಜನಜೀವನ ನಡೆಯುವುದು ದುಸ್ತರವಾಗುತ್ತದೆ. ಇವತ್ತು ಬಳಕೆ ಸಾಲ ಕೊಡುವುದಕ್ಕೆ ಪ್ರಯತ್ನ ಮಾಡಿದರೆ ಅವರವರ ಬಟ್ಟೆ ಖರೀದಿ, ಮದುವೆ ಇತ್ಯಾದಿ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಇದನ್ನು ಕೂಡ ತಾವು ಮಾಡಬಹುದು. ಇವತ್ತು ಡಿಫರೆನ್‌ಶಿಯಲ್ ರೇಟ್ ಆಫ್ ಇಂಟರೆಸ್ಟ್ ಸೆಕ್ಟಾರ್ ಇದರ ಬಗ್ಗೆ ಸರ್ಕಾರ ಎಷ್ಟರಮಟ್ಟಿಗೆ ಆಸಕ್ತಿ ವಹಿಸಿದೆ? ೧೯೮೪ರಲ್ಲಿ ೪೯ ಕೋಟಿ ರೂಪಾಯಿ ಸಾಲ ಭಾರತದೇಶದಲ್ಲಿ ಬ್ಯಾಂಕುಗಳು ಕೊಟ್ಟಿವೆ. ಇದು ೦.೯೯ ಪರ್ಸೆಂಟ್ ಆಗುತ್ತದೆ. ಇಂಡಸ್ಟ್ರೀಯಲ್ ಹೌಸ್‌ಗಳಿಂದ ಬರಬೇಕಾದ ಬಾಕಿ ೧೧೫೭ ಕೋಟಿ ರೂಪಾಯಿಗಳು ಇದ್ದು ಸಾಲ ಪೂರೈಕೆಯಾಗಿರುವುದು ೨ ಪರ್ಸೆಂಟ್. ಹಿಂದೆ ನಾನು ಯೋಜನಾ ಖಾತೆಯ ಮಂತ್ರಿಯಾಗಿದ್ದಾಗ ಮಂತ್ರಿಮಂಡಲ ತೀರ್ಮಾನ ತೆಗೆದುಕೊಂಡು ಡಿಫರೆನ್‌ಶಿಯಲ್ ರೇಟ್ ಆಫ್ ಇಂಡಸ್ಟ್ರೀಯಲ್ ಸೆಕ್ಟಾರ್ ಸಾಲಕ್ಕೆ ಸರ್ಕಾರ ಗ್ಯಾರಂಟಿ ಕೊಡಬೇಕು, ಬಡ್ಡಿ ಲುಕ್ಸಾನು ಸಹಭಾಗಿತ್ವವನ್ನು ಸರ್ಕಾರ ಕೊಡಬೇಕೆಂದು ಇತ್ತು. ಜನತೆಯನ್ನು ಹೆಚ್ಚು ಹೆಚ್ಚಾಗಿ ಕ್ರಿಯಾಶೀಲರನ್ನಾಗಿ ಮಾಡುವಂತಹ ಯೋಜನೆಗಳನ್ನು ತಾವು ಏಕೆ ಮಾಡಬಾರದು? ಇದರ ಬಗ್ಗೆ ತಾವು ತೀವ್ರವಾಗಿ ಗಮನಹರಿಸಬೇಕಾದದ್ದು ಅಗತ್ಯ.

ಅಧ್ಯಕ್ಷರು:—ಶ್ರೀ ಕೆ. ಹೆಚ್. ಶ್ರೀನಿವಾಸರವರೇ, ನಿಮ್ಮ ವೇಳೆ ಆಯಿತು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇನ್ನು ಒಂದೇ ಒಂದು ವಿಚಾರವನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತೇನೆ. ಈ ಟ್ಯಾಕ್ಸ್ ಬಗ್ಗೆ ಮುಖ್ಯವಾಗಿ ಅಬ್ಕಾರಿ ಮತ್ತು ಸೇಲ್ಸ್ ಟ್ಯಾಕ್ಸ್ ಇವೆರಡರ ಬಗ್ಗೆ ಕೂಡ ೧೯೭೭ನೇ ಇಸವಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೆಲವು ಮಾತುಗಳನ್ನು ಹೇಳಿದ್ದಾರೆ.

"ಯಾವುದೇ ವಸ್ತುವಿನ ಬಗ್ಗೆ ಟ್ಯಾಕ್ಸ್‌ನಿಂದ ಆದಾಯ ಏಳತಕ್ಕದ್ದು ನಿಜ. ಆದರೆ ಒಂದೊಂದು ಸಲ ಟ್ಯಾಕ್ಸ್ ರೇಟ್ ಹೆಚ್ಚಾದರೆ ಒಟ್ಟು ಬರತಕ್ಕ ಆದಾಯ ಕಡಿಮೆಯಾಗಬಹುದು. ಸೇಲ್ಸ್ ಟ್ಯಾಕ್ಸ್ ತೆಗೆದುಕೊಂಡರೆ, ನನ್ನ ಖಚಿತವಾದ ಅಭಿಪ್ರಾಯದಲ್ಲಿ ಎಂದಿಗೂ ೧೮ ಪರ್ಸೆಂಟ್‌ಗಿಂತ ಹೆಚ್ಚು ಸೇಲ್ಸ್ ಟ್ಯಾಕ್ಸ್ ಇರಕೂಡದು.

ಆಮೇಲೆ ಮನರಂಜನಾ ತೆರಿಗೆಯನ್ನು ಏರಿಸಕೂಡದು ಎಂದು ಹೇಳಿದ್ದರು. ಆಮೇಲೆ ಅರಾಕ್ ಮೇಲೆ—'ಸಾಮಾನ್ಯ ಜನ ಕುಡಿಯುತ್ತಾರೆ. ಅದರ ಮೇಲೆ ಟ್ಯಾಕ್ಸ್ ಹಾಕಿದರೆ ಯಾರೂ ಕೂಡ ಕುಡಿಯುವುದಕ್ಕೆ ಹೋಗುವುದಿಲ್ಲ' ಎಂದಿದ್ದಾರೆ. ಸಾಮಾನ್ಯ ಮನುಷ್ಯನಿಗೆ ಮನರಂಜನೆ ಬೇರೆ ಯಾವುದೂ ಇಲ್ಲ. ಕೆಲಸ ಮಾಡಿ ದಣಿದು ಬರುತ್ತಾರೆ. ಅವರಿಗೆ ಮನರಂಜನೆ ಸಿಕ್ಕಿದರೆ ಸಾಕು, ಅವರ ಆಯಾಸ ಪರಿಹಾರವಾಗುತ್ತದೆ. ಆದ್ದರಿಂದ ಟ್ಯಾಕ್ಸ್ ಹಾಕಿದ್ದು ತಪ್ಪು, ಬಡಜನರಿಗೆ ಮನರಂಜನೆಗೆ ಇರತಕ್ಕ ಮಾರ್ಗ ಎಂದರೆ ಸಿನೆಮಾ..............

ಶ್ರೀ ರಾಮಕೃಷ್ಣ ಹೆಗಡೆ.—ಸಿನೆಮಾ ಮೇಲೆ ಟ್ಯಾಕ್ಸ್ ಹಾಕಿಲ್ಲ.

ಶ್ರೀ ಕೆ.ಎಚ್. ಶ್ರೀನಿವಾಸ್.—ಸಿನೆಮಾ ರೇಟ್ ಜಾಸ್ತಿಯಾದ ಮೇಲೆ ವಿಡಿಯೋ ನೋಡುವುದಕ್ಕೆ ಹೋಗುತ್ತಾರೆ. ಅದನ್ನೂ ಕೂಡ ಒಂದು ತಿಂಗಳಿಗೆ ಒಂದು ಸಾವಿರ ರೂಪಾಯಿ ಕೊಡಬೇಕೆಂದು ಏರಿಸಿದ್ದಾರೆ. ಅರಾಕ್ ಮೇಲೆ ಎಷ್ಟು ಏರಿಸಿದ್ದೀರಿ? ದಿವಸ ದಿವಸ ಕುಡಿದು ಪ್ರಾಣ ಬಿಡುವುದಕ್ಕಿಂತ, ಬಡವ ಒಂದೇ ದಿವಸ ಕುಡಿದು ಪ್ರಾಣ ಬಿಡುವುದು ಒಳ್ಳೆಯದು..........

ಒಬ್ಬರು ಮಾನ್ಯ ಸದಸ್ಯರು.—ಶಿವಾಜಿನಗರದಲ್ಲಿ ನಡೆಯಿತಲ್ಲ, ಹಾಗಾ ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಸಕ್ಕರೆ ಮೇಲೆ, ಬಟ್ಟೆಮೇಲೆ ತೆರಿಗೆ ಏರಿಸಿದ್ದಾರೆ, ಸೀರೆ ದರ ೮೦ ರಿಂದ ೪೦ಕ್ಕೆ ಇಳಿಸಿ ಸಕ್ಕರೆ ಬೆಲೆ ಏರಿದೆ. ಮಾರ್ಕೆಟ್‌ನಲ್ಲಿ ಸಕ್ಕರೆ ಬೆಲೆ ಈಗ ಎಂಟು ಹತ್ತು ರೂಪಾಯಿ ಆಗಿದೆ. ಇನ್ನು ಏರಿಸಿದರೆ ಸಾಮಾನ್ಯ ಜನ ಇದನ್ನು ಬಳಕೆಯೇ ಮಾಡುವುದಿಲ್ಲ. ಬೆಲ್ಲ ಮಾಡುವ ಹಾಗೆಯೇ ಇಲ್ಲ. ಸಕ್ಕರೆ ಕಾರ್ಖಾನೆಗಳಿಗೆ ಹೇಳುತ್ತಾರೆ ಏನೆಂದರೆ ಕಬ್ಬು ಬೇಕಾದರೆ ಒಣಗಿ ಹೋಗಲಿ, ಬೆಲ್ಲ ಮಾಡುವುದನ್ನು ಬ್ಯಾನ್ ಮಾಡಿದ್ದಾರೆ. ಟ್ಯಾಕ್ಸೇಶನ್ ಬಗ್ಗೆ ಏನಾದರೂ ಯೋಚನೆ ಮಾಡಿದ್ದೀರಾ? ಫೋಟೋಗ್ರಾಫಿಕ್ ಗೂಡ್ಸ್ ೨೪ ಪರ್ಸೆಂಟ್ ಆಗುತ್ತದೆ, ಇದರಿಂದ ಏನಾಗುತ್ತದೆ ಎಂದರೆ, ಊಟಿಯಲ್ಲಿ ತಯಾರಾಗತಕ್ಕಂಥ ಫೋಟೋಗ್ರಾಫಿಕ್ ಮೆಟೀರಿಯಲ್ಸ್ ಅಲ್ಲಿಂದ ಡೆಲ್ಲಿಗೆ ಹೋಗಿ ಸ್ಮಗ್ಲಿಂಗ್ ಆಗಿ ಬೆಂಗಳೂರಿಗೆ ಬರುತ್ತದೆ. ಇಲ್ಲಿ ಟ್ಯಾಕ್ಸ್ ಬರುವುದಿಲ್ಲ. ಮದರಾಸ್ ಬೊಂಬಾಯಿಗಳಲ್ಲಿ ಸೆಂಟ್ರಲ್ ಸೇಲ್ಸ್ ಟ್ಯಾಕ್ಸ್ ಬೀಳುವುದಿಲ್ಲ. ಇಲ್ಲಿ ಬೀಳುವುದರಿಂದಲೇ ಒಟ್ಟು ೨೪ ಪರ್ಸೆಂಟ್ ಸೇಲ್ಸ್ ಟ್ಯಾಕ್ಸ್ ಆಗುತ್ತದೆ. ಸಾಮಾನ್ಯ ಜನತೆ ಬಳಸತಕ್ಕಂಥ ಬೂಟ್‌ಪಾಲಿಶ್‌ಗೂ ಟ್ಯಾಕ್ಸ್ ಹಾಕಿದ್ದಾರೆ. ಇದನ್ನೂ ಕೂಡ ಲಕ್ಸುರಿ ಐಟಂಗೆ ಸೇರಿಸಿದ್ದೀರಾ?

ಶ್ರೀ ರಾಮಕೃಷ್ಣ ಹೆಗಡೆ.—ಬಡಜನರು ಬೂಟ್‌ಪಾಲಿಶ್ ಉಪಯೋಗಿಸುವುದಿಲ್ಲ. ಹಿಂದಿನ ಮಂತ್ರಿಗಳು ಮತ್ತು ಈಗಿನ ಮಂತ್ರಿಗಳು ಇದನ್ನು ಉಪಯೋಗಿಸುತ್ತಾರೆ.

ಶ್ರೀ ಕೆ.ಎಚ್. ಶ್ರೀನಿವಾಸ್.—ಬಡಜನರು ತಮ್ಮ ಚಪ್ಪಲಿಯನ್ನು ವರ್ಷದಲ್ಲಿ ಒಮ್ಮೆಯಾದರೂ ಪಾಲಿಶ್ ಮಾಡುವುದು ಬೇಡವೆಂದು ನಿಮ್ಮ ತೀರ್ಮಾನವೇನು? ಇದನ್ನು ಶ್ರೀಮಂತರಿಗೆ ಮಾತ್ರ ಮೀಸಲಾಗಿಡಬೇಕೆನ್ನುವುದು ನಿಮ್ಮ ತೀರ್ಮಾನವಾಗಿದ್ದರೆ, ಬಡವರು ಇನ್ನು ಮೇಲೆ ಬೂಟ್‌ಪಾಲಿಶ್ ಮಾಡುವ ಹಾಗೆಯೇ ಇಲ್ಲ,

ಶ್ರೀ ರಾಮಕೃಷ್ಣ ಹೆಗಡೆ.—ಬೂಟ್ಸ್ ಹಾಕುವುದಕ್ಕೆ ಮೊದಲು ಕನಿಷ್ಠಪಕ್ಷ ಅವರಿಗೆ ಚಪ್ಪಲಿಯಾದರೂ ಸಿಗಲಿ. ಬೂಟ್ಸ್ ಆಮೇಲೆ ಹಾಕಿಕೊಳ್ಳಲಿ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಸೇಲ್ಸ್ ಟ್ಯಾಕ್ಸ್ ಯಾವುದೇ ಪ್ರಸಂಗದಲ್ಲೂ ೧೨ ಪರ್ಸೆಂಟ್‌ಗಿಂತ ಹೆಚ್ಚು ವಿಧಾರಬಾರದು ಎಂದು ಮಾನ್ಯ ಮುಖ್ಯಮಂತ್ರಿಗಳು ಹತ್ತು ವರ್ಷಗಳ ಹಿಂದೆ ಹೇಳಿದರು. ಟ್ಯಾಕ್ಸ್ ಜಾಸ್ತಿಯಾದರೆ ಬ್ಯುಸಿನೆಸ್ ಡೈವರ್ಟ್ ಆಗುತ್ತದೆ ಎಂದು ಹೇಳಿದವರು ಇವರು. ಫೋಟೋಗ್ರಾಫಿಕ್ ಗೂಡ್ಸ್ ಊಟಿಯಲ್ಲಿ ತಯಾರಾಗಿ ಡೆಲ್ಲಿಗೆ ಹೋಗುತ್ತದೆ. ಅಲ್ಲಿಂದ ಸ್ಮಗಲ್ ಆಗಿ ಇಲ್ಲಿಗೆ ಬರುತ್ತದೆ.

ಅಧ್ಯಕ್ಷರು.—ಶ್ರೀನಿವಾಸ್. ಬೇಗ ಮುಗಿಸಿಬಿಡಿ.

ಶ್ರೀ ಕೆ.ಎಸ್. ಶ್ರೀನಿವಾಸ್.—ದುರಾದೃಷ್ಟವಶಾತ್ ತಾವು ಪದೇ ಪದೇ ಗಂಟೆ ಬಾರಿಸುತ್ತಿರುವುದರಿಂದ ಇನ್ನೂ ಅನೇಕ ವಿವರಗಳು ಇದ್ದರೂ ಕೂಡ ಹೇಳುವುದಕ್ಕೆ ಸಾಧ್ಯವಿಲ್ಲವಾಗಿದೆ. ಇನ್ನು ಒಂದೇ ಒಂದು ವಿಚಾರ ಇದೆ. ಅದನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮುಂದೆ ಅವಕಾಶಗಳು ಬೇಕಾದಷ್ಟು ಇರುತ್ತವೆ. ಸಾಕಷ್ಟು ಅವಕಾಶ ಈಗಾಗಲೇ ನಿಮಗೆ ಕೊಟ್ಟಾಗಿದೆ.

ಶ್ರೀ ಕೆ.ಎಚ್. ಶ್ರೀನಿವಾಸ್.—ಇದು ಬಹಳ ಸಲ ಪ್ರಸ್ತಾಪ ಆಗಿದೆ. ನಾನು ಕೂಡ ಒಂದು ಸಲ ಹೇಳಿ ಇದನ್ನು ಕೈಬಿಡೋಣ ಅಂತ ಇದ್ದೇನೆ. ಇದುವರೆಗೆ ಆರ್ಥಿಕ ವಿಚಾರಗಳ ಬಗ್ಗೆ ನನ್ನ ಶಕ್ತ್ಯಾನುಸಾರ ಹೇಳಿದ್ದೇನೆ.

ಈ ಬಗ್ಗೆ ಇನ್ನೂ ಸ್ವಲ್ಪ ಹೇಳಬಹುದಾಗಿತ್ತು. ಆದರೆ ಕಾಲಾವಕಾಶ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಅವರ ಸ್ನೇಹಿತರುಗಳು ಪದೇಪದೇ ಇಲ್ಲಿ ಮೌಲ್ಯಧಾರಿತ ರಾಜಕೀಯದ ಬಗೆ ಹೇಳುತ್ತಿರುತ್ತಾರೆ. ಈ ಬಗ್ಗೆ ಈ ಹಿಂದಿನ ಇವರ ಆಯವ್ಯಯ ಭಾಷಣದಲ್ಲಿ ಮತ್ತು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪವಾಗಿದ ಈ ಮಾತನ್ನು ಇವರು ಪದೇಪದೇ ಹೇಳುವುದನ್ನು ನೋಡಿದಾಗ ನನಗೆ ಭಗವತ್‌ಗೀತೆಯಲ್ಲಿಯಲ್ಲಿ ಹೇಳಿರುವಂತಹ ಒಂದು ಶ್ಲೋಕ ಜ್ಞಾಪಕ್ಕೆ ಬರುತ್ತದೆ. ಅದು ಈ ರೀತಿ ಇದೆ.—

'ಪರಿತ್ರಾಣಾಯ ಸಾಧೂನಾಂ, ವಿನಾಶಾಯಚ ದುಷ್ಕೃತಂ:
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ:

ಇದರ ಪ್ರಕಾರ ಕೃಷ್ಣ ಮತ್ತೆ ಏತಕ್ಕೆ ಹುಟ್ಟಲಿಲ್ಲ ಎಂದು ನಾನು ಯೋಚನೆ ಮಾಡುತ್ತಿದ್ದೆ. ಆದರೆ ಈಗ ಶ್ರೀ ರಾಮಕೃಷ್ಣಹೆಗಡೆಯವರೇ ಕೃಷ್ಣನ ರೂಪದಲ್ಲಿ ಧರ್ಮದ ಉದ್ಧಾರ ಮಾಡುವುದಕ್ಕೋಸ್ಕರವಾಗಿ ಅವತಾರ ಮಾಡಿರಬೇಕೆಂದು ನನಗನ್ನಿಸುತ್ತಿದೆ. ಆದರೆ ಇವರಿಗೆ ರಾಮ ಮತ್ತು ಕೃಷ್ಣ ಎಂದು ಎರಡು ಹೆಸರುಗಳನ್ನು ಇಟ್ಟಿದ್ದಾರೆ. ಆದ್ದರಿಂದ ನಾನು ಅವರನ್ನು ಕೇಳುವುದೇನೆಂದರೆ, ಅವರಲ್ಲಿರುವುದು ರಾಮನ ಮೌಲ್ಯಗಳೋ ಅಥವಾ ಕೃಷ್ಣನ ಮೌಲ್ಯಗಳೋ ಎಂದು?

ಶ್ರೀ ರಾಮಕೃಷ್ಣ ಹೆಗಡೆ.—ನನ್ನಲ್ಲಿ ರಾಜಕೀಯವಾಗಿ ಕೃಷ್ಣನ ಮೌಲ್ಯಗಳಿವೆ, ನಿಜಜೀವನದಲ್ಲಿ ರಾಮನ ಮೌಲ್ಯಗಳಿವೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಇವರು ಹುಟ್ಟಿದಾಗ ರಾಮ ಎಂದು ಹೆಸರಿಟ್ಟಿರಬೇಕೆಂದು ಕಾಣುತ್ತದೆ. ಆದರೆ ಇವರ ಗುಣಗಳನ್ನು ನೋಡಿ ಕೃಷ್ಣ ಎಂದು ರಾಮನ ಹೆಸರಿನ ಜೊತೆಗೆ ಸೇರಿಸಿರಬೇಕೆಂದು ಕಾಣುತ್ತದೆ. ಈಗ ಇವರಲ್ಲಿ ರಾಮನ ಮೌಲ್ಯಗಳೂ ಇಲ್ಲ, ಕೃಷ್ಣನ ಮೌಲ್ಯಗಳೂ ಇಲ್ಲ. ಈಗ ಇವರಲ್ಲಿ ರಾವಣನ ಮೌಲ್ಯಗಳು ಇರಬಹುದು. ರಾವಣನ ಮೌಲ್ಯಗಳು ಇರಬೇಕಾದರೆ ಹತ್ತು ತಲೆಗಳು ಇರಬೇಕಾಗಿಲ್ಲ. ಸೀತೆಯನ್ನು ಮನವೊಲಿಸಲು ರಾವಣ ಬಂದಾಗ ಸುಂದರ ರಾವಣನಾಗಿದ್ದ ಎಂದು ಹೇಳುತ್ತಾರೆ. ಅಂದರೆ ಯಾವ ರೂಪ ಬೇಕೋ ಅದನ್ನು ಧರಿಸುವಂತಹ ಶಕ್ತಿ ರಾಕ್ಷಸರಿಗೆ ಮಾತ್ರ ಇರುತ್ತದೆ. ಆದ್ದರಿಂದ ರಾವಣ ಯಾವ ರೂಪದಲ್ಲಿ ಬೇಕಾದರೂ ಕಾಣಿಸಿಕೊಳ್ಳಬಹುದಾಗಿತ್ತು. ರಾಮ ಮತ್ತು ಕೃಷನಿಗೆ ಈ ಶಕ್ತಿ ಇರಲಿಲ್ಲ. ರಾಮ ರಾಮನೇ, ಕೃಷ್ಣ ಕೃಷ್ಣನೇ, ಈಗ ಇವರಿಗೆ ಜನರ ಬೆಂಬಲ ದೊರಕಿದೆ, ನಿಜ. ಆದರೆ ಇವರು ಹೇಳಿಕೊಳ್ಳುವ ರೀತಿಯಲ್ಲಿ ಅಲ್ಲ. ಇವರಿಗೆ ಬಡವರ ಬಗ್ಗೆ ಅನುಕಂಪ ಇಲ್ಲ ಎಂದು ನಾನು ಆಪಾದನೆ ಮಾಡುವುದಿಲ್ಲ. ಆದರೆ ಈ ರಾಜ್ಯದಲ್ಲಿ ಯಾರು ಪ್ರಗತಿಪರವಾದಂಥ ನೀತಿಯ ಕಾರಣಕ್ಕೋಸ್ಕರವಾಗಿ ಕಾಂಗ್ರೆಸ್ ಪಕ್ಷವನ್ನು ವಿರೋಧ ಮಾಡಿದರೋ, ಅಂಥಾ ಜನರು ಕಾಂಗ್ರೆಸ್ ಪಕ್ಷದ ಮೊದಲು ತಿಥಿ ಆಗಲಿ ಎಂದು ನಿಮಗೆ ಬೆಂಬಲ ಕೊಟ್ಟಿದ್ದಾರೆ. ಈ ರೀತಿಯಾಗಿ ನೀವು ಉಳ್ಳವರ ಓಟುಗಳನ್ನು ಗಟ್ಟಿ ಮಾಡಿ ಇಲ್ಲದವರ ಓಟುಗಳನ್ನು ಛಿದ್ರ ಮಾಡಿ ಅಧಿಕಾರಕ್ಕೆ ಬಂದಿದ್ದೀರಿ. ನೀವು ಒಳ್ಳೆಯದನ್ನು ಮಾಡಬಹುದು ಎಂಬ ಕಾರಣದಿಂದ ಜನರು ನಿಮಗೂ ಒಂದು ಅವಕಾಶ ಕೊಟ್ಟಿದ್ದಾರೆ. ಇದಕ್ಕೂ ಮೊದಲು ಅಧಿಕಾರಕ್ಕೆ ಬರುತ್ತೇವೆಂಬುದು ನಿಮಗೇ ಗೊತ್ತಿರಲಿಲ್ಲ. ಆದರೆ ಕಾಣದ ಕೈಗಳು ನೀವು ಅಧಿಕಾರಕ್ಕೆ ಬರಲು ಒಂದು ಅವಕಾಶವನ್ನು ಒದಗಿಸಿಕೊಟ್ಟಿವೆ. ಈಗ ನೀವು ಇಂತಹ ಜನರನ್ನು ಗಣನೆಗೆ ತೆಗೆದುಕೊಳ್ಳದೆ ಹೋದರೆ ಹೇಗೆ?

ಮೌಲ್ಯಗಳು ಇರಬೇಕು ಎಂಬುದು ನಿಜ. ಆದರೆ ವಾತಾವರಣ ಕೆಟ್ಟಾಗ ಮೌಲ್ಯಗಳನ್ನು ನಾವು ಮರೆಯುತ್ತೇವೆ. ಈ ವಿಚಾರದಲ್ಲಿ ನಾವು ಬೇರೆ ಅಲ್ಲ, ನೀವು ಬೇರೆ ಅಲ್ಲ. ಇದಕ್ಕೆ ಉದಾಹರಣೆಯಾಗಿ ಪಕ್ಷಾಂತರದ ವಿಷಯವನ್ನು ತೆಗೆದುಕೊಳ್ಳಬಹುದು. ಈ ಹಿಂದೆ ಮುಖ್ಯಮಂತ್ರಿಗಳೇ ಈ ಬಗ್ಗೆ ಮಾತನಾಡುತ್ತಾ, ಏನು ಮಾಡುವುದು, ಬೇರೆಯವರು ಮಾಡಿದರೆ ನಾನು ಕೈಕಟ್ಟಿ ಕೂರುವುದಕ್ಕಾಗುವುದಿಲ್ಲ ಎಂದು ಹೇಳಿದರು. ಮಾನ್ಯ ಬೊಮ್ಮಾಯಿ ಅವರು ಈ ಬಗ್ಗೆ ಕಾನೂನು ಜಾರಿಗೆ ಬರುವವರೆಗೂ ಯಾರು ಬೇಕಾದರೂ ಪಕ್ಷಾಂತರ ಮಾಡಬಹುದು ಎಂದು ಹೇಳಿದರು. ಈ ಹಿಂದೆ ಇವರು ಶಾಸಕರನ್ನು ಎಳೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದರು, ನಾವು ಇನ್ನವರನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದೆವು. ಈ ಹಿಂದೆ ಇವರು ತಮ್ಮ ಪಕ್ಷದ ಶಾಸಕರನ್ನು ತಮ್ಮಲ್ಲಿಯೇ ಉಳಿಸಿಕೊಳ್ಳುವ ಸಲುವಾಗಿ ಶಾಸಕರನ್ನು ಬೋರ್ಡುಗಳಿಗೆ, ಮತ್ತು ಕಾರ್ಪೊರೇಷನ್‌ಗಳಿಗೆ ಚೇರ್‌ಮನ್‌ಗಳನ್ನಾಗಿ ನೇಮಕ ಮಾಡಿದರು. ಆದರೆ ಈಗ ಶಾಸಕರನ್ನು ನೇಮಕ ಮಾಡುವುದು ಬೇಡ ಎಂದು ಹೇಳುತ್ತಿದ್ದಾರೆ. ಈಗ ತತ್ವ ಹೇಳುತ್ತಿದ್ದಾರೆ. ಆಗ ಬೇಕಾಗಿತ್ತು, ಈಗ ಏತಕ್ಕೆ ಬೇಡ? ಹಲವಾರು ದೃಷ್ಟಿಯಿಂದ ನಮ್ಮ ರಾಜಕೀಯ ಕೆಟ್ಟಿದ್ದು ನಿಜ. ಇದಕ್ಕೆ ಒಬ್ಬೊಬ್ಬರನ್ನು ದೂಷಣೆ ಮಾಡುವುದಕ್ಕೆ ಹೋದರೆ ನಾವು ಏನನ್ನೂ ಸಾಧನೆ ಮಾಡುವುದಕ್ಕಾಗುವುದಿಲ್ಲ ನೀವು ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಮೌಲ್ಯಾಧಾರಿತ ರಾಜಕೀಯವನ್ನು ಜಾರಿಗೆ ತರಲು ಯಾವ ರೀತಿ ಪ್ರಯತ್ನ ಮಾಡಿದಿರಿ ಎಂಬುದನ್ನು ಹೇಳಬೇಕಾಗುತ್ತದೆ. ಈ ವಿಚಾರದಲ್ಲಿ ನೀವು ಎಂ. ಜಿ. ಆರ್. ತರಹವಾಗಲೀ, ಎನ್. ಟಿ ಆರ್. ತರಹವಾಗಲೀ ಹೇಳುವುದಕ್ಕಾಗುವುದಿಲ್ಲ. ಏಕೆಂದರೆ, ನಿಮ್ಮದು ರಾಷ್ಟ್ರೀಯ ಪಕ್ಷವಾಗಿದೆ. ಈ ಹಿಂದೆ ನೀವು ಜನತಾ ಪಕ್ಷದ ಪ್ರಧಾನ ಕಾರ್ಯದರ್ಶಿಯಾ ಆಗಿದ್ದಿರಿ. ಇವರು ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ಮೊದಲು ಚುನಾವಣೆಯ ಸಂದರ್ಭದಲ್ಲಿ ತಾವು ಅಧಿಕಾರಕ್ಕೆ ಬಂದರೆ ರಾಜ್ಯಪಾಲರುಗಳ ಅಧಿಕಾರವನ್ನು ಮೊಟಕುಗೊಳಿಸುತ್ತೇವೆಂದು ಜನತೆಗೆ ಭರವಸೆ ಕೊಟ್ಟಿರಿ. ಆದರೆ ಇವರು ಕೇಂದ್ರದಲ್ಲಿ ೧೯೭೭ರಲ್ಲಿ ಅಧಿಕಾರಕ್ಕೆ ಬಂದಮೇಲೆ ಮಾಡಿದ್ದು ಏನು ? ೯ ರಾಜ್ಯಗಳಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷದ ಸರ್ಕಾರಗಳನ್ನು ತೆಗೆದು ಬಿಸಾಕಿದರು. ಇಲ್ಲೆಲ್ಲಾ ಕೇರ್—ಟೇಕರ್ ಸರ್ಕಾರಗಳು ಇರುವುದಕ್ಕೂ ಸಹ ಇವರು ಬಿಡಲಿಲ್ಲ. ರಾಷ್ಟ್ರಪತಿ ಆಡಳಿತವನ್ನು ಜಾರಿಗೆ ತಂದರು. ಆದರೆ ಇವೊತ್ತು ಮೌಲ್ಯಾಧಾರಿತ ರಾಜಕೀಯಕ್ಕೆ ಧಕ್ಕೆ ಬಂದಿದೆ ಎಂದು ಹೇಳುವುದಕ್ಕೆ ಇವರಿಗೆ ಆಧಾರ ಏನಿದೆ ? ಈ ರೀತಿ ಇವರು ಬೇರೊಬ್ಬರ ಮೇಲೆ ದೋಷಗಳನ್ನು ಹೊರಿಸುವುದಕ್ಕೆ ಇವರಿಗೆ ಏನು ಅಧಿಕಾರ ಇದೆ? ಈ ರೀತಿ ಮಾಡುವುದರಿಂದ ಇವರು ಯಾವ ಫಲವನ್ನು ಸಾಧನೆ ಮಾಡಿದಂತೆ ಆಗುತ್ತದೆ? ನಮಗಿಂತ ಇವರು ಹೆಚ್ಚು ಸಂಭಾವಿತರು ಎಂದು ಹೇಳಿಕೊಳ್ಳುವುದಕ್ಕೆ ಇವರೇನು ಆಕಾಶದಿಂದ ಇಳಿದು ಬಂದಿದ್ದಾರೆಯೇ ? ನಾವೇನು ಪಾತಾಳದಿಂದ ಮೇಲೆ ಬಂದಿದ್ದೇವೆಯೇ ? ಈ ಮೌಲ್ಯಾಧಾರಿತ ರಾಜಕಾರಣದ ಬಗ್ಗೆ ಇವರು ಹತ್ತಾರು ಸಲ ಅಲ್ಲ, ನೂರಾರು ಸಲ ಹೇಳಿದ್ದಾರೆ. ನೂರು ಸಲ ಸುಳ್ಳು ಹೇಳಿದರೆ, ಅದೇ ನಿಜವಾಗುತ್ತದಂತೆ. ಇದೇ ಗೊಬೆಲ್‌ನ ತತ್ವ. ಇದರ ಒಂದು ಫಲಶೃತಿಯಾಗಿ ನೀವು ಇವೊತ್ತು ಅಧಿಕಾರಕ್ಕೆ ಬಂದಿದ್ದೀರಿ ನಾವೆಲ್ಲರೂ ಮನುಷ್ಯರೇ. ಒಳ್ಳೆಯ ಸಮಾಜವನ್ನು ನಿರ್ಮಾಣ ಮಾಡುವುದಕ್ಕೆ ನಾವೆಲ್ಲರೂ ಭಾಗಿಯಾಗಿದ್ದೇವೆ. ಒಂದು ಪಕ್ಷದಲ್ಲಿದ್ದವರಿಗೆ ಟಿಕೆಟ್ ಸಿಗದಿದ್ದಾಗ ಅವರು ಬೇರೆ ಕಡೆ ಹೋಗುವುದಿಲ್ಲವೇ ? ಇದು ಎಲ್ಲ ಕಡೆಯೂ ನಡೆಯುತ್ತದೆ. ಆದ್ದರಿಂದ ಮೌಲ್ಯಾಧಾರಿತ ರಾಜಕೀಯ ಎಂಬ ಪದವನ್ನು ಬಳಸುವುದರಿಂದ ಮಾತ್ರ ಏನೂ ಉಪಯೋಗವಾಗುವುದಿಲ್ಲ. ಅದು ಬಳಕೆಯಲ್ಲಿ ಬರಬೇಕು. ಮಾನ್ಯ ನಾರಾಯಣಕುಮಾರ್ ಅವರು ಮಾತನಾಡುವಾಗ ಇನ್ನೂ ೫೦ ವರ್ಷಗಳ ಕಾಲ ತಾವೇ ಅಧಿಕಾರದಲ್ಲಿರುವುದಾಗಿ ಹೇಳಿದರು. ಸಂತೋಷ. ಇನ್ನೂ ನೂರು ವರ್ಷಗಳ ಕಾಲ ಬೇಕಾದರೂ ಅಧಿಕಾರದಲ್ಲಿರಿ. ಆದರೆ ಈ ಒಂದು ಮಾರ್ಗದಿಂದ ಅಧಿಕಾರದಲ್ಲಿರುವುದಕ್ಕೆ ಸಾಧ್ಯವಿಲ್ಲವೆಂದು ವಿನಯಪೂರ್ವಕವಾಗಿ ಈ ಸಂದರ್ಭದಲ್ಲಿ ತಮ್ಮ ಮೂಲಕ ಅವರಿಗೆ ಹೇಳುವುದಕ್ಕೆ ಬಯಸುತ್ತೇನೆ.

ಕೊನೆಯದಾಗಿ ಈ ಬಜೆಟ್ ಬಗ್ಗೆ ಇನ್ನೊಂದು ಮಾತನ್ನು ಹೇಳುತ್ತೇನೆ. ಈ ಸಲದ ಬಡ್ಜೆಟ್‌ನಲ್ಲಿ ಒಂದು ನಿರ್ದಿಷ್ಟವಾದಂಥ ಗುರಿ ಇಲ್ಲ. ಇರುವಂತಹ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ಇದರಲ್ಲಿ ನಡೆದಿಲ್ಲ. ಇದು ಕೇವಲ ಅಂಕಿಅಂಶಗಳ ಒಂದು ದೊಂಬರಾಟದಂತೆ ಇದೆ. ಯಾವುದೇ ಒಂದು ನೀತಿಯ ನೆಲೆಯ ಮೇಲೆ ಇದು ತಯಾರಾಗಿಲ್ಲ. ಈ ಬಜೆಟ್ ಎಂಬ ಪದ ಪ್ರಯೋಗ ಫ್ರೆಂಚ್ ಭಾಷೆಯಿಂದ ಬಂದಿದೆ ಎಂದು ಹೇಳಿದ್ದಾರೆ. ಇದು ಯಾವ ಭಾಷೆಯಿಂದಲೇ ಬಂದಿರಲಿ,

ಈ ಬಜೆಟ್ ಬಗ್ಗೆ ಡಾಲ್ಟನ್ ಅವರು ತಮ್ಮ ಪಬ್ಲಿಕ್ ಫೈನಾನ್ಸ್ ಎಂಬ ಪುಸ್ತಕದಲ್ಲಿ ಒಂದು ಕಡೆ ಈ ರೀತಿ ಹೇಳಿದ್ದಾರೆ.—

"The word 'budget', as applied to public finance, was traced by Cannan to an anonymous pamphlet, entitled. The Budget Opened, attacking the policy of Walpole while Chancellor of the Exchequer and likening him to a clown opening his bag of tricks and deceptions."

Mr. Speaker Sir, in all humility I feel the budget presented by Sri Ramakrishna Hegde has been of this nature-"A bag of tricks and deceptions." It does not really reflect the true nature of the of the financial position of the State and does not reveal or define about governments intentions.

ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಜೆ. ರಾಜುಗೌಡ (ಹನೂರ್) .—ಮಾನ್ಯ ಅಧ್ಯಕ್ಷರೇ, ನಾನು ಆಯುವ್ಯಯ ಪತ್ರದ ಬಗೆ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಆಯುವ್ಯಯ ಪತ್ರವನ್ನು ಯಾವ ದೃಷ್ಟಿ ಕೋನದಲ್ಲೂ ನೋಡಿದರೂ ಪ್ರಗತಿದಾಯಕವಾದ ಆಯುವ್ಯಯ ಪತ್ರವಾಗಿ ಕಾಣುವುದಿಲ್ಲ. ಇದು ಸಮತೋಲನ ಬಜೆಟ್ ಆಗಿ ಕಾಣುವುದಿಲ್ಲ. ಆರ್ಥಿಕಾಭಿವೃದ್ಧಿಗೆ ಪ್ರಧಾನವಾದ ಅಂಗವಾಗಿ ಕೃಷಿ, ಕೈಗಾರಿಕೆ. ವಿದೇಶಿ ವ್ಯಾಪಾರ ಸಾಗಾಣಿಕೆ ಮತ್ತು ಸಂಪರ್ಕ ಅಭಿವೃದ್ಧಿಗೆ ಏನೇನು ಪ್ರಯತ್ನ ಮಾಡಿಲ್ಲ. ರಾಜ್ಯದಲ್ಲಿ ದೊರೆಯಬಹುದಾಗಿರತಕ್ಕಂತ ಸಂಪನ್ಮೂಲಗಳ ಅರಿವಿನ ಆಧಾರದ ಮೇಲೆ ತಯಾರಾದ ಬಜೆಟ್ ಅಲ್ಲ. ಇದರಿಂದ ಮೂಲಭೂತ ಪರಿವರ್ತನೆಗೆ ಇದು ಸಹಾಯ ಕೂಡ ಆಗಿಲ್ಲ ಯಾವುದೇ ಕ್ಷೇತ್ರದಲ್ಲಿ ಉತ್ಪಾದನೆ ಕುಂಠಿತವಾಗಲು ಅದ. ರಾಜ್ಯದ ಅಭಿವೃದ್ಧಿಗೆ ಧಕ್ಕೆ ಒದಗುತ್ತದೆ. ಪ್ರತಿವರ್ಷ. ಪ್ರತಿ ಕ್ಷೇತ್ರದಲ್ಲಿ ಕೊನೆಯ ಪಕ್ಷ ಶೇಕಡ ೬.೫ ರಷ್ಟು ನಿವ್ವಳ ಉತ್ಪಾದನೆ ತೆಗೆದಿದ್ದೇವೆ. ಪ್ರಗತಿ ದಾಯಕವಾಗಿರತಕ್ಕಂಥ ಬಜೆಟ್ ಎಂದು ಕರೆಯಲಾಗುವುದಿಲ್ಲ. ಇದು ಪ್ರಗತಿದಾಯಕವಾದ ಬಜೆಟ್ ಅಲ್ಲ ಎನ್ನುವುದಕ್ಕೆ ಎರಡು ಪ್ರಮುಖವಾಗಿರತಕ್ಕಂಥ ಕಾರಣಗಳು ಇವೆ. ಒಂದನೆಯದು ರಾಜ್ಯವು ಕಳೆದ ಮೂರು ವರ್ಷಗಳಿಂದ ಪ್ರಕೃತಿಯ ವೈಪರೀತ್ಯದಿಂದ ಅತಿವೃಷ್ಟಿ ಅನಾವೃಷ್ಟಿಗೆ ಒಳಗಾಗಿ ಭೀಕರ ಬರಗಾಲವನ್ನು ಎದುರಿಸತಕ್ಕಂಥದ್ದು ಒಂದು. ಮಾನ್ಯ ಮುಖ್ಯ ಮಂತ್ರಿಗಳು ಅವರು ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ೧೭೫ ಕೋಟಿ ರೂಪಾಯಿಗಳನ್ನು ಕ್ಷಾಮ ಪರಿಹಾರಕ್ಕಾಗಿ ವೆಚ್ಚ ಮಾಡಿದ್ದೇವೆ, ಬಹುಶಃ ಬರಗಾಲ ಬಾರದೇ ಇದ್ದರೆ ಆ ೧೭೫ ಕೋಟಿ ರೂಪಾಯಿಗಳನ್ನು ವಿವಿಧ ಕ್ಷೇತ್ರದಲ್ಲಿ ವಿವಿಧ ಬಾಬುಗಳಲ್ಲಿ ಅತಿ ಮುಖ್ಯವಾದಂಥ ವಲಯಗಳಾದ ನೀರಾವರಿ ಹಾಗೂ ವಿದ್ಯುಚ್ಛಕ್ತಿಗೆ ಉಪಯೋಗಿಸಿದರೆ ನಾವು ಉತ್ಪಾದನೆಯನ್ನು ಜಾಸ್ತಿ ಮಾಡಬಹುದಾಗಿತ್ತು. ಎಂದು ನಿಜವಾಗಿಯೂ ಆ ಕಾರಣವನ್ನು ಒಪ್ಪಿಕೊಳ್ಳಬೇಕು. ಎರಡನೆಯದು ನಾವು ಉತ್ಪಾದನಾ ರಹಿತವಾದಂಥ ವಲಯಗಳಿಗೆ ಹೆಚ್ಚಿನ ಆದ್ಯತೆ ಕೊಟ್ಟಿದ್ದೇವೆ. ಅಗ್ಗದ ಜನಪ್ರಿಯತೆ ಗಳಿಸುವ ಸಾಮಾಜಿಕ ಕಾರ್ಯಕ್ರಮಗಳ ವಿಚಾರದಲ್ಲಿ ಪ್ರತಿ ವರ್ಷ ಕೂಡ ಹೆಚ್ಚು ಮಾಡಿಕೊಂಡು ಹೋಗುತ್ತಿದ್ದಾರೆ. ಇನ್ನು ಅರ್ಥ ಸಚಿವರು ಕರ್ನಾಟಕದಲ್ಲಿ ಓವರ್‌ಡ್ರಾಫ್ಟ್‌ಗೆ ಹೆಚ್ಚಿಗೆ ಮೊರೆ ಹೋಗಲು ಏನು ಕಾರಣವೆಂದರೆ ಅವರು ತಮ್ಮ ಬಜೆಟ್ ಭಾಷಣ ದಲ್ಲಿಯೇ ತಿಳಿಸಿದ್ದಾರೆ. ನಾವು ಹೆಚ್ಚಿನ ಸಂಪನ್ಮೂಲಗಳನ್ನು ಸಂಗ್ರಹಿಸುವಲ್ಲಿ ವಿಫಲರಾಗಿದ್ದೇವೆ. ಮತ್ತು ಎರಡನೆಯ ಕಾರಣ ಯೋಜನೇತರ ಮತ್ತು ಲಾಭದಾಯಕವಲ್ಲದ ಕಾರ್ಯಗಳಿಗೆ ಮನಸ್ವೇಚ್ಛೆ ವೆಚ್ಚ ಮಾಡುವಂತದ್ದು ಒಂದು ಕಾರಣದಿಂದ ಓವರ್‌ಡ್ರಾಫ್ಟ್‌ಗೆ ವಿಪರೀತವಾಗಿ ಮೊರೆ ಹೋಗಿದ್ದೇ ವೆಂದು ತಿಳಿಸಿದ್ದಾರೆ ಅದನ್ನು ಅವರು ಕೂಡ ಒಪ್ಪಿಕೊಳ್ಳುತ್ತಾರೆ. ಮತ್ತೆ ಕೆಲವು ವಸ್ತುಗಳ ಮಾರಾಟ ತೆರಿಗೆಯಿಂದ ಬರತಕ್ಕಂಥ ಮೂವತ್ತೇಳು ಕೋಟಿ ರೂಪಾಯಿಗಳನ್ನು ನೌಕರರಿಗೆ ತಾತ್ಕಾಲಿಕವಾದ ಪರಿಹಾರವನ್ನು ಕೊಡುವುದಕ್ಕೆ ವೆಚ್ಚ ಮಾಡಿದ್ದಾರೆ. ನಾವು ಈ ಕರವನ್ನು ವಸೂಲು ಮಾಡಿದ ಮೇಲ ಉತ್ಪಾದನಾ ಬಾಬುಗಳಿಗೆ ವೆಚ್ಚ ಮಾಡಬೇಕೇ ವಿನಹ ಅನುತ್ಪಾದನಾ ಬಾಬುಗಳಿಗೆ

ವೆಚ್ಚ ಮಾಡಬಾರದೆಂದು ಹೇಳುತ್ತೇನೆ. ಈ ಬಜೆಟ್ ಸಮತೋಲನವಿಲ್ಲದೆ ಪ್ರಾದೇಶಿಕ ಅಸಮಾನತೆಗೆ ಅವಕಾಶ ಮಾಡಿ ಕೊಟ್ಟಿದ್ದಾರೆಂದು ನಾನು ಹೇಳುತ್ತೇನೆ. ಕಳೆದ ೨೫ ವರ್ಷಗಳಿಂದ ನಾವು ಯೋಜನೆಗಳನ್ನು ತಯಾರು ಮಾಡಿದ್ದೇವೆ. ಆ ಯೋಜನೆಯ ಫಲವಾಗಿ ಕೆಲವು ಅಭಿವೃದ್ಧಿ ಕಾರ್ಯಕ್ರಮಗಳು ಕೆಲವರಿಗೆ ಮಾತ್ರ ಸೀಮಿತವಾಗಿದೆ. ಕೆಲವರಿಗೆ ಮಾತ್ರ ಉಪಯುಕ್ತವಾಗಿದೆ ಎನ್ನತಕ್ಕಂಥದ್ದನ್ನು ಅನೇಕ ದೃಷ್ಟಿಕೋನದಿಂದ ನಾವು ವಿಮರ್ಶೆ ಮಾಡಬಹುದು. ಹೀಗೆ ಸಮತೋಲನದಿಂದ ಹುಟ್ಟಿಕೊಂಡರತಕ್ಕಂಥ ಹೊಸ ಆರ್ಥಿಕ ನೀತಿ ಎಂದು ಹೇಳಬಹುದು. ಸಾಮಾಜಿಕವಾಗಿ ಯಾರು ಮೇಲಕ್ಕೆ ಬಂದಿಲ್ಲವೋ ಅಂಥವರನ್ನು ಕೆಳಗಡೆ ತಗತಕ್ಕಂಥ ಕೆಲಸ ಈ ಬಜೆಟ್‌ನಲ್ಲಿ ಮಾಡಿದ್ದಾರೆ ಎಂದು ಹೇಳದೆ ವಿಧಿಯಿಲ್ಲ. ಬಹುಶಃ ಈಗಾಗಲೇ ಯಾರ್ಯಾರು ಉದ್ಯಮ ಪತಿಗಳು ಇದ್ದಾರೋ ಅವರ ಬಗ್ಗೆ ಚಿಂತನೆ ಮಾಡಿದ್ದಾರೆಯೇ ಹೊರತು ಶೇಕಡಾ ೩೦ ರಷ್ಟು ಜನ ನಿರುದ್ಯೋಗಿಗಳು ಏನು ಇದ್ದಾರೆ ಅವರ ಹಿತಾಸಕ್ತಿಯ ಬಗ್ಗೆ ಚಿಂತನೆ ಮಾಡಿಲ್ಲ. ಇದೇ ರೀತಿ ನೀರಾವರಿ ಮೇಯದಲ್ಲೂ ಕೂಡ ಒಂದು ಕಡೆ ೭೦–೮೦ ರಷ್ಟು ಭಾಗ ಜನರಿಗೆ ನೀರಿನ ಸೌಕರ್ಯ ಇದ್ದರೆ ಕೆಲವು ಕಡೆ ೫ ರಷ್ಟು ಕೂಡ ಇಲ್ಲ. ಮತ್ತೆ ಸೌಕರ್ಯ ಪಡೆಯುವಂತಹ ಜನರು ಇನ್ನಷ್ಟು ಹಣ ಕೊಡಿ ಎಂದು ಒತ್ತಾಯ ಮಾಡುತ್ತಿದ್ದಾರೆ. ನೀರಾವರಿ ಅನುಕೂಲ ಇಲ್ಲದೇ ಇರತಕ್ಕಂಥ ಜನರನ್ನು ಮತ್ತೆ ತುಳಿಯುವಂತಹ ಪ್ರಯತ್ನವನ್ನು ಈ ಬಜೆಟ್‌ನಲ್ಲಿ ಮಾಡಿದ್ದಾರೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ರಾಜ್ಯಪಾಲರು ತಮ್ಮ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುತ್ತಾ ಕರ್ನಾಟಕ ರಾಜ್ಯದಲ್ಲಿ ಹೊಸ ಯುಗವನ್ನು ಪ್ರಾರಂಭ ಮಾಡುತ್ತೇವೆ. ಪರಿಶುದ್ಧವಾದ ಹಾಗೂ ಪರಿಣಾಮಕಾರಿಯಾದ ಆಡಳಿತವನ್ನು ಕೊಡುತ್ತೇವೆ. ಪ್ರತಿಯೊಂದು ಕುಟುಂಬಕ್ಕೆ ಕೊನೆಯ ಪಕ್ಷ ಒಬ್ಬರಿಗಾದರೂ ಉದ್ಯೋಗ ಅವಕಾಶವನ್ನು ಒದಗಿಸುತ್ತೇವೆ. ಗೇಣಿದಾರರಿಗೆ ಕೊಡತಕ್ಕಂಥ ಹಣವನ್ನು ಸರ್ಕಾರವೇ ತುಂಬಿ ಕೊಡುತ್ತದೆಂದು ಹೇಳಿದ್ದಾರೆ. ಆ ಕಾರ್ಯದಲ್ಲಿ ಎಳ್ಳಷ್ಟು ಮುಂದುವರಿದಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಅನೇಕ ಜನ ಬಡ ಗೇಣಿದಾರರು ಕಷ್ಟದಲ್ಲಿದ್ದು ಬ್ಯಾಂಕುಗಳಲ್ಲಿ ಭೂ ಮಾಲೀಕರಿಗೆ ಕೊಡಬೇಕಾದಂತಹ ಹಣಕ್ಕೆ ಸಾಲ ತೆಗೆದು ಕಂತಿನ ರೂಪದಲ್ಲಿ ಹಣ ಕೊಟ್ಟಿದ್ದಾರೆ. ತಾವು ಏನು ಭರವಸೆ ಕೊಟ್ಟಿದ್ದೀರಿ. ಆ ಭರವಸೆಯನ್ನು ಈಡೇರಿಸಬೇಕೆಂಬ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ತಮ್ಮ ಗಮನವನ್ನು ಸೆಳೆಯುವುದಕ್ಕೆ ಇಚ್ಛಿಪಡುತ್ತೇನೆ.

ಖುಷ್ಕಿ ಅಭಿವೃದ್ಧಿ ಬಗ್ಗೆ ಯೋಜನೆ ಮಾಡಿದ್ದಾರೆ. ಉದ್ಯೋಗ ಧೃಢೀಕರಣದ ಬಗ್ಗೆಯೂ ಯೋಜನೆ ಮಾಡಿದ್ದಾರೆ. ಗ್ರಾಮೀಣ ಬಡವರಿಗೆ ಅವಶ್ಯಕ ವಸ್ತುಗಳ ಪೂರೈಕೆ ಆಗಬೇಕು ಮತ್ತು ಬಡವರಿಗೆ ಕೊಡತಕ್ಕಂಥ ಬಟ್ಟೆ ಇವೆಲ್ಲ ಕಾರ್ಯವನ್ನು ಮೆಚ್ಚಿಕೊಂಡಿದ್ದೇವೆ. ಕೈಮಗ್ಗದವರಿಗೆ ಅನುಕೂಲ ಮಾಡಿದ್ದಾರೆ. ಸರ್ಕಾರದವರು ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಅದರ ಬಗ್ಗೆಯೂ ಹೇಳದಿದ್ದರೆ ತಪ್ಪಾಗುತ್ತದೆ ಎಂದು ನಾನು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಲಿಕ್ಕೆ ಇಚ್ಛಿಪಡುತ್ತೇನೆ. ಕನ್ನಡ ಚಲನಚಿತ್ರ ಉದ್ಯಮಕ್ಕೆ ಹೊಸ ಹುರುಪು ಬರತಕ್ಕಂಥ ರೀತಿಯಲ್ಲಿ ಪ್ರೋತ್ಸಾಹ ಧನವನ್ನು ಕೊಟ್ಟಿದ್ದಾರೆ. ಮಹಿಳೆಯರಿಗೆ ಆಸ್ತಿಯಲ್ಲಿ ಹಕ್ಕನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಿದ್ದಾರೆ. ಮತ್ತು ಕಡು ಬಡವರಿಗೆ ರಿಯಾಯಿತಿ ದರದಲ್ಲಿ ಬಟ್ಟೆಯನ್ನು ಕೊಡುವುದು, ಕೈಮಗ್ಗದಲ್ಲಿ ಬಟ್ಟೆಯನ್ನು ಬಡವರಿಗೆ ಕೊಡುವುದು, ಇಂತಹ ಒಳ್ಳೆಯ ಕೆಲಸಗಳನ್ನು ಸರ್ಕಾರದವರು ಮಾಡಿದ್ದಾರೆ. ಅದರ ಬಗ್ಗೆ ನನಗೆ ಮೆಚ್ಚಿಗೆ ಇದೆ. ಬಾಕಿ ಸಾಲಗಳನ್ನು ಮನ್ನಾ ಮಾಡಿ ರೈತರಿಗೆ ಸಂಪೂರ್ಣವಾದ ಪ್ರೋತ್ಸಾಹವನ್ನು ಕೊಟ್ಟಿದ್ದೇವೆ. ಅತಿ ಮುಖ್ಯವಾದ ಖುಷ್ಕಿ ಭೂ ಅಭಿವೃದ್ಧಿ ಯೋಜನೆ. ರಾಜಸ್ತಾನ ಬಿಟ್ಟರೆ ಕರ್ನಾಟಕದಲ್ಲಿ ಹೆಚ್ಚಿನ ಖುಷ್ಕಿ ಭೂಮಿ ಇದೆ. ಚೈನಾ ದೇಶದಲ್ಲಿ ಸಂಪನ್ಮೂಲಗಳು ಸಿಗದೇ ಇದ್ದಾಗ ಅಲ್ಲಿರತಕ್ಕಂಥ ಅಧಿಕಾರಿಗಳು, ರಾಜಕಾರಿಣಿಗಳು, ಶ್ರೀಮಂತರು ಎಲ್ಲರೂ ಕೂಡ ಒಂದು ವರ್ಷ ತಮ್ಮ ವಾಹನಗಳನ್ನೇ ಬಂದ್ ಮಾಡಿದರು. ಆಯಿಲ್, ಡಿಸೇಲ್ ಮತ್ತು ಪೆಟ್ರೋಲ್ ಹಣವನ್ನು ಅಭಿವೃದ್ಧಿ ಕೆಲಸಗಳಿಗೆ ತ್ಯಾಗ ಮಾಡಿ ಸಾವಿರಾರು ಕೋಟಿ ರೂಪಾಯಿ ಉತ್ಪಾದನೆ ಮಾಡುವುದಕ್ಕೆ ಅನುಕೂಲ ಮಾಡಿಕೊಟ್ಟರು.

ನಾನಾದರೂ ಇದರ ಬಗ್ಗೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ ನಮ್ಮ ಬಡತನವನ್ನು ಹೋಗಲಾಡಿಸಬೇಕಾದರೆ ನಾವೆಲ್ಲರೂ ತ್ಯಾಗವನ್ನು ಮಾಡಬೇಕು, ಯಾವ ರೀತಿ ತ್ಯಾಗ ಮಾಡಬೇಕು. ನಮ್ಮಲ್ಲಿರತಕ್ಕ ಎಷ್ಟು ಮುಜರಾಯಿ ದೇವಸ್ಥಾನಗಳು ಇವೆಯೋ ಆ ದೇವಸ್ಥಾನದಲ್ಲಿರತಕ್ಕಂಥ ಎಲ್ಲಾ ಧನಕನಕ ವಜ್ರ

ವೈಢೂರ್ಯಗಳನ್ನು ತೆಗೆದು ಅವುಗಳನ್ನು ಹರಾಜು ಮಾಡಿ ನೀರಾವರಿ ಯೋಜನೆಗಳಿಗೆ ತೊಡಗಿಸಿದಾಗ ಮಾತ್ರ ನಾವು ಬಡತನದಿಂದ ಪಾರಾಗುತ್ತೇವೆ ಎಂದು ಅನಿಸುತ್ತದೆ. ಕೋಟ್ಯಾನುಕೋಟಿ ರೂಪಾಯಿ ಬೆಲೆ ಬಾಳತಕ್ಕಂಥ ಆಭರಣಗಳು ಇವತ್ತು ದೇವಸ್ಥಾನದಲ್ಲಿವೆ. ಸುಮ್ಮನೆ ಇಟ್ಟುಕೊಂಡಿದ್ದಾರೆ, ಅದರಿಂದ ಏನು ಪ್ರಯೋಜನವಾಗಿಲ್ಲ. ನಾನು ಕೂಡ ಇದರ ಬಗ್ಗೆ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಸರ್ಕಾರದವರು ತಮ್ಮ ದೃಷ್ಟಿಯನ್ನು ಬದಲಾಯಿಸಬೇಕು. ಬಡತನ ಹೋಗಲಾಡಿಸಬೇಕಾದರೆ ನಮ್ಮ ದೇಶದ ನೀರಾವರಿಯನ್ನು ಹೆಚ್ಚು ಮಾಡಬೇಕು. ಸಮಾಜವಾದದ ಬಗ್ಗೆ ಪದೇಪದೇ ಮಾತನಾಡುತ್ತಿದ್ದೇವೆ. ಬಡವರ ಮತ್ತು ಬಲ್ಲಿದರ ಮಧ್ಯೆ ಇರತಕ್ಕಂಥ ಅಂತರವನ್ನು ಕಡಿಮೆ ಮಾಡಬೇಕು ಎನ್ನುವುದು ಸರ್ಕಾರದ ಧೋರಣೆಯಾಗಿದೆ. ಕಾರ್ಯತಃ ನಾವು ಏನು ಮಾಡಬೇಕು, ದೊಡ್ಡ ದೊಡ್ಡ ಉದ್ದಿಮೆ ಪತಿಗಳಿಗೆ ಗಮನಾರ್ಹವಾದ ಬಂಡವಾಳವನ್ನು ಸರ್ಕಾರ ಆರ್ಥಿಕ ಸಂಸ್ಥೆಗಳಿಂದ ಒದಗಿಸುತ್ತದೆ. ಕಟ್ಟ ಕಡೆಯ ಮನುಷ್ಯನಿಗೆ ಯಾವ ಅನುಕೂಲವನ್ನು ಮಾಡುತ್ತಿಲ್ಲ. ಬಾಯಿಯಲ್ಲಿ ಹೇಳುವುದು, ಒಂದು ಕಾರ್ಯತಃ ಮಾಡುವುದು ಇನ್ನೊಂದು. ನಮ್ಮ ಸರ್ಕಾರವು ಸ್ವಾಯತ್ತ ಸಂಸ್ಥೆಗಳ ಮೂಲಕ ಧನಸಹಾಯವನ್ನು ಕೊಡಿಸುತ್ತಿದೆ. ದಯಮಾಡಿ ಇಂಥ ಕೆಲಸಗಳಿಗೆ ಕಡಿವಾಣ ಹಾಕಬೇಕೆಂದು ಹೇಳುತ್ತೇನೆ. ಅಕ್ಕಿ ಮತ್ತು ಬಟ್ಟೆ ಕೊಡತಕ್ಕಂಥ ಕಾರ್ಯಕ್ರಮ ಶ್ಲಾಘನೀಯವಾದುದು. ಈ ಕಾರ್ಯಕ್ರಮದ ಒಳಹೊಕ್ಕು ನೋಡಿದಾಗ ನಮಗೆ ಏನು ಕಾಣಿಸುತ್ತದೆ ಅಂದರೆ ಒಂದು ವಿಷಯವನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಮೈಸೂರು ಜಿಲ್ಲೆಯ ನನ್ನ ತಾಲ್ಲೂಕನ್ನ ಈ ಕಾರ್ಯಕ್ರಮಗಳಿಗೆ ಸರ್ಕಾರದವರು ಆರಿಸಿಕೊಂಡಿದ್ದಾರೆ. ಅಧಿಕಾರಿಗಳು ಬಡತನದಲ್ಲಿರತಕ್ಕಂಥ ಸಂಸಾರಗಳ ಸಮೀಕ್ಷೆ ಮಾಡಿದಾಗ ಸುಮಾರು ಮೂವತ್ತು ಸಾವಿರ ಕುಟುಂಬಗಳು ದೊರೆತಿವೆ. ೩೦ ಸಾವಿರ ಬಡ ಕುಟುಂಬಗಳು ಅಂದರೆ ಸುಮಾರು ಅರವತ್ತು ಸಾವಿರ ಜನರಿಗೆ ಬಟ್ಟೆಗಳನ್ನು ಒದಗಿಸಬೇಕು. ೬೦ ಸಾವಿರ ಜನರಿಗೆ ಬಟ್ಟೆಗಳನ್ನು ಪೂರೈಸಬೇಕಾದರೆ ಅದಕ್ಕೆ ೧೫–೧೬ ಸಾವಿರ ರೂಪಾಯಿ ಬೇಕಾಗುತ್ತದೆ. ಇನ್ನೂ ಅಕ್ಕಿಯನ್ನು ಕೊಡತಕ್ಕಂಥ ಕಾರ್ಯಕ್ರಮಕ್ಕೆ ಸರ್ಕಾರದರಿಗೆ ೪೦–೫೦ ಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ಒಟ್ಟು ನನ್ನ ತಾಲ್ಲೂಕಿಗೆ ೬೦ ರಿಂದ ೭೦ ಲಕ್ಷ ರೂಪಾಯಿಗಳ ಖರ್ಚು ಬರುತ್ತದೆ. ರಾಜ್ಯದಲ್ಲಿರತಕ್ಕ ೧೭೫ ತಾಲ್ಲೂಕುಗಳಿಗೆ ಈ ಯೋಜನೆಯನ್ನು ಜಾರಿ ಮಾಡಿದರೆ ಎಷ್ಟು ಖರ್ಚು ಬರುತ್ತದೆ. ಅದನ್ನು ಎದುರಿಸುವುದಕ್ಕೆ ಸರ್ಕಾರದವರು ಸಿದ್ಧತೆ ಮಾಡಿಕೊಂಡಿದ್ದಾರೆಯೇ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ಅತಿ ಮುಖ್ಯವಾದ ವಿಷಯ. ತಮಿಳುನಾಡು ವಿಧಾನಸಭೆಯಲ್ಲಿ ಮಾನ್ಯ ಡಿ.ಎಂ.ಕೆ. ಅಧ್ಯಕ್ಷರಾದಂತಹ ಕರುಣಾನಿಧಿಯವರು ಒಂದು ಮಾತನ್ನು ಹೇಳಿದ್ದಾರೆ.

೧೦–೩೦ ಪಿ. ಎಂ.

ಈ ಕಾವೇರಿ ನೀರಿನ ಒಪ್ಪಂದ ೧೯೨೪ರಲ್ಲಿ ಏನು ಆಗಿತ್ತೋ ಅದರಂತೆ ನಾವು ನೀರನ್ನು ಉಪಯೋಗಿಸಿಕೊಳ್ಳಬೇಕು. ಈ ವಿಧಾನ ಸಭೆಯಲ್ಲೂ ಇದರ ಬಗ್ಗೆ ಚರ್ಚೆಗಳು ಆಗಿವೆ. ಇವೆಲ್ಲಕ್ಕಿಂತ ಹೆಚ್ಚಾಗಿ ಕಾವೇರಿ ನೀರಿನ ಜಲಾಶಯ ಯೋಜನೆಗಳನ್ನು ಕೈಗೊಂಡಿದ್ದರೆ ಚೆನ್ನಾಗಿತ್ತು. ಆದಷ್ಟು ಬೇಗ ಈ ಕೆಲಸಗಳನ್ನು ಮುಗಿಸುವುದಕ್ಕೆ ವ್ಯವಸ್ಥೆ ಮಾಡಿದ್ದರೆ ನಾವು ಈವೊತ್ತಿನ ದಿವಸ ಇಂತಹ ಸಂಕಷ್ಟಕ್ಕೆ ಗುರಿಯಾಗುತ್ತಿರಲಿಲ್ಲ, ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ೧೯೨೪ ರ ಒಪ್ಪಂದದ ಪ್ರಕಾರ ೧೯೭೪ರ ವರೆಗೂ ಕರ್ನಾಟಕ ರಾಜ್ಯವು ಕಾವೇರಿ ನೀರನ್ನು ಎಷ್ಟು ಉಪಯೋಗಿಸಿಕೊಳ್ಳಬಹುದಾಗಿತ್ತೋ ಅಷ್ಟು ನೀರನ್ನು ಉಪಯೋಗಿಸಿಕೊಂಡು ಮಿಕ್ಕದ್ದನ್ನು ಅವರಿಗೆ ಬಿಡಬೇಕೆನ್ನುವ ಒಪ್ಪಂದ ಇತ್ತು. ಈ ಕಾವೇರಿ ನೀರಿನ ಯೋಜನೆಯಲ್ಲಿ ಯಾವ್ಯಾವ ಕೆಲಸಗಳನ್ನು ಕೈಗೊಳ್ಳಬೇಕಾಗಿತ್ತೋ ಅದು ಇನ್ನೂ ಪೂರ್ಣ ಮುಗಿದಿಲ್ಲ. ಈ ಕಾವೇರಿ ನೀರಿನ ಜಲಾನಯನ ಪ್ರದೇಶದಲ್ಲಿ ಯಾವ್ಯಾವ ಯೋಜನೆಗಳು ಇವೆ ಅದು ಮಧ್ಯಮ ಯೋಜನೆಯೇ ಆಗಿರಬಹುದು, ದೊಡ್ಡ, ಬೃಹತ್ ಯೋಜನೆಯೇ ಆಗಿರಬಹುದು, ಅವೆಲ್ಲವನ್ನೂ ಕೂಡ ನಾವು ಪೂರ್ಣವಾಗಿ ಮುಗಿಸಿಕೊಂಡಾಗ ನಾವು ಹೆಚ್ಚಿನ ಕಾವೇರಿ ನೀರನ್ನು ಬಳಸಿಕೊಳ್ಳುವುದಕ್ಕೆ ಆಗುತ್ತದೆ, ಎಂದು ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಕೊನೆಯದಾಗಿ, ಹೇಳಬೇಕಾದ್ದು ಈ ಒಂದು ಬಡ್ಜೆಟ್ಟನ್ನು ಸದನದ ಮುಂದೆ ಏನು ಇಟ್ಟಿದ್ದಾರೆ ಅದರಲ್ಲಿ ಕೆಲವು ವಿಷಯಗಳನ್ನು ನಾನು ಸ್ವಾಗತ ಮಾಡುತ್ತೇನೆ. ಇದರ ಜೊತೆಗೆ ನಾನು ಏನು ಕೆಲವು

ಸಲಹೆಗಳನ್ನು ಕೊಟ್ಟಿದ್ದೇನೋ ಅದನ್ನು ದಯಮಾಡಿ ತಾವು ಸ್ವೀಕರಿಸಬೇಕು ಎಂದು ಹೇಳಿ, ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತುಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಲ್. ಉಮಾರಪ್ಪ (ವಿಠಲ್).—ಮಾನ್ಯ ಅಧ್ಯಕ್ಷರೇ, ಅರ್ಥಸಚಿವರೂ ಆಗಿರುವಂಥ ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಮಂಡಿಸಿದಂಥಾ ಬಜೆಟ್ ತನ್ನದೇ ಆದಂಥ ಯಾವುದೇ ಒಂದು ಆರ್ಥಿಕವಾಗಿ ಮತ್ತು ಪ್ರಗತಿಪರವಾದ ದೃಷ್ಟಿಕೋನವನ್ನು ಚೆಲ್ಲದೇ ಇರುವಂಥ ಸಂದರ್ಭದಲ್ಲಿ ಅದನ್ನು ನಾನು ಅನಿವಾರ್ಯವಾಗಿ ವಿರೋಧಿಸಿ ಮಾತನಾಡುತ್ತೇನೆ. ಅನೇಕ ಬಜೆಟ್‌ಗಳು ಆಗಿವೆ, ಇನ್ನೂ ಆಗಬಹುದು. ಮಾನ್ಯ ಮುಖ್ಯಮಂತ್ರಿಗಳ ಜಿಲ್ಲೆಯವರೇ ಆದಂಥಾ ಶ್ರೀ ದಿನಕರ ದೇಸಾಯಿಯವರು ಏನು ಒಂದು ಮಾತನ್ನು ಹೇಳಿದರು ಅದನ್ನು ನಾನು ಹೇಳುತ್ತೇನೆ. ಪ್ರತಿವರ್ಷ ಉಂಟು ಸರ್ಕಾರದ ಬಜೆಟ್ ಆದರೂ ನಮಗೆ ಇನ್ನೂ ಸಿಗಲಿಲ್ಲ ಹಿಟ್ಟು, ನೀವು ಕೊಡುವುದು ಅರೆಹೊಟ್ಟೆ ತಿಳಿಗಂಜಿ. ಈ ಬಜೆಟ್ಟಿನ ತೂಕ ಬರೇ ಒಂದು ಗಂಜಿ. ಈ ಬಜೆಟ್ಟನ್ನು ನಾವು ಈ ರೀತಿಯಾಗಿ ಜ್ಞಾಪಿಸಿಕೊಳ್ಳಬೇಕಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಇಟ್ಟಿರುವ ಬಜೆಟ್ಟನ್ನು ನಾವು ತಿರುಗಿಸಿ ನೋಡಿದಾಗ ಸುಮಾರು ಶೇಕಡಾ ೫೦ರಷ್ಟು ಭಾಗ ಕೆಲವು ನೀತಿಗಳನ್ನು ಸಾರುತ್ತಾ ಹೋಗಿದ್ದಾರೆ. ನನ್ನಂಥಾವರನ್ನು ಪ್ರಥಮ ಬಾರಿಗೆ ಕೇಳಿಸಿಕೊಂಡಾಗ ಅದರಲ್ಲಿ ಅನೇಕ ನೀತಿಗಳನ್ನು ನೋಡಬಹುದು. ಗಾಂಧೀಜಿಯ ಹೆಸರು, ಪಂಡಿತ್ ಜವಹರ್‌ಲಾಲ್ ನೆಹರೂರವರ ಹೆಸರು ಇತ್ಯಾದಿ ಇತ್ಯಾದಿ ಇವರ ಹೆಸರುಗಳನ್ನು ಹೇಳುತ್ತಾ ಬಂದಿದ್ದಾರೆ. ಆದರೆ ಆರ್ಥಿಕವಾದ ಒಂದು ಕಾರ್ಯಸಾಧನೆಯ ತಿರುವನ್ನು ಈ ಬಜೆಟ್ಟಿನ ಕೊನೆಯಲ್ಲಿ ಮಂಡಿಸಬಹುದು ಎನ್ನುವಂತಹ ಒಂದು ಕಲ್ಪನೆಯ ಉತ್ತುಂಗಕ್ಕೆ ಕೊಂಡು ಹೋಗಿ ಕೊನೆಗೆ ದಿಢೀರನೆ ಕೆಳಗೆ ಹಾಕುವಂತಹ ಪ್ರಯತ್ನ ಮಾಡಿದರು. ಈ ರೀತಿಯಾಗಿ ಬಜೆಟ್ ಮಂಡನೆ ಮಾಡಿದ್ದಾರೆ. ಇದರಲ್ಲಿ ನೀತಿ ಮತ್ತು ವಿಚಾರ ಇರಬೇಕು. ಆದರೆ ವಿಚಾರಕ್ಕೂ ಮತ್ತು ಆಚಾರಕ್ಕೂ ಸಮತೋಲನ ಅಗತ್ಯ ಇದೆ ಎಂದು ಹೇಳುತ್ತೇನೆ. ಇದಕ್ಕೆ ಅನೇಕ ಉದಾಹರಣೆಗಳು ಇವೆ. ಇದರಲ್ಲಿ ಒಂದು ಉದಾಹರಣೆಯನ್ನು ತಮಗೆ ಹೇಳುತ್ತೇನೆ. ಅನ್ನ ಬೆಂದಿದೆಯೋ ಇಲ್ಲವೇ ಎಂದು ನೋಡುವುದಕ್ಕೆ ನಾವು ಇಡೀ ಮಡಿಕೆಯೊಳಗೆ ಕೈಹಾಕುವುದು ಉಚಿತವಲ್ಲ. ಮಡಕೆ ಮೇಲಿರುವ ನಾಲ್ಕು ಅಗಳ ಅನ್ನವನ್ನು ಎತ್ತಿಕೊಂಡು ಹಿಚುಕಿದಾಗ ಆ ಅನ್ನ ಬೆಂದಿದೆಯೋ, ಇಲ್ಲವೋ ಎನ್ನುವುದು ಗೊತ್ತಾಗುತ್ತದೆ. ಈ ಬಜೆಟ್ಟಿನಲ್ಲಿ ಅನೇಕ ಉದಾಹರಣೆಗಳು ಇದ್ದರೂ ಸಹ ಈ ಒಂದು ಉದಾಹರಣೆಯನ್ನು ಸಭೆಯ ಮುಂದೆ ಇಟ್ಟೆ.

ಇನ್ನು ಅಂಧರ ಬಗ್ಗೆ ಹೇಳುವುದಾದರೆ ಇವರ ಬಗ್ಗೆ ತೀವ್ರ ಅನುಕಂಪ ಇರಬೇಕು. ನಮಗೆ ಪೌಷ್ಟಿಕ ಆಹಾರದ ಕೊರತೆ ಎಷ್ಟು ಇದೆ ಮತ್ತು ಇಲ್ಲಿ ಅಂಧರ ಸಂಖ್ಯೆ ಎಷ್ಟು ಇದೆ ಎನ್ನುವುದನ್ನು ತಿಳಿದುಕೊಳ್ಳಬೇಕು. ಕಂಪ್ಯೂಟರ್ ಯುಗಕ್ಕೆ ಜಿಗಿಯುವುದು ಹಾಸ್ಯಾಸ್ಪದವೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿ, ಅವರೇ ಈಗ ಈ ಬಜೆಟ್ಟಿನಲ್ಲಿ ಕಂಪ್ಯೂಟರ್ ಉಪಕರಣಗಳ ಮೇಲಿನ ತೆರಿಗೆಯನ್ನು ಶೇಕಡಾ ೧೫ ರಿಂದ ೬ ಕ್ಕೆ ಇಳಿಸಿದ್ದಾರೆ. ಹಾಸ್ಯಾಸ್ಪದ ಯಾವುದು ಎನ್ನುವ ವಿಚಾರಕ್ಕೆ ಅವರ ಮುಖಕ್ಕೆ ಒಂದು ಕನ್ನಡಿಯನ್ನು ಇವತ್ತು ಹಿಡಿಯಬೇಕಾಗಿದೆ. ಇವರ ನೀತಿ "ಮೂಗಿಗಿಂತ ಮೂಗುತಿ ಭಾರ" ಎನ್ನುವಂತಹ ರೀತಿ ಇದೆ. ಕಂಪ್ಯೂಟರ್ ಬಗ್ಗೆ ಕಾಳಜಿ ವಹಿಸುವುದು ಅಗತ್ಯವಿಲ್ಲವೆಂದು ಹೇಳಿ, ಇದಕ್ಕೆ ಹೆಚ್ಚು ಪೂರಕವಾಗುವ ರೀತಿಯಲ್ಲಿ ಅದರ ಕರವನ್ನು ಇಳಿಸುವಂತಾದ್ದು ಸರಿಯೇ ? ಮೂಲಭೂತವಾದಂತಹ ಅಭಿವೃದ್ಧಿಯನ್ನು ಹೆಚ್ಚಿಸುವುದಕ್ಕೆ, ನಾವು ಆರ್ಥಿಕವಾಗಿ ಚಿಂತನೆ ಮಾಡಬೇಕು, ಉತ್ಪಾದನೆ ಕಡೆಗೆ ಹೆಚ್ಚು ಆದ್ಯತೆ ಕೊಡಬೇಕು. ಉತ್ಪಾದನೆ ಮೂಲಕ ಪ್ರತಿಯೊಬ್ಬ ವ್ಯಕ್ತಿಯ ತಲಾ ಆರ್ಥಿಕ ಪರಿಸ್ಥಿತಿ ಹೆಚ್ಚಿ, ಅದರಿಂದ ಅವನ ಭವಿಷ್ಯ ನಿರ್ಮಾಣವಾಗಬೇಕಾದರೆ, ಅದು ಕೊಡುಗೆಗಳ ಮೂಲಕ ಸಾಧ್ಯವಿಲ್ಲವೆಂದು ನಾನು ಭಾವಿಸಿದ್ದೇನೆ. ಕೆಲವು ಮುಖ್ಯವಾದಂತಹ ಕಾರ್ಯಕ್ರಮಗಳು ಈ ಬಜೆಟ್ಟಿನಲ್ಲಿ ಇದೆ. ತಾಳಿ, ಪುಸ್ತಕ, ಸಮವಸ್ತ್ರ, ಕೊಡುತ್ತಿದ್ದೀರಿ ಅದನ್ನು ಬೇಡ ಎಂದು ನಾನು ಹೇಳುವುದಿಲ್ಲ. ಕೊಡುವುದಕ್ಕಿಂತ, ಅವರೇ ಕೊಂಡುಕೊಳ್ಳುವಂತಹ ಶಕ್ತಿಯನ್ನು ಕೊಡಬೇಕು. ಇದರ ಬಗ್ಗೆ ಮೂಲಭೂತವಾದಂತಹ ಆರ್ಥಿಕ ಚಿಂತನೆ ಆಗಬೇಕೆಂದು ಹೇಳಬಯಸುತ್ತೇನೆ. ಇದರ ಬಗ್ಗೆ ಅನೇಕ ಟೀಕೆಗಳು ಬರುತ್ತದೆಂದು ಅವರೇ ಒಂದು ಕಡೆ ಹೇಳಿಕೊಂಡಿದ್ದಾರೆ. ಕಂಪ್ಯೂಟರ್, ಯೋಜನೇತರ ಕಾರ್ಯಕ್ರಮಗಳ ಬಳಕೆಯಿಂದ ಆರ್ಥಿಕ ಮುಗ್ಗಟ್ಟು ಬಂದಿಲ್ಲವೆಂದು ಹೇಳಿದ್ದಾರೆ. ಯೋಜನೇತರ ಕಾರ್ಯಕ್ರಮಗಳನ್ನು ಮನಸೋ ಇಚ್ಛೆಯಿಂದ ಬಳಸಿದ್ದಾರೆಯೋ ಇಲ್ಲವೇ ಎಂಬುದನ್ನು

ಸೂಚ್ಯವಾಗಿ ಹೇಳಬೇಕಾಗಿದೆ. ಕಾಂಗ್ರೆಸ್ ಸರ್ಕಾರವು ಅನೇಕ ಕಾರ್ಯಕ್ರಮಗಳನ್ನು ಮಾಡಿದೆ. ಜನತಾ ಸರ್ಕಾರವೂ ಅನೇಕ ಕಾರ್ಯಕ್ರಮಗಳನ್ನು ಮಾಡುತ್ತಿದೆ. ಅದರಲ್ಲಿ ವ್ಯತ್ಯಾಸ ಕಾಣುವುದಿಲ್ಲ. ನೀವು ಏನು ಮಾಡಿದ್ದೀರಿ, ಎನ್ನುವಂತಹ ಪ್ರಶ್ನೆ ಬಂದಾಗ Both programmes are popular programmes ಇಲ್ಲವೆಂದು ಹೇಳುವುದಿಲ್ಲ. ನಮ್ಮದು ನೇಗಿಲ ಭಾಗ್ಯ, ನಿಮ್ಮದು ತಾಳಿ ಭಾಗ್ಯ ನಮ್ಮದು ಭಾಗ್ಯಜ್ಯೋತಿ ನಿಮ್ಮದು ಪುಸ್ತಕ, ನಮ್ಮದು ಆಶ್ರಯ ನಿಮ್ಮದು ಸಮವಸ್ತ್ರ ನಮ್ಮದು ಉಳುವವನೇ ನೆಲದೊಡೆಯ. ನಿಮ್ಮದು ಬಾಡಿಗೆದಾರನಿಗೆ ರಕ್ಷಣೆ ಕೊಡುವುದಕ್ಕೆ ಹೊರಟಿದ್ದೀರಿ. ಇದರ ಬಗ್ಗೆ ಪ್ರಮೀಳಾ ಸಮಿತಿ ಒಂದು ವರದಿ ಮಾಡಿದರೆ. ಅದನ್ನು ನೀವು ಕತ್ತರಿ ಪ್ರಯೋಗ ಮಾಡಿ ಬಾಡಿಗೆದಾರರ ಮನೆಯನ್ನು ಒಡೆಯುವವರಿಗೆ ರಕ್ಷಣೆ ಕೊಟ್ಟಿದ್ದೀರಿ. ಬಾಡಿಗೆದಾರನು ಮಾಲೀಕನ ಗದೆಗೆ ಸಿಕ್ಕುವಂತಹ ಪರಿಸ್ಥಿತಿಯನ್ನು ತಂದಿದ್ದೀರಿ. ಮಾಲೀಕನ ಗದೆಗೆ ಶಕ್ತಿ ಕೊಟ್ಟಿದ್ದೀರಿ. ಪ್ರಮೀಳಾ ಸಮಿತಿ ವರದಿಯನ್ನು ಬದಮೇಲು ಮಾಡಿದ್ದೀರಿ. ನಮ್ಮದು ಉಳುವವನೇ ನೆಲದೊಡೆಯ, ನಿಮ್ಮದು ಬಾಡಿಗೆದಾರನಿಗೆ ಮಾಲೀಕನಿಂದ ಗಧಪ್ರಹಾರ. ನಾವು ನೇಗಿಲ ಭಾಗ್ಯ ಯೋಜನೆಯ ಪ್ರಕಾರ ಉಳುವವನಿಗೆ ಮತ್ತು ಉತ್ಪಾದನೆಗೆ ಉತ್ತೇಜನವನ್ನು ಕೊಟ್ಟರೆ, ನೀವು ತಾಳಿ ಭಾಗ್ಯ ಯೋಜನೆಯಲ್ಲಿ ಯಾವ ಉತ್ಪಾದನೆಗೋಸ್ಕರ ಉತ್ತೇಜನವನ್ನು ಕೊಡುತ್ತೀರಿ. ಹತ್ತು ಜೊತೆ ಮದುವೆಗಳು ಆಗುವಂತಹ ಸಂದರ್ಭದಲ್ಲಿ ತಾಳಿಗಳನ್ನು ಕೊಡುತ್ತೀರಿ.

ಶ್ರೀ ಬಿ. ಎಂ. ಉಮರಬ್ಬ.—ಅನೇಕ ಜನ ಜನತಾ ಶಾಸಕರು ಇದ್ದೀರಿ. ಗ್ರಾಮಾಂತರ ಪ್ರದೇಶದಿಂದ ಆಯ್ಕೆಯಾಗಿ ಬಂದಂತಹ ಶಾಸಕರೂ ಇದ್ದೀರಿ. ತಮ್ಮ ತಮ್ಮ ಹಳ್ಳಿಯಲ್ಲಿ ಹತ್ತು ಜೊತೆ ಮದುವೆಗಳನ್ನು ಮಾಡಿಸುವುದಕ್ಕೆ ಸಾಧ್ಯವೇ ಎಂಬುದನ್ನು ದಯವಿಟ್ಟು ಹೇಳಿ. ತಾಳಿ ಭಾಗ್ಯದ ಯೋಜನೆಯಿಂದ ಗ್ರಾಮಾಂತರ ಪ್ರದೇಶದ ಜನತೆಯ ಭಾಗ್ಯವಾಗಬಹುದು. ಪುಸ್ತಕದ ವಿತರಣೆ ಕೊರತೆಯಿಂದ ವಿದ್ಯಾಭ್ಯಾಸ ಕುಂಠಿತವಾಗಿರಬಹುದು. ಎಲ್ಲ ಬಡವರನ್ನೂ ಕೂಡ, ಸಮಾನ ರೀತಿಯಾದ ಮಾನದಂಡದಿಂದ ಗುರುತಿಸುವಂತಹ ಕಾನೂನು ತರಬೇಕು. ಬಡವರೂ, ಬಡತನದ ಬಗ್ಗೆ ಪ್ರಮಾಣ ಪತ್ರಗಳನ್ನು ಕೊಡಬೇಕಾಗುತ್ತದೆ. ಬಡವರು, ಶ್ರೀಮಂತರು ಯಾರು ಎನ್ನುವುದರ ಬಗ್ಗೆ ಪ್ರಮಾಣ ಪತ್ರವನ್ನು ದಾಖಲು ಮಾಡಬೇಕಾಗುತ್ತದೆ. ಕರ್ನಾಟಕದ ಜನತೆಯ ಪ್ರಾಮಾಣಿಕತೆಯನ್ನು ಪರೀಕ್ಷೆ ಮಾಡುವುದಕ್ಕೆ ಹೋಗಬೇಡಿ. ಯಾರಿಗೆ ಸ್ವತಃ ಪುಸ್ತಕಗಳನ್ನು ಕೊಂಡುಕೊಳ್ಳತಕ್ಕಂತಹ ಶಕ್ತಿಯಿದೆಯೋ ಅವರು ಕೊಂಡುಕೊಳ್ಳಲಿ. ಶಕ್ತಿಯಿಲ್ಲದವರಿಗೆ ಪುಸ್ತಕಗಳನ್ನು ಕೊಡುವಂತಹ ವ್ಯವಸ್ಥೆ ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ. ನನ್ನ ಅನುಭವದ ಪ್ರಕಾರ, ಕನಿಷ್ಟ ಮೂವತ್ತು ಮಂದಿಯಾದರೂ ಪುಸ್ತಕ ಬೇಡ ಎನ್ನುವವರಿದ್ದಾರೆ. ಪುಸ್ತಕಗಳಿಗೆ ಖರ್ಚುಮಾಡುವಂತಹ ಹಣದಲ್ಲಿ ಶೇಕಡ ೩೦ ರಷ್ಟು ಹಣವನ್ನು ಉಳಿಸಿ, ಬೇರೆಯವರಿಗೆ ಕೊಡಬಹುದಾಗಿತ್ತು. ಸಮವಸ್ತ್ರದ ವಿಚಾರದಲ್ಲಿಯೂ ಕೂಡ, ಇದೇ ತತ್ವವನ್ನು ಅನುಸರಿಸಬಹುದಾಗಿತ್ತೆಂದು ಹೇಳುತ್ತೇನೆ.

ಇನ್ನು ತಾಳಿಭಾಗ್ಯದ ವಿಚಾರದಲ್ಲಿ ಹೇಳುವುದಾದರೆ, ತಾಳಿಭಾಗ್ಯಕ್ಕೆ ಬದಲಾಗಿ, ತೊಟ್ಟಿಲುಭಾಗ್ಯ ಈ ವರ್ಷ ಬರಬಹುದೆಂದು ಅನ್ನಿಸುತ್ತದೆ. ತಾಳಿಭಾಗ್ಯದಿಂದ ಉತ್ಪಾದನಾಶಕ್ತಿ ಕಳೆದುಹೋಗಿದೆಯೆಂದು ಭಾವಿಸಬೇಕಾಗುತ್ತದೆ. ಎಷ್ಟು ವರ್ಷಗಳ ಕಾಲ ಜನಗಳಿಗೆ ಕೊಟ್ಟು ಸಾಕಲಿಕ್ಕದಕ್ಕೆ ಸಾಧ್ಯ ಎನ್ನುವುದನ್ನು ಯೋಚನೆ ಮಾಡಬೇಕು. ಜನತಾ ಸರ್ಕಾರ ತನ್ನ ಔದಾರ್ಯದ ಉರುಳಿಗೆ ಜನತೆಯ ಕೊರಳನ್ನು ಕೊಡತಕ್ಕಂತಹ ಸಾಹಸ ಮಾಡುತ್ತಿದೆ. ಔದಾರ್ಯ ತೋರಿಸತಕ್ಕಂತಹ ಕ್ರಮ ಇದಲ್ಲ. ಜನತೆಯಲ್ಲಿ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಬೇಕು. ಕೇಂದ್ರಸರ್ಕಾರ ಬಡ ಜನತೆಗೆ ಸಾಲಗಳನ್ನು ವಿತರಣೆಮಾಡುವ ದಿಸೆಯಲ್ಲಿ ರಾಜ್ಯ ಸರ್ಕಾರ ತನ್ನ ಅಧಿಕಾರಿಗಳ ಮುಖಾಂತರ, ಅನೇಕ ಅಡೆತಡೆಗಳನ್ನು ಒಡ್ಡುತ್ತಾ ಬಂದಿತ್ತು. ಯಾರಿಗೋಸ್ಕರ ಈ ಒಂದು ಕಾರ್ಯಗಳನ್ನು ಹಾಕಿಕೊಳ್ಳಲಾಗಿತ್ತು ಎನ್ನುವ ವಿಚಾರವನ್ನು ನೋಡದೆ, ಇದರ ಬಗ್ಗೆ ಟೀಕೆ ಕೂಡ ಪ್ರಾರಂಭ ಮಾಡಿದರು. ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು ಸಿಕ್ಕಿತು ಎನ್ನುವಂತೆ, ಬಡಜನತೆಯ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಬಿಡಲಿಲ್ಲ. ನಮ್ಮ ರಾಜ್ಯದ ವಿದ್ಯಾ ಮಂತ್ರಿಗಳಿಗೆ ಮದುವೆಯಿಲ್ಲ, ಮಕ್ಕಳಿಲ್ಲ. ಪ್ರಾಥಮಿಕ ಶಾಲೆಯ ಮಕ್ಕಳಿಗೆ ಕೊಡತಕ್ಕಂತಹ ಪುಸ್ತಕಗಳನ್ನು ಮುಂದಿನ ವರ್ಷವೂ ಉಳಿಸಿಕೊಂಡು ಬರಬೇಕೆಂದು ಹೇಳಿದ್ದಾರೆ. ನಮ್ಮಲ್ಲಿ ವೇದ, ಪುರಾಣಗಳಿಗೆ ಗಟ್ಟಿಯಾದ ಬೈಂಡನ್ನು ಹಾಕಿ, ಇಟ್ಟುಕೊಳ್ಳುತ್ತಾರೆ. ಶಾಲೆಗೆ ಹೋಗತಕ್ಕಂತಹ ಮಕ್ಕಳಿಗೆ ಒಂದು ವರ್ಷದಲ್ಲಿ ಕನಿಷ್ಟ ೩ ಪುಸ್ತಕಗಳನ್ನಾದರೂ ಕೊಡಬೇಕಾಗುತ್ತದೆ. ಪರಿಸ್ಥಿತಿ

ಹೀಗಿರುವಾಗ, ಇದರ ಬಗ್ಗೆ ಚಿಂತನೆ ಮಾಡಿದಂತೆ ಕಾಣುತ್ತಿಲ್ಲ. ಇನ್ನು, ವನ ನಿರ್ಮಾಣದ ಬಗ್ಗೆ ಒಂದು ಸ್ಪಷ್ಟೀಕರಣ ಬೇಕಾಗಿದೆ. ಎಷ್ಟು ಕಡೆ ಸಸಿಗಳನ್ನು ನೆಟ್ಟಿದ್ದೀರಿ, ಯಾವ ತರಹದ ಸಸಿಗಳನ್ನು ನೆಟ್ಟಿದ್ದೀರಿ, ನೀಲಗಿರಿ ಸಸಿಗಳನ್ನು ನೆಟ್ಟು ವನ ನಿರ್ಮಾಣ ಮಾಡುವುದಕ್ಕೆ ಸಾಧ್ಯವೇ ? ನೀಲಗಿರಿ ಮರಗಳಿಂದ ಭೂಮಿಯಲ್ಲಿರತಕ್ಕ ಜಲಸಂಪತ್ತನ್ನೆಲ್ಲಾ ಎಳೆದುಕೊಂಡು ಇವತ್ತು ರೈತನ ಜಮೀನಿಗೆ ಆ ಮೂಲಕ ಜಲದ ಅಭಾವಕ್ಕೆ ಕಾರಣವಾಗಿರುವುದನ್ನು ನಾವು ಕಾಣುತ್ತಿದ್ದೇವೆ. ಆದರೂ ಕೂಡ, ಕೆಲವು ಕಂಪನಿಗಳ ಮಾಲೀಕರಿಗೆ ಅನುಕೂಲವಾಗುವ ದೃಷ್ಟಿಯಿಂದ ಅವರ ಭವಿಷ್ಯ ಹಸನಾಗಲೀ ಎನ್ನುವ ಉದ್ದೇಶದಿಂದ ನೀಲಗಿರಿ ಮರಗಳನ್ನು ವ್ಯಾಪಕವಾಗಿ ಸರ್ಕಾರದವರೇ ಬೆಳೆಸುತ್ತಿದ್ದಾರೆ. ನೀಲಗಿರಿ ಮರಗಳನ್ನು ಕಂಡಲ್ಲಿ ಕಡಿಯುವಂತಹ ಚಳವಳಿ ಮಾಡಬೇಕಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಮಾನ್ಯ ಡಾ॥ ಶಿವರಾಮ ಕಾರಂತರು ಅರಣ್ಯ ನಾಶದ ಬಗ್ಗೆ ಹೇಳುತ್ತಾ, ಅರಣ್ಯವನ್ನು ಬೆಳೆಸುವುದರಿಂದ, ಜನತೆಗೆ ಅನುಕೂಲವಾಗುವುದರ ಜೊತೆಗೆ ನೂರಾರು ವರ್ಷಗಳು ಬಾಳುವಂತಹ ಮರಗಳನ್ನು ಜನ, ಜಾನುವಾರುಗಳಿಗೆ ಆಶ್ರಯ ಕೊಡತಕ್ಕಂತಹ ಮರಗಳನ್ನು ಬೆಳಸಬೇಕೆಂದು ಹೇಳಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಅರಣ್ಯ ಸಚಿವರು ಗಮನಕೊಡುತ್ತಾರೆಂದು ಆಶಿಸುತ್ತೇನೆ. ಇನ್ನು ತನ್ನ ತಾಲ್ಲೂಕಿಗೆ ಸಂಬಂಧಪಟ್ಟಂತೆ ಪ್ರಮುಖವಾಗಿ ಒಂದು ಮಾತನ್ನು ಹೇಳ ಬೇಕಾಗಿದೆ. ಚಲನಚಿತ್ರ ಹೆಚ್ಚು ಬೆಳೆಯಬೇಕು. ಆ ಮೂಲಕ ಮನೋರಂಜನೆ ಮಾತ್ರವಲ್ಲ, ಕನ್ನಡ ಸಂಸ್ಕೃತಿಯ ಬೆಳವಣಿಗೆ ಕೂಡ ಸಾಧ್ಯ ಎನ್ನುವ ಮೂಲಭೂತ ವಿಚಾರ ನಮ್ಮಲ್ಲಿದೆ. ಇಲ್ಲ ಎಂದು ನಾನು ಹೇಳುವುದಿಲ್ಲ. ಸಬ್ಸಿಡಿ ಕೊಡುವಾಗ ಕೇವಲ ಪ್ರಾದೇಶಿಕ ಮಾನದಂಡವನ್ನೇ ಇಟ್ಟು ನೋಡುವುದು ಸರಿಯಲ್ಲ. ಇದರಿಂದ ಚಿತ್ರಗಳ ಗುಣಮಟ್ಟ ಹೆಚ್ಚುವುದಕ್ಕೆ ಸಾಧ್ಯವಿಲ್ಲ. ಚಿತ್ರನಿರ್ಮಾಪಕರು ಮಾತ್ರ ನಾಯಿ ಕೊಡೆಗಳಂತೆ ಬೆಳೆಯುತ್ತಾರೆ. ಜನತಾ ಸರ್ಕಾರದವರಿಗೆ ಹೆಗ್ಗೋಡಿನ ನಾಟಕ ಕಂಪನಿಯ ಬಗ್ಗೆ ಕಾಳಜಿ ಇದೆ. ಆದರೆ, ಕರ್ನಾಟಕದಲ್ಲಿ ಮಾತ್ರವಲ್ಲ, ಇಡೀ ಭಾರತದಲ್ಲಿಯೇ ಏಕೆ ವಿದೇಶದಲ್ಲಿಯೂ ಒಂದು ರೀತಿಯಲ್ಲಿ ಕಲೆಯಲ್ಲಿಯೇ ಸಂಪದ್ಭರಿತವಾದ ಒಂದು ಕಲೆ ನಮ್ಮ ಜಿಲ್ಲೆಯಲ್ಲಿದೆ. ಅದು ಯಕ್ಷಗಾನ ಕಲೆ. ಕನ್ನಡದಲ್ಲಿ ಸುಂದರವಾಗಿ ಒಳ್ಳೆಯ ರೀತಿಯಲ್ಲಿ ನಮ್ಮ ಸಂಸ್ಕೃತಿ ಸಂಪ್ರದಾಯಗಳನ್ನು ಪುರಾಣಗಳನ್ನು ಜನತೆಯ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿಸುವಂತಹ ಒಮ್ಮೆ ನೋಡಿದರೆ ಸಾಕು, ಶಾಶ್ವತವಾಗಿ ಮನಸ್ಸಿನಲ್ಲಿ ಇರುವಂತಹ, ಒಂದು ಯಕ್ಷಗಾನ ಕಲೆಯ ಬಗ್ಗೆ ನಮ್ಮ ಮಾನ್ಯ ಮುಖ್ಯ ಮಂತ್ರಿಯವರಿಗೆ ಅನುಕಂಪ ಬರಲಿಲ್ಲವೆಂದರೆ ಮನಸ್ಸಿಗೆ ಬೇಸರವಾಗುತ್ತದೆ. ನಾಟಕಗಳ ಬಗ್ಗೆ ಮತ್ತು ಚಲನಚಿತ್ರಗಳ ಬಗ್ಗೆ ತೋರಿಸಿದಂತಹ ಅನುಕಂಪವನ್ನು ಯಕ್ಷಗಾನ ಕಲೆಯ ಬಗ್ಗೆ ತೋರಿಸಲಿಲ್ಲ. ನಾಟಕ ಕಂಪನಿಯವರಿಗೆ ೫ ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಇವತ್ತು ಯಕ್ಷಗಾನ ಕಲೆ ದಿನೇದಿನೇ ನಶಿಸಿಹೋಗತಕ್ಕಂತಹ ಪರಿಸ್ಥಿತಿ ಬಂದಿರುವಾಗ, ಅದರ ಕಡೆ ಸರ್ಕಾರ ಹೆಚ್ಚಿನ ನಿಗಾ ವಹಿಸಬೇಕಾಗಿತ್ತು. ಡಾ॥ ಶಿವರಾಮ ಕಾರಂತರ ಪುತ್ತೂರಿನ ಮನೆಯನ್ನು ಬಾಲವನ ಮಾಡತಕ್ಕಂತಹ ವಿಚಾರ ಏನಾಯಿತೋ ಗೊತ್ತಿಲ್ಲ. ಮಂಜೇಶರಾಯರ ಮನೆಯನ್ನು ಪರಿವರ್ತನೆ ಮಾಡತಕ್ಕಂತಹ ವಿಚಾರದ ಕಡೆ ಮನಸ್ಸು ಕೊಡಲಿಲ್ಲ. ಗಾಂಧಿನಗರದ ಹತ್ತಿರ ಇದೆಯೆಂದು ಸಿನಿಮಾದ ಬಗ್ಗೆ, ನಾಟಕಗಳ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಗಮನಕೊಟ್ಟಂತೆ ಕಾಣುತ್ತಿದೆ. ಪುತ್ತೂರು, ಮಂಜೇಶ್ವರ ಕಣ್ಣಿಗೆ ದೂರವಾಗಿದೆ ಎಂದು ಮನಸ್ಸಿನಿಂದಲೂ ದೂರ ಮಾಡುವುದು ಸರಿಯಲ್ಲವೆಂದು ಈ ಇಬ್ಬರೂ ಕವಿಗಳ ಮನೆಗಳನ್ನು ಪ್ರವಾಸಿಗರ ಕೇಂದ್ರಗಳನ್ನಾಗಿ ಮಾಡುವುದಕ್ಕೆ ಮನಸ್ಸು ಮಾಡಬೇಕೆಂದು ತಮ್ಮ ಮುಖೇನ ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ. ಅದೇ ರೀತಿ ಯಕ್ಷಗಾನ ಕಲೆಯನ್ನು ಉಳಿಸಿಕೊಳ್ಳುವ ವಿಚಾರದಲ್ಲಿಯೂ ಕೂಡ ಮಾನ್ಯ ಮುಖ್ಯ ಮಂತ್ರಿಯವರು ಚಿಂತನೆ ಮಾಡಬೇಕೆಂದು ಹೇಳುತ್ತೇನೆ. ಮೂಲಭೂತ ಚಿಂತನೆ ಆದರೆ ಮಾತ್ರ, ಆರ್ಥಿಕ ಬದಲಾವಣೆ, ಆರ್ಥಿಕ ಕ್ರಾಂತಿ, ಆ ಮೂಲಕ ಸಾಮಾಜಿಕ ವಾದಂತಹ ಪ್ರಗತಿಪರ ಕ್ರಾಂತಿ ಕಾಣುವುದಕ್ಕೆ ಸಾಧ್ಯವೇ ವಿನಃ ಅಲ್ಪಸ್ವಲ್ಪ ಕೊಡುವುದರ ಮೂಲಕ ಅಥವಾ ಔದಾರ್ಯದ ಮೂಲಕ ಆರ್ಥಿಕ ಬದಲಾವಣೆ ಕಾಣುವುದಕ್ಕೆ ಸಾಧ್ಯವಿಲ್ಲವೆಂದು ಸ್ಪಷ್ಟವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಒಂದು ಕಡೆ ಕಂಪ್ಯೂಟರ್ ಬಗ್ಗೆ ಟೀಕೆ ಮಾಡುತ್ತಾ, ಮತ್ತೊಂದುಕಡೆ, ಕಂಪ್ಯೂಟರ್ ಮೇಲಿನ ಕರವನ್ನು ಇಳಿಸುವುದು ವಿಪರ್ಯಾಸಕ್ಕೆ ಎಡೆಮಾಡಿಕೊಟ್ಟಂತಾಗಿದೆ. ಥಿಂಕ್ ಟ್ಯಾಂಕ್‌ನಲ್ಲಿ ಆರ್ಥಿಕ ತಜ್ಞರು ಯಾರಿದ್ದಾರೆ, ಅವರ ಸಲಹೆ, ಸೂಚನೆಗಳು ಅಸಮತೋಲನದಿಂದ ಕೂಡಿದ್ದು, ಇದು ಒಂದು ಪಕ್ಷದ ಆರ್ಥಿಕ ಪ್ರಗತಿಯ ಆಯವ್ಯಯ ಪತ್ರವಾಗಿದೆ ಎಂದು ಬಹಳ ವಿಷಾದದಿಂದ ಖಂಡಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎ. ಕುಮಾರಗೌಡ ಪಾಟೀಲ್. (ಬಸವನ ಬಾಗೇವಾಡಿ). —ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಆಯವ್ಯಯ ಪತ್ರವನ್ನು ನಾನು ಅನುಮೋದಿಸಿ ನಾಲ್ಕು ಮಾತುಗಳನ್ನು ಆಡುತ್ತೇನೆ. ಈಗ ಗ್ರಾಮೀಣ ನೀರು ಸರಬರಾಜು ಯೋಜನೆ ನಮ್ಮ ಹಳ್ಳಿಗಾಡಿನಲ್ಲಿ ನಿಜವಾಗಿಯೂ ಬಹಳ ಉಪಯುಕ್ತವಾಗಿದೆ ಅದಕ್ಕೆ ಇನ್ನು ಹೆಚ್ಚು ಹಣವನ್ನು ಖರ್ಚುಮಾಡಿದರೆ ಅಡ್ಡಿ ಇಲ್ಲಾ. ಇವತ್ತು ಕೂಡಾ ಎಷ್ಟು ಕಡೆ ಮಳೆ ಇಲ್ಲದೆ ಹಳ್ಳಗಳಿಂದ ನೀರು ತರುತ್ತಿದ್ದಾರೆ. ನೀರಿನ ಸಮಸ್ಯೆಗಳಿರುವುದರಿಂದ ಅಲ್ಲಲ್ಲಿ ಬೋರ್ ವೆಲ್‌ಗಳನ್ನು ಹಾಕಿಸಿ. ಮಿನಿ ವಾಟರ್ ಯೋಜನೆ ಜಾರಿಗೆ ತರಬೇಕೆಂದು ನಾನು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ. ಆ ಮೇಲೆ ಕಳೆದ ಎರಡು ವರ್ಷಗಳಿಂದ ಕ್ಷಾಮ ಪರಿಹಾರ ಕಾರ್ಯಗಳಿಗಾಗಿ ೧೮೪ ಕೋಟಿ ರೂಪಾಯಿಗಳ ಹಣ ಖರ್ಚು ಮಾಡಲಾಗಿದೆಯೆಂದು ಸರ್ಕಾರದವರು ಹೇಳಿದ್ದಾರೆ. ಆದರೆ ಪ್ರತಿ ವರ್ಷವೂ ಬರಗಾಲ ಬರುವುದರಿಂದ ಶಾಶ್ವತವಾದಂತಹ ಯೋಜನೆಯನ್ನು ಸರ್ಕಾರದವರು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ನಾವು ಪ್ರತಿ ವರ್ಷವೂ ಬರಗಾಲಕ್ಕೆ ಹಣ ಖರ್ಚುಮಾಡುತ್ತಿದ್ದೇವೆ. ಆದರೆ ಆಗಿಬಾಂಗ್ಲ ಕ್ಷಾಮದ ಬಾದೆಯಲ್ಲಿರತಕ್ಕಂತಹ ಜನಗಳು ಪರಿಸ್ಥಿತಿಯಿಂದ ತುಂಬಾ ನೊಂದಿದ್ದಾರೆ. ಈ ಜನಗಳಿಗಾಗಿ ಶಾಶ್ವತವಾದ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಆ ಭಾಗದಲ್ಲಿ ಶಾಶ್ವತವಾದಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಶ್ರೀಮಾನ್ ಬಾಳೆಕುಂದರಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕಮಾಡಿ ಸೂಕ್ತವಾದ ಯೋಜನೆಗಳನ್ನು ಕೈಗೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಹಳ್ಳಕೊಳ್ಳಗಳು ಇರತಕ್ಕಂತಹ ಕಡೆ ಅಣೆಕಟ್ಟುಗಳನ್ನು ಕಟ್ಟಿಸಿದರೆ ಇದರಿಂದ ನೀರು ನಿಲ್ಲುವುದಕ್ಕೆ ಅನುಕೂಲವಾಗುತ್ತದೆ. ಇವತ್ತು ೧೫೦ ಅಡಿ ಆಳ ತೋಡಿದರೆ ನೀರು ಸಿಗುವುದಿಲ್ಲ. ಐದೈದು ಮೈಲಿ ಅಂತರದಲ್ಲಿ ಒಂದೊಂದು ಅಣೆಕಟ್ಟುಗಳನ್ನು ಕಟ್ಟಿಸಿದರೆ ನೀರು ಶೇಖರಣೆಗೆ ಅನುಕೂಲವಾಗುತ್ತದೆ. ಹಳ್ಳಿಯಲ್ಲಿ ದಾರಿದ್ರ್ಯ, ಅತಿ ಬಡತನ ಇವೆ. ಇವುಗಳನ್ನು ಪರಿಹಾರ ಮಾಡುವುದಕ್ಕೆ ಖಾದಿ ಗ್ರಾಮೋದ್ಯೋಗ, ಕೈಮಗ್ಗದ ಉದ್ಯೋಗ, ರಾಟೆ ಮತ್ತು ಮೋಟೆ ಎಲ್ಲಾ ಭಾಗದಲ್ಲೂ ಶ್ರೇಷ್ಠವಾದಂತಹ ಉದ್ಯೋಗ. ಇವತ್ತು ಒಕ್ಕಲುತನ ಕೈಮಗ್ಗದ ನೇಕಾರರಿಗೆ ಹೆಚ್ಚಿನ ಉದ್ಯೋಗ ಸಿಗುವಂತಹ ಸಾಧ್ಯತೆ ಇದೆ. ಇದರ ಬಗ್ಗೆ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕು. ಗ್ರಾಮೋದ್ಯೋಗ ವ್ಯವಸ್ಥೆಯನ್ನು ಮಾಡದಿದ್ದರೆ ನಮ್ಮ ಜನ ಬೊಂಬಾಯಿ ಮುಂತಾದ ಕಡೆಗೆ ವಲಸೆ ಹೋಗುವಂತಹ ಪರಿಸ್ಥಿತಿ ಇದೆ. ಇವತ್ತು ನಮ್ಮ ರಾಜ್ಯದ ಪರಿಸ್ಥಿತಿ ಹೇಗಿದೆಯೆಂದರೆ ಆಂಧ್ರ, ತಮಿಳುನಾಡಿನ ಕಡೆಯವರನ್ನು ನಾವು ಸ್ವಾಗತ ಮಾಡುತ್ತೇನೆ. ಆದರೆ ನಮ್ಮವರನ್ನು ಹೊರಗಡೆ ಅಟ್ಟುವಂತಹ ಪರಿಸ್ಥಿತಿ ಇದೆ. ಗ್ರಾಮಾಂತರ ಪ್ರದೇಶಗಳಲ್ಲಿ ಉದ್ಯೋಗ ಸಿಗುವಂತಹ ಒಂದು ಯೋಜನೆಯನ್ನು ರಚಿಸಬೇಕು. ಖಾದಿ ಗ್ರಾಮೋದ್ಯೋಗ, ಕೈಮಗ್ಗದ ಕೆಲಸಗಳಿಗೆ ಹೆಚ್ಚು ಆದ್ಯತೆಯನ್ನು ಕೊಡಬೇಕೆಂದ ಹೇಳುತ್ತೇನೆ. ರೈತ ಬಿತ್ತದಿದ್ದರೆ ದೇಶ ಬದುಕುವುದಿಲ್ಲ. ರೈತನ ಬೆಳೆಗೆ ಸರಿಯಾದಂತಹ ಬೆಲೆ ಸಿಗುವಂತಹ ವ್ಯವಸ್ಥೆ ಮಾಡಬೇಕು. ಇನ್ಸೂರೆನ್ಸ್ ವ್ಯವಸ್ಥೆ ಜಾರಿಗೆ ತರಬೇಕು. ರೈತನು ಬೆಳೆದಂತಹ ಕಾಯಿಪಲ್ಯ ಮತ್ತು ಹಣ್ಣುಗಳನ್ನು ಸಂಸ್ಕರಿಸಿ ಕೋಲ್ಡ್ ಸ್ಟೋರೇಜ್‌ನಲ್ಲಿ ಇಡುವಂತಹ ವ್ಯವಸ್ಥೆ ಮಾಡಬೇಕು. ನಮ್ಮ ಭಾಗದಲ್ಲಿ ಉಳ್ಳಗೆಡ್ಡೆ ಹೆಚ್ಚಾಗಿ ಬೆಳೆಯುತ್ತಾರೆ. ಕೆಲವು ಸಾರಿ ಕ್ವಿಂಟಾಲ್‌ಗೆ ೨೦೦ ರೂ. ಇದ್ದರೆ, ಕೆಲವು ಸಾರಿ ೨೦ ರೂ.ಗೆ ಇಳಿಯುತ್ತದೆ. ಇದರಿಂದ ರೈತನಿಗೆ ತೊಂದರೆಯಾಗುತ್ತದೆ. ನಮ್ಮಲ್ಲಿ ಸಂಸ್ಕರಿಸುವಂತಹ ವ್ಯವಸ್ಥೆ ಇಲ್ಲ. ಜೊತೆಗೆ ಸೆಸ್ ಕಾಟಿ ಮಾಡುವಂತಹ ವ್ಯವಸ್ಥೆ ಇಲ್ಲ. ಆಹಾರ ಪದಾರ್ಥಗಳನ್ನು ಶೇಖರಿಸಿ ಹೊರದೇಶಗಳಿಗೆ ರಫ್ತು ಮಾಡಿದರೆ ಬೇಕಾದಷ್ಟು ಆದಾಯ ಬರುತ್ತದೆ. ನಿಂಬೆ ಹಣ್ಣುಗಳು ಮಳೆಗಾಲದಲ್ಲಿ ಹಾಳಾಗಿ ಹೋಗುತ್ತದೆ. ಶೇಖರಿಸಿ ಲಿಮ್ಕಾ ಕಂಪನಿಯವರಿಗೆ ಕೊಡತಕ್ಕಂತಹ ವ್ಯವಸ್ಥೆಯನ್ನು ಮಾಡಿದರೆ ರೈತನ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ. ಒಕ್ಕಲುತನಕ್ಕೆ ಹೆಚ್ಚಿನ ಆದ್ಯತೆ ಕೊಟ್ಟರೆ ಕರ್ನಾಟಕ ರಾಜ್ಯ ಸಂಪತ್ಭರಿತವಾದ ದೇಶವಾಗುತ್ತದೆಂದು ಹೇಳುತ್ತೇನೆ.

ಇನ್ನು ಕೃಷ್ಣಾ ಮೇಲ್ದಂಡೆ ಯೋಜನೆಯ ಮೇಲೆ ಎರಡು ಮಾತುಗಳನ್ನು ಆಡಲು ಇಷ್ಟಪಡುತ್ತೇನೆ. ಇದುವರೆವಿಗೂ ೫೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಈ ವರ್ಷ ೩೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಇನ್ನು ೧೫೦೦ ಕೋಟಿ ರೂಪಾಯಿ ಹಣ ಬೇಕಾಗುತ್ತದೆ. ಈ ರೀತಿ ಹಣದ ವ್ಯವಸ್ಥೆ ಮಾಡಿದರೆ ಇನ್ನು ೫೦ ವರ್ಷ ಕಾಲವಾದರೂ ಈ ಯೋಜನೆ ಮುಗಿಯುವುದಿಲ್ಲ. ಬಿಜಾಪುರ ಜಿಲ್ಲೆಗೆ ಇದರಿಂದ ಏನು ಅನುಕೂಲವಾಗಿಲ್ಲ. ಆದರೂ ಈ ಯೋಜನೆಯನ್ನು ತೀವ್ರವಾಗಿ ಮುಗಿಸಬೇಕೆಂದು ಹೇಳುತ್ತೇನೆ. ಇವತ್ತಿನ ದಿವಸ ನೂರಾರು ಹಳ್ಳಿಗಳಲ್ಲಿ ಫಲ

ವತ್ತಾದ ಭೂಮಿಯನ್ನು ಮತ್ತು ಮನೆಗಳನ್ನು ಕಳೆದುಕೊಂಡಿದ್ದಾರೆ. ಅವರಿಗೆ ಪುನರ್‌ವಸತಿ ಕೇಂದ್ರ ಗಳನ್ನು ಮಾಡಿದ್ದೇವೆ. ಯಾರು ನಿರ್ಗತಿಕರಾಗಿದ್ದು ಅಲ್ಲಿ ನೀರು ಇಲ್ಲ. ರಸ್ತೆ ಇಲ್ಲ, ಬೀದಿ ದೀಪದ ವ್ಯವಸ್ಥೆ ಇಲ್ಲ. ಅವರಿಗೆ ಕೊಡತಕ್ಕಂತಹ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು. ದೇಶದ ಸಲುವಾಗಿ ತ್ಯಾಗ ಮಾಡಿದಂತಹ ಕುಟುಂಬಗಳು ಏನು ಇದ್ದಾವೆ ಅವರಿಗೆ ಸರ್ಕಾರದವರು ಸೂಕ್ತವಾದ ಪರಿಹಾರವನ್ನು, ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಸರ್ಕಾರದವರು ಇದರ ಬಗ್ಗೆ ಹೆಚ್ಚಿನ ಲಕ್ಷ್ಯ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಆಲಮಟ್ಟಿ ಯೋಜನೆಯ ಒಂದು ಮಾತನ್ನು ಹೇಳಬೇಕಾಗಿದೆ. ೭ನೇ ಪಂಚ ವಾರ್ಷಿಕ ಯೋಜನೆಯಲ್ಲಿ ಅದನ್ನು ಸೇರಿಸಿಲ್ಲ. ಭದ್ರ, ಭೀಮ ಏತಾ ನೀರಾವರಿ ಯೋಜನೆಗಳನ್ನು ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ್ದಾರೆ. ನಮ್ಮ ಬಿಜಾಪುರ ದಲ್ಲಿ ಜಮೀನು ಕಳೆದುಕೊಂಡವರಿಗೆ ಜೀವನದ ಪ್ರಶ್ನೆ ಇದೆ. ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಸರ್ಕಾರದವರು ಆಲಮಟ್ಟಿ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಖಾಸಗಿ ಶಾಲೆ ಗಳನ್ನು ಮಾಡಿಕೊಂಡು ಸುಲಭವಾಗಿ ಹಣವನ್ನು ಗಳಿಸುವಂತಹ ಒಂದು ದೊಡ್ಡ ಉದ್ಯೋಗವಾಗಿದೆ. ಮನಸ್ಸಿಗೆ ಬಂದ ಹಾಗೆ ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಳ್ಳುವುದು. ಬೇರೆ ಬೇರೆ ಮಾರ್ಗ ದಿಂದ ಹಣ ಸಂಪಾದನೆ ಮಾಡುವಂತಹ ವ್ಯವಸ್ಥೆ ಇದೆ. ಸರ್ಕಾರದವರು ಶಾಲಾ ಕಾಲೇಜುಗಳನ್ನು ರಾಷ್ಟ್ರೀಕರಣ ಮಾಡಿ, ಈ ಅವ್ಯವಹಾರವನ್ನು ತಡೆಯಬೇಕೆಂದು ಹೇಳುತ್ತೇನೆ. ಖಾಸಗಿ ಶಾಲೆ ಗಳನ್ನು ನಡೆಸುವವರು ಲಕ್ಷಾಧಿಪತಿಗಳಾಗಿದ್ದಾರೆ. ಮತ್ತೆ ಹಾಸ್ಟೆಲ್‌ಗಳನ್ನು ನಡೆಸುವವರಲ್ಲೂ ಅವ್ಯವಹಾರ ಇದೆ. ಬೊಗಸ್ ಹಾಸ್ಟೆಲ್‌ಗಳನ್ನು ಇಟ್ಟುಕೊಂಡು ಸರ್ಕಾರಿ ಹಣ ಪಡೆಯುತ್ತಿದ್ದಾರೆ. ಸರ್ಕಾರದವರು ಇದರ ಬಗ್ಗೆ ಉಗ್ರಕ್ರಮ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರದವರಲ್ಲಿ ಕೇಳಿಕೊಳ್ಳು ತ್ತೇನೆ. ಇನ್ನು ಎದುರುಪಕ್ಷದ ಮಾನ್ಯ ಸದಸ್ಯರು ಸೀರೆ, ಕುಪ್ಪಸ. ಕೊಡುವ ಬಗ್ಗೆ ಮಾತನಾಡಿದ್ದಾರೆ ಅವರು ಕೂಡ ಜನತಾ ಪ್ರತಿನಿಧಿಗಳು, ಟೀಕೆ ಮಾಡುವುದಕ್ಕಿಂತ ಉತ್ತಮವಾದ ಸಲಹೆಗಳನ್ನು ಕೊಟ್ಟು ಸರ್ಕಾರದೊಂದಿಗೆ ಸಹಕರಿಸಬೇಕೆಂದು ಆಶಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ. (ಗುರುಮಿಠ್‌ಕಲ್). — ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರು ಮಂಡಿಸಿರುವಂತಹ ಖೋತಾ ಬಜೆಟ್‌ನ್ನು ನಾನು ವಿರೋಧಿಸುತ್ತೇನೆ.

೧೧-೦೦ ಎ ಎಂ.

ಶ್ರೀ ಕೆ. ಎಚ್. ಪಾಟೀಲ್. — ಇದು ಖೋತಾ ಬಜೆಟ್ಟೋ ಅಥವಾ ಕೋಟಾ ಬಜೆಟ್ಟೋ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ. — ಈ ಬಜೆಟ್ ಕೋಟಾನು ಆಗುತ್ತದೆ. ಖೋತಾನು ಆಗಿದೆ. ಇವೆರಡರಲ್ಲಿ ಯಾವುದನ್ನು ಬೇಕಾದರೂ ಕರೆಯಬಹುದು. ಮಾನ್ಯ ಕೆ. ಎಚ್. ಶ್ರೀನಿವಾಸ್ ರವರು ರಾಮಕೃಷ್ಣ ಹೆಗಡೆಯವರ ರಾಜಕೀಯದ ಬಗ್ಗೆ ಆಗಲೇ ಮಾತನಾಡಿದಾಗ, ಮುಖ್ಯ ಮಂತ್ರಿ ಗಳು ತಕ್ಷಣ ಎದ್ದು ನಾನು ಮನೆಯಲ್ಲಿ ರಾಮ, ರಾಜಕಾರಣದಲ್ಲಿ ಕೃಷ್ಣ ಎಂದು ಹೇಳಿದರು.

ಅಧ್ಯಕ್ಷರು. — ನೀವು ಏನೇನೋ ಹೇಳುತ್ತಿದ್ದೀರಿ. ಯಾರೂ ಮಾಡದೆ ಇರತಕ್ಕಂತಹ ಭಾಷಣ ವನ್ನು ಜಟ್‌ಪಟ್ ಎಂದು ಮಾಡಿ ಮುಗಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ — ವ್ಯಾಪಾರಸ್ಥರು ಹೇಗೆ ಎರಡು ರೀತಿಯ ಅಕೌಂಟ್‌ನ್ನು ಇಟ್ಟು ಸರಕಾರಕ್ಕೆ ಮೋಸ ಮಾಡುತ್ತಾರೋ ಅದೇ ರೀತಿಯಾಗಿ ಇವರೂ ಕೂಡ ಎರಡು ರೀತಿಯ ಬಜೆಟ್‌ನ್ನು ಮಂಡಿಸಿದ್ದಾರೆ ಹೋದ ಮಾರ್ಚ್‌ನಲ್ಲಿ ನಮಗೆ ಕೊಟ್ಟಂತಹ ಬಜೆಟ್ಟೇ ಬೇರೆ. ಇವರು ಈಗ ಜುಲೈನಲ್ಲಿ ಮಂಡಿಸಿರತಕ್ಕ ಬಜೆಟ್ಟೇ ಬೇರೆ. ಇವರು ಈಗಾಗಲೇ ಹೇಳಿದಂತೆ ಕೃಷ್ಣನ ರೀತಿಯ ರಾಜಕಾರಣವನ್ನು ಮಾಡಿದ್ದಾರೆ. ಬ್ಲಾಕ್‌ಮನಿ ಮತ್ತು ವೈಟ್ ಮನಿ ತರಹ ಇವರ ಅಕೌಂಟ್ ಆಯಿತು. ಇವರು ಇಂತಹ ಒಂದು ಕೆಳ ಮಟ್ಟಕ್ಕೆ ಇಳಿದು ಈ ಬಜೆಟ್‌ನ್ನು ನಮ್ಮ ಮುಂದೆ ಮಂಡಿಸುತ್ತಾರೆಂದು ನಾನು ಭಾವಿಸಿರಲಿಲ್ಲ. ಅವರು ಹೋದ ಸಲ ಅನೇಕ ಆಶ್ವಾಸನೆಗಳನ್ನು ಕೊಟ್ಟಿದರು ಮತ್ತು ಆ ಆಶ್ವಾಸನೆಗಳನ್ನು ಕೊಡವಾಗಲೂ ಹೇಳಿದ್ದರು ಒಂದು ವಿಶಿಷ್ಟವಾದ ತತ್ವ ಜ್ಞಾನದ ಮೇಲೆ ನಮ್ಮ ಪಕ್ಷದ ಧ್ಯೇಯಧೋರಣೆಗಳನ್ನು ಅಳವಡಿಸಿಕೊಂಡು ಜನರಿಗೆ ಸಹಾಯವಾಗತಕ್ಕಂತಹ ರೀತಿಯಲ್ಲಿ,

ಅನುಕೂಲವಾಗತಕ್ಕಂತಹ ರೀತಿಯಲ್ಲಿ ನಮ್ಮ ಬಜೆಟ್ ಇರುತ್ತದೆ ಎಂದು ಮತ್ತು ಅವರು ತಮ್ಮ ಭಾಷಣದಲ್ಲೂ ಹೇಳಿದ್ದಾರೆ.

> "More than 50% of our people still live below the poverty line. Sixty-four percent of our population is illiterate. Nearly 30% of adult population is unemployed. One among nine children die before completing the first year. Nearly 30 lakhs of people in the country are blind of whom 6 lakhs are children who have become blind because of malnutrition,"

ಇದು ಅವರು ಹೇಳಿದಂತಹ ಮಾತು. more than ೫೦ ಪರ್‌ಸೆಂಟ್‌ನಷ್ಟು ಜನರು ಬಿಲೋ ಪಾವರ್ಟಿ ಲೈನ್‌ಗಿಂತ ಕೆಳಗೆ ಇದ್ದಾರೆ. ೬೪ ಪರ್‌ಸೆಂಟ್ ಜನ ಇನ್ನೂ ಇಲ್‌ಲಿಟರೇಟ್ ಇದ್ದಾರೆ, ೩೦ ಪರ್‌ಸೆಂಟ್‌ನಷ್ಟು ಜನರು ನಿರುದ್ಯೋಗದಲ್ಲಿ ಇದ್ದಾರೆ ಎಂದು ಬಜೆಟ್‌ನಲ್ಲಿ ಹೇಳಿದ್ದಾರಲ್ಲ, ಇವರನ್ನು ಮೇಲೆತ್ತುವುದಕ್ಕೆ ಯಾವ ಪ್ರಯತ್ನವನ್ನು ಮಾಡಿದ್ದಾರೆ ? ಯಾವ ರೀತಿಯಾಗಿ ಇಂತಹ ಸೆಕ್ಟಾರ್ ಜನವರಿಗೆ ಅನುಕೂಲ ಮಾಡಿಕೊಟ್ಟರೆ ಒಳ್ಳೆಯದಾದೀತು ಎನ್ನುವುದು ಮಹತ್ವದ ವಿಚಾರವೇ ಹೊರತಾಗಿ, ಕೇವಲ ನಮ್ಮ ಜನ ಈ ರೀತಿಯಾಗಿ ಹಿಂದುಳಿದಿದ್ದಾರೆ ಎಂದರೆ ಯಾವ ರೀತಿಯು ಜನರ ಕಲ್ಯಾಣವನ್ನು ಮಾಡಿದಂತಾಗುತ್ತದೆ ? ಇನ್ನು ೨ನೇಯದಾಗಿ —

> "And for this reason the Private, the Co-operative and the Public Sectors have all failed to achieve our ultimate objective of alround economic development. The benefits or fruits of development have only gone to certain sections of he people."

ಇದು ಅವರೇ ಒಪ್ಪಿಕೊಂಡಿದ್ದಾರೆ. ಇಲ್ಲಿಯವರೆಗೆ ಆದಂತಹ ಯಾವುದೇ ಪ್ರಗತಿಯಾಗಲೀ. ಅದು ಕೇವಲ ಕೆಲವೇ ಜನರಿಗೆ ಮಾತ್ರ ತಲುಪಿದೆಯೆಂದು ಅವರು ತಮ್ಮ ಬಜೆಟ್‌ನಲ್ಲಿ ಹೇಳಿದ್ದಾರೆ. ಜನರಿಗೆ ಸಹಾಯ ಮಾಡುವಾಗ ಯಾವುದೇ ರೀತಿಯಿಂದಲೂ ಅವರು ಮುಂದೆ ಬಂದು ಸಹಾಯ ಮಾಡಿಲ್ಲ. ಈಗಾಗಲೇ ಒಬ್ಬ ಮಿತ್ರರು ಸದನದಲ್ಲಿ ಹೇಳಿದರು. ಮಾನ್ಯ ರಾಜೀವಗೌಡರು ಎಂದು ಕಾಣುತ್ತದೆ, ಸರಕಾರವು ಬರಗಾಲದಲ್ಲಿ ೧೭೫ ಕೋಟಿ ರೂಪಾಯಿಗಳನ್ನು ಈಗಾಗಲೇ ಖರ್ಚು ಮಾಡಿದೆ ಅದಕ್ಕಾಗಿ ಇವತ್ತಿನ ದಿವಸ ಸ್ವಲ್ಪ ಹಣದ ಕೊರತೆ ಇರುವುದರಿಂದ ಡೆವಲಪ್‌ಮೆಂಟ್ ಆಕ್ಟಿವಿಟೀಸ್‌ಗಳನ್ನು ತೆಗೆದುಕೊಳ್ಳುವುದಕ್ಕಾಗಲಿಲ್ಲ ಎನ್ನತಕ್ಕ ಮಾತನು ಅವರು ಹೇಳಿದ್ದಾರೆ. ಆದರೆ ಇದು ಒಂದೇ ಕಾರಣವಲ್ಲ, ಅದು ಒಂದೇ ಕಾರಣ ಇದ್ದಿದ್ದರೆ ಇಂತಹ ಪರಿಸ್ಥಿತಿಯು ಮಾರ್ಚ್ ತಿಂಗಳಲ್ಲೂ ಕೂಡ ಇತ್ತು. ಆದಕ್ಕೆ ಜುಲೈನಲ್ಲಿ ಒಂದು ಮಾರ್ಚ್‌ನಲ್ಲಿ ಒಂದು ಹೇಳಿಕೆ ಕೊಡತಕ್ಕಂಥಾದ್ದು ಸರಿಯಲ್ಲ. ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಅಗ್ರಿಕಲ್ಚರಲ್ ಅಂಡ್ ಅಲೈಡ್ ಸರ್‌ವೀಸಸ್‌ಗೆ ಮೊದಲು ಇಟ್ಟ ಹಣ ೫೩ ಕೋಟಿ ರೂಪಾಯಿಗಳು, ಈಗ ಅದನ್ನು ಕಡಿಮೆ ಮಾಡಿ ೩೬.೫೫ ಲಕ್ಷ ಇಟ್ಟಿದ್ದಾರೆ. ಇದೇ ರೀತಿಯಾಗಿ ಮೈನರ್ ಇರಿಗೇಷನ್‌ಗೆ ಆವಾಗ ೩೬ ಕೋಟಿ ಇದ್ದುದ್ದು ಈಗ ೨೬ ಕೋಟಿ ರೂಪಾಯಿ ಇಟ್ಟಿದ್ದಾರೆ. ಅಂದರೆ ಇದರಲ್ಲಿ ೧೦ ಕೋಟಿ ರೂಪಾಯಿಗಳು ಕಡಿಮೆಯಾಯಿತು, ಮೊದಲು ಹೇಳಿದ್ದಕ್ಕೆ ೨೦ ಕೋಟಿ ರೂಪಾಯಿಗಳು ಕಡಿಮೆಯಾಯಿತು. ಹೀಗೆ ಪ್ರತಿಯೊಂದರಲ್ಲೂ ಕಡಿಮೆ ಇದೆ. ಇನ್ನು ಮೇಜರ್ ಇರಿಗೇಷನ್‌ಗೆ ಈಗ ೮೬ ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಮುಂಚೆ ಅವರು ಇದಕ್ಕೆ ಇಟ್ಟಿದ್ದು ೯೮ ಕೋಟಿ ರೂಪಾಯಿ. ಇದೇ ರೀತಿ ಪವರ್ ಪ್ರಾಜೆಕ್ಟ್‌ಗೂ ಕಡಿಮೆಯಾಗಿದೆ. ಸಂಪನ್ಮೂಲಗಳನ್ನು ಯಾವ ಯಾವ ರೀತಿಯಿಂದ ದೊರಕಿಸಿಕೊಳ್ಳಬೇಕಾಗಿತ್ತೋ ಅದನ್ನು ಸಾಧಿಸಲಿಕ್ಕೆ ಇವರು ವಿಫಲರಾಗಿದ್ದಾರೆಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ರಿಸೋರ್ಸಸ್‌ಗಳನ್ನು ಚೆನ್ನಾಗಿ ಮಾಡಿಕೊಳ್ಳುವುದಕ್ಕೆ ಹೆಚ್ಚಿನ ಮಹತ್ವವನ್ನು ಕೊಡಬೇಕೆಂದು ಒತ್ತಿಒತ್ತಿ ಹೇಳಿ ಹಿಂದಿನ ಸರ್ಕಾರವನ್ನು ದೂಷಿಸುತ್ತಿದ್ದರು. ಹಾಗೆಯೇ ಇವರು ಕ್ಲಿಯರ್ ಆಗಿ ಆ ಸೆಕ್ಟಾರ್‌ಗಳಿಗೆ ಹೆಚ್ಚಿನ

ಹಣವನ್ನು ಒದಗಿಸಿಕೊಡಬಹುದಾಗಿತ್ತು. ಆದರೆ ಇವರು ಒದಗಿಸಿಕೊಟ್ಟಿಲ್ಲ. ಈ ರೀತಿ ಇವರು ಹಣದ ಕೊರತೆಯಿಂದ ಮಾಡಲಿಲ್ಲವೆಂದರೆ ಅದರಿಂದ ಕೆಲವು ಭಾಗಗಳಿಗೆ ಅನ್ಯಾಯ ಕೂಡ ಆಗುತ್ತಿದೆ. ಈಗಾಗಲೇ ನಮ್ಮ ಕುಮಾರಗೌಡರು ಹೇಳಿದಂತೆ ಸರಿಯಾಗಿ ಹಣ ಕೊಡದೇ ಹೋದರೆ ಈ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನ್ನು ಮುಗಿಸಬೇಕಾದರೆ ಇನ್ನು ೨೦-೩೦ ವರ್ಷಗಳು ಜಾಸ್ತಿ ಬೇಕಾಗುತ್ತದೆ. ಈ ಯೋಜನೆ ಪ್ಲಾನ್ಡ್ ಆಗಿರುತ್ತದೆ. ಆದುದರಿಂದ ವರ್ಲ್ಡ್ ಬ್ಯಾಂಕ್‌ನಿಂದ ಬರುವ ಹಣವನ್ನು ಇದಕ್ಕೆ ಉಪಯೋಗಿಸಿ ಈ ಪ್ರಾಜೆಕ್ಟ್ ಬೇಗ ಮುಗಿಸುವಂತಹ ಏರ್ಪಾಡು ಮಾಡಬೇಕು. ಇವತ್ತಿನ ದಿವಸ ಈ ಯೋಜನೆಗೆ ನಿಮ್ಮ ಬಜೆಟ್‌ನಲ್ಲಿ ಕೇವಲ ೩೦ ಕೋಟಿ ರೂಪಾಯಿಗಳನ್ನು ಇಟ್ಟು ಕಾವೇರಿ ಬೆಸಿನ್‌ಗೆ ೬೦ ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಅವರಿಗೆ ಕೊಡಬಾರದೆಂದು ನಾನು ಹೇಳುವುದಿಲ್ಲ, ಅವರಿಗೂ ಕೊಡಿ. ಆದರೆ ನ್ಯಾಯವಾಗಿ ಎಲ್ಲಿ ಹೆಚ್ಚು ಕೊಡಬೇಕೋ ಆ ಕಡೆ ಕೊಡಿ ಎಲ್ಲಿ ಜನರು ಇನ್ನೂ ತೊಂದರೆಯಲ್ಲಿ ಇದ್ದಾರೆ ಅಂತಹ ಕಡೆ ಲಕ್ಷ್ಯ ಕೊಡದೆ ನಿಮಗೆ ಅನುಕೂಲವಾಗುವ ಕಡೆಗೆ ಹೆಚ್ಚು ಸಹಾಯ ಮಾಡುತ್ತಿದ್ದೀರಿ. ಅಲ್ಲಿರುವ ಬಡ ಜನಕ್ಕೆ ಯಾರು ದಿಕ್ಕಿಲ್ಲ. ಅಲ್ಲಿನ ರೈತರಿಗೆ ಪ್ರೋತ್ಸಾಹ ನೀಡುತ್ತಿಲ್ಲ, ಅದೂ ಅಲ್ಲದೇ ದುರ್ದೈವದಿಂದ ನಮ್ಮ ಭಾಗ ದಿಂದ ಯಾವ ಮಂತ್ರಿಗಳೂ ಕೂಡ ಆಗಿಲ್ಲ. ರಾಯಚೂರಿಗೂ ಒಂದು ಸ್ಟೇಟ್ ಮಿನಿಸ್ಟರ್ ಬೀದರ್‌ಗೂ ಸ್ಟೇಟ್ ಮಿನಿಸ್ಟರ್ ಗುಲ್ಬರ್ಗಾಕ್ಕಂತೂ ಯಾರು ಇಲ್ಲವೇ ಇಲ್ಲ. ಬಿಜಾಪುರದ ಜಿಲ್ಲೆ ಯವರಾದ ಮಾನ್ಯ ದೇಶ್‌ಮುಖ್‌ರವರು ಒಳ್ಳೆಯ ಸ್ವಭಾವದ ವ್ಯಕ್ತಿಗಳು, ಅವರು ಯಾರ ಮೇಲೆ ಪ್ರಭಾವ ಬೀರತಕ್ಕಂತಹ ಶಕ್ತಿ ಅವರಿಗೆ ಇದೆಯೋ ಇಲ್ಲವೋ ಗೊತ್ತಿಲ್ಲ ಅನೂ ಅಲ್ಲದೇ ನ್ಯಾಯ ದೊರಕಿಸಿ ಕೊಡಿ ಎಂದು ಕೇಳತಕ್ಕಂತಹ ಜನ ಮೊದಲೇ ಇಲ್ಲ, ಅದಕ್ಕೇ ಇವರು ಆ ಜಿಲ್ಲೆಗಳನ್ನು ಹಾಗೆಯೇ ಬಿಟ್ಟಿದ್ದಾರೆಂದು ಕಾಣುತ್ತದೆ. ಮೇಜರ್ ಇರಿಗೇಷನ್‌ನಲ್ಲಿ ಮತ್ತು ಮೀಡಿಯಮ್ ಇರಿಗೇಷನ್‌ನಲ್ಲಿ ಯಾವ ರೀತಿ ಅಭಿವೃದ್ಧಿಗೆ ಪ್ರೋತ್ಸಾಹ ಕೊಟ್ಟಿದ್ದಾರೆಂದು ನೋಡಿದರೆ ಯಾವ ಪ್ರಾಜೆಕ್ಟ್‌ಗೂ ಕೂಡ ಇವತ್ತಿನ ದಿವಸ ಹೆಚ್ಚು ಹಣ ಕೊಟ್ಟಿಲ್ಲ. ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಇರಬಹುದು, ಬೀದರ್‌ನ ಕಾರಂಜಾ ಪ್ರಾಜೆಕ್ಟ್ ಇರಬಹುದು, ಗುಲ್ಬರ್ಗಾದ ಅಮರೆಜ್ ಮತ್ತು ಬೆಣ್ಣೆತೂರಾ ಇರಬಹುದು, ಚಿಂಚೋಳಿಯಲ್ಲಿ 'ಮುಲ್ಲಾಮಾರಿ' ಪ್ರಾಜೆಕ್ಟ್ ಇರಬಹುದು ಬಸವ ಕಲ್ಯಾಣದ 'ಅಪ್ಪರ್ ಮುಲ್ಲಾಮಾರಿ' ಪ್ರಾಜೆಕ್ಟ್ ಇರಬಹುದು ಇವುಗಳಲ್ಲಿ ಸರಿಯಾಗಿ ಹಣವನ್ನೇ ಕೊಟ್ಟಿಲ್ಲ. ಅಲ್ಲಿ ಕೆಲಸ ಮಾಡತಕ್ಕಂತಹ ಜನರಿಗೆ ಸ್ಯಾಲರಿಯನ್ನು ಕೊಟ್ಟಿಲ್ಲವೆಂದು ತಿಳಿದು ಬಂದಿದೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಇವರು ಪ್ರಾಜೆಕ್ಟ್‌ಗಳನ್ನು ಇಟ್ಟಿದ್ದಾರೆ, ಆದುದರಿಂದ ಇನ್ನು ಮುಂದೆ ಇರಿಗೇಷನ್ ಪ್ರಾಜೆಕ್ಟ್‌ಗಳಿಗೆ ಹೆಚ್ಚಿನ ಹಣವನ್ನು ಇಡಬೇಕೆಂದು ತಮ್ಮ ಮುಖಾಂತರ ಒತ್ತಾಯಿಸುತ್ತೇನೆ. ಇದಕ್ಕೆ ಹೆಚ್ಚಿನ ಹಣವನ್ನು ದೊರಕಿಸಿಕೊಟ್ಟು ಮುಖ್ಯ ಮಂತ್ರಿಗಳು ಅನುಕೂಲ ಮಾಡಿಕೊಡಬೇಕು.

ಅಧ್ಯಕ್ಷರು.—ಮಾನ್ಯ ಖರ್ಗೆಯವರೇ, ನಿಮಗೆ ೧೫ ನಿಮಿಷ ಮಾತ್ರ ಟೈಮ್ ಕೊಟ್ಟಿದ್ದೇನೆ. ಈಗಾಗಲೇ ೧೦ ನಿಮಿಷ ಆಯಿತು, ಇನ್ನು ೫ ಮಿನಿಟುಗಳು ಮಾತ್ರ ಇದೆ, ಆದುದರಿಂದ ಬೇಗ ಮುಗಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಅಧ್ಯಕ್ಷರೇ ಮಾನ್ಯ ಜೆ. ಹೆಚ್. ಪಟೇಲ್‌ರವರು ಇಂಡಸ್ಟ್ರಿ ಮಂತ್ರಿಗಳು ಆದ ಮೇಲೆ ನಾವು ತಿಳಿದುಕೊಂಡದ್ದೇನೆಂದರೆ. ಈ ಇಂಡಸ್ಟ್ರೀ ವಿಷಯದಲ್ಲಿ ಬಹಳ ಮುನ್ನ ಡೆಯುತ್ತೇವೆ ಎಂದು. ಏಕೆಂದರೆ ಅವರು ಹಿಂದಿನಿಂದಲೂ ಸಮಾಜವಾದದ ತತ್ವಗಳ ಮೇಲೆ ವಿಶ್ವಾಸ ವನ್ನು ಇಟ್ಟವರು. ಆ ತತ್ವಗಳ ಆಧಾರದ ಮೇಲೆ ಜನರ ಉದ್ಧಾರವನ್ನು ಕಲ್ಯಾಣವನ್ನು ಮಾಡಬೇಕೆನ್ನುವ ದಾರಿಯಲ್ಲಿ ನಡೆಯತಕ್ಕವರು ಎಂದು ತಿಳಿದುಕೊಂಡಿದ್ದೇವೆ ಆ ದಿಶೆಯಲ್ಲಿ ಈ ಪಬ್ಲಿಕ್ ಅಂಡರ್ ಟೇಕಿಂಗ್ಸ್ ಏನಿವೆ ಮತ್ತು ಪಬ್ಲಿಕ್ ಸೆಕ್ಟಾರ್‌ನಲ್ಲಿ ಕೆಲಸ ಮಾಡತಕ್ಕಂತಹ ಇಂಡಸ್ಟ್ರಿಗಳು ಏನಿವೆ ಅವುಗಳ ಬಗ್ಗೆ ಹೆಚ್ಚು ಸಹಾಯ ಮಾಡುತ್ತಾರೆಂದು ಭಾವಿಸಿದ್ದೆ. ಹಾಗೂ ಜನರಿಗೆ ಅನುಕೂಲ ಮಾಡಿಕೊಡ ತ್ತಾರೆಂದು ಭಾವಿಸಿದ್ದೆ. ಆಗೆಯೇ ಜನರಿಗೆ ಸಹಾಯ ಮಾಡತಕ್ಕಂತಹ ದೃಷ್ಟಿಯಿಂದ ಹೆಚ್ಚಿನ ಇಂಡಸ್ಟ್ರಿ ಗಳನ್ನು ತಯಾರು ಮಾಡುತ್ತಾರೆಂದು ಭಾವಿಸಿದ್ದೆ. ಆದರೆ ಹಾಗೆ ಆಗಲಿಲ್ಲ. ಅವರು ಅಧಿಕಾರ ವಹಿಸಿ ಕೊಂಡು ಒಂದೇ ತಿಂಗಳಲ್ಲಿಯೇ ಎಲ್ಲೆಲ್ಲಿ ಪಬ್ಲಿಕ್ ಅಂಡರ್‌ಟೇಕಿಂಗ್ ಇಂಡಸ್ಟ್ರೀಗಳು ಇವೆ. ಅವೆಲ್ಲವನ್ನೂ ಸಾಧ್ಯವಾದರೆ ಸುಧಾರಿಸುತ್ತೇನೆ. ಇಲ್ಲದೇ ಹೋದರೆ ಬೇರೆಯವರಿಗೆ ಕೊಡುತ್ತೇನೆ ಎನ್ನುವ ಮಾತನ್ನು

ಹೇಳಲು ಪ್ರಾರಂಭ ಮಾಡಿದರು. ನಮ್ಮವರು ಅಧಿಕಾರದಲ್ಲಿ ಇದ್ದಾಗಲೂ ಕೂಡಾ ಅವುಗಳು ಇದ್ದವು. ಕೆ.ಎಸ್.ಆರ್.ಟಿ.ಸಿ. ಇರಬಹುದು ಅಥವಾ ಬೇರೆ ಯಾವುದೇ ಇರಬಹುದು. ಅವುಗಳನ್ನು ನಮಗೇ ಸುಧಾರಣೆ ಮಾಡಲಿಕ್ಕೆ ಆಗದೇ ಹೋದರೆ ನಾಳೆ ಇದನ್ನು ಸುಧಾರಣೆ ಮಾಡುವವರು ಯಾರು? ಒಂದು ವೇಳೆ ನೀವು ಈ ಪಬ್ಲಿಕ್ ಸೆಕ್ಟರ್‌ಗಳನ್ನು ಬೇಡವೆಂದು ಬಿಟ್ಟು, ಬಿಟ್ಟರೆ ನಾಳೆ ನೀವು ಯಾವುದೇ ಒಂದು ಒಳ್ಳೆಯ ಕೆಲಸಕ್ಕೆ ಅದನ್ನು ಪುನಃ ತರಬೇಕಾದರೂ ಕೂಡಾ ಆಗ ಜನರು ಅದಕ್ಕೆ ಒಪ್ಪಿಗೆ ಕೊಡುವುದಿಲ್ಲ. ಅದಕ್ಕಾಗಿ ತಾವುಗಳು ಬೇರೆಯವರಿಗೆ ಕೊಡತಕ್ಕಂತಹ ಮನಸ್ಸನ್ನು ಮಾಡಬಾರದು ಎಂದು ನಾನು ಹೇಳುತ್ತೇನೆ. ಅವುಗಳನ್ನು ಸುಧಾರಿಸಲು ಯತ್ನ ಪಡಬೇಕು. ಈಗ ಬ್ಯಾಂಕ್ ರಾಷ್ಟ್ರೀಕರಣ ಮಾಡಿದುದರಿಂದ ಅಸಂಖ್ಯಾತ ಜನರಿಗೆ ಅದರಿಂದ ಅನುಕೂಲವಾಯಿತು. ಇದು ಎಲ್ಲರೂ ಒಪ್ಪತಕ್ಕಂತಹ ಮಾತು. ಆದರೆ ಅಂತಹ ಒಂದು ಪ್ರಗತಿಪರವಾದಂತಹ ಕಾರ್ಯಕ್ರಮಕ್ಕೂ ಸಹಿತ ಟೀಕೆ ಮಾಡಿದಂಥ ಜನರೂ ಇದ್ದಾರೆ. ಇವೊತ್ತು ಬ್ಯಾಂಕ್ ರಾಷ್ಟ್ರೀಕರಣ ಮಾಡಿದ್ದು ತಪ್ಪು ಎಂದು ವಾದ ಮಾಡಿದರೆ, ಅದು ಮುಂದಿನ ಪೀಳಿಗೆ ಮೇಲೆ ಬೇರೆ ಬೇರೆ ಅಭಿಪ್ರಾಯಕ್ಕೆ ಬರುವಂತೆ ಮಾಡಿದ ಹಾಗೆ ಆಗುತ್ತದೆ. ಇದರ ಬಗ್ಗೆ ಹಿಂದೆ ಇದ್ದಂತಹ ಅನುಭವದ ಆಧಾರದ ಮೇಲೆ ಇವುಗಳು ಬೇಡ ಎಂದರೆ ಎಲ್ಲರೂ ಒಪ್ಪುತ್ತಾರೆ ಎನ್ನುವಂತಿಲ್ಲ. ವಿ.ಎಸ್.ಐ.ಎಲ್. ನಂತಹ ಕಾರ್ಖಾನೆಯ ಬಗ್ಗೆಯೂ ಸಚಿವರು ಹೇಳಿದ್ದಾರೆ. ಲಾಸ್‌ನಲ್ಲಿ ಇರತಕ್ಕಂತಹ ಇಂಡಸ್ಟ್ರೀಗಳನ್ನು ಕೇಂದ್ರ ಸರ್ಕಾರಕ್ಕಾದರೂ ವಹಿಸಿಕೊಡಿ, ಟಾಟಾ ಅಥವಾ ಇನ್ನಿತರ ಯಾರಾದರೂ ಒಳ್ಳೆಯ ರೀತಿಯಲ್ಲಿ ನಡೆಸತಕ್ಕವರಿಗೆ ವಹಿಸಿಕೊಡಿ ಎಂದು ಹೇಳಿದ್ದಾರೆ. ಹಾಗಾದರೆ ಏನು ಗತಿ ಆದೀತು? ಅದರಂತೆ ನಮ್ಮ ಮಾನ್ಯ ಸಿಂಧ್ಯರವರು ಕೂಡಾ ಕೆಲವು ರೂಲ್ಸ್‌ಗಳನ್ನು ರಾಷ್ಟ್ರೀಕರಣ ಮಾಡುತ್ತೇವೆಂದು ಹೇಳುತ್ತಾ ಇದ್ದಾರೆ. ಮೊನ್ನೆ ಕೂಡಾ ಅವರು ಹೇಳಿದರು. ರಾಯಚೂರು, ಗುಲ್ಬರ್ಗ, ಬೀದರ್ ಹಾಗೂ ಚಿತ್ರದುರ್ಗಗಳಲ್ಲಿನ ಕೆಲವು ರೂಟ್ಸ್‌ಗಳನ್ನು ರಾಷ್ಟ್ರೀಕರಣ ಮಾಡುತ್ತೇವೆಂದು ಹೇಳಿದರು. ಆದರೆ ಇದನ್ನು ಕೂಡಾ ಎಲ್ಲರೂ ಒಪ್ಪುವುದಿಲ್ಲ. ಈ ರೂಟ್‌ಗಳನ್ನು ಏಕೆ ನೀವು ನ್ಯಾಷನಲೈಸ್ ಮಾಡುತ್ತೀರಾ ಎಂದು ನಮ್ಮಲ್ಲಿ ಇರತಕ್ಕಂತಹ ಶಾಸಕರೂ, ನಿಮ್ಮಲ್ಲಿರತಕ್ಕಂತಹ ಶಾಸಕರೂ ಕೇಳಬಹುದು. ನಿಮಗೆ ಸಪೋರ್ಟ್ ಮಾಡಿರತಕ್ಕಂತಹ ಕೆಲವು ಕಾರ್ಯಕರ್ತರೂ ಪ್ರಶ್ನಿಸಬಹುದು. ಆದುದರಿಂದ ದಯವಿಟ್ಟು ಇಂತಹ ಒಂದು ತತ್ವಕ್ಕೆ ಧಕ್ಕೆ ಬರದ ರೀತಿಯಲ್ಲಿ ತಾವು ನಡೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ ಮತ್ತು ಆ ಒಂದು ತತ್ವವನ್ನು ಇನ್ನೂ ಭಿನ್ನವಾದ ರೀತಿಯಲ್ಲಿ ತಾವುಗಳು ಬೇರೆಯವರಿಗೆ ಮನವರಿಕೆ ಮಾಡಿಕೊಟ್ಟು ಎಲ್ಲಾ ಇಂಡಸ್ಟ್ರೀಗಳಿಗೂ ನೀವು ಪ್ರೋತ್ಸಾಹ ಕೊಡತಕ್ಕದ್ದು ಮುಖ್ಯವಾದುದಾಗಿದೆ. ಅದು ಏನಾದರೂ ತಪ್ಪಾಗಿ ನಡೆದರೆ ಅದನ್ನು ದುರಸ್ತಿ ಮಾಡೋಣ. ತಲೆ ನೋವು ಇದೆಯೆಂದು ಹೇಳಿ ತಲೆಯನ್ನೇ ಕಡಿದುಕೊಳ್ಳುವುದಕ್ಕಾಗುವುದಿಲ್ಲ. ಹಾಗೆ ಮಾಡುವುದು ಸರಿಯಲ್ಲ. ಏನಾದರೂ ಗುಳಿಗೆಯನ್ನು ತೆಗೆದುಕೊಂಡು ವಾಸಿ ಮಾಡಿಕೊಳ್ಳಬೇಕು. ನೀವೂ ಕೂಡಾ ಅವುಗಳನ್ನು ಚೇತರಿಸುವ ದಿಶೆಯಲ್ಲಿ ಯತ್ನ ಪಡಬೇಕು. ಈ ರೀತಿಯಾಗಿ ಲಾಸ್ ಆಗಿರುವುದನ್ನು ನೋಡಿದರೆ ನಮಗೆ ಮುಂದೆ ನೋಡುವುದಕ್ಕಾಗುವುದಿಲ್ಲ. ದಿವಾಳಿ ಎದ್ದು ಹೋಗುತ್ತದೆ ಎಂದು ಹೇಳಿದರೆ ಹೇಗೆ? ನಿಮ್ಮ ತತ್ವಕ್ಕೂ ಇದೇ ಪರಿಸ್ಥಿತಿ ಆದರೆ ನೀವು ಹೇಗೆ ಸುಧಾರಿಸುತ್ತೀರಾ? ಹಾಗಾದರೆ ಆ ತತ್ವಗಳನ್ನು ನೀವು ಬಿಡಬೇಕಾಗುತ್ತದೆ. ನಿಮಗೆ ಇರತಕ್ಕಂತಹ ಕನ್ವಿಕ್ಷನನ್ನು ಬಿಟ್ಟು ಪ್ರೈವೇಟ್ ಸೆಕ್ಟರನ್ನು ನಾವು ಎಲ್ಲರೂ ಒಪ್ಪಿಕೊಂಡು ಅದೇ ಚೆನ್ನಾಗಿದೆ ಎಂದು ಹೋಗಬೇಕಾಗಿದೆ, ಅದರ ಹೊರತಾಗಿ ಬೇರೆ ಮಾರ್ಗವಿಲ್ಲ ಎಂದ ಹಾಗೆ ಆಯಿತು. ಅದಕ್ಕಾಗಿ ಮಾನ್ಯ ಜೆ.ಹೆಚ್. ಪಟೇಲ್‌ರವರು ಇದನ್ನು ಪುನಃ ಪರಿಶೀಲನೆ ಮಾಡಬೇಕು. ಅದಕ್ಕೆ ಮುಖ್ಯಮಂತ್ರಿಗಳಾಗಲೀ, ಅಥವಾ ಇವರೇ ಆಗಲಿ ಒಂದು ಹೇಳಿಕೆ ಕೊಟ್ಟು ಗೊಂದಲ ಎಬ್ಬಿಸಬಾರದು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಈಗ ಸರ್ಕಾರಿ ಕಚೇರಿಗಳಲ್ಲಿ ಐದು ದಿನಗಳ ವಾರ ಎಂದು ಮಾನ್ಯ ಮುಖ್ಯಮಂತ್ರಿಗಳು ಅನೌನ್ಸ್ ಮಾಡಿದ್ದಾರೆ. ಈ ರೀತಿಯಲ್ಲಿ ದೆಹಲಿಯಲ್ಲಿಯೂ ಕೇಂದ್ರ ಸರ್ಕಾರದವರು ನಮ್ಮ ಪ್ರಧಾನ ಮಂತ್ರಿಯವರು ಮಾಡಿದ್ದಾರೆ ಈ ವಿಷಯದಲ್ಲಿ ನಾವುಗಳು ಏನಾದರೂ ಹೇಳಿದರೆ ಏನು ಹೇಳುತ್ತಾರೆ ಎಂದರೆ ಡೆಲ್ಲಿಯಲ್ಲಿ ಮಾಡಿದ್ದಾರೆ. ಆದರೆ ನೀವು ಏತಕ್ಕೆ ವಿರೋಧ ಮಾಡಲಿಲ್ಲ? ಇಲ್ಲಿ ಮಾತ್ರ ಏಕೆ ವಿರೋಧ ಮಾಡುತ್ತೀರಾ? ಎಂದು ಕೇಳುತ್ತಾರೆ. ಇಲ್ಲಿಯೂ ಮಾಡಲಿ ಅದಕ್ಕೆ ವಿರೋಧ ಮಾಡುತ್ತೇವೆಂದು ಅಲ್ಲ. ನಮ್ಮ ಪ್ರಶ್ನೆ ಇಷ್ಟೇ ಇವೊತ್ತು ಆರು ದಿನಗಳ ವಾರ ಇದ್ದರೂ ಕೂಡಾ ಸರಿ

ಯಾಗಿ ಸರಕಾರಿ ಕೆಲಸಕಾರ್ಯಗಳು ಆಗುತ್ತಾ ಇಲ್ಲ. ಇವೊತ್ತು ನಾವು ಯಾವುದೇ ಒಂದು ಕಾಗದ ಪತ್ರಗಳನ್ನು ಕೊಟ್ಟರೆ ಆ ಕೆಲಸ ಆಗಬೇಕಾಗಿದ್ದು ಸುಮಾರು ಎರಡು ತಿಂಗಳು, ಮೂರು ತಿಂಗಳು ಆಗುತ್ತವೆ ನಮ್ಮಂತಹವರ ಕೆಲಸ ಕೂಡತ್ವರಿತವಾಗಿ ಆಗುವುದಿಲ್ಲ. ಅಂದ ಮೇಲೆ ಸಾಮಾನ್ಯರಗತಿ ಏನಾಗಿದ್ದೀತು? ಆದುದರಿಂದ ಈಗ ನೀವು ಆರು ದಿನಗಳ ವಾರದ ಕೆಲಸವನ್ನು ತೆಗೆದು ಐದು ದಿನಗಳ ವಾರವನ್ನು ಮಾಡಿದರೆ ಖಂಡಿತವಾಗಿಯೂ ಇದರಿಂದ ಎಫಿಷಿಯನ್ಸಿ ತರಿಸುವುದಕ್ಕೆ ಸಾಧ್ಯವಿಲ್ಲ. ಅಷ್ಟೇ ಅಲ್ಲ ಮತ್ತೂ ಹೆಚ್ಚು ಹೆಚ್ಚಾಗಿ ಡಿಲೇ ಆಗುತ್ತದೆ. ಎನ್ನುವ ಮಾತನ್ನು ಹೇಳಬೇಕಾಗುತ್ತದೆ. ಈಗಾಗಲೇ ನಮ್ಮ ದೇಶದಲ್ಲಿ ಬೇಕಾದಷ್ಟು ರಜಾ ದಿನಗಳು ಇವೆ. ಮುಖಂಡರ ಹೆಸರಿನಲ್ಲಿ ರಜೆ, ದೇವರ ಹೆಸರಿನಲ್ಲಿ ರಜೆ ಎಂದೆಲ್ಲಾ ಇದೆ. ಇದ್ದುದಕ್ಕೆ ಇನ್ನೂ ನೀವು ಅಡಿಶನ್ ಮಾಡಿದರೆ ನಿಮ್ಮ ಯಾವ ಕಾರ್ಯ ಸಾಧನೆ ಆಗುತ್ತದೆ? ಈ ಐದು ದಿನಗಳ ವಾರದಲ್ಲಿ ಸಿಬ್ಬಂದಿ ವರ್ಗದವರು ಶುಕ್ರವಾರ ಮಧ್ಯಾಹ್ನ ಮೂರು ಘಂಟೆಗೆ ಕಛೇರಿ ಬಿಟ್ಟು ತಮ್ಮ ಊರಿಗೆ ಹೋಗಿ ಸೋಮವಾರ ಮಧ್ಯಾಹ್ನ ಬರುತ್ತಾರೆ. ಇದು ಬೇರೆ ಕಡೆಯಿಂದ ಬಂದಂತಹವರ ಕತೆಯಾಗುತ್ತದೆ. ತಾಲ್ಲೂಕು ಮಟ್ಟದಲ್ಲಿ ಇನ್ನೂ ಕೆಟ್ಟ ಪರಿಸ್ಥಿತಿ ಉಂಟಾಗುತ್ತದೆ. ಒಟ್ಟಿನಲ್ಲಿ ೪ ದಿನಗಳ ವಾರದ ಹಾಗೆ ಆಗುತ್ತದೆ. ಅದಕ್ಕಾಗಿ ಇದನ್ನು ತಾವು ದಯಮಾಡಿ ತೆಗೆಯಬೇಕು ಎಂದು ನನಗನ್ನಿಸುತ್ತದೆ ಆದುದರಿಂದ ಮೊದಲು ಯಾವ ರೀತಿಯಲ್ಲಿ ಇತ್ತೋ ಅದನ್ನು ಮುಂದುವರಿಸಿ ಸರ್ಕಾರಿ ನೌಕರರ ಎಫಿಶಿಯೆನ್ಸಿಯನ್ನು ಹೆಚ್ಚಿಸಬೇಕೆಂದು ನಾನು ಸಲಹೆಯನ್ನು ಕೊಡಲು ಇಚ್ಛಿಪಡುತ್ತೇನೆ.

ಅಧ್ಯಕ್ಷರು — ಖರ್ಗೆಯವರೇ ಬೇಗನೇ ತಾವು ಮುಗಿಸಬೇಕು.

ಶ್ರೀ ಎಸ್ ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಸದಸ್ಯರಾದ ಶ್ರೀಮಾನ್ ಕೆ ಹೆಚ್. ಶ್ರೀನಿವಾಸ್ ರವರು ಮಾತನಾಡುತ್ತಾ ಯೋಜನೇತರ ವೆಚ್ಚಗಳಿಗೆ ಕಡಿಮೆ ಹಣವನ್ನು ಒದಗಿಸಿ ಕೊಟ್ಟಿದ್ದಾರೆಂದು ಹೇಳಿದರು. ಈಗ ಸರ್ಕಾರ ಜನತಾ ಮನೆಗಳನ್ನು ಕಟ್ಟಿಸಿಕೊಡಬೇಕಾದರೂ ಹಾಸ್ಟಲ್‌ಗಳನ್ನು ಕಟ್ಟಿಸಿಕೊಡಬೇಕಾದರೂ ತಮ್ಮ ಚುನಾವಣೆಯ ಭರವಸೆಯ ಪ್ರಕಾರ ಬಡ ಜನರಿಗೆ ಸೀರೆ ಮತ್ತು ಪಂಚೆಗಳನ್ನು ಕೊಡಬೇಕಾದರೂ, ಸಹ ಈ ಯೋಜನೇತರ ವೆಚ್ಚದಲ್ಲಿ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಆದರೆ ತಾವು ಅಂತಹ ಯಾವುದೇ ಯೋಜನೆಗಳನ್ನು ರೂಪಿಸಿ ಆ ಯೋಜನೆಗಳಿಗೆ ಇಂತಿಷ್ಟು ಹಣ ಎಂದು ತಮ್ಮ ಆಯವ್ಯಯ ಪಟ್ಟಿಯಲ್ಲಿ ತೋರಿಸಿಲ್ಲ ಆ ಬಗ್ಗೆ ಯಾವುದೇ ರೀತಿಯ ಸ್ಪಷ್ಟ ಚಿತ್ರವನ್ನು ಸಹ ಇಲ್ಲಿ ಕೊಟ್ಟಿಲ್ಲ. ಹರಿಜನ ಗಿರಿಜನರಿಗೆ ಮತ್ತು ಹಿಂದುಳಿದ ವರ್ಗದವರಿಗೆ ಹಾಗೂ ಇತರೆ ಜನಾಂಗದವರಿಗೆ ಇಂತಿಷ್ಟು ಹಾಸ್ಟಲ್‌ಗಳನ್ನು ಕಟ್ಟಿಸಿಕೊಡಲು ಇಷ್ಟು ಹಣವನ್ನು ನಾವು ಈ ಸಾರಿಯು ಆಯವ್ಯಯ ಪಟ್ಟಿಯಲ್ಲಿ ಇಟ್ಟಿದ್ದೇವೆಂದು ಎಲ್ಲಿಯೂ ಹೇಳಿಲ್ಲ. ಆ ಬಗ್ಗೆ ಬರಿ ಎರಡು ಲೈನ್‌ಗಳನ್ನು ಮಾತ್ರ ಆಯವ್ಯಯ ಪಟ್ಟಿಯಲ್ಲಿ ನಮೂದು ಮಾಡಿದ್ದೀರಿ. ಅದೇನೆಂದರೆ ಹರಿಜನ ಮತ್ತು ಗಿರಿಜನ ಹಾಗೂ ಹಿಂದುಳಿದ ವರ್ಗದವರಿಗೆ ಹೆಚ್ಚಿನ ಆದ್ಯತೆಯನ್ನು ಕೊಡಲಾಗುವುದೆಂದು. ಆದರೆ ತಾವು ಎಷ್ಟು ಜನ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪಾಸಾಗಿ ಕಾಲೇಜಿಗೆ ಬರುತ್ತಾರೆ, ಎಷ್ಟು ಜನ ವಿದ್ಯಾರ್ಥಿಗಳು ಪ್ರಾಥಮಿಕ ಶಾಲೆಯಿಂದ ಮಾಧ್ಯಮಿಕ ಶಾಲೆಗೆ ಬರುತ್ತಾರೆ ಎನ್ನುವ ಅಂಕಿಅಂಶಗಳನ್ನು ಏನಾದರೂ ಸಂಗ್ರಹಣೆ ಮಾಡಿದ್ದೀರಾ ? ಇಲ್ಲ. ಮತ್ತೆ ಎಷ್ಟು ಜನ ಹೈಸ್ಕೂಲ್‌ಗೆ ಬರುತ್ತಾರೆ ಎನ್ನುವ ಬಗ್ಗೆ ಕೂಡ ಮಾಹಿತಿಯನ್ನು ಸಂಗ್ರಹಣೆ ಮಾಡಿಲ್ಲ. ಬರೀ ಆದ್ಯತೆಯನ್ನು ಕೊಟ್ಟಿದ್ದೇವೆಂದು ಹೇಳಿದರೆ ನನಗೆ ಆಶ್ಚರ್ಯವಾಗುತ್ತದೆ, ಇನ್ನು ತಾವು ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕಗಳನ್ನು ಕೊಟ್ಟಿದ್ದೀರಿ. ಆ ಬಗ್ಗೆ ತಮ್ಮಲ್ಲಿ ಯಾವುದೇ ರೀತಿಯ ಅಂಕಿಅಂಶಗಳು ಇಲ್ಲ. ಇಷ್ಟು ಜನ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಕೊಟ್ಟಿದ್ದೇವೆ ಎನ್ನುವ ಅಂಕಿಅಂಶಗಳೇ ಇಲ್ಲ ಈ ರೀತಿಯಾದರೆ ತಾವು ಯಾವ ರೀತಿಯಲ್ಲಿ ಜನರ ಕಲ್ಯಾಣ ಮಾಡುತ್ತೀರಿ ? ಯಾವ ರೀತಿಯಲ್ಲಿ ತಮ್ಮ ಸಾಧನೆಯನ್ನು ಮಾಡುತ್ತೀರಿ ? ಬರೀ ಬಾಯಿ ಮಾತಿನಲ್ಲಿ ಹೇಳಿದರೆ ಅದರಿಂದ ಪ್ರಯೋಜನವಾಗುವುದಿಲ್ಲ ತಾವು ಹೇಳಿದ್ದನ್ನು ಕಾರ್ಯಗತ ಮಾಡುವ ಪ್ರಯತ್ನವಾದರೂ ಮಾಡಬೇಕು. ಅಂತಹ ಯಾವುದೇ ಪ್ರಯತ್ನ ತಮ್ಮ ಆಯವ್ಯಯ ಪಟ್ಟಿಯಲ್ಲಿ ನನಗೆ ಕಂಡು ಬರುತ್ತಿಲ್ಲ ಇದು ಹರಿಜನ ಮತ್ತು ಗಿರಿಜನರಿಗೆ ಹಿಂದುಳಿದ ವರ್ಗದವರಿಗೆ ಹಾಗೂ ಅಲ್ಪಸಂಖ್ಯಾತರಿಗೆ ಸಲ್ಲುವಂತಹ ಆಯವ್ಯಯ ಪತ್ರವಲ್ಲ. ಇದು ಪ್ರಗತಿಪರವಾದಂಥ ಆಯವ್ಯಯ ಪತ್ರವಲ್ಲ.. ಆದ್ದರಿಂದ ನಾನು ಈ ಆಯವ್ಯಯ ಪತ್ರವನ್ನು ಸಂಪೂರ್ಣವಾಗಿ ವಿರೋಧಿಸಿ ಇದುವರೆವಿಗೂ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಬಿ. ಬಸವಲಿಂಗಪ್ಪ (ಯಲಹಂಕ) —ಸನ್ಮಾನ್ಯ ಅಧ್ಯಕ್ಷರೇ ಈ ಆಯವ್ಯಯ ಪತ್ರದ ಮೇಲೆ ನಾನು ಕೊನೆಯದಾಗಿ ಮಾತನಾಡುವವನಿದ್ದೇನೆ. ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳದೆ ಕೆಲವಾರು ಮಾನ್ಯ ಸದಸ್ಯರು ಪ್ರಸ್ತಾಪ ಮಾಡದೆ ಇರುವಂತಹ ವಿಷಯಗಳನ್ನು ವಿಶ್ಲೇಷಣೆ ಮಾಡಿ ನನ್ನ ಮಾತನ್ನು ಮುಗಿಸುವವನಿದ್ದೇನೆ. ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಮಾರ್ಚಿ ತಿಂಗಳಲ್ಲಿ ಈ ಸದನದಲ್ಲಿ ಒಂದು ಆಯವ್ಯಯ ಪತ್ರವನ್ನು ಮಂಡಿಸಿದರು. ಮತ್ತೆ ಈಗ ಒಂದು ಆಯವ್ಯಯ ಪತ್ರವನ್ನು ಮಂಡಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ಆಯವ್ಯಯ ಪತ್ರದಲ್ಲಿ ಕೆಲವು ವಿಷಯಗಳನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ.

(ಶ್ರೀ ಎಂ. ಎಸ್. ನಾರಾಯಣರಾವ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಮಾರ್ಚ್ ತಿಂಗಳಲ್ಲಿ ಮಂಡಿಸಿದ ಆಯವ್ಯಯ ಪತ್ರದಲ್ಲಿ ಸುಮಾರು ೬೦೮ ೮೧ ಕೋಟಿ ರೂಪಾಯಿಗಳ ಕೊರತೆಯನ್ನು ತೋರಿಸಿದ್ದರು. ಈಗ ಮಂಡಿಸಿರತಕ್ಕಂಥ ಆಯವ್ಯಯ ಪತ್ರದಲ್ಲಿ ಬರೀ ೭೩ ಕೋಟಿ ರೂಪಾಯಿಗಳ ಕೊರತೆ ಇದೆ ಎಂದು ಹೇಳುತ್ತಿದ್ದಾರೆ. ಮೂರು ತಿಂಗಳಲ್ಲಿ ೬೦೦ ಕೋಟಿ ರೂಪಾಯಿಗಳ ಕೊರತೆಯ ಅಂತರವನ್ನು ಯಾವ ರೀತಿಯಲ್ಲಿ ಕಡಿಮೆ ಮಾಡಿಕೊಂಡರು ? ಮಾನ್ಯ ಸದಸ್ಯರಾದ ಶ್ರೀ ಕೆ. ಹೆಚ್. ಶ್ರೀನಿವಾಸ್‌ರವರು ಮಾತನಾಡುತ್ತಾ ಹೇಳಿದರು ಇದು ಒಂದು ರೀತಿಯಲ್ಲಿ ದೊಂಬರಾಟವೆಂದು. ಇದು ಯಾರಿಗೂ ಅರ್ಥವಾಗದೆ ಇರುವಂತಹ ರೀತಿಯಲ್ಲಿ ಅವರು ಆಯವ್ಯಯ ಪತ್ರವನ್ನು ತಯಾರು ಮಾಡಿದ್ದಾರೆ. ಇದನ್ನು ಯಾರೂ ನಂಬಲರ್ಹವಾದಂತಹ ಆಯವ್ಯಯವಾಗಿದೆ. ೨೨೧ ಕೋಟಿ ರೂಪಾಯಿಗಳು ಸಾಲವೆಂದು ತೋರಿಸಿದರೂ ಅದು ಓವರ್ ಡ್ರಾಫ್ಟ್. ಅಂದರೆ ಖರ್ಚು ಆಗಿರುವಂತಹ ಹಣ. ೨೨೮ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅದನ್ನು ಆದಾಯವೆಂದು ತೋರಿಸುವುದಕ್ಕೆ ಬರುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಜನರನ್ನು ಜನರನ್ನು ಎಷ್ಟು ದಿವಸ ಮೋಸ ಮಾಡುವುದಕ್ಕೆ ಸಾಧ್ಯವಿದೆ? ಮೋಸ ಮಾಡುವುದಕ್ಕೆ ಸಾಧ್ಯವಿಲ್ಲ. ಮಾನ್ಯ ರಾಮಕೃಷ್ಣ ಹೆಗಡೆ ಯವರು ೬೦೦ ಕೋಟಿ ರೂಪಾಯಿಗಳ ಕೊರತೆಯನ್ನು ಯಾವ ರೀತಿಯಲ್ಲಿ ತುಂಬಿಕೊಂಡರು ಎಂದು ಆಶ್ಚರ್ಯವಾಗುತ್ತದೆ. ಎರಡು ಮೂರು ತಿಂಗಳಿಂದ ರಾಜ್ಯದಲ್ಲಿ ಎಲ್ಲಾ ಖರ್ಚುಗಳನ್ನು ನಿಲ್ಲಿಸಿದ್ದಾರೆ ಉಳಿತಾಯವನ್ನು ತೋರಿಸುವ ಸಲುವಾಗಿ ಅಭಿವೃದ್ಧಿ ಕಾರ್ಯಕ್ರಮಗಳೆಲ್ಲವನ್ನೂ ನಿಲ್ಲಿಸಿದ್ದಾರೆ. ಎಲ್ಲ ಹಂತಗಳಲ್ಲಿ ಉಳಿತಾಯವನ್ನು ತೋರಿಸಿ ಬರೀ ೭೩ ಕೋಟಿ ರೂಪಾಯಿಗಳ ಕೊರತೆಯನ್ನು ಮಾತ್ರ ಈಗ ತೋರಿಸಿದ್ದಾರೆ. ಇದು ನಂಬಲರ್ಹವಾದ ವಿಷಯವಾಗಿದೆ. ಇನ್ನು ಮಾನ್ಯ ರಾಮಕೃಷ್ಣ ಹೆಗಡೆ ಯವರು ಮುಖ್ಯಮಂತ್ರಿಗಳಾದ ಮೇಲೆ ಯಾವ ಯಾವ ಜಾತಿಯವರಿಗೆ ಏನೇನು ವಾಗ್ದಾನಗಳನ್ನು ಕೊಟ್ಟಿದ್ದಾರೆ ಎನ್ನುವ ಬಗ್ಗೆ ನಾನು ಹೇಳುತ್ತೇನೆ. ಅವರು ಕೊಟ್ಟಿರತಕ್ಕಂಥ ಎಲ್ಲಾ ವಾಗ್ದಾನಗಳನ್ನು ನಾನು ನಾನು ವಿಷದವಾಗಿ ವಿವರಿಸುತ್ತೇನೆ. ಅವುಗಳನ್ನು ಕಾರ್ಯಗತ ಮಾಡಿದ್ದಾರೆಯೋ ಇಲ್ಲವೇ ? ಮತ್ತು ಮಾನ್ಯ ಮುಖ್ಯಮಂತ್ರಿಯವರು ಇಲ್ಲಿಯವರೆವಿಗೂ ಏನೇನು ಮಾಡಿದ್ದಾರೆ. ಏನೇನು ಕಾರ್ಯಗತ ಮಾಡಿದ್ದಾರೆ. ಇದರ ಬಗ್ಗೆ ನಾನು ವಿಶ್ಲೇಷಣೆ ಮಾಡಿ ನನ್ನ ಮಾತನ್ನು ಮುಗಿಸುವವ ನಿದ್ದೇನೆ. ದಿನಾಂಕ ೧೧-೧-೧೯೮೩ ರಲ್ಲಿ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿ ಗಳಾದವರೂ. ಅವರು ಇವತ್ತಿನವರೆವಿಗೂ ಅನೇಕ ಹೇಳಿಕೆಗಳನ್ನು ಕೊಟ್ಟುಕೊಂಡು ಬಂದಿದ್ದಾರೆ. ಆ ಪ್ರಕಾರ ಹೇಳುವುದಾದರೆ ೧೨-೧-೧೯೮೩ರಲ್ಲಿ ರಿಕ್ರೂಟ್‌ಮೆಂಟ್ ಕಮಿಟಿಗಳನ್ನು ಅಬಾಲಿಶ್ ಮಾಡಿದರು. ಎಲ್ಲಾ ಇಲಾಖೆಗಳಿಗೂ ರಿಕ್ರೂಟ್‌ಮೆಂಟ್ ಕಮಿಟಿಗಳನ್ನು ನೇಮಕ ಮಾಡಿದರೂ ಇಲ್ಲವೋ ಗೊತ್ತಿಲ್ಲ. ಇವತ್ತು ಸುಮಾರು ೪೦ ಸಾವಿರಕ್ಕಿಂತಲೂ ಹೆಚ್ಚು ಹುದ್ದೆಗಳು ಖಾಲಿ ಇದೆ. ಆ ಹುದ್ದೆಗಳನ್ನು ತುಂಬಲು ಯಾವ ಕಾರ್ಯಕ್ರಮವನ್ನು ಕೈಗೊಂಡಿದ್ದೀರಿ. ಈ ಬಗ್ಗೆ ನಾನು ತಮ್ಮ ಊಹೆಗೆ ಬಿಡುತ್ತೇನೆ. ಮತ್ತೆ ೧೬-೧-೧೯೮೩ರಲ್ಲಿ ಒಂದು ವಾಗ್ದಾನವನ್ನು ಕೊಟ್ಟಿದ್ದಾರೆ. ಅದೇನೆಂದರೆ

"Panel to study details : Government steps to bring down prices. M . Ramakrishna Hegde announced a three member cabinet sub-committee to make a through stvdy of all matters connected with the public distribution system for being set up as a step towards bringing down prices of essential commodities.''

ಇವತ್ತು ಬೆಲೆಗಳು ಎಷ್ಟು ಜಾಸ್ತಿಯಾಗಿವೆ. ಇದನ್ನು ಕಡಿಮೆ ಮಾಡುವುದಕ್ಕೆ ಏನು ಕ್ರಮ ತೆಗೆದು ಕೊಂಡಿದ್ದೀರಿ ? ಇದನ್ನು ಸಹ ನಾನು ಜನರ ಊಹೆಗೆ ಬರುತ್ತೇನೆ. ಆ ಮೇಲೆ ದಿನಾಂಕ ೨೧-೧-೧೯೮೩ ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದೇನೆಂದರೆ

> "New Government saddled with big O.D. CM : The Chief Minister Mr. Ramakrishna Hegde expressed to-day his unhappiness with the state finances inherited by him from the Gundu Rao regime. He said his predecessor as undertaken extravagant expenditure on non-plan projects and schemes which would benefit none. He said he would discuss with the Finance Minister Mr. Pranab Mukherjee and the Planning Commission members regarding the State's annual outlay and the introduction of new scheme and programmes"

ಸ್ವಾಮಿ ನಾನು ಹೇಳುತ್ತೇನೆ. ಇವತ್ತು ಹೊಸದಾಗಿ ಭಾಷಣ ಮಾಡಿದ್ದಾರೆ. ಅವರು ಒಂದು ದೂರ ದೃಷ್ಟಿಯಿಂದ ಮಾತನಾಡಿದ್ದಾರೆ. ಆದರೆ ಯೋಜನೇತರ ವೆಚ್ಚಗಳಲ್ಲಿ ಖರ್ಚು ಮಾಡವಂತಾದ್ದು ನಾನಾ ಬಾಬುಗಳು ಇವೆ. ಹಿಂದಿನ ಸರ್ಕಾರದವರು ದುಂದುವೆಚ್ಚ ಮಾಡಿದರು. ನಾನು ಮಾಡುವುದಿಲ್ಲ ಎಂದು ಹೇಳಿದ್ದಾರೆ. ಯಾರ್ಯಾರು ಏನೇನು ಮಾಡಿದ್ದಾರೆ ಎನ್ನುವ ಬಗ್ಗೆ ಪಟ್ಟಿಗಳು ಇವೆ. ತಮಗೂ ಕೂಡ ಗೊತ್ತಿದೆ. ಯೋಜನೇತರ ವೆಚ್ಚಗಳಲ್ಲಿ ಯಾವುದಕ್ಕೆ ಖರ್ಚು ಮಾಡಬೇಕು ? ಯಾವುದಕ್ಕೆ ಖರ್ಚು ಮಾಡಬಾರದು ಎನ್ನುವ ಪ್ರಶ್ನೆ ಸಹ ಇದೆ. ಅದನ್ನು ನಾನು ಅವರಿಗೆ ಬಿಡುತ್ತೇನೆ. What are the items under non-plan, is given in the "Modification in Detailed Mstimate of Revenue Receipts and expenditure for the year 1988-86. They are : Public works, Fire Protection & Control, Other Adminlstrative Services, Miscellaneous General Services, Education, Art & Culture, Information and Publicity. Labour & Employment, Minor Irrigation aud Dairy Development, Community Development, Capital Outlay on other social community services, Capital outlay on Information & Publicity, Flood Control Projects, Miscellaneous Loans.

೧೧-೩೦ ಎ.ಎಂ.

ಸ್ವಾಮಿ, ಇದನ್ನು ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್ ಎಂದು ಹೇಳಿ, ಈ ಐಟಮ್ಸ್ ಅವರೇ ಕೊಟ್ಟಿದ್ದಾರೆ. ಅದನ್ನು ಬಿಟ್ಟು ನೀವು ಖರ್ಚು ಮಾಡಿದರೆ, ನೀವು ಯಾವರೀತಿಯಾಗಿ ಖರ್ಚನ್ನು ಆದಾಯವನ್ನು ಸಮತೋಲನ ಮಾಡುತ್ತೀರಿ? ಇದನ್ನು ಮಾಡಲಿಕ್ಕೆ ಆಗುವುದಿಲ್ಲ. ಏನು ಅವತ್ತಿನದಿವಸ ಅವರು ಹುಮ್ಮಸ್ಸಿನಿಂದ ಹೇಳಿದರು ಇವತ್ತಿನ ದಿವಸ ಅವರು ಅದನ್ನು ಮರೆತು ಬಿಟ್ಟಿದ್ದಾರೆ. ಏತಕ್ಕೆ ಅವರು ಮರೆತು ಬಿಟ್ಟಿದ್ದಾರೆ ಎಂದರೆ ಅವರು ಜಾಣರಾಗಿದ್ದಾರೆ, ಬುದ್ಧಿವಂತರಾಗಿದ್ದಾರೆ. ಇನ್ನೊಂದು ತಮ್ಮ ಅವಗಾಹನೆಗೆ ತರಬೇಕು. ನಾನು, ಅವರು ಮಾನ್ಯ ವೀರೇಂದ್ರಪಾಟೀಲ್‌ರವರು ಎಲ್ಲಾ ಮಾನ್ಯ ಜತ್ತಿಯವರ ಸಂಪುಟದಲ್ಲಿ ಡೆಪ್ಯುಟಿ ಮಿನಿಸ್ಟರ್‌ಗಳಾಗಿ ಜೊತೆಯಾಗಿದ್ದೆವು. ಅವತ್ತಿನಿಂದ ಇವತ್ತಿನವರೆಗೂ ಅವರು ಬುದ್ಧಿವಂತರಾಗಿದ್ದಾರೆ. ಅದರಿಂದಲೇ ಅವರು ಜನತಾ ಪಕ್ಷವನ್ನು ಇವತ್ತು ಇಲ್ಲಿವರೆಗೆ ತೆಗೆದುಕೊಂಡು ಬಂದಿದ್ದಾರೆ. ಹೀಗೆ ಜನಗಳ ಮನಸ್ಸಿಗೆ ಹೊಸದಾಗಿ ಹೇಳಿದರೆ ಹಿಡಿಸುತ್ತದೆ ಎಂದು ಅವರಿಗೆ ಗೊತ್ತಿದೆ. ಹೊಸ ವಾಗ್ದಾನ ಹೇಳಿದರೆ ಅದು ಜನಗಳ ಮನಸ್ಸಿಗೆ ಹಿಡಿಸುತ್ತದೆ. ಆಮೇಲೆ ಮಾಡಿದರೂ ಆಯಿತು, ಬಿಟ್ಟರೂ ಆಯಿತು. ನಾಳೆ ಮಾಡದೇ ಹೋದರೂ ಜನಗಳು ಅದನ್ನು ಮರೆತುಬಿಡುತ್ತಾರೆ. ಯಾರು ಯಾರು ವಾಗ್ದಾನ ಮಾಡಿಕೊಂಡು ಹೋಗುತ್ತಾರೆ. ಅದರ ಮೇಲೆ ಕಣ್ಣಿಟ್ಟುಬಿಟ್ಟು ಹಿಂದಿನದನ್ನು ಜಾರಿಗೆ ಕೊಟ್ಟರೋ ಬಿಟ್ಟರೋ ಎಂದು ಯಾರೂ ಗಮನ ಕೊಡುವುದಿಲ್ಲ

ಮುಂದೆ ಅದನ್ನು ಹೇಳಿದರೂ ಸಹ ಅದು ಹೊಗಳಿಕೆ ತೆಗಳಿಕೆ ಮೇಲೆ ಹೋಗುತ್ತದೆ. ಮಾನ್ಯ ರಾಮಕೃಷ್ಣ ಹೆಗಡೆಯವರು, ಇವತ್ತಿನ ದಿವಸ ಕರ್ನಾಟಕ ರಾಜ್ಯದ ಜನತೆಯ ಮುಂದೆ ಏನು ವಾಗ್ದಾನಗಳನ್ನು ಮಾಡಿರುತ್ತಾರೆ ಅದನ್ನು ಜಾರಿಗೆ ಕೊಟ್ಟಿದ್ದಾರೋ ಇಲ್ಲವೋ ಎಂಬುದನ್ನು ನಾವು ನೋಡಬೇಕಾಗಿದೆ. ಇನ್ನು ಬಿ.ಡಿ.ಎ, ವಿಚಾರದಲ್ಲಿ ಈ ಸದನದಲ್ಲಿ ಗಲಾಟೆ ಆಗಿದ್ದು ತಮಗೆಲ್ಲಾ ಗೊತ್ತಿದೆ, ಮಾನ್ಯ ಹೆಗಡೆಯವರು ೩೧-೧-೧೯೮೩ರಲ್ಲಿ ಒಂದು ಸ್ಟೇಟ್‌ಮೆಂಟ್ ಮಾಡಿದ್ದಾರೆ.

Replying to a question Mr. Ramakrishna Hegde said that there was rampant corruption in BDA and he had decided to post officers who were known for honesty hitherto.

ಮಾನ್ಯ ಅಧ್ಯಕ್ಷರೇ, ತಾವೂ ಬೆಂಗಳೂರಿನವರೇ, ಈ ಬಿ.ಡಿ.ಎ. ಸಂಸ್ಥೆ ಏನಿದೆ ಅದರ ಲೆಕ್ಕಪತ್ರಗಳು ಕಳೆದ ೧೫-೧೬ ವರ್ಷಗಳಿಂದ ಆಡಿಟ್ ಆಗಿಲ್ಲ. ಇವತ್ತಿನವರೆಗೂ ೬ ಕೋಟಿ ೭೩ ಲಕ್ಷ ರೂಪಾಯಿ ಹಣ ಆಡಿಟ್ ಅಬ್ಜೆಕ್ಷನ್ ಆಗಿ ಹಾಗೇ ಇದೆ. ಅದಕ್ಕೆ ಉತ್ತರ ಕೊಟ್ಟಿಲ್ಲ. ಅಲ್ಲಿಗೆ ಅಕೌಂಟೆಂಟ್ ಜನರಲ್‌ರವರನ್ನು ಪೋಸ್ಟ್ ಮಾಡಿರಂತ್ತೀರಾ? ಇದು ೫ ವರ್ಷ ಹಿಂದಿನದು, ಇದು ಇವತ್ತಿನವರೆಗೂ ಸರಿ ಹೋಗಿಲ್ಲ, ಅಲ್ಲಿ ಮಾಡಬಾರದ್ದು ಮಾಡಿದ್ದಾರೆ. ಲೆಕ್ಕ ಯಾರೂ ಇಟ್ಟುಕೊಂಡಿಲ್ಲ. ಅದರ ಚರಿತ್ರೆ ಎಲ್ಲ ಮಾನ್ಯ ಸದಸ್ಯರಿಗೆ ಗೊತ್ತು. The same thing he has repeated on 1-2-1983

The Chief Minister has asked the Economic and Planning Council of the State to suggest measures to reduce Government expenditure and to plug loopholes in the revenue earing departments, I was distressed to find that non-plan expenditure has been mounting in the last two or three years and his Government would not hesitate to introduce innovative and imaginative scheme for economic and social, political betterment of the people.'

ಇದನ್ನು ಹೇಳಿದ್ದೀರಿ. ಇದನ್ನು ಯಾವ ಹಿನ್ನೆಲೆಯಲ್ಲಿ ಹೇಳಿದ್ದೀರಿ? ವಾಗ್ದಾನಗಳ ಸುರಿಮಳೆಯಾಗಿದೆ. ಆದರೆ ಯಾವ ಯಾವ ವಾಗ್ದಾನಗಳನ್ನು ಕಾರ್ಯಗತ ಮಾಡಿದ್ದೀರಿ? ಅದನ್ನು ತಾವು ಹೇಳಬೇಕು. ಅದನ್ನು ಜನತೆಗೆ ಬಿಡುತ್ತೇನೆ. ಪುನಃ ಅದೇ ದಿನ. On the same day, he said.

The second priority is rural development. Government has devised measures to create employment opportunites particularly in the rural areas and to raise the purchasing power of the rural people.

ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಮಾನ್ಯ ಸದಸ್ಯರಿಗೆ ಅರ್ಥವಾಗಿದೆ. ಎಂಪ್ಲಾಯ್‌ಮೆಂಟ್ ಪೊಟೆನ್‌ಷಿಯಲ್‌ಗೋಸ್ಕರ ಕಾಂಗ್ರೆಸ್ ಸರಕಾರದವರು, ಎಂಪ್ಲಾಯ್‌ಮೆಂಟ್ ಅಫರ್ಮೇಷನ್ ಸ್ಕೀಮ್ ತಂದರು: ಹಳ್ಳಿಗಾಡಿನಲ್ಲಿರತಕ್ಕ ಬಡವರಿಗೆ ಕೆಲಸ ಕೊಡಬೇಕು ಬೇಸಿಗೆ ಕಾಲದಲ್ಲಿ ಕೆಲಸ ಕೊಡಬೇಕು ಎಂದು ಹೇಳಿ ತಂದೆವು. ಮಾನ್ಯ ನಜೀರ್ ಸಾಹೇಬರು ಇದ್ದಾರೆ. ಅವರು ಸಮಾಜವಾದಿಗಳು, ಅವರಿಗೂ ನನಗೂ ಆತ್ಮೀಯತೆ ಜಾಸ್ತಿ, ಸ್ವಾಮಿ ತಾವು ಅಧಿಕಾರಕ್ಕೆ ಬಂದ ಮೇಲೆ ಸಮಾಜವಾದವನ್ನು ಜಾರಿಗೆ ಕೊಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ. ಸರಿಯಾಗಿ ಸಮಾಜವಾದವನ್ನು ಜಾರಿಗೆ ಕೊಡಬೇಕು, ಅಕ್ಷರಶಃ ಜಾರಿಗೆ ಕೊಡಬೇಕು. ಎನ್.ಆರ್.ಇ.ಪಿ. ಡಿ.ಪಿ.ಎ.ಪಿ. ಎಂದು ಒಂದು ನಾಲ್ಕು ಪ್ರೋಗ್ರಾಂಗಳು ಏನಿವೆ, ಎಲ್ಲವನ್ನೂ ಕೂಡಾ ಬಡವರಿಗೋಸ್ಕರ ಮಾಡಿರುವುದು. ಮಾನ್ಯ ಅಧ್ಯಕ್ಷರೇ ನಾನು ಅವರಿಗೆ ಸ್ಪಷ್ಟವಾಗಿ ಹೇಳಿದ್ದೇನೆ. ಎನ್.ಆರ್.ಇ.ಪಿ. ಪ್ರೋಗ್ರಾಂ ಹಾಗೂ ಬೇರೆ ಎಂಪ್ಲಾಯ್‌ಮೆಂಟ್ ಓರಿಯಂಟೆಡ್ ಸ್ಕೀಮ್‌ಗಳು ಏನಿದ್ದಾವೆ, ಅದರಲ್ಲಿ ಯಾವ ಬಡವರನ್ನೂ ಕೆಲಸಕ್ಕೆ ತೆಗೆದುಕೊಳ್ಳುತ್ತಿಲ್ಲ. ಇದರ ಕೆಳಗೆ ಖರ್ಚು ಮಾಡಬೇಕೆಂದು ಒತ್ತಾಯ ಬರುತ್ತದೆ ಖರ್ಚು ಮಾಡುತ್ತಾರೆ. ಅದೇ ಕಂಟ್ರಾಕ್ಟರ್ಸ್, ಅದೇ ಕೆಲಸಗಾರರು ಆದರೆ ಜನಗಳಿಗೆ ಮಾತ್ರ ಉದ್ಯೋಗ ಇಲ್ಲ.

ಬಿಲ್ಡಿಂಗ್ ಕಟ್ಟುತ್ತೇವೆ, ರಸ್ತೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಅದರಲ್ಲಿ ಬಡವರಿಗೆ ಕಲ್ಯಾಣವಾಗುವ ಯಾವ ಕಾರ್ಯಕ್ರಮವೂ ಮಾಡಿಲ್ಲ. ಹಣ ಖರ್ಚಾಗಿದೆ.

ಶ್ರೀ ಬಸವರಾಜ ರಾಯರೆಡ್ಡಿ.—ಎನ್.ಆರ್.ಇ.ಪಿ. ಕೆಲಸಗಳನ್ನು ಕಂಟ್ರಾಕ್ಟರ್‌ಗೆ ಕೊಡುವುದಕ್ಕೆ ಬರುವುದಿಲ್ಲ. ಅದನ್ನು ಡಿಪಾರ್ಟ್‌ಮೆಂಟ್ ಮಾಡಬೇಕು.

(ಮಾನ್ಯ ಸಭಾಧ್ಯಕ್ಷರು, ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಚಿಕ್ಕವರು. ಹೊಸದಾಗಿ ಬಂದಿದ್ದಾರೆ. ಅವರು ಇನ್ನೂ ತಿಳಿದುಕೊಳ್ಳಬೇಕು. ವರ್ಕರ್ಸ್ ಪಟ್ಟಿ ಮಾಡಿರುತ್ತಾರೆ. ಕಂಟ್ರಾಕ್ಟರ್ಸ್ ಹೆಸರೂ ಇರುವುದಿಲ್ಲ ಆದರೆ ಕಂಟ್ರಾಕ್ಟರ್‌ಗೇ ಹಣ ಕೊಡುತ್ತಾರೆ. ಇದನ್ನು ಕಂಟ್ರಾಕ್ಟರೇ ಮಾಡುತ್ತಾರೆ,

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—ಮಾನ್ಯ ಅಧ್ಯಕ್ಷರೇ. ಬಸವಲಿಂಗಪ್ಪನವರು ಸಮಾಜವಾದ ಜಾರಿಗೆ ತರಬೇಕೆಂದು ಹೇಳಿದ್ದಾರೆ ಅದು ಸ್ವಾಗತಾರ್ಹವಾದುದು ಆದರೆ ಸಮಾಜವಾದವನ್ನು ಒಂದು ರಾಜ್ಯ ಸರಕಾರದ ಸೀಮಿತದಲ್ಲಿ ತರುವುದಕ್ಕೆ ಸಾಧ್ಯವಿಲ್ಲ. ಅದು ರಾಷ್ಟ್ರೀಯ ಪ್ರಶ್ನೆ. ರಾಷ್ಟ್ರಮಟ್ಟದಲ್ಲಿ ಸ್ವತ್ತು ಕೇಂದ್ರೀಕರಣವಾಗಿರುವಾಗ ರಾಜ್ಯದಲ್ಲಿ ಸಮಾಜವಾದವನ್ನು ಹೇಗೆ ಜಾರಿಗೆ ತರುವುದು? ಎನ್.ಆರ್.ಇ.ಪಿ. ಬಗ್ಗೆ ಹೇಳಿದರು. ಅವರ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ಕಂಟ್ರಾಕ್ಟರ್ ಇಲ್ಲ ಎಂದು ಹೇಳಿದರೂ ಕೂಡಾ ಡಿಸ್‌ಗೈಸ್ಡ್ ಕಂಟ್ರಾಕ್ಟರ್ಸ್ ಇರುತ್ತಾರೆ. ಎಲ್ಲಿ ಜನಗಳ ಸಹಕಾರ ಇದೆ ಅಲ್ಲಿ ಈ ಕಾರ್ಯಕ್ರಮಗಳು ಚೆನ್ನಾಗಿ ಆಗಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಧಾರವಾಡ, ಬೆಳಗಾಂ, ಬಿಜಾಪುರದ ಕೆಲವು ಭಾಗಗಳಲ್ಲಿ ಚೆನ್ನಾಗಿ ಆಗಿದೆ. ಎಲ್ಲಿ ಶಾಸಕರು ಹಾಗೂ ಜನಗಳ ಸಹಕಾರ ಇದೆ ಅಲ್ಲಿ ಆಗಿದೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಮಾನ್ಯ ವೀರಪ್ಪ ಮೊಯಿಲಿಯವರು ಇದ್ದಾರೆ. ಅಲ್ಲಿ ಎಲ್ಲಾ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ಸ್ ಮಾಡಿರುತ್ತಾರೆ. ಅಚ್ಚುಕಟ್ಟಾಗಿ ಕೆಲಸ ಮಾಡಿರುತ್ತಾರೆ. ಈ ಕಾರ್ಯಕ್ರಮಕ್ಕೆ ಎಲ್ಲಿ ಜನರ ಸಹಯೋಗ ಇದೆ ಅಲ್ಲಿ ಈ ಕಾರ್ಯಕ್ರಮ ಸರಿಯಾಗುತ್ತದೆ. ಬೇರೆ ಕಡೆ ಕಂಟ್ರಾಕ್ಟರ್ಸ್ ಮಾಡುತ್ತಾರೆ ನಾನು ಇಲ್ಲ ಎಂದು ಹೇಳುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಬಹಳ ಸಂತೋಷ ಆಯಿತು. ಮಾನ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಎನ್.ಆರ್.ಇ.ಪಿ. ಕೆಲಸ ಕಾರ್ಯಗಳು ಉಪಯುಕ್ತವಾಗಿರತಕ್ಕಂಥ ಯೋಜನೆಗಳು ಸರಿಯಾಗಿ ಕಾರ್ಯಗತವಾಗಿಲ್ಲ ಎಂದು ಒಪ್ಪಿಕೊಂಡಿದ್ದಾರೆ, ಜನಗಳ ಸಹಕಾರ ಇದೇ ಜಾಗದಲ್ಲಿ ಆಗಿದೆ ಎಂದು ಹೇಳಿದ್ದಾರೆ. ಜನಗಳು ಸಹಕಾರ ಕೊಡಲು ಬರಬೇಕೆಂದು ಅವರ ಮನಒಲಿಸತಕ್ಕದ್ದು ಅದನ್ನು ಇಂತಹ ಒಂದು ಕಾರ್ಯಕ್ರಮದಲ್ಲಿ ಅಳವಡಿಸಿಕೊಂಡು ಕೆಲಸ ಮಾಡತಕ್ಕದ್ದು ನಿಮ್ಮ ಕರ್ತವ್ಯ

ಶ್ರೀ ಅಬ್ದುಲ್ ನಜೀರ್ ಸಾಬ್ —ನಿಮ್ಮದೂ ಕೂಡಾ ನಮ್ಮದೂ ನಿಮ್ಮದೂ ಎಲ್ಲರದೂ .

ಶ್ರೀ ಬಿ. ಬಸವಲಿಂಗಪ್ಪ.—ನನ್ನ ತಾಲ್ಲೂಕಿನಲ್ಲಿ ಹೋಗಿ ನೋಡಿದಾಗ ಇಂತಹದನ್ನು ನೋಡಿರುತ್ತೇನೆ. ನಾನು ತಮಗೆ ಹೇಳುತ್ತಿದ್ದೇನೆ. ಕೆಲಸಗಾರನು ಗೌರವದಿಂದ ಜೀವನ ಮಾಡಬೇಕೆಂಬ ಉದ್ದೇಶ ಈ ಕಾರ್ಯಕ್ರಮದ್ದು. ಈ ಉದ್ದೇಶ ಈಡೇರಬೇಕಾದರೆ ಪ್ರತಿಯೊಬ್ಬರೂ ಕಷ್ಟಪಟ್ಟು ಕೆಲಸ ಮಾಡಬೇಕೆಂದು ಹೇಳುತ್ತೇನೆ. On 6-2-83 he said.

The Chief Minister Mr. Ramakrishna Hegde, who disclosed that the State Government has decided to appoint the 2nd Backward Classes Commission to review inter alia the reservation of seats in professional Colleges and institutions of higher learning and representation in Government services.

ಮಾನ್ಯ ಅಧ್ಯಕ್ಷರೇ, ಈ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಮಾಡಿದರು, ಮಾನ್ಯ ರಾಮಕೃಷ್ಣ ಹೆಗಡೆಯವರು ಹೇಳಿದ್ದಾರೆ, We have accepted the Mandal Commizsion Report ಎಂದು ಹೇಳಿದ್ದಾರೆ. ಮಂಡಲ್ ಕಮಿಷನ್ ರಿಪೋರ್ಟ್ ಅಕ್ಸೆಪ್ಟ್ ಮಾಡಿದ ಮೇಲೆ, ರಿಟೈರ್ಡ್ ಆಗಿರತಕ್ಕ ಒಬ್ಬ ನೌಕರನನ್ನು ಚೇರ್ಮನ್ ಮಾಡಿ, ಬ್ಯಾಕ್‌ವರ್ಡ್ ಕ್ಲಾಸಸ್ ಬಗ್ಗೆ ಕೂಲಂಕಷವಾಗಿ

ವಿಚಾರ ಮಾಡಿ ರಿಪೋರ್ಟ್ ಕೊಡಿ ಎಂದರೆ, ಅವರು ಕೊಡುತ್ತಾರೆಯೋ? ಇನ್ನು ಹತ್ತು ವರ್ಷವಾದರೂ ಅವರು ಕೊಡುವುದಿಲ್ಲ. ಅವರಿಗೆ ಸಂಬಳ ಸಿಗುತ್ತಿದೆ, ಮನೆ ಕೊಟ್ಟಿದ್ದೀರಿ, ಕಾರ್ ಕೊಟ್ಟಿದ್ದೀರಿ, ಅವರು ಸುಖವಾಗಿದ್ದಾರೆ. ಜನಗಳ ನಿರೀಕ್ಷಣೆಗೆ ಆಸಕ್ತಿ ವಹಿಸಿ ಕೆಲಸ ಮಾಡುತ್ತಾರೆಯೋ ರಿಟೈರ್ಡ್ ಇದ್ದಾರೆ. ಆದಷ್ಟು ಸಂಬಳ ಸಿಗಲಿ ಎಂದು ಇರುತ್ತಾರೆ. ರಿಪೋರ್ಟ್ ಯಾವಾಗ ಕೊಡುತ್ತಾರೋ ಕೊಟ್ಟುಕೊಂಡು ಹೋಗಲಿ. ಮಂಡಲ್ ಕಮಿಷನ್ ಒಪ್ಪಿಕೊಂಡ ಮೇಲೆ ಅದನ್ನು ನೀವು ಏತಕ್ಕೆ ಜಾರಿಗೆ ಕೊಡುವುದಿಲ್ಲ ಅಸ್ಸಾಂ ಗೌರ್ನಮೆಂಟ್‌ನವರು ಹಿಂದೆ ಕಾಕಾ ಕಾಲೇಲ್ಕರ್ ಅವರ ರಿಪೋರ್ಟ್ ಒಪ್ಪಿಕೊಳ್ಳಲಿಲ್ಲವೆ? ಒಪ್ಪಿಕೊಂಡು ಅದನ್ನು ಜಾರಿಗೆ ಕೊಡಲಿಲ್ಲವೇ? ನಮ್ಮ ದೇಶದಲ್ಲಿ ೮೦ ಪರ್ಸೆಂಟ್ ಜನ ಹಿಂದುಳಿದಿದ್ದಾರೆ ಎಂದು ಹೇಳಿಬಿಟ್ಟು, ಸಮಾಜವಾದ ಎಂದು ಹೇಳಿಬಿಟ್ಟು, ಭಾಷಣ ಚೆನ್ನಾಗಿ ಮಾಡುತ್ತೀರಿ. ಅಚ್ಚ ಕನ್ನಡದಲ್ಲಿ ಭಾಷಣ ಮಾಡುತ್ತೀರಿ.

ಭಾಷಣ ಮಾಡುವುದು ಒಂದು, ಕಾರ್ಯಗತ ಮಾಡುವುದು ಇನ್ನೊಂದು. ಬ್ಯಾಕ್‌ವರ್ಡ್ ಕ್ಲಾಸ್‌ನವರ ಹೆಸರಿನಲ್ಲಿ ವೋಟು ತೆಗೆದುಕೊಂಡು ಅಧಿಕಾರಕ್ಕೆ ಬಂದಿರುವುದು. ಯಾರ್ಯಾರು ಮಂತ್ರಿಗಳಾಗಿರುತ್ತಾರೆ, ಅಧಿಕಾರಕ್ಕೆ ಬರುತ್ತಾರೆ, ಅವರು ಭೋಗ ಜೀವನ ಅನುಭವಿಸಿ ಮನೆಗೆ ಹೋಗುವುದು. ಹಿಂದುಳಿದ ವರ್ಗಕ್ಕೆ ನ್ಯಾಯ ದೊರಕಿಸಿ ಕೊಡುವುದಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಬಂದಂದಿನಿಂದ ಇವತ್ತಿನವರೆಗೂ ರಾಜ್ಯಾಂಗದಲ್ಲಿ ಕಾನೂನು ಅಳವಡಿಸಿದ್ದಾರೆ. ಅವತ್ತಿನಿಂದ ಇವತ್ತಿನವರೆಗೂ ಯಾರು ಬ್ಯಾಕ್‌ವರ್ಡ್ ಕ್ಲಾಸ್ ಎನ್ನುವ ಬಗ್ಗೆ ತರ್ಕವಾಗುತ್ತಿದೆ. ೩೬ ವರ್ಷಗಳಿಂದ ಬರೀ ತರ್ಕದಲ್ಲೇ ಕಾಲ ಕಳೆದಿದ್ದಾರೆ. ಈ ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ಬರೀ ಕಮಿಷನ್ ನೇಮಿಸಿಕೊಂಡು ಹೋಗುತ್ತಾರೆ. ಇನ್ನು ನಮ್ಮ ಮಾನ್ಯ ರಾಮಕೃಷ್ಣ ಹೆಗಡೆಯವರು ಒಂದು ಚಾಣಾಕ್ಷತನದ ಕೆಲಸ ಮಾಡಿದ್ದಾರೆ. ಅದು ಮತ ಹಾಕುವುದನ್ನು ೧೮ ವರ್ಷಕ್ಕೆ ಇಳಿಸಿರುವುದು. ಇದು ಅರ್ಬನ್ ಏರಿಯಾದಲ್ಲಿ ಸರಿಯಾಗಿ ಕಾರ್ಯಗತವಾದರೂ, ರೂರಲ್ ಏರಿಯಾದಲ್ಲಿ ಈ ಮತದ ಪಟ್ಟಿಗೆ ೧೫ ವರ್ಷದವರೂ ಸೇರಿಕೊಂಡರು. ನನ್ನ ಕ್ಷೇತ್ರದಲ್ಲಿ ಸಣ್ಣ ಸಣ್ಣ ಹುಡುಗರು ವೋಟು ಮಾಡುವುದಕ್ಕೆ ಬಂದರು. ನನಗೆ ವಿರುದ್ಧವಾಗಿ ವೋಟು ಹಾಕುವುದಕ್ಕೆ ಬಂದಿದ್ದು ಉಂಟು. ಮಾನ್ಯ ರಾಮಕೃಷ್ಣ ಹೆಗಡೆಯವರು ಇಂತಹ ಯೋಜನೆಯನ್ನು ಹಾಕಿಕೊಂಡು, ಚುನಾವಣೆಯಲ್ಲಿ ಗೆದ್ದು ಅಧಿಕಾರಕ್ಕೆ ಬರಲಿಕ್ಕೆ ಹಾಕಿರತಕ್ಕಂಥ ಒಂದು ತಂತ್ರ. ಇದಕ್ಕಾಗಿ ಅವರಿಗೆ ನನ್ನ ಅಭಿನಂದನೆ ಸಲ್ಲಿಸುತ್ತೇನೆ.

On 8-2-83 :

> "Mr. Ramakrishna Hegde said that the annual plan for 1983-84 will be of the order of Rs. 575 crores showing an increase of 100 crores over 1982-83 plan. Mr. Hegde said the social and community welfare including welfare of scheduled castes/backward classes, would occupy a high place in the new order of priorities and would be allotted Rs. 119.14 crores as against Rs. 94 crores for 1982-83. Increase being about 25%."

ಅಧ್ಯಕ್ಷರೇ, ಅದು ಕಾರ್ಯಗತ ಆಗಬೇಕು. ಕಾರ್ಯದಲ್ಲಿ ಬರಬೇಕು. ನಿಮ್ಮ ಬಜೆಟ್ ನೋಡಿದರೆ, ಬ್ಯಾಕ್‌ವರ್ಡ್‌ಕ್ಲಾಸ್ ಎಂದು ಹೇಳುತ್ತೀರಿ, ಎಸ್.ಸಿ. ಎಸ್.ಟಿ. ಎಂದು ಹೇಳುತ್ತೀರಿ. ಅವರಿಗೆ ಆರ್ಥಿಕವಾಗಿ ಕಾರ್ಯಕ್ರಮ ಹಾಕಿಕೊಳ್ಳದೇ ನ್ಯಾಯ ಮಾಡುವುದಕ್ಕಾಗುವುದಿಲ್ಲ. ನ್ಯಾಯ ಕೊಡುವುದಕ್ಕಾಗುವುದಿಲ್ಲ. ಬರೀ ಭಾಷಣ ಮಾಡಿಕೊಂಡು ಹೋದರೆ, ಏನೂ ಪ್ರಯೋಜನವಿಲ್ಲ. ನನ್ನ ಅನುಭವದಲ್ಲಿ ನಾನು ಕೂಡ ಬಹಳ ವರ್ಷಗಳು ಮಂತ್ರಿಯಾಗಿದ್ದೇನೆ. ಬಹಳ ಜನ ಅಧಿಕಾರಿಗಳನ್ನು ನೋಡಿದ್ದೇನೆ. ಅಧಿಕಾರಿಗಳು ಹೇಗೆ ಇದ್ದಾರೆಂದರೆ, ಸ್ವಾಮಿ, ಯಾರ್ಯಾರು ಅಧಿಕಾರ ಕೊಡುತ್ತಾರೆ, ಅವರಿಗೆ ಹೊಂದಿಕೊಂಡು ಕೆಲಸ ಮಾಡುವುದು ಇಲ್ಲದೇ ಹೋದರೆ ಕೇಳುವುದು. ಮುಂದೆ ಕಾಂಗ್ರೆಸ್‌ನವರು ಅಧಿಕಾರಕ್ಕೆ ಬರುತ್ತಾರೆ ಹೇಗಾದರೂ ಮಾಡೋಣ, ಮುಂದಿನ ವರ್ಷಕ್ಕೆ ಬರುತ್ತಾರೆಂದು ಕಾಲ ಕಳೆಯುತ್ತಿರುತ್ತಾರೆ. ಇದನ್ನು ನಾನು ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ನನ್ನ ಅನುಭವದ ಹಿನ್ನೆಲೆಯಲ್ಲಿ ಹೇಳುತ್ತಿದ್ದೇನೆ. ಸತ್ಯವಾಗಿ ದೇಶಪ್ರೇಮದಿಂದ ಜನರಿಗೆ ಉಪಕಾರ ಮಾಡಬೇಕೆಂದು ಯಾರೂ ಮಾಡುವುದಿಲ್ಲ.

ಆರ್ಟಿಕಲ್ ೩೧೧ರ ಪ್ರಕಾರ ಸುಪ್ರೀಂ ಕೋರ್ಟಿನಲ್ಲಿ ತೀರ್ಪು ಕೊಟ್ಟಿದ್ದಾರೆ. ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿಕಮಿಟಿಯವರು ರಿಪೋರ್ಟ್ ಕೊಟ್ಟಿದ್ದಾರೆ. ನಾನು ಇದರ ಬಗ್ಗೆ ಚರ್ಚೆ ಮಾಡುತ್ತಿಲ್ಲ.

ಪಬ್ಲಿಕ್ ಅಂಡರ್ ಟೇಕಿಂಗ್ ರಿಪೋರ್ಟಿನಲ್ಲಿ ಯಾರ್ಯಾರು ಅಧಿಕಾರಿಗಳ ಮೇಲೆ, ಯಾರ್ಯಾರು ದುಡ್ಡು ಹೊಡೆದಿದ್ದಾರೆ, ಲಕ್ಷಾಂತರ, ಕೋಟ್ಯಾಂತರ ರೂಪಾಯಿಗಳನ್ನು ಲೂಟಿ ಮಾಡಿದ್ದಾರೆ ಎಂದು ಕೊಟ್ಟಿದೆ. ಅವರನ್ನು ಯಾರೂ ಕೇಳುವುದಿಲ್ಲ. ಈ ವೆಚ್ಚ, ಸಾರ್ವಜನಿಕ ಹಣವೆಂದು ಹೇಳಬೇಕು. ಯಾವ ಅಧಿಕಾರಿಗಳಿಗೆ ದೇಶಭಕ್ತಿ ಇದೆ ಎಂಬುದನ್ನು ನಾನು ನೋಡಿದ್ದೇನೆ. ಏನಾದರೂ ಮಾಡಿ ಹಣ ದುರುಪಯೋಗ ಮಾಡಿಕೊಂಡು ಹೋಗಬೇಕೆಂಬ ಅಧಿಕಾರಿಗಳು ಇದ್ದಾರೆ. ಬಡವರ ಸೇವೆ ಮಾಡಿರುವವರು ಬಹಳ ವಿರಳ ಇದ್ದಾರೆ. ಬಹಳ ವಿರಳ. ಮತ್ತೆ ಇಂಡಸ್ಟ್ರೀಸ್ ಬಗ್ಗೆ ಹೇಳಿದ್ದಾರೆ

"Industrial development would be accorded Rs, 49.84 crores as against Rs. 37 crores."

ಸ್ವಾಮಿ ಇಂಡಸ್ಟ್ರೀಸ್ ಮಂತ್ರಿಗಳು ಕೂಡ ಇಲ್ಲಿ ಇದ್ದಾರೆ. ಅವರು ನನ್ನ ಬಾಲ್ಯ ಸ್ನೇಹಿತರು. ಅವರೂ ಕೂಡ ಸಮಾಜವಾದಿಗಳು. ಅವರೂ ನಾನು ಪಕ್ಕಪಕ್ಕದಲ್ಲೇ ಕುಳಿತುಕೊಂಡಿದ್ದೆವು. ಅವರೂ ನಾನು ಸಮಾಜವಾದದ ಬಗ್ಗೆ ಬಹಳ ಮಾತನಾಡಿದ್ದೇವೆ. ಮಾತನಾಡಿ ಸುಮ್ಮನೆ ಬಿಡುವುದಕ್ಕೆ ಹೋಗಿಲ್ಲ, ಅಧಿಕಾರವನ್ನು ಅವರ ಕೈಗೆ ಕೊಟ್ಟಿದ್ದೇವೆ. ಸಮಾಜವಾದವನ್ನು ಯಾವ ರೀತಿಯಾಗಿ ಕಾರ್ಯಗತ ಮಾಡಬೇಕೆಂಬುದನ್ನು ಯೋಚನೆ ಮಾಡಿ. ನಾನೇನೋ ಬಡವರಿಗೋಸ್ಕರ ಕೆಲಸ ಮಾಡಿದ್ದೇನೆ. ಅದು ತಮಗೆಲ್ಲಾ ಮೆಚ್ಚುಗೆಯಾಗಿದೆಯೆಂದು ಕಾಣುತ್ತದೆ,

ಒಬ್ಬ ಮಾನ್ಯ ಸದಸ್ಯರು.—ಹೌದು, ತಮ್ಮ ಕೆಲಸ ಪುರಸಭೆಗಳಲ್ಲಿ, ನಗರಸಭೆಗಳಲ್ಲಿ ಮೆಚ್ಚುಗೆಯಾಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ಈಗ ಪ್ರತಿಯೊಂದು ಹಳ್ಳಿಯಲ್ಲಿ, ಪ್ರತಿಯೊಂದು ಹೋಬಳಿಯಲ್ಲಿ ಮತ್ತು ಪ್ರತಿಯೊಂದು ತಾಲ್ಲೂಕಿನಲ್ಲಿ ಈ ನೀತಿ ಜನಗಳ ಮಹಿವಾಟಿನಲ್ಲಿ ಇರಬೇಕು. ಆ ರೀತಿ ಮಾಡದೇ ಹೋದರೆ, ಜನಗಳಿಗೆ ಉಪಯೋಗವಾಗುವುದಿಲ್ಲ. ಹಳ್ಳಿಗಾಡುಗಳಲ್ಲಿ ಮಾಡುತ್ತೇವೆಂದು ಹೇಳುತ್ತೀರಿ. ಮಾನ್ಯ ಹೆಗಡೆಯವರು ೧೯೮೩ನೇ ಇಸವಿಯಲ್ಲಿ ಏನು ಹೇಳಿಕೆ ಕೊಟ್ಟಿದ್ದಾರೆ, ಅದನ್ನು ಕಾರ್ಯಗತ ಮಾಡಿ ಎಂದು ನಾನು ಹೇಳುತ್ತೇನೆ ಆಮೇಲೆ

on 11-2-83 :

'Chief Minister Ramakrishna Hegde told the top Government officials here today not to give room for corruption and nepotism, but to develop cordial relations with the public. He further said, he has cautioned the officers of PWD and Excise that no one should collect money in the name of the party."

ಎಂದು ಹೇಳಿದ್ದಾರೆ. ಅದಕ್ಕೆ ತಾವು ಏನೇನು ಮಾಡುತ್ತಿದ್ದೀರಿ, ಏನೇನು ಕೊಟ್ಟಿದ್ದೀರಿ ಎನ್ನುವುದನ್ನು ನಾನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ರಾಜಕಾರಣಿಗಳು ಹಣ ವಸೂಲಿ ಮಾಡದೇ ಯಾವುದೇ ಕಾರ್ಯಕ್ರಮಗಳನ್ನು ಕಾರ್ಯಗತ ಮಾಡುವುದಕ್ಕಾಗುವುದಿಲ್ಲ. ಇನ್ನು ಎಂ.ಐ.ಪಿ.ಸಿ. ಬೋರ್ಡ್ ಎಂದು ಪಿ.ಡಬ್ಲ್ಯೂ.ಡಿ. ಡಿಪಾರ್ಟ್‌ಮೆಂಟ್‌ನಲ್ಲಿ ಇದೆ. ಈ ಬೋರ್ಡ್ ಅಸ್ತಿತ್ವಕ್ಕೆ ಬಂದು ಸುಮಾರು ೮-೧೦ ವರ್ಷಗಳಾಗಿವೆ. ನಾನು ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿ ಚೇರ್ಮನ್ ಆಗಿ ವಿವರ ನೋಡಿದ್ದೇನೆ. ಸ್ವಾಮಿ, ಈ ಎಂ.ಐ.ಪಿ.ಸಿ. ಬೋರ್ಡ್ ಆವತ್ತಿನಿಂದ ಇವತ್ತಿನವರೆಗೂ, ಕಂಟ್ರಾಕ್ಟರುಗಳಿಗೆ ಹಣ ಕೊಡುತ್ತಿದೆ. ಇದು ನಮ್ಮ ಸರ್ಕಾರದಲ್ಲೂ ಆಯಿತು. ನಾನು ಅವರ ಮೇಲೆ ವಿಚಾರಣೆ ಮಾಡಬೇಕೆಂದು, ಎನ್‌ಕ್ವೈರಿ ಕಮಿಷನ್‌ಗೆ ಒಪ್ಪಿಸಬೇಕೆಂದು ಹೇಳಿದ್ದೇನೆ. ಕೋಟಿಗಟ್ಟಲೆ ಅರ್ಜಿಗಳನ್ನು ತೆಗೆದುಕೊಂಡು ಕೊಡತಕ್ಕಂಥ ವಿವರ ಇದೆ. ಹೀಗಾದರೆ ಯಾವ ದೇಶವಾದರೂ ಉದ್ಧಾರವಾಗುತ್ತದೆಯೇ ? ಈ ರೀತಿ ಜನಗಳ ಹಣ ವ್ಯಯವಾದರೆ ಹೇಗೆ ? ತಾವು ಅಧಿಕಾರಕ್ಕೆ ಬಂದಮೇಲೆ ಎಷ್ಟು ಅರ್ಜಿಗಳನ್ನು ತೆಗೆದುಕೊಂಡಿದ್ದೀರಿ ಹೇಳಿ. ಭ್ರಷ್ಟಾಚಾರ ತೆಗೆದು ಹಾಕುತ್ತೇವೆಂದು ಹೇಳು

ತ್ತೀರಿ, ಅದನ್ನು ತೆಗೆದುಹಾಕಿ ನಿಮಗೆ ನಮಸ್ಕಾರ ಮಾಡುತ್ತೇನೆ. ಇಂತಹ ಬೋರ್ಡ್‌ಗಳನ್ನು ಅನಾವಶ್ಯಕವಾಗಿ ಇಟ್ಟುಕೊಂಡು ನಿವೃತ್ತ ಅಧಿಕಾರಿಗಳನ್ನು ಇಟ್ಟುಕೊಂಡು ಕಂಟ್ರಾಕ್ಟರುಗಳಿಗೆ ಕೋಟಿಗಟ್ಟಲೆ ಹಣ ಕೊಟ್ಟರೆ ಹೇಗೆ ?

On 14-2-1983

"He assured to solve the problems of the poverty, unemployed and the difficulties of rural masses. The land army scheme was being formulate with a view to amiliorate the rural problems."

12-00 NOON

8-3-1983 "Answering the need to tackle the problem of poverty he pointed out the government is finding partnership by involving every citizen and create a sense of participation in running the administration"

How are you going to do this ? It is left to you.

15-3-1983 Drinking water for all villages promised.
"Sri Ramakrishna Hegde gave assurance that all villages would be provided at least one drinking water source within the next two years inspite of several constraints."

Now, it is 1985. I don't want to make any charges. It is for you to say.

18-3-1983 "Mr. Hegde today warned officials that they had no place in the government if they did not consider themselves servants of the people. Their commitment should be to the service of the people. He said, the officials should within two months change their mentality."

You cannot change the mentality.

About "Think Tank," Mr. M Veerappa Moily has already said I don't want to say anything further.

18-3-1983 Regarding Opposition Leader Veerappa Moily's charge, the Cheif Minister Ramakrishna Hegde told the Legislative Assembly today that he had issued 16,000 excise licences in one day when he was the Excise Minister in 1968."

ಮಾನ್ಯ ಜೆ. ಹೆಚ್. ಪಟೇಲರು ನಿಮಗಿಂತಲೂ ಮೀರಿಸಿದ್ದಾರೆ. ಯಾವ ಊರಿನಲ್ಲೇ ಹೋಗಲಿ ಹೆಚ್ಚಿಗೆ ಹೆಂಡದ ಅಂಗಡಿಗಳು ತೆರೆದಿವೆ. ಅಲ್ಲಿಯ ಹೆಣ್ಣುಮಕ್ಕಳ ಶಾಪ ಹೇಳುವ ಹಾಗಿಲ್ಲ. ಸಿಟಿಯಲ್ಲಾಗಲಿ, ಹಳ್ಳಿಯಲ್ಲಾಗಲಿ ಅಲ್ಲಲ್ಲಿ ಜನರು ಕುಡಿದುಕೊಂಡು ಕುಡಿದ ಅಮಲಿನಲ್ಲಿ ಬರುತ್ತಿದ್ದಾರೆ. ಅವರಿಗೆ ಕುಡಿಸಿಬಿಟ್ಟು ತಾವು ಓಟು ತೆಗೆದುಕೊಂಡು ಬಿಟ್ಟಿದ್ದೀರಿ. ಹೀಗೆ ಪ್ರತಿಯೊಂದನ್ನೂ ನೀವು ಮಾಡಿರತಕ್ಕಂಥಾ ಕೆಲಸ ಬೇಕಾದರೆ ಹೇಳುತ್ತೇನೆ. ಕಾಲಾವಕಾಶ ಇಲ್ಲದೇ ಇರುವುದರಿಂದ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ.

19–3–1983 "The Chief Minister said in the Legislative Council, the Government was examining the implication of raisingt he retirement age of government servants from 55 to 58 years."

ಇದನ್ನು ಎಕ್ಸಾಮಿನ್ ಮಾಡಿದಿರಾ ? ಇದನ್ನು ಹಾಗೆಯೇ ಮಾಡಿಬಿಟ್ಟರು. ಇದರಿಂದ ಅನಾಹುತ ಯಾರಿಗೆ ಆಯಿತು ? ಹೊಸದಾಗಿ ೪೦ ಸಾವಿರ ಜನರು ಕೆಲಸಕ್ಕೆ ಸೇರುವುದಕ್ಕೆ ಅವಕಾಶ ಇಲ್ಲದಂತಾಯಿತು. ಪ್ರತಿ ವರ್ಷವೂ ಸರ್ಕಾರದ ನೌಕರರು ೧೦–೧೨ ಸಾವಿರ ನೌಕರರು ರಿಟೈರ್ ಆಗುತ್ತಿದ್ದರು. ಈಗ ರಿಟೈರ್‌ಮೆಂಟ್ ಆಗದೇ ಇರುವುದರಿಂದ ಆ ವೇಕೆನ್ಸಿಗಳು ಖಾಲಿ ಆಗದೇ ಇರುವುದರಿಂದ ಆ ಜಾಗಕ್ಕೆ ಯಾರನ್ನೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಈವೊತ್ತಿನ ದಿವಸ ೪೦ ಸಾವಿರ ವೇಕೆನ್ಸಿ ಆಗುತ್ತಿತ್ತು. ಬೇರೆಯವರಿಗೆ ಕೆಲಸ ಸಿಕ್ಕುತ್ತಿತ್ತು. ಈಗ ಅದು ಇಲ್ಲದೇ ಇದ್ದ ಹಾಗೆ ಇದೆ.

23–3–1983 "Mr Ramakrishna Hegde said in the Legislative Assembly today that Development Board will be set up in all the 4 divisions of the State to monitor the overall development of the region "

But, you have not done anything.

24–3–1983 "Chief Minister Mr. Ramakrishna Hegde gave an assurance in the Assembly today that the minister's visits to district would be intimated in advance to the respective legislators irrespective of party affililiations."

ಶ್ರೀಮಾನ್ ಜಾಲಪ್ಪನವರು ನನ್ನ ತಾಲ್ಲೂಕಿಗೆ ಒಂದು ಸಾರಿ ಬಂದಿದ್ದರು. ನನ್ನನ್ನು ಅವರು ಕರೆಯಲೂ ಇಲ್ಲ, ನನಗೆ ಇಂಟಿಮೇಷನ್ನೂ ಮಾಡಲಿಲ್ಲ.

ಶ್ರೀ ಆರ್. ಜಾಲಪ್ಪ.—ನಾನು ಒಂದು ಸಾರಿ ಹೋಗಿದ್ದೆ. ಅವರನ್ನು ಕರೆದಿದ್ದೇನೆ. ಮತ್ತೆ ನಾನು ಆ ಊರಿಗೆ ಹೋಗಲಿಲ್ಲ. ತಮಗೆ ಹೇಳಬೇಕಾದರೆ ಯಾರೋ ಪ್ರೈವೇಟ್‌ನವರು ಬಸ್‌ಸ್ಟಾಪ್ ಒಂದು ಓಪನ್ ಮಾಡಿದರು. ಅಲ್ಲಿಗೆ ನನ್ನನ್ನು ಊಟಕ್ಕೆ ಮಾತ್ರ ಕರೆದಿದ್ದರು. ಅದು ಸರ್ಕಾರದ ಕಾರ್ಯಕ್ರಮವಾಗಿರಲಿಲ್ಲ. ಅದಕ್ಕೆ ಸರ್ಕಾರ ಏನೂ ಖರ್ಚು ಮಾಡಿರಲಿಲ್ಲ ಅಲ್ಲಿಗೆ ನಾನು ಏತಕ್ಕೆ ಹೋಗಲಿ ? ಕೊನೆಗೆ ನಾನು ಅಲ್ಲಿಗೆ ಹೋಗಲಿಲ್ಲ. ಸುಮ್ಮನೆ ಅವರು ಈರೀತಿ ಛಾರ್ಜ್ ಮಾಡಿದರೆ ಹೇಗೆ ಹೇಳಿ ಸ್ವಾಮಿ ?

ಶ್ರೀ ಬಿ. ಬಸವಲಿಂಗಪ್ಪ.—ಹೋಗಲಿ ಬಿಡಿ ಸ್ವಾಮಿ. ನನ್ನ ಕೆಲಸ ನೀವು ಮಾಡಿದರಲ್ಲಾ. ಪರವಾಯಿಲ್ಲ. On 26–3–1983, to a question by Sri V. S. Krishna Iyer regarding Palace Grounds, it was replied that the mode of utilisation would be decided after acquisition proceedings is completed. Government has planned, among other things, for the formation of disney land. In any case it would be retained as lung-space.

ಮಾನ್ಯ ಅಧ್ಯಕ್ಷರೇ, ನಾನು ವಿದೇಶ ಯಾತ್ರೆಗೆ ಹೋಗಿ ಬಂದಿದ್ದೇನೆ. ಅಲ್ಲಿಗೆ ಎಲ್ಲಾ ಮಂತ್ರಿಗಳನ್ನೂ ಕಳುಹಿಸಬೇಕು, ನೋಡಿಕೊಂಡು ಬರಲಿ. ಜಪಾನಿನ ಟೋಕಿಯೋದಲ್ಲಿ ಡಿಸ್ನಿಲ್ಯಾಂಡತಿ ಅಂತ ಮಾಡಿದ್ದಾರೆ. ಅಮೇರಿಕಾದಲ್ಲಿ ಲಾಸ್‌ಎಂಜಲೀಸ್‌ನಲ್ಲೂ ಇದೆ. ಅವರು ಇದರ ಬಗ್ಗೆ ಪ್ರಗ್ ಏನು ಸಾಧನೆ ಮಾಡಿದ್ದಾರೆ ಅನ್ನುವುದು ಅವರು ಹೋಗಿ ನೋಡಿಕೊಂಡು ಬಂದರೆ ಗೊತ್ತಾಗುತ್ತದೆ. ಅವರು ಅಲ್ಲಿಗೆ ಹೋಗಿ ನೋಡಿಕೊಂಡು ಬಂದು ಅದನ್ನು ಕಾರ್ಯರೂಪಕ್ಕೆ ಬರುವ ಹಾಗೆ ಮಾಡಲಿ ಸಾಕು. ಆ ಬಗ್ಗೆ ತಾವು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ತಮಗೆ ಕೊಟ್ಟಿರುವ ಅವಕಾಶ ಮುಗಿದು ಹೋಗಿದೆ. ಡಿಮ್ಯಾಂಡ್ ಮೇಲೆ ಚರ್ಚೆಗೆ ಬಂದಾಗ ತಮಗೆ ಮಾತನಾಡುವುದಕ್ಕೆ ಅವಕಾಶ ಇದೆ. ದಯವಿಟ್ಟು ನೀವು ನಿಮ್ಮ ಮಾತಿನ ಪ್ರಕಾರ ನಡೆದುಕೊಳ್ಳಿ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಇನ್ನು ಹೆಚ್ಚು ಕಾಲ ತೆಗೆದುಕೊಳ್ಳುವುದಿಲ್ಲ. ಬೇಗನೆ ಮುಗಿಸುತ್ತೇನೆ. ಇನ್ನು ಈ ಬಾಂಡೆಡ್ ಲೇಬರ್ಸ್ ಬಗ್ಗೆ ಎಲೆಕ್ಷನ್ ಟೈಂನಲ್ಲಿ ತಾವು ಏನು ಹೇಳಿದ್ದೀರಿ, ಅದನ್ನು ತಮಗೇ ಬಿಟ್ಟಿದ್ದೇನೆ. ಶ್ರೀಮಾನ್ ದೇವರಾಜ ಅರಸ್‌ರವರ ಪ್ರೋಗ್ರಾಂ ಏನೇನು ಇದೆ ಅವೆಲ್ಲವನ್ನೂ ಸಹ ನಾವು ಮುಂದುವರೆಸಿಕೊಂಡು ಹೋಗುತ್ತೇವೆಂದು ಹೇಳಿದ್ದೀರಿ. ಇದನ್ನೂ ಸಹ ತಮಗೆ ಬಿಟ್ಟಿದ್ದೇನೆ.

On 30-3-1983, Mr. Hegde announced in the Legislative Council that the State Government would invite candidate without any formalities for 87 posts for Schedule Caste and Scheduled Tribes who have secured ranks in degrees, post-graduation and professional courses to join government service. ಯಾರಿಗಾದರೂ ಒಬ್ಬರಿಗೆ ಕೊಟ್ಟಿದ್ದೀರಾ ? ಮಾನ್ಯ ರಾಚಯ್ಯನವರು ಮಂತ್ರಿಗಳಾಗಿದ್ದಾರೆ. ಅವರು ಬಹಳ ಅನುಭವಿಗಳು, ಅವರು ಬಹಳ ವರ್ಷಗಳಿಂದಲೂ ಇದ್ದಾರೆ. ಅವರು ಇದರ ಬಗ್ಗೆ ಒತ್ತಾಯ ಮಾಡಿ ಸರಿಯಾಗಿ ಕಾರ್ಯಕ್ರಮ ತೆಗೆದುಕೊಳ್ಳುವ ಹಾಗೆ ಮಾಡದೇ ಹೋದರೆ ಅವರ ಮೇಲೆ ನಾವು ತಿರುಗಿ ಬೀಳಬೇಕಾಗುತ್ತದೆ.

ಮಾನ್ಯ ಅಧ್ಯಕ್ಷರೇ, ನಾನು ಇನ್ನು ಹೆಚ್ಚು ಹೇಳುವುದಿಲ್ಲ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರಲ್ಲಿ ನನ್ನ ಪ್ರಾರ್ಥನೆ ಇಷ್ಟೆ. ಅವರ ಎಲೆಕ್ಷನ್ ಟೈಂನಲ್ಲಿ ಏನೇನು ಭರವಸೆ ಕೊಟ್ಟಿದ್ದಾರೆ, ಅದನ್ನು ಕಾರ್ಯಗತ ಮಾಡಲಿ ಅಷ್ಟೆ. But it should not be a political expenditure. It should be a revenue or capital expenditure. What I would say is, for the last three years my friend, Mr. Ramakrishna Hegde has been indulging in political expenditure rather than following the code of conduct as per the financial code. ತಾವು ಜನಗಳಿಗೆ ಏನು ಹೇಳಿದ್ದೀರಿ ಎನ್ನುವುದನ್ನು ಜ್ಞಾಪಕ ಇಟ್ಟುಕೊಳ್ಳಬೇಕು. ಇಲ್ಲಿ ಕೆಲವು ಮಾತ್ರ ಹೇಳಿದ್ದೀರಿ. ನಾನು ಮತ್ತೊಮ್ಮೆ ಅವರಿಗೆ ಹೇಳುತ್ತೇನೆ. ಜನಗಳು ಅರಿತುಕೊಳ್ಳುವುದಕ್ಕಿಂತ ಮುಂಚೆ ಅವರು ಕೊಟ್ಟಿರುವ ಭರವಸೆಗಳನ್ನು ಕಾರ್ಯಗತ ಮಾಡಲಿ ಹಾಗೆ ಇಲ್ಲದೇ ಹೋದರೆ ಜನರೇ ನಿಮ್ಮನ್ನು ಬಂದು ಕೇಳುತ್ತಾರೆ. Most of it is political expenditure. Non-plan expenditures are all political expenditure This is what I have to describe. Out of you wisdom, you adopt any method or mode to mobilise resources. But how many crores of rupees are in arrears as revenue to the State Have you taken any steps to realise all these arrears ? How many Crores of Rupees are now pending realisation as arrears ? Have you taken any action to realise those arreas. Even taxing people to the tune of Rs. 50 Crores is unnecessary provided you recover all the arrears. ನಿಮಗೆ ಧನ್ಯವಾದಗಳು. ನಾನು ಇದರ ಬಗ್ಗೆ ಮಾತನಾಡಲು ತಾವು ಕೊಟ್ಟ ಕಾಲಾವಕಾಶಕ್ಕಿಂತಲೂ ಜಾಸ್ತಿ ಹೊತ್ತು ತೆಗೆದುಕೊಂಡಿದ್ದೇನೆ. ನಾನು ಒಂದು ಮಾತನ್ನು ಮಾನ್ಯ

ರಾಮಕೃಷ್ಣ ಹೆಗಡೆಯವರಿಗೆ ಹೇಳಬಯಸುತ್ತೇನೆ. ಅದೇನೆಂದರೆ ಈ ವಿಚಾರದಲ್ಲಿ ರಾಜಕೀಯವಾಗಿ ತೆಗೆದುಕೊಂಡು ರಿಪ್ಲೈ ಕೊಡಬೇಡಿ ಎಂದು. As a Statesman, you try to reply and not as a political leader. Kindly bear in mind what all should be done for the State in the next 10-20 years. Therefore, I request the Hon'ble Chief Minister to reply as a Statesman.

೧೨-೦೦ ಎ. ಎಂ.

† ಶ್ರೀ ಕೆ. ಬಿ. ಮಲ್ಲಪ್ಪ (ಅರಕಲಗೂಡು).—ಮಾನ್ಯ ಅಧ್ಯಕ್ಷರೇ, ನಮ್ಮ ನಾಯಕರಾದಂಥ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಇಟ್ಟಿರತಕ್ಕಂಥ ಈ ಆಯವ್ಯಯದ ಪಟ್ಟಿಯನ್ನು ನಾನು ಸಮರ್ಥಿಸುತ್ತಾ ಇಂತಹ ಸಂದರ್ಭದಲ್ಲಿ ಒಂದೆರಡು ಮಾತುಗಳನ್ನು ಇಲ್ಲಿ ಆಡುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ, ಈಗ ಮಾತನಾಡಿರತಕ್ಕಂಥ ನಮ್ಮ ಎದುರು ಪಕ್ಷದ ಮಿತ್ರರು ಹಾಗೂ ಸದಸ್ಯರು ಆಡಿದ ಮಾತುಗಳನ್ನು ನಾನು ಆಲಿಸಿ ಕೇಳಿದ್ದೇನೆ. ನಮ್ಮ ಸರ್ಕಾರದ ಬಗ್ಗೆ ಹಾಗೂ ಶ್ರೀ ರಾಮಕೃಷ್ಣ ಹೆಗಡೆಯವರ ನೇತೃತ್ವದಲ್ಲಿ ಜನತಾ ಸರ್ಕಾರದ ಬಗ್ಗೆ ಅವರು ಏನು ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ ಅದು ಬಹಳ ಸತ್ಯಕ್ಕೆ ದೂರವಾದುದು ಎಂದು ಹೇಳಿದರೆ ತಪ್ಪಾಗಲಾರದು ಎಂದು ನಾನು ಅಭಿಪ್ರಾಯ ಪಡುತ್ತೇನೆ. ಸ್ವಾಮಿ, ನಮ್ಮ ಸರ್ಕಾರ ೧೯೮೩ರಲ್ಲಿ ಆಡಳಿತಕ್ಕೆ ಬಂತು. ನಮ್ಮ ನಾಯಕರಾದ ಶ್ರೀ ರಾಮಕೃಷ್ಣ ಹೆಗಡೆಯವರು ಆವಾಗ ಜನಹಿತ ಕಾರ್ಯಗಳನ್ನು ಮಾಡಿದ್ದರಿಂದಲೇ ಅವರ ನೇತೃತ್ವದಲ್ಲಿ ಪುನಃ ಈ ಸರ್ಕಾರವೇ ಆಡಳಿತ ನಡೆಸುವುದಕ್ಕೆ ನಮ್ಮ ಕರ್ನಾಟಕದ ಜನತೆ ಕಳುಹಿಸಿ ಕೊಟ್ಟಿದ್ದಾರೆ. ಅದರಂತೆ ನಾವು ನಡೆದುಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ನೇತೃತ್ವದ ಸರ್ಕಾರ ಕೆಲವು ಜನಹಿತ ಕಾರ್ಯಗಳನ್ನು ಮಾಡಿದೆ. ಅದು ಈ ಸಂದರ್ಭದಲ್ಲಿ ಹೇಳಿಕೊಳ್ಳುವಂಥ ವಿಚಾರ ಅಲ್ಲ. ಮತ್ತೊಂದು ಸಂದರ್ಭದಲ್ಲಿ ಹೇಳುತ್ತೇನೆ. ಕಳೆದ ಸರ್ಕಾರವೂ ಅಂದರೆ ಈ ಹಿಂದಿನ ಕಾಂಗ್ರೆಸ್ ಸರ್ಕಾರವೂ ಸಹ ಒಳ್ಳೆಯ ಕೆಲಸಗಳನ್ನು ಮಾಡಿದೆ. ಆದರೆ ಅದಕ್ಕೂ ಇದಕ್ಕೂ ಹೋಲಿಸಿದರೆ ಇವು ಭಿನ್ನಭಿನ್ನವಾದ ಕಾರ್ಯಕ್ರಮಗಳಾಗಿವೆ. ನಾವು ಜನ ಹಿತದ ಕಾರ್ಯಗಳನ್ನು ಏನೇನು ಮಾಡಿದ್ದೇವೆ ಅದರ ಬಗ್ಗೆ ವಿರೋಧಪಕ್ಷದವರು ಸಹಾನುಭೂತಿ ಮತ್ತು ಸಂತೋಷ ಪಡುತ್ತಾರೆಂದು ನಾನು ಅಭಿಪ್ರಾಯ ಪಟ್ಟಿದ್ದೆ. ನಮ್ಮ ಸರ್ಕಾರ ಪುನಃ ಬಂದಮೇಲೆ ಪ್ರ ಪ್ರಥಮವಾಗಿ ರೈತರ ಬೇಡಿಕೆ ಏನು ಇತ್ತು ಅದನ್ನು ಬಗೆಹರಿಸುವುದರಲ್ಲಿ ಪ್ರಯತ್ನ ಮಾಡಿದ್ದನ್ನು ನಾವು ಶ್ಲಾಘನೀಯ ವಾಗಿ ಹೇಳಬೇಕಾಗಿದೆ. ಅಲ್ಲದೆ ತಮಗೆ ಗೊತ್ತಿರುವ ಹಾಗೆ ಸುಮಾರು ೧೯ ಜಿಲ್ಲೆಗಳ ಪೈಕಿ ೧೬ ಜಿಲ್ಲೆ ಗಳಲ್ಲಿ ಕ್ಷಾಮಕ್ಕೆ ತುತ್ತಾದಂಥಾ ಪ್ರದೇಶಗಳಲ್ಲಿ ಅಭಾವ ಪರಿಹಾರವನ್ನು ಎದುರಿಸಬೇಕಾದ ಸಂದರ್ಭ ಬಂತು. ಇದಕ್ಕೆ ಸರ್ಕಾರದ ವತಿಯಿಂದ ೧೬೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿ ಬಂತು. ಕೇಂದ್ರ ಸರ್ಕಾರವನ್ನು ಇದಕ್ಕೆ ಸರ್ಕಾರದ ವತಿಯಿಂದ ೧೬೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿ ಬಂತು. ಕೇಂದ್ರ ಸರ್ಕಾರದವರು ಕೇವಲ ೪೦ ಕೋಟಿ ರೂಪಾಯಿ ಕೊಟ್ಟರು. ಎರಡನೆಯದಾಗಿ ನಮ್ಮ ಸರ್ಕಾರದವರು ರೈತರಿಗೆ ಬಡ್ಡಿ ರಿಯಾಯಿತಿಯನ್ನು ಕೊಟ್ಟಿದ್ದಾರೆ. ಇದಕ್ಕೆ ಸುಮಾರು ೮೬ ಕೋಟಿ ರೂಪಾಯಿಯನ್ನು ಕೊಟ್ಟಿರತಕ್ಕಂಥಾದ್ದು ಶ್ಲಾಘನೀಯವಾದ ವಿಚಾರವಲ್ಲವೇ? ಇದರ ಜೊತೆಗೆ ನೀರು ಬಾರದೇ ಇರತಕ್ಕಂಥಾ ಬಾಡಿಗಳಿಗೆ ಸಾಲವನ್ನು ಮನ್ನಾ ಮಾಡಿದ್ದಾರೆ. ಇದಕ್ಕೆ ಸುಮಾರು ೮೦ ಕೋಟಿ ರೂಪಾಯಿವರೆಗೆ ಖರ್ಚಾಗಿದೆ. ನಮ್ಮ ಸರ್ಕಾರ ರೈತರಿಗೆ ಹಾಗೂ ಜನಗಳಿಗೆ ಏನೇನು ಸವಲತ್ತುಗಳನ್ನು ಕೊಟ್ಟಿದ್ದಾರೆ ಎನ್ನುವುದನ್ನು ತಮಗೆ ಜ್ಞಾಪಕ ಮಾಡಿಕೊಡುವುದಕ್ಕೆ ನಾನು ಇಚ್ಛೆಪಡುತ್ತೇನೆ. ನಮ್ಮ ಸರ್ಕಾರವನ್ನು ಟೀಕೆ ಮಾಡತಕ್ಕಂಥಾ ಕಾಲದಲ್ಲಿ ೨೦ ಅಂಶದ ಕಾರ್ಯಕ್ರಮವನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಿಲ್ಲ ಅಂತ ಹೇಳಿದರು. ಅವರು ಬಡವರ ಬಗ್ಗೆ ಏನೇನು ಕಾಳಜಿ ವಹಿಸಿದ್ದಾರೆ ಎನ್ನುವುದನ್ನು ಮರೆತಿದ್ದಾರೆ. ಐ.ಆರ್.ಡಿ.ಪಿ. ಮುಖಾಂತರ ಬಡವರಿಗೆ ಸಾಲ ಕೊಟ್ಟಿದ್ದಾರೆ, ಡಿ.ಪಿ.ಎ.ಪಿ. ಪ್ರೋಗ್ರಾಂನಲ್ಲಿ ಬೇಕಾದಷ್ಟು ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದಿದ್ದಾರೆ. ತಂದಿಲ್ಲ ಎಂದು ಅವರು ಹೇಳುವುದನ್ನು ನಾನು ಕೇಳುತ್ತೇನೆ. ಈ ೨೦ ಅಂಶದ ಕಾರ್ಯಕ್ರಮದ ಅಡಿಯಲ್ಲಿ ಈ ಬಡ್ಜೆಟ್ಟಿನಲ್ಲಿ ಏನು ವ್ಯಾಖ್ಯಾನ ಮಾಡಿದ್ದಾರೆ ಏನೇನು ಕೊಟ್ಟಿದ್ದಾರೆ. ಅದನ್ನು ನೋಡಿ ಅವರು ಶಹಭಾಸ್‌ಗಿರಿ ಕೊಡಬೇಕಾಗಿತ್ತು ಎಂದು ತಮ್ಮ ಗಮನಕ್ಕೆ ತರುತ್ತೇನೆ. ೧೯೮೪–೮೫ರ ಅವಧಿಯಲ್ಲಿ ಈ ೨೦ ಅಂಶದ ಕಾರ್ಯಕ್ರಮದ ಅಡಿಯಲ್ಲಿ ನಮ್ಮ ರಾಜ್ಯ

ಏನೇನು ಸಾಧನೆ ಮಾಡಿದೆ ಎನ್ನುವುದನ್ನು ಈ ಬಜೆಟ್ಟಿನ ಅನುಬಂಧ ಎರಡರಲ್ಲಿ ತೋರಿಸಲಾಗಿದೆ. ಅದನ್ನು ನೋಡಿದರೆ ಸಾಕು ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದ (ಐಆರ್‌ಡಿಪಿ) ಸಂಬಂಧದಲ್ಲಿ ದೇಶದಲ್ಲಿ ಕರ್ನಾಟಕ ಎರಡನೆಯದು ಎಂದು ಹೇಳಿದ್ದಾರೆ. ಇದನ್ನು ಅವರೇ ಒಪ್ಪಿಕೊಂಡಿದ್ದಾರೆ ಇದಕ್ಕೆ ಶಹಭಾಸ್‌ಗಿರಿ ಕೊಡಬೇಕಲ್ಲವೇ? ನಮ್ಮ ರಾಜ್ಯದಲ್ಲಿ ಈ ಬಗ್ಗೆ ಅತ್ಯುತ್ತಮ ಕೆಲಸಕಾರ್ಯಗಳು ನಡೆದಿವೆ ಎನ್ನುವುದನ್ನು ಅವರು ಅರಿತು ಕೊಳ್ಳಬೇಕು.

ಇನ್ನು ೧೯೮೩ರ ಚುನಾವಣೆಗೆ ಹೋದಾಗ ನಾವು ಏನೇನು ಭರವಸೆಗಳನ್ನು ಜನರಿಗೆ ಕೊಟ್ಟಿದ್ದೆವು, ಅದನ್ನು ಈಡೇರಿಸಿದುದರಿಂದಲೇನೆ ಮತ್ತೆ ೧೯೮೫ರ ಚುನಾವಣೆಯಲ್ಲಿ ನಮ್ಮನ್ನು ಅವರು ಆರಿಸಿದರು. ನಾವು ಅವರ ಆಶೀರ್ವಾದದಿಂದ ಬಂದಿರುವುದರಿಂದ ಸರ್ಕಾರವನ್ನು ರಚನೆ ಮಾಡಿದ್ದೇವೆ. ಈ ಸಲವೂ ಸಹ ನಮ್ಮ ಸರ್ಕಾರದವರು ಬಡವರ ಬಗ್ಗೆ ಒಳ್ಳೊಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಅದರ ಬಗ್ಗೆ ತಮಗೆ ಹೇಳಬೇಕಾದರೆ ಬಡವರಿಗೆ ಸೀರೆ, ಧೋತಿ ಕೊಟ್ಟಿದ್ದಾರೆ, ಬಡಮಕ್ಕಳಿಗೆ ಪುಸ್ತಕಗಳನ್ನು ಹಂಚಿದ್ದಾರೆ ಮತ್ತು ಬಡವರಾಗಿರತಕ್ಕವರು ಮದುವೆ ಮಾಡಿಕೊಳ್ಳುವುದಾದರೆ ಅಂಥವರಿಗೆ ತಾಳಿಯನ್ನು ಕೊಡತಕ್ಕಂಥಾದ್ದು ಈ ರೀತಿಯಾಗಿ ಜನಹಿತ ಕಾರ್ಯಗಳನ್ನು ನಮ್ಮ ಸರ್ಕಾರ ಮಾಡುತ್ತಿದೆ. ಈ ಸಂದರ್ಭದಲ್ಲಿ ಕೆಲವು ವಿಚಾರಗಳಲ್ಲಿ ನಾನು ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕೆಎಸ್‌ಆರ್‌ಟಿಸಿ ಬಗ್ಗೆ ಶ್ರೀ ಸಿಂಧ್ಯ ಅವರು ಕೆಲವು ಮಾರ್ಪಾಡುಗಳನ್ನು ಮಾಡುವುದಕ್ಕೆ ಹೊರಟಿದ್ದಾರೆ. ಅದರ ದರವನ್ನು ಹೆಚ್ಚಿಸಿ ಜನಗಳಿಗೆ ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡಬೇಕೆಂದು ಮಾಡಿದ್ದಾರೆ. ಸಂಪನ್ಮೂಲಗಳನ್ನು ಹೆಚ್ಚಿಸುವುದಕ್ಕೆ ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಇವರು ದರ ಜಾಸ್ತಿ ಮಾಡಿದರೆ ಹಳ್ಳಿಗಾಡಿನ ಜನರು ಜಾಸ್ತಿ ದರವಾಯಿತು ಎನ್ನುವ ಅಭಿಪ್ರಾಯ ಪಟ್ಟಿದ್ದಾರೆ. ಆ ದರವನ್ನು ತಗ್ಗಿಸಬೇಕೆಂದು ಹೇಳಿದ್ದಾರೆ. ಇದಲ್ಲದೆ ಪ್ರೈವೇಟ್ ಬಸ್‌ಗಳಿಗೆ, ಮೆಟಡಾರ್‌ಗೆ, ಪ್ರಯಾಣದ ಸೀಟುಗಳಿಗೆ ೩೦ ಪರ್ಸೆಂಟ್ ತೆರಿಗೆ ಹಾಕಬೇಕು ಅಂತ ಏನು ಮಾಡಿದ್ದಾರೆ ಅದು ಜಾಸ್ತಿ ಅದನ್ನು ಕಡಿಮೆ ಮಾಡಬೇಕು, ಇದರ ಬಗ್ಗೆ ಪರ್ಯಾಲೋಚನೆ ಮಾಡಬೇಕು ಎಂದು ಹೇಳುತ್ತೇನೆ. ಸರ್ಕಾರಕ್ಕೆ ತಮ್ಮ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈಗ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ನಮ್ಮ ಮುಂದೆ ಏನು ಬಜೆಟ್ ಇಟ್ಟಿದ್ದಾರೆ ಅದನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ಮಾನ್ಯ ಅಧ್ಯಕ್ಷರು ನನಗೆ ಇದರ ಬಗ್ಗೆ ಮಾತನಾಡಲು ಕೇವಲ ೫ ನಿಮಿಷ ಮಾತ್ರ ಕೊಟ್ಟಿದ್ದಾರೆ. ಇನ್ನು ಮುಂದಾದರೂ ನನಗೆ ಜಾಸ್ತಿ ಟೈಂ ಕೊಟ್ಟು ಸರ್ಕಾರದ ಸಾಧನೆ ಏನೇನು ಎನ್ನುವುದನ್ನು ಹೇಳುವುದಕ್ಕೆ ಹೆಚ್ಚಿನ ಕಾಲಾವಕಾಶ ಕೊಡಬೇಕೆಂದು ಹೇಳಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ವಂದಿಸಿ ನನ್ನ ವಂಗಿಸುತ್ತೇನೆ.

† SMT. MUKTHAR UNNISSA (Narasimharaja). Respected Speaker, I thank you for permitting me to speak now on the budget speech. I take your permission to speak, in English because Mr, Narayana Kumar is not present......

MR. SPEAKER.—I have allowed you to speak in English.

SMT MUKTHAR UNNISSA.—Sir, the Budget presented by our Hon'ble Chief Minister is disappointing to me. In Page Number 6, Serial Number 11' our Hon'ble Chief Minister has stated as follows.

> "I am not happy about the overdraft. Habitual resort to overdraft is not only a sign of financial indiscipline. but it also accentuates and inflationary pressures and distorts the methodology of planning."

I feel that it is only an eye-washing statement. If that is the intention of our Hon'ble Chief Minister, he would not have spent money lavishly without proper planning. Our State itself is landing

into financial crisis as most of the cheques issued by the Government are being rejected by the banks and the salaries are not paid promptly in time.

The Hon'ble Chief Minister shifted the blame on the Central Government and also he said that he was the first one to appreciate and welcome the Hon'ble Union Minister Sri V. P. Singh's intiative to put an end to the unhealthy practice of misusing the overdraft facilities. If such being the cases, I don't know why the Government is spending money without proper planning, proper control and proper distribution.

In his budget speech on Page No 10, the Hon'ble Chief Minister has mentioned about the Employment Gaurantee Scheme, Supply of Rs. 2/- per kg rice to the poor sections of the population and also about providing Dhotis and sarees but he has not mentioned about "Thali Bhagya or Mangala Sutra" and free sites to the siteless people.

Mr. Speaker, Sir. in the budget, provision has been made about the supply of cheap sarees and dhotis but the Government has increased the tax on Wholesale clothes, I would like to ask the Hon'ble Chief Minister whether the increase in the rate of tax on wholesale cloths will not affect the poor? I agree that the free distribution of text books is a very good scheme but due to late distribution and non-availability of the text books in the private shops, the studies of the poor little children are greatly affected. The Government never thoguht to give one set of books to the teachers also to prepare themselves Notes of Lesson and write Programme of Works to teach the children prafectly. I hope the Government will make arrangements to provide one set of text books to the teachers also,

Sir, On Page 25, Para 55 of the Budget Speech, it has been mentioned that the Government is considering to set up a Corporation for Women's development and also a special component plan for women's welfare. To-day, so many men speakers spoke but how many lady members spoke? However, your goodself is kind enough to allow me to speak to-day, only for four minutes. I personally feel that in the men dominated world, women are regleced Like that, in this budget also, unfortunately, no Girls High Schools, no Girls, Junior Colleges, no Professional Coureses Colleges or centres for women areegranted.

Sir, on Page 25, para 54 the Hon'ble Chief Minister who is also the Finance Minister has mentioned about Minorities Development

Corporation. He has stated that he proposed to make a provision of Rs. 1 Crore for the Minorities Development Corporation. which is very meagre. The Hon'ble Chief Minister has said the same thing in his interim budget speech also. I am very happy for the initiative taken by him but the point is that the amount proposed to be provided is very meagre. I request the Hon'ble Chief Minister to provide more money for this purpose.

I would say that nothing has been mentioned in the budget speech about Wakfs and Muzrai Department. This is a very vast department and it is very necessary to develop, to preserve and to protect the properties of this vast Department in our State.

Sir, the budget proesnted by our Hon'ble Chief Minister is anti-people. It is an indirect hit on the middle and poorer classes of people. Any amount of revenue would be less when it is misuied. Mr. Speaker, Sir, you are aware that K.S.R.T.C., B.T.S., Bangalore Dairy. and so many public undertakings are all incurring huge losses year by year and the bad debts and losses are increasing at every stages. When that is the position, how can the revenue be sufficient? Sir,year by year, people are groaning under the increasing burden of taxes. It is the nature of tax structure that gives room for the generation of black money, tax evasion and corruption. The agricultural tax and the transport taxes are the specimen of hostile attitude of the Government. I feel that the reduction of taxes on certain commodities is only an eye wash to hoodwink the people.Sir, the present budget is more disappointing to the people of Karnataka. I would like to mention about one aspect i.e , steep hike in Motor Vehicles Tax. Last year itself the Government unilaterally raised the tax on light vehicles to Rs. 120/--without giving any explaanation and now againthe Government has enhanced btremenously deyond anybody's imagination,specially on vans,Rs 260-to 1250 where some edueated unemployed through some means are owning vehicles for their livelihood. This increase in the tax tariff will be a very bad hit for such people because they can neither pay the tax nor they can repay the loan that they borrowed from banks to purchase the vehicles This kind of step-monthely attitude is really heart-breaking. The wares and tare of the roads is directly proportional to the public transportation. The deadly state of our roads, the fifth all around is neglected, but the hike of tax is touching the sky year after year.

With all these reasons, I would say that the budget presented by our Hon'ble Chief Minister is disappointing to the public.

With these words, I thank the Chair for giving me this opportunity to speak a few words on the budget speech and conclude.

ಅಧ್ಯಕ್ಷರು.—ಈಗ ಇನ್ನೂ ಕೆಲವು ಮಾನ್ಯ ಸದಸ್ಯರು ಮಾತನಾಡಬೇಕು ಎಂದು ಹೇಳುತ್ತಿದ್ದಾರೆ. ಸೋಮವಾರ, ಮಂಗಳವಾರ, ಬುಧವಾರ ಏನು ಡಿಮ್ಯಾಂಡ್ಸ್ ಬರುತ್ತದೆ ಆಗ ಅವರಿಗೆ ಪ್ರಿಫರೆನ್ಸ್ ಕೊಡುತ್ತೇನೆ.

ಶ್ರೀ ಪಟ್ಟಮಕ್ಕಿ ರತ್ನಾಕರ.—ನಮಗೆ ಅವಕಾಶ ಕೊಡಿ.

ಅಧ್ಯಕ್ಷರು.—ನಿಮಗೆ ಸೋಮವಾರ, ಮಂಗಳವಾರ ಅವಕಾಶ ಕೊಡುತ್ತೇನೆ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಪಟ್ಟಮಕ್ಕಿ ರತ್ನಾಕರ.—ನಾಲ್ಕೈದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು.—ತಮ್ಮ ಕಡೆಯವರಿಗೆ ೬೦೦ ನಿಮಿಷಕ್ಕೂ ಮೇಲ್ಪಟ್ಟು ಅವಕಾಶ ಮಾಡಿ ಕೊಟ್ಟಿದ್ದೇನೆ. ಸೋಮವಾರ, ಮಂಗಳವಾರ, ಬುಧವಾರ ತಮಗೆ ಫಸ್ಟ್ ಪ್ರಿಫರೆನ್ಸ್ ಕೊಡುತ್ತೇನೆ. ಈಗ ಮಾನ್ಯ ಸಭಾ ನಾಯಕರು ಉತ್ತರ ಕೊಡಲಿ.

ಶ್ರೀ ಬಿ. ಎ. ಉಪ್ಪಿನ್.—ನಮಗೆ ಸ್ವಲ್ಪ ಅವಕಾಶ ಕೊಡಿ. ೧೦ ಸಲ ಅವಕಾಶ ಕೇಳಿದರೆ ಒಮ್ಮೆ ಕೂಡ ಕೊಟ್ಟಿಲ್ಲ.

ಅಧ್ಯಕ್ಷರು.—ಮಾನ್ಯ ಉಪ್ಪಿನವರೆ ತಮಗೂ ಅವಕಾಶ ಕೊಡುತ್ತೇನೆ, ಎಲ್ಲರಿಗೂ ಅವಕಾಶ ಮಾಡಿಕೊಡುತ್ತೇನೆ. ಈಗ ಮಾನ್ಯ ಸಭಾನಾಯಕರು ಉತ್ತರ ಕೊಡಲಿ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದ ಅಥವಾ ಕೇಂದ್ರದ ಆಯವ್ಯಯ ಪತ್ರದ ಮೇಲಿನ ಚರ್ಚೆ, ಅನೇಕ ಆರ್ಥಿಕ, ಸಾಮಾಜಿಕ ಮತ್ತು ಕೆಲವು ಸಂದರ್ಭಗಳಲ್ಲಿ ರಾಜಕೀಯ ಸಮಸ್ಯೆಗಳನ್ನೂ ಸಹ ಚರ್ಚೆ ಮಾಡತಕ್ಕಂಥದ್ದು ಒಂದು ಅತ್ಯಂತ ಒಳ್ಳೆಯ ಅವಕಾಶ. ನಾನು ಅಧಿಕಾರದಲ್ಲಿದ್ದಾಗಲೇ ಆಗಲಿ, ಅಂದರೆ ಈ ರಾಜ್ಯದ ಅರ್ಥಮಂತ್ರಿಯಾಗಿದ್ದಾಗಲೇ ಆಗಲೀ ಅಥವಾ ವಿರೋಧ ಪಕ್ಷದಲ್ಲಿ ಕುಳಿತು, ವಿರೋಧ ಪಕ್ಷದ ನಾಯಕನಾಗಿದ್ದಾಗಲೇ ಆಗಲಿ ಕಳೆದ ೨೦ ವರ್ಷಗಳ ಅವಧಿಯಲ್ಲಿ ಇದೇ ಅಭಿಪ್ರಾಯವನ್ನು ತಳೆದಿದ್ದೇನೆ. ಅದರಲ್ಲಿ ನಾನು ಸ್ವಲ್ಪವೂ ವ್ಯತ್ಯಾಸವನ್ನು ಮಾಡಿಲ್ಲ. ನನ್ನ ಎದುರುಗಡೆ ಕುಳಿತಂಥ ಅನೇಕ ಮಾನ್ಯ ಸದಸ್ಯರಿಗೆ ಇದರ ನೆನಪು ಇರಬಹುದು. ಅವರಲ್ಲಿ ಅನೇಕರು ಅವೊತ್ತಿನಲ್ಲಿ ದಿವಸ ನಮ್ಮ ಜೊತೆಗೆ ಇದ್ದರು. ಬಜೆಟ್ಟನ್ನು ನಾನು ತಯಾರು ಮಾಡಿದಾಗ ರಾಷ್ಟ್ರೀಯ ಹಿನ್ನೆಲೆಯಲ್ಲಿ ತಯಾರು ಮಾಡುತ್ತಿದ್ದೆ. ಯಾವುದೇ ಒಂದು ರಾಜ್ಯದ ಬಜೆಟ್ಟನ್ನು ರಾಷ್ಟ್ರದ ಒಂದು ಆರ್ಥಿಕ ಚೌಕಟ್ಟಿನಲ್ಲಿ ಅದು ತಯಾರು ಮಾಡಬೇಕು. ಕೇಂದ್ರ ಸರ್ಕಾರದ ನೀತಿ, ಕೇಂದ್ರ ಸರ್ಕಾರದ ಹಣಕಾಸಿನ ದೃಷ್ಟಿ, ಇವುಗಳ ಪ್ರಭಾವದಿಂದ ಪ್ರತಿಯೊಂದು ರಾಜ್ಯದ ಹಣಕಾಸಿನ ದೃಷ್ಟಿಯಿಂದ ಮೇಲೆ, ಅವರ ನೀತಿಯ ಮೇಲೆ ಬೀಳುತ್ತದೆ ಒಂದು ರಾಷ್ಟ್ರದ, ಯಾವುದೇ ಒಂದು ರಾಜ್ಯ, ಒಂದು ನಡುಗಡ್ಡೆಯ ದ್ವೀಪವಾಗಿ ಇರತಕ್ಕಂತಾದ್ದು ಸಾಧ್ಯವಿಲ್ಲ. ಈ ದೃಷ್ಟಿಯಿಂದ ಬಜೆಟ್ ಮೇಲಿನ ಚರ್ಚೆಯನ್ನು ನಾವು ನೋಡಬೇಕೇ ಹೊರತು ಚರ್ಚೆಯಲ್ಲಿ ಸಣ್ಣ ಪುಟ್ಟ ವಿಚಾರಗಳನ್ನು ಎತ್ತಿ ಮರುದಿವಸ ಪತ್ರಿಕೆಗಳಲ್ಲಿ ದಪ್ಪ, ದಪ್ಪ ಅಕ್ಷರದ ಸುದ್ದಿ ಪ್ರಕಟವಾಗತಕ್ಕ ಭಾಷಣ ಮಾಡಿದರೆ ಪ್ರಯೋಜನವಾಗುವುದಿಲ್ಲ. ಅದರಿಂದ ತತ್ಕಾಲಕ್ಕೆ ಮನಸ್ಸು ತೃಪ್ತಿಯಾಗಬಹುದು. ಅದ್ದರಿಂದ, ರಾಜ್ಯಕ್ಕಾಗಲಿ, ರಾಷ್ಟ್ರಕ್ಕಾಗಲಿ, ಯಾವ ಪ್ರಯೋಜನವಾಗುವುದಿಲ್ಲ. ಸಣ್ಣ ಪುಟ್ಟ ವಿಚಾರಗಳನ್ನು ಎತ್ತಲಿಕ್ಕೆ ಬೇಕಾದಷ್ಟು ಸಮಯ ಸಿಕ್ಕುತ್ತದೆ. ನಾವು ಡಿಮ್ಯಾಂಡ್ ಮೇಲೆ ಚರ್ಚೆ ಮಾಡುವಾಗ ಅಂತಹ ವಿಚಾರಗಳನ್ನು ಎತ್ತಬಹುದು. ಯಾವುದಾದರೂ ರಿಪೋರ್ಟ್ ಬಂದರೆ ಅದರ ಮೇಲೆ ಚರ್ಚೆ ಆದಾಗ ಅಂತಹ ವಿಚಾರ ಎತ್ತಬಹುದು. ನಮಗೆ ಯಾವುದೇ ಸಂಶಯ ಇದ್ದರೆ. ಅಥವಾ ಸಂಶಯಾತ್ಮಕ ವ್ಯವಹಾರ ಇದ್ದರೆ ಪ್ರಶ್ನೆಗಳ ಮುಖಾಂತರ ಮತ್ತು ಇನ್ನಿತರ ನಮ್ಮ ನಿಯಮಾವಳಿ ಮುಖಾಂತರ, ಏನೇನು ಕ್ರಮಗಳನ್ನು ತೆಗೆದುಕೊಂಡು ಬರುತ್ತೇವೆ, ಆ ಕ್ರಮಗಳ ಮೂಲಕ ಎತ್ತಬಹುದು. ಆದರೆ ಬಜೆಟ್ಟಿನಮೇಲಿನ ಚರ್ಚೆ ಯಾವಾಗಲೂ ಸ್ವಲ್ಪ ಉನ್ನತಮಟ್ಟದಲ್ಲಿರಬೇಕು, ಅದರ ಬಗ್ಗೆ ನಾನು ಮೊದಲಿನಿಂದಲೂ ಪ್ರತಿಪಾದನೆ ಮಾಡಿಕೊಂಡು ಬಂದಿದ್ದೇನೆ. ಬಜೆಟ್‌ನಲ್ಲಿ ನಾನು ಹೇಳಿರತಕ್ಕ

ವಿಚಾರದಲ್ಲಿ ಆ ರೀತಿ ಚರ್ಚೆಯಾಗಬೇಕು. ಈ ಸಂದರ್ಭದಲ್ಲಿ ಒಂದು ಸಂತೋಷದ ಮಾತು ಹೇಳಬೇಕೆಂದರೆ, ಮಾನ್ಯ ಮೊಯಿಲಿಯವರು ಈ ಸಾರಿ ಮಾಡಿದಂಥ ಭಾಷಣದಲ್ಲಿ ಹಿಂದಿನದಕ್ಕಿಂತಲೂ ಸ್ವಲ್ಪ ಎತ್ತರಕ್ಕೆ ಹೋಗಿ ಭಾಷಣ ಮಾಡಿದ್ದಾರೆ. ಈ ದೃಷ್ಟಿಯಿಂದ ನೋಡಿದರೆ ಇದು ಅವರು ವಿರೋಧಪಕ್ಷದ ನಾಯಕರಾಗಿ ಇಲ್ಲದೇ ಇದ್ದುದು ಒಳ್ಳೆಯದು ಆಯಿತು ಎಂದು ನನಗನಿಸುತ್ತದೆ. ಅವರು ವಿರೋಧ ಪಕ್ಷದ ನಾಯಕರಾಗಿದ್ದಾಗ ಈ ರೀತಿ ಹೇಳಿಲ್ಲ. ಅದು ಆ ಜಾಗದ ಗುಣವೋ ಏನೋ ಗೊತ್ತಿಲ್ಲ. ಈಗ ಅವರು ಕೆಲವೊಂದು ಮುಖ್ಯವಾದಂಥ ವಿಚಾರದ ಬಗ್ಗೆ ತಮ್ಮ ಅಭಿಪ್ರಾಯವನ್ನು ತಮ್ಮ ಭಾಷಣದಲ್ಲಿ ವ್ಯಕ್ತಮಾಡಲಿಲ್ಲ. ಆ ದೃಷ್ಟಿಯಿಂದ ಅವರನ್ನು ನಾನು ನೆನೆಸುತ್ತೇನೆ. ಅವರು ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿಯ ಬಗ್ಗೆ ನಮ್ಮ ಟ್ಯಾಕ್ಸೇಷನ್ ಪಾಲಿಸಿ ಬಗ್ಗೆ, ಓವರ್ ಡ್ರಾಫ್ಟ್ ವಿಚಾರದ ಬಗ್ಗೆ, ಅಭಿವೃದ್ಧಿ ಬಗ್ಗೆ ತಮ್ಮ ಕೆಲವೊಂದು ವಿಚಾರಗಳನ್ನು ವ್ಯಕ್ತಮಾಡಿದ್ದಾರೆ ; ತಮ್ಮ ಸಂದೇಹವನ್ನು ಪ್ರಕಟ ಮಾಡಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಉತ್ತರ ಕೊಡಬೇಕಾಗಿದೆ. ಇದಕ್ಕೆ ಸ್ವಲ್ಪ ಮೊದಲು ಮಾತನಾಡಿದ ಮಾನ್ಯ ಬಸವಲಿಂಗಪ್ಪನವರು ಏನು ಹೇಳಿದರು ಅಂದರೆ, ನಾವು ಹೆಗಡೆಯವರಿಂದ ನಿರೀಕ್ಷೆ ಮಾಡತಕ್ಕಂತಾದ್ದು ಒಬ್ಬ ಪೊಲಿಟಿಷಿಯನ್ ಉತ್ತರ ಅಲ್ಲ, ಒಬ್ಬ ಸ್ಟೇಟ್ಸ್‌ಮನ್ ಉತ್ತರವನ್ನು ನಿರೀಕ್ಷೆ ಮಾಡುತ್ತೇನೆಂದು ಹೇಳಿದರು. ನಾನು ಅತ್ಯಂತ ನಮ್ರತೆಯಿಂದ ಹೇಳಲಿಕ್ಕೆ ಬಯಸುತ್ತೇನೆ ಆ ಒಂದೇ ಕಾರಣದಿಂದ ಶ್ರೀಮತಿ ಇಂದಿರಾಗಾಂಧಿಯವರಿಗೂ ಮತ್ತು ನನಗೂ ಸಂಬಂಧ ಕಡಿದು ಹೋಯಿತು. ನನ್ನ ಬಯಕೆ ನಿರೀಕ್ಷೆ ಆ ಏನಾಗಿತ್ತೋ. ಅದರಂತೆ ಶ್ರೀಮತಿ ಇಂದಿರಾಗಾಂಧಿಯವರು ಅವರ ತಂದೆಯಂತೆ ಸ್ಟೇಟ್ಸ್‌ಮನ್ ಆಗಲಿಲ್ಲ. ಅದು ನಮ್ಮ ದೇಶದ ದುರ್ದೈವವೋ ಏನೋ ಗೊತ್ತಿಲ್ಲ. ನಾನನು ಬಜೆಟ್ ಭಾಷಣದಲ್ಲಿ ಹೇಳತಕ್ಕ ಒಂದು ಮಾತು ಕೂಡ ಒಬ್ಬ ಪೊಲಿಟಿಷಿಯನ್ ಆಗಿ ಹೇಳಿಲ್ಲ. ನಾನು ಸ್ಟೇಟ್ಸ್‌ಮನ್ ಆಗಿ ಹೇಳಿದ್ದೇನೆ ಎಂದು ಹೇಳಿಲ್ಲ. ಯಾವ ಅರ್ಥದಲ್ಲಿ ಪೊಲಿಟಿಷಿಯನ್ ಆಗಿ ಹೇಳತಕ್ಕ ಶಬ್ದ ಬಳಕೆಯಾಗುತ್ತದೆ, ಆ ಅಡಶದಲ್ಲಿ ಪೊಲಿಟಿಷಿಯನ್ ಆಗಿ ನಾನು ಆ ಭಾಷಣವನ್ನು ತಯಾರು ಮಾಡಲಿಲ್ಲ. ಈ ಆಶ್ವಾಸನೆಯನ್ನು ನಾನು ಅವರಿಗೆ ಕೊಡಲಿಕ್ಕೆ ಬಯಸುತ್ತೇನೆ. ನಮ್ಮ ಬಜೆಟ್ಟನ್ನು ರಾಷ್ಟ್ರದ ಚೌಕಟ್ಟಿನಲ್ಲಿ ನೋಡಬೇಕಾಗಿದೆ. ಈ ಸಂದರ್ಭದಲ್ಲಿ ಕೆಲವೊಂದು ಸ್ಪಷ್ಟ ಚಿತ್ರವನ್ನು ನಾವು ಇಟ್ಟರೆ, ಕೇಂದ್ರ ಸರ್ಕಾರದ ಒಂದು ನೀತಿಯನ್ನು ಖಂಡನೆ ಮಾಡಲಿಕ್ಕೆ ಅಲ್ಲ. ಯಾವುದೋ ಒಂದು ಆರ್ಥಿಕ ಸಾಮಾಜಿಕ ನೀತಿಯ ಬಗ್ಗೆ ಭಿನ್ನಾಭಿಪ್ರಾಯ ಆಗತಕ್ಕದ್ದು ಸ್ವಾಭಾವಿಕ. ಎಲ್ಲರ ವಿಚಾರವೂ ಒಂದೇ ತರಹ ಇರಬೇಕು ಎಂದರೆ ಅದು ಸಾಧ್ಯವಾಗುವುದಿಲ್ಲ. ಬೇರೆ ದೇಶದಲ್ಲಿ ಒಂದೇ ತರಹದ ವಿಚಾರದಲ್ಲಿ ಪಕ್ಷದ ಸಭೆಯಲ್ಲಿ, ಅಥವಾ ಅವರ ಪಾರ್ಲಿಮೆಂಟಿನಲ್ಲಿ ಚರ್ಚೆ ಮಾಡುತ್ತಾರೆ. ಅಲ್ಲಿ ತಮ್ಮ ತಮ್ಮ ವಿಚಾರಗಳನ್ನು ವ್ಯಕ್ತ ಮಾಡುತ್ತಾರೆ. ಕೊನೆಗೆ ಒಂದು ಆಧಾರದ ಮೇಲೆ ನೀತಿ ನಿರೂಪಣೆಯಾಗುತ್ತದೆ. ಅದು ರಾಜಕೀಯದ ತಿರುಳು. ಯಾರು ತನ್ನ ವಿಚಾರವೇ ಕೊನೆಯದು, ಇದಕ್ಕಿಂಥ ಉತ್ತಮ ವಿಚಾರ ಇಲ್ಲ ಎಂದು ತಿಳಿದು ಕೊಂಡಿದ್ದರೆ ಅವರಿಗಿಂತಲೂ ದೊಡ್ಡ ಮೂರ್ಖರು ಯಾರೂ ಇಲ್ಲ ಎಂದು ಹೇಳಲಿಕ್ಕೆ ಬಯಸುತ್ತೇನೆ. ಅನೇಕ ಸಂದರ್ಭಗಳಲ್ಲಿ ನಾನು ಕೇಂದ್ರದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಮತ್ತು ಆರ್ಥಿಕ ನೀತಿಯ ಬಗ್ಗೆ ನನ್ನ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದು ಉಂಟು. ಆದರೆ ಆ ರೀತಿ ನಾನು ಏನಾದರೂ ಸ್ವತಂತ್ರವನ್ನು ಉಪಯೋಗಿಸಿದ್ದರೆ ಅದು ನನ್ನ ಒಬ್ಬ ವ್ಯಕ್ತಿಯ ಅಭಿಪ್ರಾಯವೆಂದು ಅವರು ಅರ್ಥಮಾಡಿಕೊಳ್ಳಬೇಕು ಎಂದು ಹೇಳುವ ಉದ್ದೇಶವೇ ಹೊರತು ಬೇರೆ ಯಾವ ಕಾರಣದಿಂದಲೂ ಅಲ್ಲ. ಇದೇ ಅಭಿಪ್ರಾಯವನ್ನು ನಾನು ರಾಷ್ಟ್ರದ ಅಭಿವೃದ್ಧಿ ಮಂಡಲದಲ್ಲಿ ವ್ಯಕ್ತಮಾಡಬಹುದು. ಆದರೆ ದುರ್ದೈವದಿಂದ ರಾಷ್ಟ್ರದ ಅಭಿವೃದ್ಧಿ ಮಂಡಲಿ ಸಭೆ ಕನಿಷ್ಟ ಪಕ್ಷ ವರ್ಷಕ್ಕೆ ಎರಡು ಸಾರಿ ಆದರೂ ಆಗಬೇಕು. ಆ ರೀತಿ ಆಗುತ್ತಿಲ್ಲ. ಆದುದರಿಂದ, ಯಾರು ಕೇಂದ್ರ ಸರ್ಕಾರವನ್ನು ನಡೆಸುತ್ತಿದ್ದಾರೆ ಅಂಥ ಪಕ್ಷಕ್ಕೆ ಸೇರದೇ ಇದ್ದಂಥ ಸರ್ಕಾರ ಇದ್ದರೆ ಅದು ಕರ್ನಾಟಕದಲ್ಲಿರಬಹುದು, ಪಶ್ಚಿಮ ಬಂಗಾಳದಲ್ಲಿರಬಹುದು, ಆಂಧ್ರದಲ್ಲಿರಬಹುದು, ತಮಿಳುನಾಡಿನಲ್ಲಿರಬಹುದು. ಮತ್ತೆ ಎಲ್ಲೇ ಇರಬಹುದು ಅವರಿಗೂ ಕೂಡ ಒಂದು ಅವಕಾಶ ಬೇಕಾಗುತ್ತದೆಂದು ನಮ್ಮ ಎದುರಿಗೆ ಇರತಕ್ಕಂಥ ಎಲ್ಲ ಸದಸ್ಯರಿಗೂ ಹೇಳಲಿಕ್ಕೆ ಬಯಸುತ್ತೇನೆ. ಇಂದು ರಾಷ್ಟ್ರದ ವಿಚಾರ ಬಂದಾಗ ಅದಕ್ಕೆ ವಿರುದ್ಧವಾದಂಥ ನೀತಿ ಯಾರೇ ಅನುಸರಿಸಲಿ ಅದನ್ನು ಖಂಡಿಸುತ್ತೇವೆಯೇ ಹೊರತು ಅದಕ್ಕೆ ಪುಟ್ಟಿ ಕೊಟ್ಟಿಲ್ಲ.

೧೨-೩೦ ಪಿ ಎಂ.

ಅದೂ ನಮ್ಮ ಪಕ್ಷದ ನೀತಿಯೂ ಅಲ್ಲ. ಆದ್ದರಿಂದ ನಾನು ಹೇಳುತ್ತಿರುವುದು ಏನೆಂದರೆ ಅದು ಪ್ಲಾನಿಂಗ್ ಕಮೀಷನ್ನಿನಲ್ಲಿ ಆದಂತಹ ಚರ್ಚೆಯಲ್ಲಾಗಲೀ, ಅಥವಾ ಕೆಲವು ಸಂದರ್ಭಗಳಲ್ಲಿ ಪತ್ರಿಕಾ ಕರ್ತರು ನನಗೆ ಪ್ರಶ್ನೆಗಳನ್ನು ಕೇಳಿದಾಗಲೆಲ್ಲಾ ಕೇಂದ್ರ ಸರ್ಕಾರ ಅನುಸರಿಸತಕ್ಕ ನೀತಿ ಧೋರಣೆಯನ್ನು ವ್ಯಾಖ್ಯಾನ ಮಾಡಿದರೆ ಅದು ರಾಷ್ಟ್ರಘಾತುಕವಾಗತಕ್ಕಂತಹ ನೀತಿ ಅಂತ ಯಾರೂ ತಿಳಿದುಕೊಳ್ಳ ತಕ್ಕಂತಹ ಅಗತ್ಯ ಇಲ್ಲ. ನಮ್ಮ ಇಂದಿನ ಪ್ರಧಾನಮಂತ್ರಿಗಳು ಅನೇಕ ಸಲ ಹೇಳಿದ್ದಾರೆ. ಎಲ್ಲರೂ ಕೂಡಿಕೊಂಡು ಹೋಗಬೇಕು. ಪಕ್ಷ ಪಕ್ಷಗಳಲ್ಲಿ ಭಿನ್ನಾಭಿಪ್ರಾಯ ಇದ್ದರೂ ರಾಷ್ಟ್ರದ ಸಮಸ್ಯೆಯ ವಿಚಾರದಲ್ಲಿ ಚರ್ಚೆ ಮಾಡೋಣ. ಕೂಡಿಕೊಂಡು ಹೋಗೋಣ ಎನ್ನತಕ್ಕಂತಹ ಮಾತನ್ನು ಹೇಳಿ ದ್ದಾರೆ. ಅದನ್ನು ನಾನು ಸ್ವಾಗತ ಮಾಡಿದ್ದೇನೆ. ಅದನ್ನು ನನ್ನ ಮುಂಗಡ ಪತ್ರದ ಭಾಷಣದಲ್ಲೂ ಹೇಳಿದ್ದೇನೆ. ಇಂದೂ ಕೂಡ ನಾನು ನಮ್ಮ ರಾಜ್ಯದ ಆರ್ಥಿಕ ಸ್ಥಿತಿಯಲ್ಲಿ ಇಲ್ಲಿ ಸದನದ ಮುಂದೆ ಇಡುವುದಕ್ಕಿಂತ ಮೊದಲು ರಾಷ್ಟ್ರದ ಆರ್ಥಿಕ ಸ್ಥಿತಿ ಹೇಗಿದೆ ಅಂತ ಹೇಳಿದರೆ ಅದನ್ನು ಅಪಾರ್ಥ ಮಾಡಿ ಕೊಳ್ಳತಕ್ಕಂತಹ ಅಗತ್ಯ ಇಲ್ಲ. ಇಂದು ಇಡೀ ದೇಶದ ಆರ್ಥಿಕ ಸ್ಥಿತಿ ಕಷ್ಟದಲ್ಲಿದೆ. ಅದಕ್ಕೆ ಇವತ್ತಿನ ಅರ್ಥ ಮಂತ್ರಿಗಳೂ ಜವಾಬ್ದಾರರಲ್ಲ. ಅಥವಾ ನಮ್ಮ ಮಾನ್ಯ ವೆಂಕಟರಾಮನ್ ಅವರ ಆಪ್ತ ಸ್ನೇಹಿತರಾದ ಹಿಂದೆ ಅರ್ಥಮಂತ್ರಿಗಳಾಗಿದ್ದಂತಹ ಪ್ರಣಬ್ ಮುಖರ್ಜಿಯವರೂ ವೈಯಕ್ತಿಕವಾಗಿ ಕಾರಣರೆಂದು ಹೇಳಲಿಲ್ಲ. ಅವರೂ ಕೂಡ ೪-೫ ವರ್ಷಗಳ ಕಾಲ ಅರ್ಥ ಮಂತ್ರಿಗಳಾಗಿದ್ದರು. ಅದಕ್ಕೆ ಅನೇಕ ಕಾರಣಗಳು ಇವೆ. ಅದರಲ್ಲಿ ಅತಿ ದೊಡ್ಡದಾದ ಹಾಗೂ ಅತಿ ಮಹತ್ವವಾದ ಒಂದು ಕಾರಣ ಕೇಂದ್ರ ಸರ್ಕಾರದಲ್ಲಿ ಆರ್ಥಿಕ ಶಿಸ್ತು ಇಲ್ಲದೇ ಇರತಕ್ಕಂತಹದ್ದು. ಆದ್ದರಿಂದ ಕೇಂದ್ರ ಸರ್ಕಾರದ ಆರ್ಥಿಕ ಸ್ಥಿತಿ ಹೆಚ್ಚಿಗೆ ಆಗುವುದಿಲ್ಲ. ಇದು ರಾಷ್ಟ್ರದ ಆರ್ಥಿಕ ಪರಿಸ್ಥಿತಿಯ ಮೇಲೆ ಬಹಳ ಪರಿಣಾಮವನ್ನುಂಟು ಮಾಡಿದೆ. ಅದಕ್ಕಾಗಿ ಕೇಂದ್ರದ ಅರ್ಥಮಂತ್ರಿಗಳ ಜೊತೆ ಮಾತನಾಡುವಾಗ ನಾನು ಅವರಿಗೆ ಹೇಳಿದ್ದೆ. ಆ ಮಾತನ್ನು ಇಲ್ಲೂ ಕೂಡ ನನ್ನ ಬಜೆಟ್ ಭಾಷಣದಲ್ಲೂ ಹೇಳಿದ್ದೇನೆ ಓವರ್ ಡ್ರಾಫ್ಟ್‌ನ್ನು ನಿಲ್ಲಿಸತಕ್ಕ ನಿರ್ಣಯ ಏನಿದೆ ಆ ನಿರ್ಣಯವನ್ನು ಸ್ವಾಗತ ಮಾಡತಕ್ಕಂತಹ ಮುಖ್ಯ ಮಂತ್ರಿಗಳಲ್ಲಿ ನಾನು ಮೊದಲಿಗ ನಾನು ಪ್ರಥಮದವನು. ಕಾಂಗ್ರೆಸ್ (ಐ) ಸರ್ಕಾರದ ಮುಖ್ಯಮಂತ್ರಿಗಳು ಯಾರೂ ಅದನ್ನು ಸ್ವಾಗತ ಮಾಡಲಿಲ್ಲ. ಅದಕ್ಕೆ ಇನ್ನೊಂದು ಕಂಡೀಷನ್ ಅಂತ ಅಲ್ಲ. ಒಂದು ಸೂಚನೆಯನ್ನು ನಾನು ಮಾಡಿ ದ್ದೇನೆ. ನಾನು ಅವರಿಗೆ ಪ್ರಶ್ನೆ ಹಾಕತಕ್ಕ ಸ್ಥಾನದಲ್ಲಿಲ್ಲ ನಾನು ಏನು ಸೂಚನೆ ಕೊಟ್ಟಿದ್ದೇನೆಂದರೆ, ನಮಗೆ ಎಷ್ಟೇ ಕಷ್ಟವಾಗಲಿ. ಇದನ್ನು ಒಪ್ಪಿಕೊಳ್ಳುತ್ತೇವೆ. ಆದರೆ ಯಾವ ಒಂದು ಆರ್ಥಿಕ ಶಿಸ್ತನ್ನು ನಮ್ಮಿಂದ ನಿರೀಕ್ಷಣೆ ಮಾಡುತ್ತೀರೋ ಅದೇ ಶಿಸ್ತನ್ನು ದಯಮಾಡಿ ನಿಮ್ಮ ಆರ್ಥಿಕ ವ್ಯವಹಾರದಲ್ಲೂ ತೋರಿಸಬೇಕು ಎಂದು. ಅಲ್ಲಿ ವಿಪರೀತ ಡಿಫಿಸಿಟ್ ಫೈನಾನ್ಸ್ ಮಾಡಿ ಇಲ್ಲಿ ಎಲ್ಲ ರಾಜ್ಯಗಳಲ್ಲೂ ಓವರ್ ಡ್ರಾಫ್ಟ್ ಇರಲೇ ಕೂಡದು ಅಂತ ನೀವು ಹೇಳಿದರೆ ಅದು ಸಮಂಜಸವಾದ ಧೋರಣೆಯಾಗುವುದಿಲ್ಲ. ಮತ್ತು ಅದು ಸಾಧ್ಯವೂ ಆಗುವುದಿಲ್ಲ. ಈಗ ಆರ್ಥಿಕ ಸ್ಥಿತಿ ಕಷ್ಟ ಇರುವುದರಿಂದ ಪರಸ್ಪರ ತಿಳುವಳಿಕೆ ಯಿಂದ ನಾವು ಪುನಃ ಪುನಃ ವಿಚಾರ ವಿನಿಮಯ ಮಾಡಿಕೊಂಡು ಯಾವ ಯೋಜನೆಯನ್ನು ಯಾವ ರೀತಿ ಯಾಗಿ ನಡೆಸುವುದು ಎಂಬುದು ಒಂದು. ಅದನ್ನು ಮೀರಿ ಹೋಗಿ ರಾಜ್ಯ ಸರ್ಕಾರಗಳು ಮನಬಂದಂತೆ ಬೇರೆ ಬೇರೆ ತರಹದ ಯೋಜನೆಗಳಲ್ಲಿ ಖರ್ಚು ಮಾಡುವುದು, ಆಮೇಲೆ ಓವರ್ ಡ್ರಾಫ್ಟ್ ಮಾಡು ವುದು. ಕೇಂದ್ರ ಸರ್ಕಾರವೂ ಕೂಡ ಅಷ್ಟೆ. ಯಾವ ಯೋಜನೆ ಇರಬೇಕು ಎಂದೇನೂ ಇಲ್ಲ. ಬಜೆಟ್‌ನಲ್ಲಿ ಇರಬೇಕು ಎಂದೂ ಇಲ್ಲ. ನೂರಾರು ಕೋಟಿ ರೂಪಾಯಿಗಳನ್ನು ಕೊಡುತ್ತಾರೆ. ಏಕೆ ಪ್ರಧಾನ ಮಂತ್ರಿಗಳು ಹೇಳಿದರು ಅಂತ ಕೊಡುವುದು. ಅಥವಾ ಯಾರದ್ದೋ ಒತ್ತಡ ಬಂತು ಅಂತ ಕೊಡುವುದು. ಅಥವಾ ಬೇರೆ ಕಾರಣಕ್ಕಾಗಿ ಕೊಡುವುದು. ಈ ರೀತಿಯ ದ್ವಿಮುಖ ನೀತಿ ನಮ್ಮ ಇಡೀ ರಾಷ್ಟ್ರದ ಹಿತಕ್ಕೇ ವಿರೋಧವಾದುದು. ಇದನ್ನು ಒಮ್ಮೆ ಹೇಳಿದರೆ ನಾನು ಈ ಮೊದಲೇ ಹೇಳಿದ ಹಾಗೆ ಯಾರೂ ಅದನ್ನು ಅಪಾರ್ಥ ಮಾಡಿಕೊಳ್ಳತಕ್ಕಂತಹ ಅಗತ್ಯ ಇಲ್ಲ. ಮಾರ್ಚಿ ತಿಂಗಳಲ್ಲಿ ನಾವು ತಾತ್ಕಾಲಿಕವಾದ ಬಜೆಟ್‌ನ್ನು ಈ ಸಭೆಯ ಮುಂದಿಟ್ಟಿದ್ದೇವೆ. ಅದು ತಾತ್ಕಾಲಿಕವಾದ ಬಜೆಟ್ ಎರಡು ಕಾರಣಗಳಿಂದ ಒಳಗೊಂಡಿದೆ. ನಮ್ಮ ರಾಜ್ಯದಲ್ಲಿ ಚುನಾವಣೆ ಆಗತಾನೆ ಆಗಿರುವುದರಿಂದ, ಮಾರ್ಚಿ ತಿಂಗಳೊಳಗಾಗಿ ಬಜೆಟ್‌ನ್ನು ತಯಾರು ಮಾಡಿ ಅದಕ್ಕೆ ಓಟ್ ಆನ್ ಅಕೌಂಟ್ ಅಂದರೆ ಸಭೆಯ ಒಪ್ಪಿಗೆಯನ್ನು ಪಡೆಯತಕ್ಕಂತಹದ್ದು ಸಾಧ್ಯವಾಗುತ್ತಿರಲಿಲ್ಲ, ಅಷ್ಟು ವೇಳೆಯಲ್ಲಿ ಬಜೆಟ್‌ನ್ನು ತಯಾರು ಮಾಡುವುದಕ್ಕಾಗುತ್ತಿರಲಿಲ್ಲ, ನಮ್ಮ ಚುನಾವಣೆ ಮಾರ್ಚಿ ೧೦ನೇ ತಾರೀಖು ಆಗಿದ್ದು.

ಮತ್ತು ನಮ್ಮ ರಾಜ್ಯದ ೭ನೇ ಪಂಚ ವಾರ್ಷಿಕ ಯೋಜನೆ ಹೇಗಿದೆ ಹಾಗೂ ವಾರ್ಷಿಕ ಯೋಜನೆಯ ರೂಪರೇಷೆ ಹೇಗಿದೆ ಎಂಬುದು ಕೂಡ ನಮಗೆ ಗೊತ್ತಿರಲಿಲ್ಲ. ನಾವು ಏನನ್ನೂ ಅವಲಂಬನೆ ಮಾಡಲಿಲ್ಲ ಸುಮಾರು ೮೫೦ ಕೋಟಿ ರೂಪಾಯಿಗಳ ಯೋಜನೆ, ಅಂದರೆ ನೀರಾವರಿ ಮತ್ತು ವಿದ್ಯುಚ್ಛಕ್ತಿ ಹಾಗೂ ಸಾಮಾಜಿಕ ಸೇವೆಗಳು ಈ ವ್ಯವಹಾರಕ್ಕೆ ಅತ್ಯಂತ ಪ್ರಾಧಾನ್ಯತೆಯನ್ನು ಕೊಟ್ಟು, ನಮ್ಮ ವಾರ್ಷಿಕ ಯೋಜನೆಗಳನ್ನು ತಯಾರು ಮಾಡಿದೆವು. ಹಿಂದಿನ ತಾತ್ಕಾಲಿಕ ಬಜೆಟ್‌ನಲ್ಲಿ ಆ ವಿಚಾರವನ್ನೂ ಸಹ ಪ್ರಸ್ತಾಪ ಮಾಡಿದ್ದೇನೆ. ಆದರೆ ಯೋಜನಾ ಆಯೋಗದವರ ಜೊತೆಯಲ್ಲಿ ಚರ್ಚೆ ಮಾಡಿ ಬಂದ ಮೇಲೆ ೭ನೇ ಪಂಚವಾರ್ಷಿಕ ಯೋಜನೆಯ ಗಾತ್ರ ಬಹಳ ಕಡಿಮೆಯಾಯಿತು. ಮತ್ತು ಅದಕ್ಕನುಗುಣವಾಗಿ ನಮ್ಮ ವಾರ್ಷಿಕ ಯೋಜನೆಯ ಗಾತ್ರವನ್ನೂ ಕೂಡ ಕಡಿಮೆ ಮಾಡತಕ್ಕಂತಹ ಪ್ರಸಂಗ ಬಂತು. ಹಿಂದಿನ ಬಜೆಟ್‌ನಲ್ಲಿ ನಾನು ತೋರಿಸಿದ ಕೊರತೆ ಹೇಗೆ ಕಡಿಮೆಯಾಯಿತು ಎಂದು ಹೇಳತಕ್ಕಂತಹ ಮಾತನ್ನು ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಮತ್ತು ಶ್ರೀಮಾನ್ ಮೊಯ್ಲಿಯವರು ಮುಖ್ಯವಾಗಿ ಅಂಕಿ ಸಂಖ್ಯೆಗಳಲ್ಲಿ ಸ್ವಲ್ಪ ಮಟ್ಟಿಗೆ ವ್ಯತ್ಯಾಸ ಇದೆ ಎಂದೂ ಕೂಡ ಅವರು ಹೇಳಿದ್ದಾರೆ. ಅಂತಹ ಮನುಷ್ಯರಲ್ಲಿ ಇನ್ನೂ ಸ್ವಲ್ಪ ಮಟ್ಟಿಗೆ ಗೊಂದಲ ಇದ್ದರೆ ಅದು ಹೋಗಬೇಕು, ಆ ದೃಷ್ಟಿಯಿಂದ ಈ ಅಂಕಿ ಸಂಖ್ಯೆಗಳನ್ನು ಸದನದ ಮುಂದಿಡುವುದಕ್ಕೆ ಬಯಸುತ್ತೇನೆ. ಹೋದ ಸಲ ನಾವು ಏನು ವಾರ್ಷಿಕ ಯೋಜನೆಗಾಗಿ ಹಣವನ್ನು ಅದರಲ್ಲಿ ತೋರಿಸಿದ್ದೇವೆ. ಅದು ೮೪೯ ಕೋಟಿ ರೂ.ಗಳು. ಅದನ್ನು ನಮ್ಮ ಯೋಜನಾ ಆಯೋಗದವರ ಜೊತೆಯಲ್ಲಿ ಚರ್ಚೆ ಮಾಡಿದ ಮೇಲೆ ೬೫೧ ಕೋಟಿ ರೂಪಾಯಿಗಳಿಗೆ ಇಳಿಸಬೇಕಾಯಿತು. ಅಂದರೆ ಇದರಲ್ಲಿ ವ್ಯತ್ಯಾಸ ೨೦೮ ಕೋಟಿ ರೂಪಾಯಿಗಳು ಬಂತು. ಆಮೇಲೆ ಕಳೆದ ೪ ತಿಂಗಳ ಅವಧಿಯಲ್ಲಿ ಬಾಕಿ ಇದ್ದಂತಹ ಸಾಲದ ವಸೂಲಾತಿ, ಅರಿಯರ್ಸ್ ಮತ್ತು ಸ್ವಲ್ಪ ಮಟ್ಟಿನ ಟ್ಯಾಕ್ಸ್ ಕಲೆಕ್ಷನ್ ಇವುಗಳಲ್ಲಿ ಇಂಪ್ರೂವ್‌ಮೆಂಟ್ ಆಗಿ ೪೩.೭೮ ಕೋಟಿ ರೂಪಾಯಿಗಳು ಹೆಚ್ಚಿನ ಆದಾಯ ನಿರೀಕ್ಷೆ ಮಾಡಿದ್ದಕ್ಕಿಂತ ಹೆಚ್ಚು ಬಂತು. ಆಮೇಲೆ ಓವರ್ ಡ್ರಾಫ್ಟ್ ವಿಚಾರದಲ್ಲಿ ಕೇಂದ್ರ ಸರ್ಕಾರದವರು ತೆಗೆದುಕೊಂಡಂತಹ ಒಂದು ನಿರ್ಣಯದಿಂದ ಶೇಕಡ ೧೦ ಪರ್ಸೆಂಟ್ ಈ ವರ್ಷ ಕೊಡಬೇಕು. ಮತ್ತು ಬರುವ ಮೂರು ವರ್ಷಗಳ ಅವಧಿಯಲ್ಲಿ ಪ್ರತಿ ವರ್ಷ ಕ್ರಮವಾಗಿ ೩೫ ಪರ್ಸೆಂಟ್ ಹಾಗೂ ೨೦ ಪರ್ಸೆಂಟ್ ಕೊಡಬೇಕೆಂದು ಹೇಳಿದರು. ಅದರ ಪ್ರಕಾರ ೨೮೨.೨೧ ಕೋಟಿ ರೂಪಾಯಿ ಉಳಿಯಿತು. ಅದರಿಂದ ತಾತ್ಕಾಲಿಕವಾಗಿ ನಮಗೆ ಅನುಕೂಲವಾಯಿತು. ಅದು ಓವರ್ ಡ್ರಾಫ್ಟ್ ಅಲ್ಲ. ಅದರಿಂದ ನಮಗೆ ೨೨೧.೨೬ ಕೋಟಿ ರೂಪಾಯಿಗಳಷ್ಟು ಸುಧಾರಣೆಯಾಯಿತು. ಆಮೇಲೆ ಓಪನಿಂಗ್ ಬ್ಯಾಲೆನ್ಸ್‌ನಲ್ಲಿ ನಾವು ನಿರೀಕ್ಷೆ ಮಾಡಿದ್ದಕ್ಕಿಂತ ಸ್ವಲ್ಪಮಟ್ಟಿಗೆ ಹೆಚ್ಚಿಗೆ ಸುಧಾರಣೆಯಾಯಿತು. ಅದು ೨೬.೯೧ ಕೋಟಿ ರೂಪಾಯಿಗಳು. ಇವೆಲ್ಲದರ ಜೊತೆಗೆ ನಮ್ಮ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿದಂತಹ ಕರ ಅವುಗಳಿಂದ ಬರತಕ್ಕ ಉತ್ಪಾದನೆ ನಾವು ನಿರೀಕ್ಷೆ ಮಾಡಿದ್ದು ೫೦ ಕೋಟಿ ರೂಪಾಯಿಗಳು. ಹೀಗೆ ಒಟ್ಟು ಎಲ್ಲ ಸೇರಿ ೫೦೯.೯೫ ಕೋಟಿ ರೂಪಾಯಿಗಳ ಸುಧಾರಣೆಯಾಗಿದೆ. ಆದರೆ ನಾವು ಹಿಂದಿನ ಬಜೆಟ್‌ನಲ್ಲಿ ತೋರಿಸಿದಂತಹ ೬೨೩.೮೧ ಕೋಟಿ ರೂಪಾಯಿಗಳ ಒಟ್ಟು ಕೊರತೆಯಲ್ಲಿ ಇಷ್ಟನ್ನು ತೆಗೆದರೆ ಸರಿಯಾಗಿ ಇರತಕ್ಕಂತಹ ಕೊರತೆ ೭೩.೮೬ ಕೋಟಿ ರೂಪಾಯಿಗಳು ಮಾತ್ರ ಆದ್ದರಿಂದ ನಾವು ಕೊಟ್ಟಿರತಕ್ಕಂತಹ ಅಂಕಿ ಸಂಖ್ಯೆಗಳಲ್ಲಿ ಯಾವುದೇ ರೀತಿಯ ಗೊಂದಲ ಇಲ್ಲ. ಅಥವಾ ತಪ್ಪು ಇಲ್ಲ ಅಂತ ನಾನು ಹೇಳುವುದಕ್ಕೆ ಬಯಸುತ್ತೇನೆ. ನಾನು ಕೇಂದ್ರ ಸರ್ಕಾರದ ಅರ್ಥ ಮಂತ್ರಿಗಳಿಗೆ ಕೊಟ್ಟ ಮಾತಿನಂತೆ ನಡೆದುಕೊಂಡಿದ್ದೇನೆ. ಆದರೆ ದುರ್ದೈವದಿಂದ ನಾನು ಹೇಳಬೇಕಾಗುತ್ತದೆ, ಅದೇ ತರಹದ ನೀತಿಯನ್ನು ಕೇಂದ್ರ ಸರ್ಕಾರದ ಅರ್ಥಮಂತ್ರಿಗಳು ಜಾರಿಯಲ್ಲಿ ತರಲಿಲ್ಲ, ಅದನ್ನು ನಾನು ಅಂಕಿ ಸಂಖ್ಯೆಗಳ ಮುಖಾಂತರವಾಗಿ ಮಾನ್ಯ ಸಲಿದಕ್ಕೆ ತಿಳಿಸಲು ಬಯಸುತ್ತೇನೆ. ನಾನು ಈಗಾಗಲೇ ಹೇಳಿದ ಹಾಗೆ ನಮ್ಮ ಇಂಟರಿಮ ಬಜೆಟ್ ಮತ್ತು ಇವತ್ತಿನ ಬಜೆಟ್ ಇವುಗಳಲ್ಲಿ ಎಷ್ಟರಮಟ್ಟಿಗೆ ಸುಧಾರಣೆಯಾಗಿದೆ ಎಂದರೆ ೬೨೩.೮೧ ಕೋಟಿ ರೂಪಾಯಿಗಳ ಕೊರತೆಯಿಂದ ೭೩.೮೬ ಕೋಟಿ ರೂಪಾಯಿಗಳ ಕೊರತೆಗೆ ಇಳಿಸಿದ್ದೇವೆ. ಕೇಂದ್ರ ಸರ್ಕಾರದ ಬಜೆಟ್‌ನಲ್ಲೂ ಸಹ ೩,೬೦೦ ಕೋಟಿ ರೂಪಾಯಿಗಳ ಕೊರತೆ ಮಾರ್ಚಿ ತಿಂಗಳಲ್ಲಿ ಬಜೆಟ್‌ನ್ನು ಮಂಡಿಸಿದಾಗ ಇತ್ತು. ಈಗ ಪುನ: ಈ ತಿಂಗಳಲ್ಲಿ ಒಂದು ಸಪ್ಲಿಮೆಂಟರಿ ಬಜೆಟ್‌ನ್ನು ನಮ್ಮ ಕೇಂದ್ರದ ಅರ್ಥಮಂತ್ರಿಗಳು ಮಂಡಿಸಿದ್ದಾರೆ, ಈ ಸಪ್ಲಿಮೆಂಟರಿ ಬಜೆಟ್‌ನಲ್ಲಿ ೩.೮೫೨ ಕೋಟಿ ರೂಪಾಯಿಗಳ ಬೇಡಿಕೆ ಇದೆ ಈ ೩.೮೫೨ ಕೋಟಿ ರೂಪಾಯಿಗಳ ಒಟ್ಟು ಬೇಡಿಕೆಯಲ್ಲಿ ಕೇವಲ ೧,೨೦೦ ಕೋಟಿ ರೂಪಾಯಿಗಳೋ ಅಥವಾ ೧,೪೦೦ ಕೋಟಿ ಕೋಟಿ ರೂಪಾಯಿಗಳು ಮಾತ್ರ ಪ್ಲಾನಿಂಗ್‌ಗೆ ಸಂಬಂಧ ಪಟ್ಟಿದ್ದು

ಬಾಕಿ ಎಲ್ಲ ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ಸ್‌ಗೆ ಸಂಬಂಧಪಟ್ಟದ್ದು, ಇದರಲ್ಲಿ ವೈಜಾಕ್ ಸ್ಟೀಲ್ ಪ್ಲಾಂಟ್‌ಗೆ ೩೪೦ ಕೋಟಿಯೋ ಅಥವಾ ೩೫೦ ಕೋಟಿ ರೂಪಾಯಿಗಳನ್ನೂ ಕೊಡುವಂತಹ ಒಂದು ಐಟಂ ಇದೆ. ಈ ಪ್ರಶ್ನೆಯನ್ನು ನಾನು ಕೇಳಿದರೆ, ನೀವು ಹೇಳುತ್ತೀರಿ ರಾಜಕೀಯ ತರುತ್ತೀರಿ ಎಂದು ನನ್ನ ಪ್ರಶ್ನೆ ಏನು ? ವೈಜಾಕ್ ಸ್ಟೀಲ್ ಪ್ಲಾಂಟ್‌ಗೆ ಕೊಡಲಿ. ನಾವು ಅದಕ್ಕೆ ವಿರೋಧ ಇಲ್ಲ. ಅವರೂ ನಮ್ಮ ನೆರೆಹೊರೆಯವರು. ವೈಜಾಕ್ ಸ್ಟೀಲ್ ಪ್ಲಾಂಟ್‌ಗೆ ಈ ೪ ತಿಂಗಳ ಅವಧಿಯಲ್ಲೇ ೩೪೦ ಕೋಟಿ ರೂಪಾಯಿಗಳನ್ನು ಕೊಡತಕ್ಕಂತಹ ಅಗತ್ಯ ಏಕೆ ಬಿತ್ತು? ಇನ್ನು ಏನಾದರೂ ಈ ವರ್ಷದ ಕೊನೆಗೆ ಬಂದಿದ್ದರೆ, ಆರ್ಡರ್ ಮಾಡಿದ್ದರೆ, ದುಡ್ಡು ಕೊಡಬೇಕಾಗುತ್ತದೆ ಅಂತ ತಿಳಿದುಕೊಳ್ಳಬಹುದು ಅದಕ್ಕಾಗಿ ಬಜೆಟ್‌ನಲ್ಲಿ ಇಲ್ಲದೇ ಇದ್ದರೂ ಸಪ್ಲಿಮೆಂಟರಿ ಬಜೆಟ್‌ನಲ್ಲಿ ತೆಗೆದುಕೊಡಬೇಕೆಂದು ಹೇಳಿದರೆ ಏನು ಅರ್ಥವಾಗುತ್ತವೆ ? ಆಗತ್ಯ ಇತ್ತು ಎಂದರೂ ಬಜೆಟ್‌ನಲ್ಲಿ ಏಕೆ ಆ ಬಗ್ಗೆ ಪ್ರಸ್ತಾಪ ಮಾಡಲಿಲ್ಲ ಕೇಂದ್ರದ ಬಜೆಟ್ ಪಾಸಾಗಿ ಕೇವಲ ೨ ತಿಂಗಳು ಕೂಡ ಆಗಲಿಲ್ಲ. ಈ ರೀತಿಯ ಒಂದು ವಿಷಯ ಬಂದರೆ ಅದರಿಂದ ಒಟ್ಟಾರೆ ಇಡೀ ರಾಷ್ಟ್ರದಲ್ಲಿಯೇ ಕೆಟ್ಟ ಪರಿಣಾಮ ಉಂಟಾಗುತ್ತದೆ, ಮಾನ್ಯ ಮೊಯ್ಲಿಯವರು ಡಿಫಿಸಿಟ್ ಅಂದರೆ ಕೊರತೆಯ ಪ್ರಮಾಣ ಹೆಚ್ಚಾಗಿದೆ ಎಂದು ಹೇಳತಕ್ಕಂತಹ ಮಾತನ್ನು ಹೇಳಿದರು. ಅದಕ್ಕಾಗಿ ಈ ಮಾನ್ಯ ಸದನಕ್ಕೆ ಆದರ ಬಗ್ಗೆ ವಿವರವನ್ನು ಕೊಡುವುದಕ್ಕೆ ಬಯಸುತ್ತೇನೆ. ಒಟ್ಟು ಹಣ ಅಪ್ರೊಪ್ರಿಯೇಟ್ ಮಾಡತಕ್ಕಂತಹದ್ದು ಈ ವರ್ಷಕ್ಕೆ ಪಾಸ್ ಮಾಡುವು ದಕ್ಕೆ ನಾವು ಇಟ್ಟಿದ್ದು ೩,೯೧೦ ಕೋಟಿ ರೂಪಾಯಿಗಳು. ರೌಂಡ್ ಫಿಗರ್ ಅಂತ ತೆಗೆದುಕೊಂಡರೆ ೪,೦೦೦ ಕೋಟಿ ರೂಪಾಯಿಗಳು. ೧೯೮೨–೮೩ನೇ ಸಾಲಿನಲ್ಲಿ ೧,೮೦೦ ಕೋಟಿ ರೂಪಾಯಿಗಳಿತ್ತು. ಈಗ ಅಂದರೆ ೧೯೮೨-೮೩ನೇ ಸಾಲಿನ ಒಟ್ಟು ಅಪ್ರೋಪ್ರಿಯೇಟೆಡ್ ಅಮೌಂಟ್ ೧,೮೦೦ ಕೋಟಿ ರೂಪಾಯಿಗಳು. ಡಿಫಿಸಿಟ್ ಪರ್ಸೆಂಟೇಜ್ ಎಷ್ಟು ಅಂದರೆ ಎರಡೂವರೆ ಪರ್ಸೆಂಟ್. ಈಗಿನ ಡಿಫಿಸಿಟ್ ಪರ್ಸೆಂಟೇಜ್ ಕೇವಲ ೨.೧೯ ಪರ್ಸೆಂಟ್. ೬೦೦ ಕೋಟಿ ರೂಪಾಯಿಗಳಷ್ಟಿರಬಹುದು. ಆದರೆ ಒಟ್ಟು ಅಪ್ರೋಪ್ರಿಯೇಷನ್ ನ ಲೆಕ್ಕ ಹಾಕಿದರೆ ಡಿಫಿಸಿಟ್‌ನ ಪ್ರಮಾಣ ಮೊದಲಿಗಿಂತಲೂ ಕಡಿಮೆ ಯಾಗಿದೆಯೇ ಹೊರತು ಮೊದಲಿಗಿಂತಲೂ ಹೆಚ್ಚಾಗಲಿಲ್ಲ. ಆಮೇಲೆ ಮತ್ತೊಂದು ವಿಚಾರವನ್ನು ಮಾನ್ಯ ಮೊಯ್ಲಿಯವರು ಪ್ರಸ್ತಾಪ ಮಾಡಿದರು. ಅದು ಪ್ಲಾನ್ ಎಕ್ಸ್‌ಪೆಂಡಿಚರ್ ಮತ್ತು ನಾನ್ ಪ್ಲಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಬಗ್ಗೆ ನಿಜ. ಅದರಲ್ಲಿ ಸ್ವಲ್ಪ ಮಟ್ಟಿನ ಹೆಚ್ಚಳ ಆಗಿದೆ. ೧೯೮೨-೮೩ನೇ ಸಾಲಿನಲ್ಲಿ ನಾನ್ ಪ್ಲಾನ್ ಡೆವಲಪ್‌ಮೆಂಟಲ್ ಎಕ್ಸ್‌ಪೆಂಡಿಚರ್ ೫೧೬ ಕೋಟಿ ರೂಪಾಯಿಗಳು ಇತ್ತು ಕಳೆದ ವರ್ಷ ಅದು ೬೨೮ ಕೋಟಿ ರೂಪಾಯಿಗಳಾಗಿದೆ. ಮತ್ತೆ ನಾನ್ ಪ್ಲಾನ್ ಡೆವಲಪ್‌ಮೆಂಟ್ ಖರ್ಚು ಅಂದರೆ ಪೋಲೀಸ್, ಜೈಲ್ಸ್, ಅಡ್ಮಿನಿಸ್ಟ್ರೇಷನ್ ಆಫ್ ಜಸ್ಟೀಸ್ ಮೊದಲಾದವು ಸೇರಿದಂತೆ ೧೯೮೨-೮೩ರಲ್ಲಿ ೨೬.೫ ಕೋಟಿ ರೂಪಾಯಿಗಳಾಗಿತ್ತು. ಈಗ ೩೬.೩ ಕೋಟಿ ರೂಪಾಯಿಗಳಾಗಿದೆ. ಇದರ ಜೊತೆಗೆ ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಅಂದರೆ ನಾವು ತೆಗೆದುಕೊಂಡಿರತಕ್ಕಂತಹ ಸಾಲಕ್ಕೆ ಕೇಂದ್ರ ಸರ್ಕಾರಕ್ಕೆ ಕೊಡಬೇಕಾಗಿರುವ ಬಡ್ಡಿ, ೧೯೮೧–೮೨ ಸಾಲಿನಲ್ಲಿ ೬೨ ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ೧೯೮೪-೮೫ನೇ ಸಾಲಿನಲ್ಲಿ ೧೩೭ ಕೋಟಿ ರೂಪಾಯಿ ಗಳನ್ನು ಕೊಟ್ಟಿದೆ. ಈ ವರ್ಷ ಅದಕ್ಕಿಂತ ಹೆಚ್ಚು ಕೊಡಬೇಕಾಗುತ್ತದೆ. ೧೯೮೪–೮೫ನೇ ಅಂಕಿಯನ್ನು ಕೊಡುತ್ತಿದ್ದೇನೆ. ಇದರಲ್ಲಿ ಒಂದು ಮಾತನ್ನು ಅವರು ಮರೆತಿಲ್ಲ ಎಂಬುದು ನನ್ನ ಭಾವನೆ. ಏಕೆಂದರೆ ಮರೆತಿರುವುದಕ್ಕೆ ಸಾಧ್ಯವೇ ಇಲ್ಲ. ಅವರೂ ಕೂಡ ಹಣಕಾಸಿನ ಮಂತ್ರಿಗಳಾಗಿದ್ದಂತವರು ಈ ವರ್ಷ ಹೆಚ್ಚು ಮಾಡುವುದಕ್ಕೆ ಒಂದು ಮುಖ್ಯವಾದ ಕಾರಣ ಅಂದರೆ, ಇಂಡೆಕ್ಸ್ ಪಾಯಿಂಟ್ ಹೆಚ್ಚಾದ ಹಾಗೆಲ್ಲ ಕೇಂದ್ರ ಸರ್ಕಾರದವರು ತನ್ನ ನೌಕರರಿಗೆ ತುಟ್ಟಿಭತ್ಯವನ್ನು ಕೊಡುತ್ತಾರೆ. ಅದೇ ರೀತಿ, ನಾವು ಸಹ ಇಲ್ಲಿ ಕೊಡಬೇಕಾಗುತ್ತದೆ. ಕೊಟ್ಟಿದ್ದಕ್ಕೆಲ್ಲಾ ಕೊಡಬೇಕೆಂದಲ್ಲ. ನ್ಯಾಯವಾದ ದೃಷ್ಟಿ ಯಿಂದ ಕೊಡಬೇಕಾಗುತ್ತದೆ. ಪಕ್ಕದ ಮನೆಯಲ್ಲೇ ಕೇಂದ್ರ ಸರ್ಕಾರದ ನೌಕರರು ಇರುತ್ತಾರೆ. ನಮ್ಮ ನೌಕರರೂ ಇರುತ್ತಾರೆ. ಅವರಿಗೆ ಡಿ.ಎ. ಸಿಕ್ಕುತ್ತದೆ. ನಮ್ಮ ನೌಕರರಿಗೆ ಡಿ.ಎ. ಸಿಕ್ಕುತ್ತಿಲ್ಲ. ಆದರೆ ಇಬ್ಬರೂ ಹೋಗುವುದೂ ಒಂದೇ ಮಾರ್ಕೆಟ್ಟಿಗೆ ಕೇಂದ್ರ ಸರ್ಕಾರ ತನ್ನ ನೌಕರರಿಗೆ ಬೋನಸ್ ಅನೌನ್ಸ್ ಮಾಡಿದೆ. ಈ ನೀತಿ ನಮಗೆ ಅರ್ಥವಾಗುವುದಿಲ್ಲ. ಬೋನಸ್‌ನ ಮೂಲವಾದ ತತ್ವ ಏನೆಂದರೆ ಶ್ರಮದಿಂದ ಉತ್ಪಾದನೆ ಮಾಡತಕ್ಕಂಥ ಯಾವ ಕೆಲಸವಿದೆ ಆ ಉತ್ಪಾದನೆಯ ಹೆಚ್ಚಳಿಂದ ಆರ್ಥಿಕವಾಗಿ ಲಾಭವಾಗುತ್ತದೆ. ಆ ಲಾಭದಲ್ಲಿ ತನ್ನ ಕೆಲಸಗಾರರಿಗೆ ಒಂದು ಅಂಶವನ್ನು ಅವರಿಗಾಗಿ ಇಡಬೇಕು ಅಂತ ಹೇಳತಕ್ಕಂತಹದ್ದೇ ಮೂಲ ತತ್ವ ಅದರ ಅರ್ಥ ಆದರೆ ಇವತ್ತು ಉತ್ಪಾದನೆ ಹೆಚ್ಚಾಗಲಿ. ಅಥವಾ ಬಿಡಲಿ. ಲಾಭವಾಗಲೀ

ಅಥವಾ ಬಿಡಲಿ ಬೋನಸ್ ಕೊಡಬೇಕೆಂಬ ಕಾಯಿದೆ ಬಂತು. ಇವತ್ತು ನಮ್ಮ ಸರ್ಕಾರದ ಸಂಸ್ಥೆಗಳು ಏನು ಇದ್ದಾವೆ. ಅವುಗಳು ಬಿಸಿನೆಸ್ ಸಂಸ್ಥೆಗಳೇ ? ಅಥವಾ ಕೈಗಾರಿಕೆಗಳೇ ? ಯಾವ ಆಧಾರದ ಮೇಲೆ ಕೇಂದ್ರ ಸರ್ಕಾರದವರು ತನ್ನ ನೌಕರರಿಗೆ ಬೋನಸ್ ಕೊಟ್ಟರು ?

ಅವರು ಸಂಬಳವನ್ನು ಹೆಚ್ಚು ಮಾಡಲಿಕ್ಕೆ, ಸ್ಕೇಲನ್ನು ಹೆಚ್ಚು ಮಾಡಲಿಕ್ಕೆ ಈ ತರಹ ಕ್ರಮವನ್ನು ತೆಗೆದುಕೊಂಡರೆ ಅತಿಪ್ರಸರಣವಾಗುತ್ತದೆ, ಅದರಿಂದ ನಮಗೆ ತೊಂದರೆಯಾಗುತ್ತದೆ. ಆಮೇಲೆ ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ವಿವರವನ್ನು ನಾನು ಒಂದು ಹೆಜ್ಜೆ ಮುಂದೆ ಹೋಗಿ ಕೊಡುವು ದಾದರೆ, ಡಿಸ್‌ಚಾರ್ಜ್ ಆಫ್ ಇಂಟರ್ನಲ್ ಡೆಟ್ ೧೯೮೨-೮೩ರಲ್ಲಿ ೧೪ ಕೋಟಿ ಇದ್ದರೆ ೧೯೮೪-೮೫ರಲ್ಲಿ ೪೭-೪೮ ಕೋಟಿ, ಕೇಂದ್ರ ಸರ್ಕಾರಕ್ಕೆ ಲೋನ್ ರೀಪೇಮೆಂಟ್ ೧೯೮೨-೮೩ರಲ್ಲಿ ೯೯ ಕೋಟಿ ಇದ್ದರೆ ೧೯೮೪-೮೫ರಲ್ಲಿ ೯೯-೩೮ ಕೋಟಿ. ಲೋಕಲ್ ಬಾಡೀಸ್‌ಗೆ ೧೯೮೨-೮೩ರಲ್ಲಿ ೩೯ ಕೋಟಿ ಕೊಟ್ಟಿದ್ದರೆ ೧೯೮೪-೮೫ರಲ್ಲಿ ೬೩ ಕೋಟಿ ರೂಪಾಯಿ ಕೊಡಲಾಗಿದೆ. ಹೀಗಾಗಿ ನಾನ್ ಡೆವಲಪ್‌ಮೆಂಟ್ ಖರ್ಚು ೧೯೮೨-೮೩ರಲ್ಲಿ ೫೦೫ ಕೋಟಿ ಇದ್ದರೆ ೧೯೮೪-೮೫ರಲ್ಲಿ ೭೩೪ ಕೋಟಿ ಆಗಿದೆ. ಇದು ಆದದು ಇಷ್ಟೆ ನಮ್ಮ ಹಣಕಾಸಿನ ಪರಿಸ್ಥಿತಿ ಏನಾದರೂ ಕೆಟ್ಟು ಹೋಗಿದೆ ಎಂದರೆ ಮೊಯಿಲಿಯವರಿಗೆ ಪ್ರಿಯವಾದ ವಿಷಯವಾಗುತ್ತದೆ. ಈಗೀಗ ಸ್ವಲ್ಪ ಹೇಳಿಕೆ ಕೊಡುವುದನ್ನು ಕಡಿಮೆ ಮಾಡಿದ್ದಾರೆ ಬಹುಶಃ ನನ್ನ ಮೇಲೆ ಕರುಣೆ ಇಟ್ಟು ಎಂದು ಕಾಣುತ್ತದೆ. ಇಲ್ಲದಿದ್ದರೆ ೧೫ ದಿನಗಳಿಗೊಂದು ಹೇಳಿಕೆಯನ್ನು ಬರಬೇಕಿತ್ತು. ಅದು ಬಂದರೆ ಒಳ್ಳೆಯದು. ಅದರಿಂದ ನಮಗೆ ಅನುಕೂಲವಾಗುತ್ತದೆ. ನಮ್ಮಲ್ಲಿ ಏನು ತೊಂದರೆ ಆಗಿದೆ, ಪರಿಸ್ಥಿತಿ ಏಕೆ ಕೆಟ್ಟು ಹೋಗಿದೆ ಎಂದು ಅಧಿಕಾರಿಗಳನ್ನು ಕರೆಸಿ ಕೇಳುತ್ತೇನೆ. ಏಕೆಂದರೆ, ಮೊಯಿಲಿಯವರು ದೊಡ್ಡವರು ಹೇಳಿದ್ದಾರೆಂದು, ಆರನೇ ಪಂಚವಾರ್ಷಿಕ ಯೋಜನೆ ಯಲ್ಲಿ ಬೇರೆಬೇರೆ ರಾಜ್ಯಗಳು ತಮ್ಮ ಸ್ವಂತ ರಿಸೋರ್ಸಸ್ ಅನ್ನು ಒದಗಿಸಿಕೊಳ್ಳುತ್ತವೆ. ಬಡ್ಜೆಟರಿ ರಿಸೋರ್ಸಸ್ ಮತ್ತು ಕಾಂಟ್ರಿಬ್ಯೂಷನ್ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಿಂದ ಬರತಕ್ಕದ್ದು ಇದೆ. ಎಲೆಕ್ಟ್ರಿಸಿಟಿ ಬೋರ್ಡ್, ಕೆ.ಎಸ್.ಆರ್.ಟಿ.ಸಿ. ಇತ್ಯಾದಿ ಮುಂಗಡೊಂದರಿಂದ ನಮ್ಮ ಸ್ವಂತ ಎಫರ್ಟಿನಿಂದ ನಾವು ಒಟ್ಟು ಶೇಖರಣೆ ಮಾಡಿರತಕ್ಕದ್ದು ೧೪೪ ಕೋಟಿ. ಈ ಒಂದು ಅಂಶದಲ್ಲಿ ನಮ ಗಿಂತ ಮೇಲೆ ಇದ್ದಂತಹ ರಾಜ್ಯಗಳು ಅಂದರೆ ಮಹಾರಾಷ್ಟ್ರ, ಗುಜರಾತ್, ಇವೆರಡೂ ರಾಜ್ಯಗಳು ಆರ್ಥಿಕ ವಿಚಾರದಲ್ಲಿ ಇಡೀ ದೇಶದಲ್ಲೇ ಪ್ರಥಮ ಮತ್ತು ಎರಡನೇ ಸ್ಥಾನ ಪಡೆದಂತಹ ರಾಜ್ಯಗಳು. ಮೂರನೆಯದು ಉತ್ತರ ಪ್ರದೇಶ ನಾಲ್ಕನೆಯದು ತಮಿಳ್ನಾಡು, ಐದನೆಯದು ಮಧ್ಯಪ್ರದೇಶ, ನಂತರ ಕರ್ನಾಟಕ. ಆದರೆ ಉತ್ತರ ಪ್ರದೇಶ, ಮಧ್ಯಪ್ರದೇಶ ಮತ್ತು ಮತ್ತು ಸ್ವಲ್ಪಮಟ್ಟಿಗೆ ತಮಿಳ್ನಾಡು ಈ ಮೂರಕ್ಕೂ ಫೈನಾನ್ಸ್ ಕಮೀಷನ್‌ನಿಂದ ಹೇರಳವಾಗಿ ಹಣ ಬಂದಿತ್ತು. ಆದರೆ ನಮಗೆ ಆ ಹಣ ಬಂದಿಲ್ಲ. ಇದರ ಅರ್ಥ ಏನೆಂದರೆ, ನಾವು ಏನು ಬಡ್ಜೆಟರಿ ರಿಸೋರ್ಸಸ್ ಮಾಡಿದ್ದೇವೆ ಅವು ನಮ್ಮ ಸ್ವಂತ ಪ್ರಯತ್ನದಿಂದ ಹೆಚ್ಚಾಗಿಯೇ ಹೊರತು ಫೈನಾನ್ಸ್ ಕಮೀಷನರ್ ಕೊಟ್ಟಂತಹ ಗ್ರಾಂಟಿನಿಂದ ಅಲ್ಲ. ಇದನ್ನು ನಾನು ಈ ಸದನಕ್ಕೆ ತಿಳಿಸಬಯಸುತ್ತೇನೆ. ಇದನ್ನು ತಿಳಿಸತಕ್ಕ ಉದ್ದೇಶವಾದರೂ ಇಷ್ಟೆ, ನಮ್ಮ ಏನು ಒಂದು ಆರ್ಥಿಕ ಬುನಾದಿ ಇದೆ ಅದು ಭದ್ರವಾಗಿದೆ. ಅದರಲ್ಲಿ ಯಾವುದೇ ರೀತಿಯ ಅಳುಕು ಇಲ್ಲವೆಂಬ ಹೇಳತಕ್ಕ ಮಾತನ್ನು ಮುಖ್ಯವಾಗಿ ಮೊಯಿಲಿಯವರಿಗೆ ಹೇಳ ಬಯಸುತ್ತೇನೆ. ಓವರ್ ಡ್ರಾಫ್ಟ್ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ ಇದರ ಬಗ್ಗೆ ಮೊಯಿಲಿಯವರು ಮತ್ತು ಮೊದಲು ಮಾತನಾಡಿದಂತಹ ವಿರೋಧಪಕ್ಷದ ನಾಯಕರು ಹಾಗೂ ನಮ್ಮ ರಾಜ್ಯದಿಂದ ಹೋಗಿ ಕೇಂದ್ರ ಸರ್ಕಾರದಲ್ಲಿ ಮಂತ್ರಿಯಾಗಿರತಕ್ಕ ಪೂಜಾರಿಯವರು ಅನೇಕ ಸಾರಿ ಹೇಳಿದ್ದಾರೆ. ನಿಮ್ಮ ಕೈಗೆ ಅಧಿಕಾರ ಬಂದಾಗ ಒಂದು ಕೋಟಿ ರೂಪಾಯಿ ಸರ್‌ಪ್ಲಸ್ ಇತ್ತು, ಈಗ ೨೫೦ ಕೋಟಿ ರೂಪಾಯಿ ಓವರ್‌ಡ್ರಾಫ್ಟ್ ಮಾಡಿದ್ದೀರಿ ಎಂದು ಹೇಳಿದ್ದಾರೆ. ಅದು ಸತ್ಯವಾಗಿದ್ದರೆ ನಾನು ಈ ಸದನದ ಮುಂದೆ ಒಪ್ಪಿಕೊಳ್ಳುತ್ತಿದ್ದೆ ಮತ್ತು ಮಾನ್ಯ ಮೊಯಿಲಿಯವರಿಗೆ ಬಹಿರಂಗವಾಗಿ ಅಭಿನಂದಿಸುತ್ತಿದ್ದೆ. ಆದರೆ ಅದು ಸತ್ಯವಲ್ಲ. ೧೯೮೨-೮೩ರ ಬಹುಶಃ ಏಪ್ರಿಲ್ ತಿಂಗಳಲ್ಲಿ ಕೇಂದ್ರ ಸರ್ಕಾರದವರು ಬೇರೆ ಬೇರೆ ರಾಜ್ಯಗಳಿಗೆ ಅದರ ಓವರ್ ಡ್ರಾಫ್ಟನ್ನು ರೆಗ್ಯುಲರೈಸ್ ಮಾಡುವುದಕ್ಕೆ ಮಾರ್ಟ್‌ಟರ್ಮ್ ಲೋನ್ ಕೊಟ್ಟು ಅದನ್ನು ಒಂದು ವರ್ಷದಲ್ಲಿ ವಾಪಸ್ಸು ಕೊಡಬೇಕೆಂದು ಹೇಳಿದರು. ರಾಜಸ್ಥಾನಕ್ಕೆ ೨೮೩ ಕೋಟಿ, ವೆಸ್ಟ್ ಬಂಗಾಳಕ್ಕೆ ಕೋಟಿ, ೫೪೦ಕ್ಕೆ ಬಿಹಾರಕ್ಕೆ ೨೦೦ ಕೋಟಿ ಈ ರೀತಿ ಬೇರೆಬೇರೆ ರಾಜ್ಯಗಳಿಗೆ ಒಟ್ಟು ೧೭೪೩ ಕೋಟಿ ರೂಪಾಯಿಗಳನ್ನು ಕೊಟ್ಟರು. ಕೆಲವು ರಾಜ್ಯಗಳಿಗೆ ಸಾಕಷ್ಟು ಕೊಟ್ಟಿದ್ದಾರೆ,

ಮಂತ್ರೆ ಕೆಲವು ರಾಜ್ಯಗಳಿಗೆ ಸ್ವಲ್ಪ ಸಿಕ್ಕಿದೆ. ಆದರೆ ಕರ್ನಾಟಕಕ್ಕೆ ಮಾತ್ರ ಒಂದು ರೂಪಾಯಿ ಕೂಡ ಸಿಕ್ಕಿಲ್ಲ. ಆ ಹೊತ್ತಿನಲ್ಲಿ ಇಲ್ಲಿರತಕ್ಕ ಓವರ್‌ಡ್ರಾಫ್ಟ್ ವಿಚಾರದಲ್ಲಿ ಜಾಗ್ರತೆ ವಹಿಸಿಲ್ಲವೋ ಏನು ಕಾರಣವೋ ಗೊತ್ತಿಲ್ಲ. ಆದ್ದರಿಂದ, ಓವರ್‌ಡ್ರಾಫ್ಟ್ ಬೆಳೆದುಕೊಂಡು ಬಂತು. ಜೂನ್ ಕೆಳಗೆ ೭೭ ಕೋಟಿ ರೂಪಾಯಿ ಓವರ್‌ಡ್ರಾಫ್ಟ್ ಇತ್ತು. ಆಗ ಮೊಯಿಲಿಯವರು ಹೋಗಿ ಮಾನ್ಯ ಪ್ರಣವ್ ಮುಖರ್ಜಿಯವರನ್ನು ಭೇಟಿಯಾಗಿ ಬೇರೆ ರಾಜ್ಯಗಳಿಗೆ ಕೊಟ್ಟ ಹಾಗೆ ನಮಗೂ ಷಾರ್ಟ್‌ಟರ್ಮ್ ಲೋನ್ ಕೊಡಬೇಕೆಂದು ವಾದ ಮಾಡಿದರು. ಆಗ ಅವರು ಹೇಳಿದರು, ಈಗ ಬಹಳ ತಡವಾಗಿದೆ ಎಂದು, ಆದರೆ, ನೀವು, ಇಲ್ಲಿಗೆ ಬಂದಿರುವುದರಿಂದ ಒಂದು ಸಹಾಯ ಮಾಡುತ್ತೇನೆಂದು ಹೇಳಿ ೭೭ ಕೋಟಿ ರೂಪಾಯಿಗಳನ್ನು ನಾವು ಓವರ್‌ಡ್ರಾಫ್ಟ್ ಎಂದು ಪರಿಗಣಿಸುವುದಿಲ್ಲ ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್ ಎಂದು ಕೊಡುತ್ತೇವೆಂದು ಹೇಳಿದರು. ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್ ನಮಗೆ ನಾರ್ಮಲ್ ಆಗಿ ೪೦ ಕೋಟಿ ರೂಪಾಯಿ ಇದೆ ಆ ೪೦ ಕೋಟಿ ರೂಪಾಯಿಗೆ ಹೊರತಾಗಿ ನಾವು ೭೭ ಕೋಟಿ ರೂಪಾಯಿಗಳನ್ನು ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್ ಆಗಿ ಕೊಡುತ್ತೇವೆ, ಆದರೆ ಅದನ್ನು ಮಾರ್ಚಿ ತಿಂಗಳ ಕೊನೆಯೊಳಗೆ ನೀವು ಅಡ್ಜಸ್ಟ್ ಮಾಡಬೇಕು, ನಂತರ ಇಟ್ಟುಕೊಳ್ಳತಕ್ಕದ್ದು ಅಲ್ಲವೆಂದು ಹೇಳಿದರು. ಹೀಗಾಗಿ ಆಕ್ಚುಯಲ್ ಓವರ್‌ಡ್ರಾಫ್ಟ್ ಅಂಥ ಆ ಹೊತ್ತಿನಲ್ಲಿ ಅವರು ಬಿಟ್ಟು ಹೋಗುವಾಗ ಇಲ್ಲದಿದ್ದರೂ ನಿಜವಾಗಿ ನೋಡಿದರೆ ೭೭ ಕೋಟಿ ರೂಪಾಯಿ ಓವರ್‌ಡ್ರಾಫ್ಟ್ ಆವತ್ತು ಇತ್ತು. ಆಮೇಲೆ ೨೦ ಕೋಟಿ ರೂಪಾಯಿ ಈ ಸರ್ಕಾರ ಅಧಿಕಾರ ವಹಿಸಿಕೊಂಡ ದಿವಸ ಅಂದರೆ ೧೦-೧-೮೩ ರಂದು ಇತ್ತು, ಅಂದರೆ ೨೦ + ೭೭ — ೯೭ ಕೋಟಿ ರೂಪಾಯಿ ಆಯಿತು.

೧-೦೦ ಪಿ. ಎಂ.

ಅಂದರೆ ಸುಮಾರು ೧೦೦ ಕೋಟಿ ರೂಪಾಯಿಗಳಷ್ಟು ಪ್ರೀತಿಯಿಂದ ನಮಗೆ ಬಳುವಳಿಯಾಗಿ ಬಿಟ್ಟು ಹೋದರು. ಅದರಲ್ಲಿ ೭೭ ಕೋಟಿ ರೂಪಾಯಿಗಳನ್ನು ಕೇವಲ ೩ ತಿಂಗಳಲ್ಲೇ ತೀರಿಸಬೇಕಾಗಿತ್ತು. ಕೇಂದ್ರಸರ್ಕಾರ ಆ ಕಂಡೀಷನ್ ಮೇಲೆ ಆ ಹಣ ಕೊಟ್ಟಿತ್ತು. ನಾನು ಇಷ್ಟೇ ಹೇಳಲಿಕ್ಕೆ ಬಯಸುತ್ತೇನೆ ಈ ಒಂದು ಬಳುವಳಿ ನಮಗೆ ಇಲ್ಲದೇ ಹೋಗಿದ್ದರೆ ೭೩ ಕೋಟಿ ರೂಪಾಯಿಗಳ ಡಿಫಿಸಿಟ್ ಇರುತ್ತಿರಲಿಲ್ಲ ನಾನು ಇದು ಯಾವದೋ ಜವಾಬ್ದಾರಿ ಎಂದು ಹೇಳುವುದಿಲ್ಲ. ಆದರೆ ಅಂಕಿ ಸಂಖ್ಯೆಗಳನ್ನು ದಯವಿಟ್ಟು ಮಾನ್ಯ ಸಭೆ ತಿಳಿದು ನೋಡಲಿ ಎಂಬ ಉದ್ದೇಶದಿಂದ ಹೇಳುತ್ತಿದ್ದೇನೆ ಮಾನ್ಯ ಅಧ್ಯಕ್ಷರೆ, ಇವತ್ತು ಈ ಆರ್ಥಿಕ ಬಿಕ್ಕಟಿನ ಕಾರಣದಿಂದ ನಾವು ಯೋಜನೆಗಳ ಮೊತ್ತವನ್ನು ಬಹಳಷ್ಟು ಕಡಿಮೆ ಮಾಡಬೇಕಾಯಿತು ಎಂಬ ಮಾತನ್ನು ಅತ್ಯಂತ ವಿಷಾದದಿಂದ ಹೇಳಬೇಕಾಗಿದೆ. ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ೨,೨೬೫ ಕೋಟಿ ರೂಪಾಯಿಗಳಷ್ಟು ಔಟ್‌ಲೇ ನಿಗದಿಪಡಿಸಿ ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಕನಿಷ್ಟ ಪಕ್ಷ ೮,೫೦೦ ಕೋಟಿ ರೂಪಾಯಿ ಇರಬೇಕೆಂದು ಯೋಜನೆ ಮಾಡಿ ಅದಕ್ಕೆಲ್ಲಾ ತಯಾರು ಮಾಡಿಕೊಂಡರೂ ಈ ಕ್ಷಣದಲ್ಲಿ ಕೇಂದ್ರ ಸರ್ಕಾರ ಮತ್ತು ಯೋಜನಾ ಆಯೋಗದವರು ಅಪ್ರೂವ್ ಮಾಡಿರತಕ್ಕದ್ದು ಕೇವಲ ೩,೫೦೦ ಕೋಟಿ ರೂಪಾಯಿಗಳು ಮಾತ್ರ. ಆದರೆ ಈ ೩೫೦೦ ಕೋಟಿ ರೂಪಾಯಿಂಗಳಲ್ಲಿ ಕಾವೇರಿ ವಲಯದಲ್ಲಿ ನಾವು ವೆಚ್ಚ ಮಾಡಬೇಕು ಎಂದು ಹೇಳತಕ್ಕ ಹಣ ಸೇರಿದೆ. ಅದು ಸುಮಾರು ೩೩೫ ಕೋಟಿ ರೂಪಾಯಿಗಳು ಎಂದು ನಾವು ಇಟ್ಟುಕೊಂಡರೆ ನಮ್ಮ ೭ನೇ ಪಂಚವಾರ್ಷಿಕ ಯೋಜನೆಯ ಮೊತ್ತ ೩,೮೩೫ ಕೋಟಿ ರೂಪಾಯಿಂಗಳಾಗುತ್ತವೆ. ಇದರಿಂದ ನಾವು ನಿರೀಕ್ಷೆ ಮಾಡಿಕೊಂಡ ಮತ್ತು ಹಾಕಿಕೊಂಡ ಕಾರ್ಯಕ್ರಮವನ್ನು ಕುಂಠಿತ ಮಾಡಿದಹಾಗಾಗುತ್ತದೆ ಇದರ ಬಗ್ಗೆ ಸಂದೇಹ ಇಲ್ಲ ೭ನೇ ಪಂಚವಾರ್ಷಿಕ ಯೋಜನೆಯ ಗಾತ್ರ ೬ನೇ ಪಂಚವಾರ್ಷಿಕ ಯೋಜನೆಯ ಗಾತ್ರದ ಜೊತೆಗೆ ಹೋಲಿಸಿದರೆ ಅದು ಕೇವಲ ಶೇಕಡ ೬೧ರಷ್ಟು ಮಾತ್ರ ವೃದ್ಧಿಯಾಗಿದೆ. ಕೆಲವು ರಾಜ್ಯಗಳದು ಇದಕ್ಕೂ ಹೆಚ್ಚಾಗಿರಬಹುದು ಆಂಧ್ರ ೬೭ ಪರ್ಸೆಂಟ್. ಅಸ್ಸಾಂ ೮೮ ಪರ್ಸೆಂಟ್. ಬಿಹಾರ ೫೮ ಪರ್ಸೆಂಟ್. ಗುಜರಾತ್ ೬೩ ಪರ್ಸೆಂಟ್. ಹರಿಯಾಣ ೬೧ ಪರ್ಸೆಂಟ್. ಹಿಮಾಚಲ ಪ್ರದೇಶ ೮೭ ಪರ್ಸೆಂಟ್ ಹೆಚ್ಚಿಸಿಕೊಂಡಿದೆ. ಸಣ್ಣ ರಾಜ್ಯಗಳಿಗೆ ಕೇಂದ್ರ ಸರ್ಕಾರದ ಅನುದಾನ ಹೆಚ್ಚು ಸಿಗುತ್ತದೆ. ಆದರೆ ದೊಡ್ಡ ದೊಡ್ಡ ರಾಜ್ಯಗಳ ಬಗ್ಗೆ ನೋಡಿದರೆ ಮಧ್ಯ ಪ್ರದೇಶದ್ದು ೮೪ ಪರ್ಸೆಂಟ್ ಹೆಚ್ಚಾಗಿದೆ. ಕೇರಳ ೭೬ ಪರ್ಸೆಂಟ್. ಮಹಾರಾಷ್ಟ್ರ ೭೦ ಪರ್ಸೆಂಟ್. ಮೇಘಾಲಯ ೮೭ ಪರ್ಸೆಂಟ್. ಉತ್ತರ ಪ್ರದೇಶ ೭೮ ಪರ್ಸೆಂಟ್. ತಮಿಳುನಾಡು ೮೨ ಪರ್ಸೆಂಟ್. ರಾಜಸ್ಥಾನ ೪೮ ಪರ್ಸೆಂಟ್. ನಮ್ಮದು ಕೇವಲ ೬೦ ಪರ್ಸೆಂಟ್. ನಾನು ಯೋಜನಾ ಆಯೋಗದವರ ಜೊತೆಗೆ ಮಾತನಾಡಿದಾಗ ನಮ್ಮ ಯೋಜನಾ

ಮಂತ್ರಿಗಳೂ ಇದ್ದರು. ಸ್ಪಷ್ಟವಾಗಿ ಹೇಳಿದೆ ಇದನ್ನು ಅಂತಿಮಗಾತ್ರ ಎಂದು ಒಪ್ಪುವುದಕ್ಕೆ ಸಿದ್ಧನಿಲ್ಲ. ಏಕೆಂದರೆ ನ್ಯಾಷನಲ್ ಡೆವಲಪ್ಮೆಂಟ್ ಕೌನ್ಸಿಲ್ ಮೀಟಿಂಗ್ ಇನ್ನೂ ಆಗಿಲ್ಲ. ಮತ್ತು ರಾಷ್ಟ್ರೀಯ ಯೋಜನೆಯ ಗಾತ್ರವೂ ಗೊತ್ತಾಗಲಿಲ್ಲ. ಆದ್ದರಿಂದ ತಾತ್ಕಾಲಿಕವಾಗಿ ಇದನ್ನು ಒಪ್ಪಿಕೊಳ್ಳೋಣ. ಹೆಚ್ಚು ರಿಸೋರ್ಸಸ್ ಕೊಡಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ, ತಾವೂ ಕೂಡ ಮತ್ತೊಂದು ಸಾರಿ ನೋಡಬೇಕು ಎಂದು ಹೇಳಿದ್ದೇನೆ. ಈ ಸಂದರ್ಭದಲ್ಲಿ ನಾನು ಪುನರುಚ್ಚಾರ ಮಾಡುವುದಕ್ಕೆ ಬಯಸುವುದಿಲ್ಲ. ಆ ಮಾತು ನಿಜ ಎಂದು ಈಗ ಗೊತ್ತಾಗುತ್ತದೆ. ರಾಷ್ಟ್ರದ ಆರ್ಥಿಕ ಬಿಕ್ಕಟ್ಟನ್ನು ನೋಡಿ ನಾವು ಇರತಕ್ಕ ಕೆಲಸವನ್ನೇ ಮುಂದುವರೆಸಿಕೊಂಡು ಹೋಗೋಣ ಎಂದು ಹೇಳಿದೆ. ಸಾಮಾನ್ಯವಾಗಿ ಹಿಂದಿನ ವರ್ಷಕ್ಕಿಂತಲೂ ಶೇಕಡ ೩೦-೩೫ರಷ್ಟು ಕೆಲವು ಸಾರಿ ೪೦ ರಷ್ಟು ಹೆಚ್ಚು ಖರ್ಚು ಮಾಡಿದ್ದೇವೆ. ೧೯೮೦-೮೧, ೧೯೮೧-೮೨ ಮತ್ತು ೧೯೮೨-೮೩ರಲ್ಲಿ ಒಟ್ಟು ಈ ಮೂರು ವರ್ಷಗಳಲ್ಲಿ ಯೋಜನೆಯ ಕಾರ್ಯಕ್ರಮಗಳಿಗೆ ಎಷ್ಟು ಖರ್ಚಾಗಿದೆಯೋ ಅಷ್ಟೇ ಹಣವನ್ನು ನಾವು ಕೇವಲ ಎರಡು ವರ್ಷಗಳಲ್ಲಿ ಖರ್ಚು ಮಾಡಿದ್ದೇವೆ. ನೀರಾವರಿ ವಿಚಾರವಾಗಲೀ, ವಿದ್ಯುಚ್ಛಕ್ತಿ ವಿಚಾರವಾಗಲೀ ಯಾವ ವೇಗದಿಂದ ನಾವು ಕಾರ್ಯಕ್ರಮವನ್ನು ನಡೆಸುತ್ತಿದ್ದೇವೆ ಆ ಒಂದು ವೇಗ ನಿಂತು ಹೋಗುತ್ತದೆ ಮತ್ತು ಅದು ಕುಂಠಿತವಾಗುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ನಾನು ಆಶೆ ಮಾಡುತ್ತೇನೆ.—ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸಭೆ ಆಗುವುದರೊಳಗಾಗಿ ಏನಾದರೂ ಒಂದು ಹೊಸ ಉಪಾಯವನ್ನು ಕೇಂದ್ರ ಸರ್ಕಾರದವರು ಕಂಡುಹಿಡಿಯುತ್ತಾರೆ ಎಂದು. ಅದೇನು ಮಾಡುತ್ತಾರೋ ದೇವರಿಗೇ ಗೊತ್ತು. ನನಗಂತೂ ಊಹಿಸುವುದೂ ಕಷ್ಟವಾಗಿದೆ. ಏಕೆಂದರೆ ೧,೮೦,೦೦೦ ಕೋಟಿ ರೂಪಾಯಿ ೭ನೇ ಪಂಚವಾರ್ಷಿಕ ಯೋಜನೆಯ ಗಾತ್ರವಿರಬೇಕು ಎಂದು ಮೊದಲು ಹೇಳಿ ಅನಂತರ ೪೬ ಸಾವಿರ ಕೋಟಿ ರೂಪಾಯಿ ಕೊರತೆ ಆಯಿತು ಎಂದು ಹೇಳಿದ್ದಾರೆ. ಕೊನೇಗಳಿಗೆಯಲ್ಲಿ ಪ್ಲಾನಿಂಗ್ ಕಮಿಷನ್ ಮೀಟಿಂಗ್ ಆದಮೇಲೆ ಹೇಳಿಕೆ ಬಂತು ಇಲ್ಲ ೧೦ ಸಾವಿರ ಕೋಟಿ ರೂಪಾಯಿ ಕೊರತೆ ಇದೆ ಎಂದು. ೩೦ ಸಾವಿರ ಕೋಟಿ ರೂಪಾಯಿಗಳು ಹೇಗೆ ಬಂತೋ, ಯಾವ ರೀತಿ ಅಡ್ಜಸ್ಟ್ ಮಾಡುತ್ತಾರೋ ಅವರಿಗೇ ಗೊತ್ತು. ಈ ರೀತಿ ಬಿಕ್ಕಟ್ಟಿನ ಪರಿಸ್ಥಿತಿ ಇದ್ದುದರಿಂದ ನಾವು ನಮ್ಮ ಅನೇಕ ಕಾರ್ಯಕ್ರಮಗಳಿಗೆ ಹೋದ ವರ್ಷ ಎಷ್ಟು ಖರ್ಚು ಮಾಡಿದ್ದೇವೋ ಅದಕ್ಕಿಂತ ಸ್ವಲ್ಪ ಕಡಿಮೆ ಹಣ ಒದಗಿಸತಕ್ಕ ದೌರ್ಭಾಗ್ಯದ ಪ್ರಸಂಗ ಒದಗಿದೆ. ಆದರೆ ಇದೇ ಪ್ರಸಂಗ ಮುಂದಿನ ವರ್ಷ ಇರುವುದಿಲ್ಲ ಎಂದು ನಾನು ಈ ಸದನಕ್ಕೆ ಮತ್ತು ಸದನದ ಮಾನ್ಯ ಸದಸ್ಯರಿಗೆ ಅತ್ಯಂತ ಆತ್ಮ ವಿಶ್ವಾಸದಿಂದ ಹೇಳಲಿಕ್ಕೆ ಬಯಸುತ್ತೇನೆ. ಅನೇಕ ಸದಸ್ಯರು ಅದರಲ್ಲೂ ಮುಖ್ಯವಾಗಿ ಹೊಸದಾಗಿ ಆರಿಸಿ ಬಂದ ಸದಸ್ಯರು ಬಜೆಟ್‌ನಲ್ಲಿ ತಮ್ಮ ತಮ್ಮ ಮತದಾರ ಕ್ಷೇತ್ರಕ್ಕೆ ಸಂಬಂಧಪಟ್ಟ ಕೆಲಸವೇ ಇಲ್ಲ, ಹೊಸ ನೀರಾವರಿ ಕೆಲಸವಿಲ್ಲ, ಹೊಸ ರಸ್ತೆ ಕೆಲಸ ಇಲ್ಲ, ಹೊಸ ಬ್ರಿಡ್ಜ್ ಕೆಲಸ ಇಲ್ಲ ಎಂದು ಮನನೊಂದು ಮಾತನಾಡಿದ್ದಾರೆ. ನಾನು ಅವರೆಲ್ಲರಿಗೂ ಕೇಳಿಕೊಂಡೆ ಒಂದು ವರ್ಷ ಮಾತ್ರ ಜನರಿಗೆ ತಿಳಿಸಿ ಹೇಳಬೇಕು, ರಾಷ್ಟ್ರದಲ್ಲಿ ಇಂಥ ಪರಿಸ್ಥಿತಿ ಬಂದಿದ್ದರಿಂದ ಉಪಾಯ ವಿಲ್ಲದೆ ನಿಧಾನ ಮಾಡಬೇಕಾಗಿದೆ, ಬರುವ ವರ್ಷ ನಿಮ್ಮ ನಿಮ್ಮ ಮತದಾರ ಕ್ಷೇತ್ರದಲ್ಲಿ ಕೆಲವೊಂದು ಕೆಲಸವನ್ನಾದರೂ ಅಗತ್ಯವಾಗಿ ಹಾಕುತ್ತೇನೆ ಎಂದು ಅವರಿಗೆ ಹೇಳಿದ್ದೇನೆ. ಈ ಅವಕಾಶವನ್ನು ಉಪಯೋಗಿಸಿಕೊಂಡು ಎಲ್ಲ ಮಾನ್ಯ ಸದಸ್ಯರಿಗೂ ಹೇಳಲಿಕ್ಕೆ ಬಯಸುತ್ತೇನೆ. ಇದು ಕೇವಲ ನಮಗೆ ಮಾತ್ರ ಸೀಮಿತವಾಗಿಲ್ಲ. ಕೇಂದ್ರ ಸರ್ಕಾರದ್ದೂ ಉದಾಹರಣೆಯನ್ನು ಕೊಡುತ್ತೇನೆ. ಕೇಂದ್ರದ ವಿಷಯವಿತಕ್ಕೆ ಹೇಳುತ್ತೀರಿ ಎಂದು ದಯವಿಟ್ಟು ಯಾರೂ ಹೇಳಬೇಡಿ. ಆದರೆ ವಾಸ್ತವಿಕ ಪರಿಸ್ಥಿತಿ ಯಾವರೀತಿ ಇದೆ ಎಂಬುದನ್ನು ಹೇಳುತ್ತೇನೆ, ಅವರು ಹೌಸಿಂಗ್‌ಗೆ ಹೋದ ವರ್ಷ ೪೪ ಕೋಟಿ ರೂಪಾಯಿಗಳನ್ನು ಇಟ್ಟಿದ್ದರೆ ಈ ವರ್ಷ ೩೯ ಕೋಟಿ ರೂಪಾಯಿಗೆ ಇಳಿಸಿದ್ದಾರೆ. ಹೌಸಿಂಗ್ ಬಹಳ ಮುಖ್ಯವಾದ ಅಭಿವೃದ್ಧಿ ಕಾರ್ಯಕ್ರಮ. ಇದಕ್ಕೆ ಹೋದ ವರ್ಷ ೪೪ ಕೋಟಿ ರೂಪಾಯಿ ಇಟ್ಟಿದ್ದರೆ ಈ ವರ್ಷ ೩೯ ಕೋಟಿ ರೂಪಾಯಿಗೆ ಇಳಿಸಿದ್ದಾರೆ. ಹರಿಜನ ಗಿರಿಜನರು ಮತ್ತು ಹಿಂದುಳಿದ ವರ್ಗಗಳಿಗೆ ಸಂಬಂಧಪಟ್ಟ ಕಾರ್ಯಕ್ರಮಗಳಿಗೆ ಹೋದ ವರ್ಷ ೭೧ ಕೋಟಿ ಇಟ್ಟಿದ್ದರೆ ಈ ವರ್ಷ ೪೨ ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಡಿ. ಪಿ. ಎ. ಪಿ. ಕಾರ್ಯಕ್ರಮಕ್ಕೆ ಹೋದ ವರ್ಷ ೪೦ ಕೋಟಿ ಇಟ್ಟಿದ್ದರೆ ಈ ವರ್ಷ ೩೭ ಕೋಟಿ ಇಟ್ಟಿದ್ದಾರೆ. ಡೆಸರ್ಟ್ ಡೆವಲಪ್ಮೆಂಟ್ ಪ್ರೋಗ್ರಾಂಗೆ ೧೦ ಕೋಟಿ ಇಟ್ಟಿದ್ದರೆ ಹೋದ ವರ್ಷ ಈ ವರ್ಷ ೮ ಕೋಟಿ ಇಟ್ಟಿದ್ದಾರೆ. ಅನೇಕ ಜನರಿಗೆ ಉದ್ಯೋಗ ಕೊಡತಕ್ಕ ಖಾದಿ ಮತ್ತು ಗ್ರಾಮೋದ್ಯೋಗಕ್ಕೆ ಹೋದ ವರ್ಷ ೧೩೫ ಕೋಟಿ ಇಟ್ಟಿದ್ದರೆ ಈ ವರ್ಷ ೧೧೫ ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ.

ಸಾಮಾನ್ಯ ಶಿಕ್ಷಣಕ್ಕೆ ಹೋದವರ್ಷ ೩೬ಕೋಟಿ ರೂ, ಇದ್ದರೆ ಈ ವರ್ಷ ೧೯ಕೋಟಿ ರೂಗಳನ್ನು ಇಟ್ಟಿದ್ದಾರೆ. ಕೊ–ಆಪರೇಷನ್‌ಗೆ ಹೋದವರ್ಷ ೩೫೪ಕೋಟಿ ರೂ. ಇಟ್ಟಿದ್ದರೆ ಈ ವರ್ಷ ೨೭೨ಕೋಟಿ ರೂ. ಇಟ್ಟಿದ್ದಾರೆ. ಹಾಗೇ ಮೈನರ್ ಇರಿಗೇಷನ್‌ಗೆ ಹೋದವರ್ಷ ೧೯ ಕೊಟ್ಟಿದ್ದರೆ ಈ ವರ್ಷ ೧೫ ಕೋಟಿ ರೂ. ಕೊಟ್ಟಿದ್ದಾರೆ. ನಂತರ ಡೈರಿ ಡೆವಲಪ್‌ಮೆಂಟ್‌ನಲ್ಲಿ ೯೮ ಕೋಟಿ ರೂ.ಗಳಿಂದ ೧೭ಕೋಟಿ ರೂ ಗಳಿಗೆ ಇಳಿಸಿದ್ದಾರೆ. ಪೆಟ್ರೋಲಿಯಂನಲ್ಲಿ ೨೫೬ಕೋಟಿಯಿಂದ ೨೧೦ ಕೋಟಿ ರೂ. ಗಳಿಗೆ ಇಳಿಸಿದ್ದಾರೆ. ಕೆಮಿಕಲ್ಸ್ ಬಗ್ಗೆ ೪೧ ಕೋಟಿ ರೂ ಗಳಿಂದ ೨೧ ಕೋಟಿ ರೂ.ಗೆ ಇಳಿಸಿದ್ದಾರೆ. ಫರ್ಟಿಲೈಸರ್ಸ್‌ನಲ್ಲಿ ೪೫೧ ಕೋಟಿಯಿಂದ ೨೫೫ ಕೋಟಿ ರೂ.ಗಳಿಗೆ ಇಳಿಸಲಾಗಿದೆ. ಕಬ್ಬಿಣ ಮತ್ತು ಉಕ್ಕು ಬಗ್ಗೆ ೭೫೩ರಿಂದ ೬೪೩ ಕೋಟಿಗಳು ಎಂದರೆ ೧೧೦ಕೋಟಿ ರೂ.ಗಳನ್ನು ಕಡಿಮೆ ಮಾಡಿದ್ದಾರೆ. ಇನ್ನು ಪ್ಲಾಂಟೇಷನ್‌ನಲ್ಲಿ ೪೨ರಿಂದ ೩೮ ಕೋಟಿ ರೂ.ಗಳವರೆಗೆ ಎಂದರೆ ಒಟ್ಟು ಸುಮಾರು ೫೦೦ ಕೋಟಿ ರೂಪಾಯಿಗಳನ್ನು ಕೇವಲ ಇಂಡಸ್ಟ್ರಿ ಮತ್ತು ಮಿನರಲ್ಸ್‌ನಲ್ಲಿ ಇಳಿಸಿದ್ದಾರೆ. ಇನ್ನು ರೈಲ್ವೇಸ್‌ನಲ್ಲಿ ೮೦೦ರಿಂದ ೭೦೦ ಕೋಟಿ ರೂ.ಗಳಿಗೆ ಇಳಿಸಿದ್ದಾರೆ. ಟೆಲಿಕಮ್ಯುನಿಕೇಷನ್‌ನಲ್ಲಿ ೩೩೩ ಕೋಟಿಯಿಂದ ೨೭೫ ಕೋಟಿ ರೂ. ಗಳಿಗೆ ಇಳಿಸಲಾಗಿದೆ. ಪೋರ್ಟ್ಸ್ ಬಗ್ಗೆ ೮೪ರಿಂದ ೪೫ ಕೋಟಿ ರೂ.ಗಳಿಗೆ ಇಳಿಸಿದ್ದಾರೆ. Special insentives for better erformence by the States ಎಂದು ಒಂದು ಇತ್ತು. ಕುಡಿಯುವ ನೀರಿಗೆ ಹೆಚ್ಚು ಖರ್ಚು ಮಾಡಿದರೆ ಆ ಬಗ್ಗೆ ಕೊಡುವುದಕ್ಕೆ ಇತ್ತು. ಈ ಪ್ರಕಾರ ಹೋದವರ್ಷ ನಮಗೆ ೩ಕೋಟಿ ರೂ.ಗಳು ಸಿಕ್ಕಿದ್ದವು ಅದಕ್ಕೆ ಹೋದವರ್ಷ ೨೦೦ ಕೋಟಿ ರೂಪಾಯಿ ಇಟ್ಟಿದ್ದು ಈ ವರ್ಷ ೧ ರೂಪಾಯಿಯನ್ನೂ ಸಹಾ ಇಟ್ಟಿಲ್ಲ. ಇದರಿಂದ ಏನು ಗೊತ್ತಾಗುತ್ತದೆ ಎಂದರೆ, ಹಿಂದಿನ ವರ್ಷ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಎಷ್ಟು ಹಣವನ್ನು ಒದಗಿಸಿದ್ದರೋ ಅದನ್ನು ಈ ವರ್ಷ ಕಡಿಮೆ ಮಾಡತಕ್ಕ ಪ್ರಸಂಗ ಎಲ್ಲಾ ರಾಜ್ಯಗಳಲ್ಲೂ ಬಂದಿದೆ, ಕೇಂದ್ರದಲ್ಲೂ ಕೂಡಾ ಬಂದಿದೆ. ಕೇವಲ ನಮ್ಮೊಬ್ಬರಿಗೇ ಅಲ್ಲ ಎಂದು ಮಾನ್ಯ ಸದಸ್ಯರಿಗೆ ಗೊತ್ತಾಗಲಿ ಎಂದು ನಾನು ಹೇಳಬಯಸುತ್ತೇನೆ. ಆದ್ದರಿಂದ ನಾನು ಈ ಅಂಕಿ ಅಂಶಗಳನ್ನು ಕೊಡುತ್ತಿದ್ದೇನೆ. ಆದರೆ ನಾವು ಮೂರು ಬಾಬಿನಲ್ಲಿ ಹೋದವರ್ಷಕ್ಕಿಂತಾ ಹೆಚ್ಚು ಹಣವನ್ನು ಒದಗಿಸಿದ್ದೇವೆ. ಹರಿಜನಗಿರಿಜನ ಹಾಗೂ ಹಿಂದುಳಿದ ವರ್ಗಗಳವರ ಅಭಿವೃದ್ಧಿಗಾಗಿ ಹೋದವರ್ಷ ೧೧ಕೋಟಿ ರೂ.ಗಳನ್ನು ಇಟ್ಟಿದ್ದರೆ ಈ ವರ್ಷ ೧೪ಕೋಟಿ ರೂ.ಗಳನ್ನು ಇಟ್ಟಿದ್ದೇವೆ. ಸಮಾಜ ಕಲ್ಯಾಣಕ್ಕೆ ಹೋದವರ್ಷ ೩ಕೋಟಿ ರೂ. ಇಟ್ಟಿದ್ದರೆ ಈ ವರ್ಷ ೧೩ ಕೋಟಿ ರೂ.ಗಳನ್ನು ಇಟ್ಟಿದ್ದೇವೆ ನ್ಯೂಟ್ರಿಷನ್ಸ್‌ಗೆ ಹೋದವರ್ಷ ೧೧ಕೋಟಿ ಇಟ್ಟಿದ್ದರೆ ಈ ವರ್ಷ ೨೪ ಕೋಟಿ ರೂ. ಗಳನ್ನು ಇಟ್ಟಿದ್ದೇವೆ ಎಂದರೆ, ಬಡವರಿಗೆ ಸಂಬಂಧಪಟ್ಟ ಯೋಜನೆಗಳು ಯಾವುವು ಇವೆಯೋ ಅವಕ್ಕೆ ತೊಂದರೆ ಆಗದ ರೀತಿಯಲ್ಲಿ ಅಥವಾ ಇನ್ನೂ ಹೆಚ್ಚು ಅನುಕೂಲ ಆಗಲಿ ಎನ್ನುವ ರೀತಿಯಲ್ಲಿ ನಾವು ಮಾಡಿದ್ದೇವೆ. ಕಳೆದ ಸಲದ ಕೇಂದ್ರದ ಬೆಲೆ ಏರಿಕೆ ವಿಚಾರದಲ್ಲಿ ಅನೇಕ ಸದಸ್ಯರು ತಮ್ಮ ಆತಂಕವನ್ನು ವ್ಯಕ್ತಮಾಡಿದರು. ಅಷ್ಟೇ ಅಲ್ಲ ರಾಜ್ಯಸರ್ಕಾರದ ಬಜೆಟ್ಟಿನ ಪರಿಣಾಮವಾಗಿ ನಾವು ದಿನನಿತ್ಯ ಬಳಸತಕ್ಕ ಅವಶ್ಯಕ ಸಾಮಾಗ್ರಿಗಳ ಬೆಲೆಯ ಮೇಲೂ ಇದರ ಪರಿಣಾಮ ಆಗುತ್ತದೆ ಎಂದು ಹೇಳಿದರು ನನ್ನ ಮಾತನ್ನು ಎದುರುಗಡೆ ಕುಳಿತಿರುವ ಕಾಂಗ್ರೆಸ್ ಪಕ್ಷದವರು ಅಷ್ಟು ಸುಲಭವಾಗಿ ಒಪ್ಪುವುದಿಲ್ಲವೆಂದು ನನಗೆ ಗೊತ್ತುಂಟು ರಾಜ್ಯಸರ್ಕಾರದ ನೀತಿಯಿಂದ ಬೆಲೆ ಮೇಲೆ ಕೆಳಗೆ ಆಗುವುದಿಲ್ಲ. ಸ್ವಲ್ಪ ಮಟ್ಟಿಗೆ ಆಗಬಹುದು. ಸೇಲ್ಸ್‌ಟ್ಯಾಕ್ಸ್ ಹೆಚ್ಚು ಮಾಡಿದರೆ ಅವಶ್ಯಕ ವಸ್ತುಗಳ ಮೇಲೆ, ಬಡವರು ತಿನ್ನತಕ್ಕ ವಸ್ತುಗಳ ಮೇಲೆ ಸ್ವಲ್ಪಮಟ್ಟಿಗೆ ಆಗುತ್ತದೆ. ಎಷ್ಟೇ ಆದರೂ ಕೂಡಾ ಅದರಲ್ಲಿ ೮–೧೦–೧೫ ಪರ್ಸೆಂಟ್ ವ್ಯತ್ಯಾಸ ಆಗುವ ಸಾಧ್ಯತೆ ಇದೆ. ಈ ವರ್ಷ ಬಜೆಟ್‌ನ್ನು ಮಂಡಿಸಿದಾಗ, ಅಷ್ಟೊಂದು ದೊಡ್ಡ ಕೊರತೆಯನ್ನು ತೋರಿಸಿದಾಗ ಅನೇಕ ಆರ್ಥಿಕ ತಜ್ಞರೂ ಕೂಡಾ ಬೆಲೆ ಮೇಲೆ ವಿಪರೀತವಾಗಿ ಪ್ರತಿಕೂಲವಾದ ಪರಿಣಾಮ ಆಗುತ್ತದೆಂದು ಮುನ್ನೆಚ್ಚರಿಕೆಯನ್ನು ಕೊಟ್ಟಿದ್ದರು. ಅದು ಈಗಾಗಲೇ ಆಗಿದೆ. ಈಗಾಗಲೇ ಶೇಕಡಾ ೮ರಷ್ಟು ೪ ತಿಂಗಳಲ್ಲಿ ಬೆಲೆ ಹೆಚ್ಚಾಗಿದೆ. ಇದರ ಸೂಚನೆ ಸಾಮಾನ್ಯ ಜನರಿಗಾದರೆ ಅವರು ಮಾರುಕಟ್ಟೆಗೆ ಹೋದಾಗ ಗೊತ್ತಾಗುತ್ತದೆ. ಆದರೆ ನಮಗೆ, ಅರ್ಥ ಮಂತ್ರಿಗೆ ಹೇಗೆ ಗೊತ್ತಾಗುತ್ತದೆ ಎಂದರೆ, ಯಾವ ದಿವಸ ಕೇಂದ್ರ ಸರ್ಕಾರದವರು ಹೊಸ ಡಿ. ಎ. ಇನ್‌ಸ್ಟಾಲ್‌ಮೆಂಟನ್ನು ಬಿಡುಗಡೆ ಮಾಡುತ್ತಾರೋ ಆಗ ನಮಗೆ ಗೊತ್ತಾಗುತ್ತದೆ. ಈಗಾಗಲೇ ಒಂದು ಇನ್‌ಸ್ಟಾಲ್‌ಮೆಂಟ್ ಕೊಟ್ಟಿದ್ದು ೨ನೇದನ್ನೂ ಬಿಡುಗಡೆ ಮಾಡಿದ್ದಾರೆ. ಇದು ಒಂದು ಚೈನ್ ರಿಯಾಕ್ಷನ್ ಆಗುತ್ತದೆ. ಈ ಬಗ್ಗೆ ಏಕನಾ

ಎಂಕ್ ಟೈಮ್ಸ್ ಪತ್ರಿಕೆ ಏನು ಪ್ರಕಟ ಮಾಡಿದೆ ಅದನ್ನು ಮಾನ್ಯ ಸದಸ್ಯರ ತಿಳುವಳಿಕೆಗಾಗಿ ಇಲ್ಲಿ ಓದುತ್ತೇನೆ.

> "Further, the Centre's budget has left an uncovered gap of Rs. 3,349 crores for 19 5-86. The inflationary potential of such a large order of deficit financi g is immense. Data for the past three months indicate that there has been on let-up in the liquidity build up in the economy. Between March 1985 and the third week of June 1985, money supply with the public rose by about 5% That is at a rate that broadly corresponds to the growth with comparable period in 1984-85. At any rate there is no mistaking the pronounced spiral in prices, what is more, all the major groups in the official wholesale price index number has contributed to the increase in prices so far as 1985-86,"

Not one or two, but all the major groups. The group index for primary arti les, plantati n rose by 3. 7% between March and June '85, Fuel, Power, Light and Lubricants by 5. 9% and manufactured products by 4. 3%. ಈಗ ಈ ಬೆಲೆ ಹೆಚ್ಚು ಆಗುವುದಕ್ಕೆ ಒಂದು ಬಹಳ ಮುಖ್ಯ ಕಾರಣ ಕೇಂದ್ರದ ಟ್ಯಾಕ್ಸೇಷನ್ ಪಾಲಿಸಿ ಮತ್ತು ಫೈನಾನ್ಸಿಯಲ್ ಪಾಲಿಸಿ ಅಷ್ಟೇ ಅಲ್ಲ. ಇದು ಅನೇಕ ವರ್ಷಗಳಿಂದ ಬಂದಿದೆ. ಅದು ಏನೆಂದರೆ Administered Prices on commodities which are the monopoly of the Central Government. ಆ ಕಮಾಡಿಟೀಸ್ ಯಾವುದು ? ಉದಾಹರಣೆಗೆ ಇಂಡಸ್ಟ್ರಿಯಲ್ ಪ್ರೊಡಕ್ಷನ್‌ನ್ನು ತೆಗೆದುಕೊಳ್ಳೋಣ.

ಉದಾಹರಣೆಗೆ ಇಂಡಸ್ಟ್ರಿಯಲ್ ಪ್ರೊಡಕ್ಷನ್‌ನ್ನು ತೆಗೆದುಕೊಳ್ಳೋಣ. ಅಲ್ಯೂಮಿನಿಯಂ, ಸಿಮೆಂಟ್, ಫರ್ಟಿಲೈಸರ್ಸ್. ಲೆವಿ ಶುಗರ್, ವೈಟ್ ಪೇಪರ್, ಕಲ್ಲಿದ್ದಲು ಸ್ಟೀಲ್, ೧೯೭೯ರಿಂದ ೧೯೮೫ರ ವರೆಗೆ ಏಕಪಕ್ಷೀಯವಾಗಿ ಒಂದಾನೊಂದು ದಿವಸ ಇದ್ದಕ್ಕಿದ್ದಂತೆಯೋ ಕೇಂದ್ರ ಸರ್ಕಾರದವರು ಈ ವಸ್ತುಗಳ ಬೆಲೆಗಳನ್ನು ಏರಿಸಿಬಿಡುತ್ತಾರೆ. ಇದು ಒಂದು ರೀತಿಯಲ್ಲಿ ಸ್ಲೋ ಪಾಯಿಸನ್ ಇದ್ದಂತೆ. ಅಲ್ಯೂಮಿನಿಯಂನ ಅಡ್ಮಿನಿಸ್ಟ್ರೇಟಿವ್ ಪ್ರೈಸ್ ೪ ವರ್ಷದಲ್ಲಿ ೩೩.೫ ಪರ್ಸೆಂಟ್ ಆಗಿದೆ, ಸಿಮೆಂಟ್ ೪೪.೭ ಪರ್ಸೆಂಟ್ ಆಗಿದೆ. ಫರ್ಟಿಲೈಸರ್ ೪೮.೩ ಪರ್ಸೆಂಟ್ ಆಗಿದೆ. ಅಮೋನಿಯಂ ಸಲ್ಫೇಟ್ ೫೨.೩ ಪರ್ಸೆಂಟ್ ಆಗಿದೆ. ಲೆವಿ ಶುಗರ್ ೩೧.೬ ಪರ್ಸೆಂಟ್ ಆಗಿದೆ. ವೈಟ್ ಪೇಪರ್ ೮೦ ಪರ್ಸೆಂಟ್, ಕಲ್ಲಿದ್ದಲು ೬೦ ಪರ್ಸೆಂಟ್. ಸ್ಟೀಲ್ ೫೫ ಪರ್ಸೆಂಟ್ ಆಗಿದೆ. ಇದು ಹಣದುಬ್ಬರಕ್ಕೆ ಅವಕಾಶವನ್ನು ಮಾಡಿಕೊಡುತ್ತದೆ. ಅಷ್ಟೇ ಅಲ್ಲ. ಇದರ ಪರಿಣಾಮ ಪ್ರತಿಯೊಂದು ವಸ್ತುವಿನ ಬೆಲೆಯೂ ಮೇಲೂ ಆಗುತ್ತದೆ. ಮಾನ್ಯ ಕಾಂಗ್ರೆಸ್ ಪಕ್ಷದ ಸದಸ್ಯರಿಗೆ ಬಹುಶಃ ಇದು ಗೊತ್ತಿರಲಿಕ್ಕಿಲ್ಲ. ಹಿಂದೆ ಇಂಥಾದ್ದು ಅನೇಕ ಸಾರಿ ಆಗಿದೆ. ಉದಾಹರಣೆಗೆ ಹೇಳುವುದಾದರೆ ೧೦ ಲಕ್ಷ ಟನ್ ಸಕ್ಕರೆಯನ್ನು ಕೇಂದ್ರಸರ್ಕಾರದವರು ಆಮದು ಮಾಡಿಕೊಂಡಿದ್ದಾರೆ. ಅದು ಯಾವ ರೇಟಿಗೆ ಅಂದರೆ ಒಂದು ಟನ್‌ಗೆ ೨ ಸಾವಿರ ರೂಪಾಯಿಯ ಪ್ರಕಾರ. ಇದನ್ನು ಎಸ್.ಟಿ.ಸಿ.ಯವರು ಖರೀದಿಮಾಡಿ ಮಾರಾಟ ಮಾಡುತ್ತಾರೆ. ಕೇಂದ್ರ ಸರ್ಕಾರದವರು ನಷ್ಟ ಮಾಡಿಕೊಂಡು ಮಾರಾಟ ಮಾಡಬೇಕೆಂದು ನಾವು ಹೇಳುವುದಿಲ್ಲ, ಸ್ವಲ್ಪ ಮಟ್ಟಿಗೆ ಮಾರ್ಜಿನ್ ಇಟ್ಟುಕೊಂಡು ಮಾರಾಟ ಮಾಡಲಿ. ಆದರೆ ಇವರು ಮಾರಾಟ ಮಾಡಿರತಕ್ಕದ್ದು ಎಂದರೆ ಒಂದು ಟನ್‌ಗೆ ೫೫೦೦ ರೂಪಾಯಿಯಿಂದ ೬೦೦೦ ರೂಪಾಯಿಯವರೆಗೆ. ಅಂದರೆ ಒಂದು ಟನ್ ಸಕ್ಕರೆಗೆ ೩೫೦೦ ರೂಪಾಯಿ ಮಾರ್ಜಿನ್ ಇಟ್ಟುಕೊಂಡಿದ್ದಾರೆ. ಈ ಒಂದೇ ಒಂದು ವ್ಯವಹಾರದಲ್ಲಿ ಕೇಂದ್ರ ಸರ್ಕಾರಕ್ಕೆ ೩೫೦ ಕೋಟಿ ರೂಪಾಯಿ ಲಾಭ ಬಂದಿದೆ. ಇದಕ್ಕೆ ನಾವು ಏನು ಹೇಳಬೇಕು. ಸಕ್ಕರೆ ಧಾರಣೆ ಹೆಚ್ಚಾಗುತ್ತಿದೆ, ಹೆಚ್ಚಾಗುತ್ತಿದೆ ಎಂದು ತಾವು ಹೇಳುತ್ತಿದ್ದೀರಿ.

ಆದರೆ ಈ ವಿಚಾರದಲ್ಲಿ ನಾನು ಹೆಚ್ಚು ವಿಸ್ತಾರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಈಗ್ಗೆ ೨ ವರ್ಷದ ಹಿಂದೆ ನಮ್ಮಲ್ಲಿರತಕ್ಕ ಸಕ್ಕರೆಯನ್ನು ಬಿಡುಗಡೆ ಮಾಡಿ, ಬಿಡುಗಡೆ ಮಾಡಿ ಎಂದು ಎಷ್ಟು ಕೇಳಿಕೊಂಡರೂ ಕೂಡ ಕೇಂದ್ರ ಸರ್ಕಾರದವರು ಅದನ್ನು ಬಿಡುಗಡೆ ಮಾಡಲಿಲ್ಲ. ಆಗ ನಷ್ಟವನ್ನು ಅನುಭವಿಸಿದ ಅನೇಕ ಸಕ್ಕರೆ ಕಾರ್ಖಾನೆಗಳು ಇಂದು ಮುಚ್ಚಿಹೋಗಿವೆ: ಈಗ ನಮ್ಮ ಸಹಕಾರಿ ಸಕ್ಕರೆ ಕಾರ್ಖಾನೆಗಳ ಪೈಕಿ ಅದರಲ್ಲೂ ಮಂಡ್ಯದಲ್ಲಿರುವ ಸಕ್ಕರೆ ಕಾರ್ಖಾನೆಯಲ್ಲಿ ಸುಮಾರು ೩ ಕೋಟಿ ರೂಪಾಯಿಗಳಷ್ಟು ಬಡ್ಡಿಯನ್ನು ಕೊಟ್ಟಿದ್ದೇವೆ. ಆದರೂ ಅವರು ಸಕ್ಕರೆಯನ್ನು ಬಿಡುಗಡೆ ಮಾಡಲಿಲ್ಲ. ಈಗ ಸಕ್ಕರೆ ಬೆಲೆ ಬಿದ್ದುಹೋಯಿತು. ಅದೇ ಸಮಯದಲ್ಲಿ ರೈತರು ಉಪಯೋಗಿಸತಕ್ಕ ಪ್ರತಿಯೊಂದು ವಸ್ತುವಿನ ಬೆಲೆಯೂ ಜಾಸ್ತಿಯಾದುವು. ಕಬ್ಬು ಬೆಳೆದಂಥ ರೈತನಿಗೆ ನಾವು ಸರಿಯಾಗಿ ಹಣವನ್ನು ಕೊಡುವುದಕ್ಕೆ ಆಗಲಿಲ್ಲ. ಸಕ್ಕರೆಯನ್ನು ಬಿಡುಗಡೆ ಮಾಡಿ ಎಂದರೆ ಅವರು ಬಿಡುಗಡೆ ಮಾಡಲಿಲ್ಲ. ಆದ್ದರಿಂದ ಇವತ್ತು ಇಂಥ ಒಂದು ದಾರುಣ ಪರಿಸ್ಥಿತಿ ಉದ್ಭವವಾಯಿತು. ಇದಕ್ಕೆ ಕಾರಣರು ಯಾರು ಎಂಬುದನ್ನು ತಿಳಿಸುವ ಸಲುವಾಗಿ ನಾನು ಈ ಮಾತನಾಡುತ್ತಿದ್ದೇನೆ.

ಇನ್ನು ಮಾನ್ಯ ಸದಸ್ಯರಾದ ವೀರಪ್ಪ ಮೊಯ್ಲಿಯವರು ೨೦ ಅಂಶದ ಕಾರ್ಯಕ್ರಮದಲ್ಲಿ ನೀವು ಏನು ಅಂಕಿಅಂಶವನ್ನು ಕೊಟ್ಟಿದ್ದೀರಿ ಅದು ನಿಜವಲ್ಲ ಎಂದು ಹೇಳಿದರು. ನಾನಾದರೂ ಹೇಳುತ್ತೇನೆ, ನಾವು ಕೊಟ್ಟಿರತಕ್ಕ ಅಂಕಿಅಂಶ ಯೋಜನಾ ಆಯೋಗದವರು...

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನು ಅದನ್ನು ಡಿಸ್‌ಪ್ಯೂಟ್ ಮಾಡುವುದಿಲ್ಲ, ನಾನು ಹೇಳಿದ್ದು ೧೯೮೧-೮೨ರಲ್ಲಿ...

ಶ್ರೀ ರಾಮಕೃಷ್ಣ ಹೆಗಡೆ.—ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಮ್ಮ ರ್ಯಾಂಕಿಂಗ್ ಸಿಸ್ಟಂ ಯಾವರೀತಿ ಇದೆ ಎಂಬುದನ್ನು ತಮಗೆ ತಿಳಿಸುವ ಸಲುವಾಗಿ. ನಾವೇ ಒಂದು ಟಾರ್ಗೆಟ್‌ನ್ನು ಹಾಕಿಕೊಳ್ಳುತ್ತೇವೆ. ಅದು ಫುಲ್‌ಫಿಲ್ ಆಗುತ್ತದೆ ಅದನ್ನು ಅನುಸರಿಸಿ ರ್ಯಾಂಕಿಂಗ್ ಮಾಡುತ್ತಾರೆ. ಉದಾಹರಣೆಗೆ ಹೇಳುವುದಾದರೆ. ಎವ್ಯಾಲ್ಯುಯೇಷನ್ ಪ್ರಕಾರ ಮನೆ ನಿವೇಶನಗಳನ್ನು ಹಂಚುವುದರಲ್ಲಿ ಒಂದರಲ್ಲಿ ಮಾತ್ರ ನಾವು ಹಿಂದೆ ಬಿದ್ದಿದ್ದೇವೆ. ಇದರಲ್ಲಿ ನಮ್ಮದು ೪ನೇ ಸ್ಥಾನ ಪಡೆದಿದೆ. ರಾಜಾಸ್ಥಾನವು ಮೊದಲನೆಯ ಸ್ಥಾನದಲ್ಲಿದೆ. ಕುಡಿಯುವ ನೀರಿನ ವಿಚಾರದಲ್ಲಿ ಹರಿಜನಗಿರಿಜನರ ಕಲ್ಯಾಣ ಕಾರ್ಯಕ್ರಮದಲ್ಲಿ ಮತ್ತು ಎನ್.ಆರ್.ಇ.ಪಿ.ಯಲ್ಲಿ ನಾವು ಮೊದಲನೇ ಸ್ಥಾನದಲ್ಲಿದ್ದೇವೆ. ಅದೇರೀತಿ ರಾಜಾಸ್ಥಾನ ೧೯೮೪-೮೫ರಲ್ಲಿ ೩೦ ಸಾವಿರ ಮನೆ ನಿವೇಶನಗಳನ್ನು ಹಂಚಬೇಕೆಂದು ಗುರಿಯನ್ನು ಇಟ್ಟುಕೊಂಡಿತ್ತು. ಅದು ಹಂಚಿದ್ದು ೬೫ ಸಾವಿರ ನಿವೇಶನಗಳನ್ನು. ಅವರು ಹೆಚ್ಚು ನಿವೇಶನಗಳನ್ನು ಹಂಚಲೇಬೇಕಾಗಿತ್ತು. ಒರಿಸ್ಸಾ ೨ನೇ ಸ್ಥಾನದಲ್ಲಿದೆ ೨೫ ಸಾವಿರ ಟಾರ್ಗೆಟ್ ಇಟ್ಟುಕೊಂಡಿದ್ದರೆ ೪೪ ಸಾವಿರ ಹಂಚಿದೆ' ಉತ್ತರ ಪ್ರದೇಶ ೪ನೇ ಸ್ಥಾನವನ್ನು ಪಡೆದಿದೆ. ಅದು ಹಾಕಿಕೊಂಡಿದ್ದ ಟಾರ್ಗೆಟ್ ೫೦ ಸಾವಿರ. ಅಲಿ ೫೭ ಜಿಲ್ಲೆಗಳಿವೆ ಸುಮಾರು ೧೫ ಕೋಟಿ ಜನ ಸಂಖ್ಯೆ ಇವೆ. ಅದರ ಪರ್‌ಫಾರ್ಮೆನ್ಸ್ ೮೫ ಸಾವಿರ. ನಮ್ಮ ಕರ್ನಾಟಕ ೧೯ನೇ ರ್ಯಾಂಕ್‌ನಲ್ಲಿದೆ. ನಮ್ಮ ಕರ್ನಾಟಕದ ಟಾರ್ಗೆಟ್ ೧ ಲಕ್ಷ ಇದ್ದರೆ ನಮ್ಮ ಪರ್‌ಫಾರ್ಮೆನ್ಸ್ ೭೮ ಸಾವಿರ. ರಾಜಾಸ್ಥಾನ ಮೊದಲನೇ ಸ್ಥಾನದಲ್ಲಿದೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದು ನೀವೇ ಮಾಡಿಕೊಂಡ ತಪ್ಪು,

ಶ್ರೀ ರಾಮಕೃಷ್ಣ ಹೆಗಡೆ.—೨-೩ ವಿಚಾರಗಳಲ್ಲಿ ನಾವು ಅತ್ಯಂತ ಹಿಂದುಳಿದಿರುವುದು ಈ ಒಂದು ಕಾರಣದಿಂದಾಗಿ. ರಾಜಾಸ್ಥಾನಕ್ಕೆ ಮೊದಲನೇ ಸ್ಥಾನ ಸಿಕ್ಕಿದರೆ, ನಮ್ಮ ಕರ್ನಾಟಕಕ್ಕೆ ಕೊನೆಯ ಸ್ಥಾನ ಸಿಕ್ಕಿದೆ. ರಾಜಾಸ್ಥಾನದವರು ೩೦ ಸಾವಿರ ಟಾರ್ಗೆಟ್ ಇಟ್ಟುಕೊಂಡು ೬೦ ಸಾವಿರ ಸಾಧನೆ ಮಾಡಿದ್ದಾರೆ. ಈ ರೀತಿಯ ಉಪಾಯವನ್ನು ನಮ್ಮ ಅಧಿಕಾರಿಗಳಾಗಲಿ ಅಥವಾ ನಮ್ಮ ಸರ್ಕಾರವಾಗಲಿ ಮಾಡಲಿಲ್ಲ ಅಷ್ಟೆ. ಆ ರೀತಿ ಮಾಡದಿದ್ದರೆ ನಾವೂ ಕೂಡ ರಾಜಾಸ್ಥಾನದ ರೀತಿಯಲ್ಲಿ ಮೊದಲನೇ ಸ್ಥಾನಕ್ಕೆ ಬರಬಹುದಿತ್ತು. ಆದರೆ ರಾಜಾಸ್ಥಾನಕ್ಕೆ ನಮ್ಮ ಕರ್ನಾಟಕವನ್ನು ಹೋಲಿಕೆ ಮಾಡಿದರೆ ೨ ಪಟ್ಟಿಗಿಂತ ಹೆಚ್ಚು ಸಾಧನೆ ಮಾಡಿದ್ದೇವೆ. ಇದನ್ನು ನೋಡಿ ನಮಗೆ ಕೇಂದ್ರ ಸರ್ಕಾರದವರು ಚಿನ್ನದ ಪದಕವನ್ನೇ ಕೊಡುತ್ತಿದ್ದರೋ ಏನೋ ಗೊತ್ತಿಲ್ಲ.

ಮಾನ್ಯ ಅಧ್ಯಕ್ಷರೇ ನಾವು ೬ನೇ ಪಂಚವಾರ್ಷಿಕ ಯೋಜನೆಯನ್ನು ಇದೀಗತಾನೆ ಮುಗಿಸಿ ೭ನೇ ಪಂಚವಾರ್ಷಿಕ ಯೋಜನೆಯ ಮೊದಲನೇ ವರ್ಷದಲ್ಲಿದ್ದೇವೆ...

ಶ್ರೀ ಧರ್ಮಸಿಂಗ್.—೨೦ ಅಂಶದ ಕಾರ್ಯಕ್ರಮವನ್ನು ಬಿಟ್ಟು ಬಿಟ್ಟಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ನಾವು ೪-೫ನೇ ವಿಚಾರದಲ್ಲಿ ಹಿಂದೆ ಬಿದ್ದಿದ್ದೇವೆ. ಬಾಂಡೆಡ್ ಹೌಸ್ ಸೈಟ್ಸ್ ಬಯೋ ಗ್ಯಾಸ್ ಪ್ಲಾಂಟ್, ಸ್ಟರ್ಲೈಸೇಷನ್, ಹೆಲ್ತ್ ಸಬ್ ಸೆಂಟರ್ಸ್ ಮುಂತಾದ ವಿಚಾರಗಳಲ್ಲಿ ನಾನು ಈಗಾಗಲೇ ಹೇಳಿದ್ದೇನೆ. ಬಾಂಡೆಡ್ ಲೇಬರರ್ಸ್ ವಿಚಾರದಲ್ಲಿ ನಮ್ಮ ಟಾರ್ಗೆಟ್ ಹೆಚ್ಚಿಗೆ ಆಗಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಈ ಬಾಂಡೆಡ್ ಲೇಬರರ್ಸ್ ಪ್ರಶ್ನೆ ಕೇವಲ ನಮ್ಮ ಕರ್ನಾಟಕದಲ್ಲಿ ಮಾತ್ರ ಅಲ್ಲ, ಬಿಹಾರದಲ್ಲೂ ಇದೆ, ಆಂಧ್ರ ಪ್ರದೇಶದಲ್ಲೂ ಇದೆ, ಉತ್ತರ ಪ್ರದೇಶದಲ್ಲೂ ಇದೆ, ಆದರೆ ಅಲ್ಲಿರುವಷ್ಟು ತೀವ್ರ ಪರಿಸ್ಥಿತಿ ನಮ್ಮ ರಾಜ್ಯದಲ್ಲಿಲ್ಲ.

೧-೩೦ ಪಿ. ಎಂ.

ಈಗ ನಾವು ಆರನೆಯ ಪಂಚವಾರ್ಷಿಕ ಯೋಜನೆಯನ್ನು ಮುಗಿಸಿಕೊಂಡು ಏಳನೆಯ ಪಂಚವಾರ್ಷಿಕ ಯೋಜನೆಯ ಮೊದಲನೇ ವರ್ಷದಲ್ಲಿ ಇದ್ದೇವೆ. ಆದ್ದರಿಂದ ಈ ಒಂದು ಅಂಶವನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಐದು ವರ್ಷಗಳಲ್ಲಿ ನಾವು ಮಾಡಿದಂಥ ಸಾಧನೆ ಅತ್ಯಂತ ಪ್ರಶಸ್ತ್ಯವಾದುದೆಂದು ನನ್ನ ಅಭಿಪ್ರಾಯ ನಾನು ಈಗಾಗಲೇ ಅಂಕಿಅಂಶಗಳ ಪಟ್ಟಿಯನ್ನು ಮಾನ್ಯ ಸದಸ್ಯರೆಲ್ಲರಿಗೂ ಹಂಚಿಸಿದ್ದೇನೆ. ಬೇರೆ ಬೇರೆ ಖಾತೆಗೆ ಸಂಬಂಧಪಟ್ಟಂತೆ ಬೇರೆ ಬೇರೆ ಪ್ರೋಗ್ರಾಮುಗಳ ವಿಚಾರದಲ್ಲಿ ಹೇಳುತ್ತೇನೆ. ಸ್ಟೇಟ್ ಪ್ಲಾನ್ ಎಕ್ಸ್‌ಪೆಂಡೀಚರ್ ಬಗ್ಗೆ ಹೇಳುವುದಾದರೆ, ೧೯೮೦ರಿಂದ ೧೯೮೩ರ ವರೆಗೆ ಅಂದರೆ ಈ ಮೂರು ವರ್ಷಗಳಲ್ಲಿ ೪೫೭ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದರೆ, ಕಳೆದ ಎರಡು ವರ್ಷಗಳಲ್ಲಿ ೬೪೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅಂದರೆ ಶೇಕಡಾ ೪೦ರಷ್ಟು ಪ್ರತಿ ವರ್ಷಕ್ಕೆ ಹೆಚ್ಚು ಆಯಿತು. ಮೂರು ವರ್ಷದ ಆವರೇಜ್ ಖರ್ಚುಮಾಡಿರತಕ್ಕಂಥದ್ದು ೪೫೭ ಕೋಟಿ ರೂಪಾಯಿಗಳು. ಹಿಂದಿನ ಮೂರು ವರ್ಷಗಳಿಗೆ ಹೋಲಿಸಿ ನೋಡಿದರೆ ನಾವು ಈ ಎರಡು ವರ್ಷಗಳಲ್ಲಿ ೯೭ ಪರ್ಸೆಂಟ್‌ನಷ್ಟು ಹೆಚ್ಚು ಖರ್ಚುಮಾಡಿದ್ದೇವೆ. ಸೋಷಿಯಲ್ ಕಾಂಪನೆಂಟ್ ಪ್ರೋಗ್ರಾಮ್‌ಗಾಗಿ ಹಿಂದಿನ ಮೂರು ವರ್ಷಗಳಿಗೆ ಹೋಲಿಸಿದರೆ ೪೦ ಪರ್ಸೆಂಟ್ ಹೆಚ್ಚು ಖರ್ಚುಮಾಡಿದ್ದೇವೆ. ಟ್ರೈಬಲ್ ಸಬ್ ಪ್ಲಾನ್‌ಗಾಗಿ ೬೩ ಪರ್ಸೆಂಟ್ ಖರ್ಚುಮಾಡಿದ್ದೇವೆ ಆಮೇಲೆ ಮೈನ್‌ಟೆನೆನ್ಸ್ ಆಫ್ assets ಗಾಗಿ ೧೯೮೦ರಿಂದ ೧೯೮೩ರ ವರೆಗೆ ೪೫ ಕೋಟಿ ರೂಪಾಯಿಗಳನ್ನು ಹಿಂದಿನ ಮೂರು ವರ್ಷಗಳಲ್ಲಿ ಖರ್ಚುಮಾಡಿದ್ದರೆ, ಕಳೆದ ಎರಡು ವರ್ಷಗಳಲ್ಲಿ ೬೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅಂದರೆ ಶೇಕಡಾ ೩೩ ಪರ್ಸೆಂಟ್‌ನಷ್ಟು ಹೆಚ್ಚಳವಾಯಿತು. ಸ್ಟೇಟ್ ಇನ್‌ಕಮ್ ನಾನು ಇದರ ಬಗ್ಗೆ ಬಹಳ ವಿವರಕ್ಕೆ ಹೋಗುವುದಿಲ್ಲ. ಒಂದೊಂದು ವಿಚಾರದಲ್ಲೂ ಕೇವಲ ಪರ್ಸೆಂಟೇಜ್ ಮಾತ್ರ ಹೇಳುತ್ತಾ ಹೋಗುತ್ತೇನೆ. ೩೭ ಪರ್ಸೆಂಟ್ ಸ್ಟೇಟ್ ಇನ್‌ಕಮ್ ಇದ್ದರೆ, ಪರ್‌ಕ್ಯಾಪಿಟ ಇನ್‌ಕಮ್ ೨೮ ಪರ್ಸೆಂಟ್ ಹೆಚ್ಚಾಗಿದೆ. ಆ ಮೇಲೆ ಪಾವರ್ಟಿ ಅಲಿವಿಯೇಷನ್ ಪ್ರೋಗ್ರಾಮ್‌ಗೆ ಈಗ persons benefitted under IRDP. ಇದು ಅತ್ಯಂತ ಜೀವಾಳವಾದ ಕಾರ್ಯಕ್ರಮವಾಗಿರುತ್ತದೆ. ಮೊದಲನೇ ಮೂರು ವರ್ಷಗಳಲ್ಲಿ ಸರಾಸರಿ ೧,೨೫,೦೦೦ ಜನರಿಗೆ ಇದರಿಂದ ಲಾಭವಾಗಿದ್ದರೆ ಕಳೆದ ಎರಡು ವರ್ಷಗಳಲ್ಲಿ ಸರಾಸರಿ ೨ ಲಕ್ಷಕ್ಕಿಂತ ಹೆಚ್ಚು ಜನರಿಗೆ ಲಾಭವಾಗಿದೆ. ಆ ಮೇಲೆ ಅಸಿಸ್ಟೆಂಟ್ಸ್ ಟು ಲ್ಯಾಂಡ್ ಗ್ರಾಂಟೀಸ್ ೫೧ ಪರ್ಸೆಂಟ್ ಹೆಚ್ಚಾಗಿದ್ದರೆ, ಕಳೆದ ಎರಡು ವರ್ಷಗಳಲ್ಲಿ ಇದರಿಂದ ಬೆನಿಫಿಟ್ ಹೊಂದಿರತಕ್ಕಂಥವರು ಅಂದರೆ Persons benefitted under land grands ೨೫೨ ಪರ್ಸೆಂಟ್‌ಗೂ ಜಾಸ್ತಿಯಾಗಿದೆ. ಕಳೆದ ಎರಡು ವರ್ಷ ಸರಾಸರಿ ೬,೨೦೦ ಜನರಿಗೆ ಇವರಲ್ಲಿ ಲಾಭವಾಗಿದೆ. ಹಿಂದಿನ ಮೂರು ವರ್ಷ ಸರಾಸರಿ ೧,೭೦೦ ಜನರಿಗೆ ಲಾಭವಾಗಿದ್ದರೆ ಆ ಮೇಲೆ ಅಂತ್ಯೋದಯ ಮೊದಲನೆ ಮೂರು ವರ್ಷ ಇರಲಿಲ್ಲ. ಕಳೆದ ಎರಡು ವರ್ಷಗಳಲ್ಲಿ ೧೫,೭೩೩ ಫ್ಯಾಮಿಲಿಗಳವರಿಗೆ ಈ ಅಂತ್ಯೋದಯ ಕಾರ್ಯಕ್ರಮವನ್ನು ಲಾಗು ಮಾಡಿದ್ದೇವೆ. ಎಂಪ್ಲಾಯ್‌ಮೆಂಟ್ ಓರಿಯೆಂಟೆಡ್ ಪ್ರೋಗ್ರಾಮ್‌ಸಲ್ಲಿ ಕಳೆದ ಎರಡು ವರ್ಷಗಳಲ್ಲಿ ಶೇಕಡಾ ೮೫ರಷ್ಟು ಸರಾಸರಿ ಹೆಚ್ಚಾಗಿದೆ. ಮೊದಲು ೧೭೫ ಲಕ್ಷ mandays ಉಂಟಾಗಿದ್ದರೆ ಕಳೆದ ಎರಡು ವರ್ಷಗಳಲ್ಲಿ ಸರಾಸರಿ ಪ್ರತಿವರ್ಷ ೩೨೪ ಲಕ್ಷ mandays ನಾವು ಉಂಟು ಮಾಡಿದ್ದೇವೆ, ಆ ಮೇಲೆ ಎಂಪ್ಲಾಯ್‌ಮೆಂಟ್

ಕ್ರಿಯೇಟೆಡ್ ಅಂಡರ್ ಆರ್.ಎಲ್.ಇ.ಜಿ.ಪಿ. ಇದು ಮೊದಲು ಇರಲಿಲ್ಲ. ಇದು ಆಮೇಲೆ ೯೩ ಲಕ್ಷ ಎಂಪ್ಲಾಯ್‌ಮೆಂಟ್ ಕ್ರಿಯೇಟೆಡ್ ಅಂಡರ್ ಆರ್.ಇ.ಜಿ.ಎನ್. ೯ ಲಕ್ಷ. ಆಮೇಲೆ ಪರ್ಸನ್ಸ್ ಟ್ರೈನ್ಡ್ ಅಂಡರ್ ಟ್ರೈಸಮ್-ಮೊದಲು ಮೂರು ವರ್ಷಗಳಲ್ಲಿ ೪,೨೫ ಇದ್ದರೆ ಈ ವರ್ಷ ಸರಾಸರಿ ೯,೮೦೦ ಆಯಿತು. ಅಂದರೆ ಶೇಕಡಾ ೧೩೩ರಷ್ಟು ಹೆಚ್ಚಳ. ಏರಿಯಾ ಡೆವಲಪ್‌ಮೆಂಟ್ ಡಿ.ಪಿ.ಎ.ಪಿ. ಗೆ ಮೊದಲು ಮೂರು ವರ್ಷಗಳ ಸರಾಸರಿ ೮೮೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದರೆ ಕಳೆದ ಎರಡು ವರ್ಷಗಳಲ್ಲಿ ಸರಾಸರಿ ೧.೧೨೩ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅಂದರೆ ಶೇಕಡಾ ೨೭ರಷ್ಟು ಹೆಚ್ಚಾಯಿತು. ಏರಿಯಾ ಕವರ್ಡ್ ಅಂಡರ್ integraed manag ment on ಡ್ರೈ ಲ್ಯಾಂಡ್ ಡೆವಲಪ್‌ಮೆಂಟ್, ಇದರಲ್ಲಿ ಹೆಚ್ಚಳ ೧೦೦೦ ಪಟ್ಟು. ಇಂಟಿಗ್ರೇಟೆಡ್ ಡೆವಲಪ್‌ಮೆಂಟ್-ಆಫ್ ವೆಸ್ಟರ್ನ್ ಘಾಟ್ಸ್, ಇದರಲ್ಲಿ ಹೆಚ್ಚಳ ಕಳೆದ ಎರಡು ವರ್ಷಗಳಲ್ಲಿ ಶೇಕಡಾ ೯೭ರಷ್ಟು. ಆ ಮೇಲೆ ಪರ್ಸನ್ಸ್ ಬೆನಿಫಿಟೆಡ್ ಅಂಡರ್ ವರ್ಲ್ಡ್ ಪ್ರೋಗ್ರಾಮ್ ಮೊದಲು ಸರಾಸರಿ ೨,೫೦೦ ಹಿಂದೆ ಇದ್ದುದು ; ಈಗ ೨,೯೦೦ ಆಗಿದೆ. ಸೋಷಿಯಲ್ ವೆಲ್‌ಫೇರ್‌ನಲ್ಲಿ ಪರ್ಸನ್ಸ್ ಬೆನಿಫಿಟೆಡ್ under oldage pension ಶೇಕಡಾ ೪೩ರಷ್ಟು ೨ ವರ್ಷಗಳಲ್ಲಿ ಹೆಚ್ಚಳವಾಗಿದೆ. ಕಳೆದ ಎರಡು ವರ್ಷಗಳಲ್ಲಿ ೧,೪೭,೦೦೦ ವಿಧವೆಯರಿಗೆ ಪೆನ್‌ಷನ್ ಕೊಟ್ಟಿರುತ್ತೇವೆ. ಸ್ಟುಡೆಂಟ್ಸ್ ಕನ್‌ಶೆಷನ್ಸ್ ಎಕ್ಸ್‌ಪೆಂಡೀಚರ್ ಮೊದಲು ಸರಾಸರಿ ೩೨೯ ಲಕ್ಷ ಇದ್ದುದು, ಕಳೆದ ಎರಡು ವರ್ಷ ಸರಾಸರಿ ೫೪೮ ಲಕ್ಷ. ಅಂದರೆ ಶೇಕಡಾ ೬೭ರಷ್ಟು ಹೆಚ್ಚಳ. ಅದೇ ರೀತಿ ಸ್ಟೂಡೆಂಟ್ಸ್ ಬೆನಿಫಿಟೆಡ್ ಶೇಕಡಾ ೩೩ ಪರ್ಸೆಂಟ್‌ರಷ್ಟು ಹೆಚ್ಚಳವಾಗಿದೆ. ಚೈಲ್ಡ್ ವೆಲ್‌ಫೇರ್ ಎರಡು ವರ್ಷಗಳ ಸರಾಸರಿ ೪೫ ಪರ್ಸೆಂಟ್ ಸಂಖ್ಯೆ ; ಅಂದರೆ ಶೇಕಡಾ ೨೨೮ ಹೆಚ್ಚಳ. ಶೆಡ್ಯೂಲ್ಡ್ ಕ್ಯಾಸ್ಟ್ ಷೆಡ್ಯೂಲ್ಡ್ ಟ್ರೈಬ್ಸ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ಶೇಕಡಾ ೩೭ರಷ್ಟು ಹೆಚ್ಚಳ. ಫ್ಯಾಮಿಲಿ ಬೆನಿಫಿಟೆಡ್ ಶೇಕಡಾ ೭೦ರಷ್ಟು ಹೆಚ್ಚಳ. ಇದು ಸರಾಸರಿ ಹೇಳುತ್ತಿದ್ದೇನೆ, ಟ್ರೈಬಲ್ ಸಬ್‌ಪ್ಲಾನ್ ಶೇಕಡಾ ೫೬ ಪರ್ಸೆಂಟ್ ಹೆಚ್ಚಳ. ಫ್ಯಾಮಿಲಿ ಬೆನಿಫಿಟೆಡ್ ೮೭ರಷ್ಟು ಹೆಚ್ಚಳ. ಎಸ್.ಸಿ.ಎಸ್.ಟಿ. ಡೆವಲಪ್‌ಮೆಂಟ್ ಕಾರ್ಪೊರೇಷನ್, ಮೊದಲು ಸರಾಸರಿ ಖರ್ಚು ವರ್ಷಕ್ಕೆ ಒಂದು ಕೋಟಿ ಇಪ್ಪತ್ತೇಳು ಲಕ್ಷ ಇದ್ದರೆ ಕಳೆದ ಎರಡು ವರ್ಷಗಳಲ್ಲಿ ಸರಾಸರಿ ಖರ್ಚು ವರ್ಷಕ್ಕೆ ೨ ಕೋಟಿ ೮೩ ಲಕ್ಷ. ಅಂದರೆ ೧೨೧ ಪರ್ಸೆಂಟ್ ಹೆಚ್ಚಳ. ಇದರಿಂದ ಫಲಾನುಭವಿಗಳು ಸರಾಸರಿ ಕಳೆದ ಮೂರು ವರ್ಷಗಳಲ್ಲಿ ೧೪ ಸಾವಿರದ ೬೦ ಇದ್ದರೆ, ಕಳೆದ ಎರಡು ವರ್ಷಗಳಲ್ಲಿ ಸರಾಸರಿ ೩೧ ಸಾವಿರದ ೪೯೬ ಆಗಿದೆ. ಅಂದರೆ ಶೇಕಡಾ ೧೨೪ರಷ್ಟು ಹೆಚ್ಚಳ. ಬ್ಯಾಕ್ ವರ್ಡ್‌ಕ್ಲಾಸ್, ಮೈನಾರಿಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮೊದಲ ಮೂರು ವರ್ಷಗಳ ಸರಾಸರಿ ೩೦ ಲಕ್ಷ ಖರ್ಚು ಮಾಡಿದ್ದರೆ ಈಗ ಕಳೆದ ೨ ವರ್ಷಗಳಲ್ಲಿ ಸರಾಸರಿ ೬೭ ಲಕ್ಷ ಖರ್ಚು ಮಾಡಿರುತ್ತಾರೆ. ಅಂದರೆ ಖರ್ಚಿನಲ್ಲಿ ೧೯೯ ಪರ್ಸೆಂಟ್ ಹೆಚ್ಚಳ. ಫಲಾನುಭವಿಗಳ ಸಂಖ್ಯೆ ಶೇಕಡಾ ೩೪೦ರಷ್ಟು ಹೆಚ್ಚಳ. ಮಾನ್ಯ ಅಧ್ಯಕ್ಷರೇ ನಾನು ಇದನ್ನು ಪೂರ್ಣವಾಗಿ ಓದಬೇಕಾದಂಥ ಅವಶ್ಯಕತೆಯೂ ಇಲ್ಲ, ಉದ್ದೇಶವೂ ಇರಲಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ಡಿಮ್ಯಾಂಡ್ ಬಂದಾಗ ಹೇಳಬಹುದು. ವಿವರಗಳನ್ನು ಹೇಳಿ ಏತಕ್ಕೆ ವೇಳೆಯನ್ನು ಕಳೆಯುವುದೆಂದು ಹೇಳುತ್ತೇನೆ.

ಅದಕ್ಕಾಗಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸೂಚನೆಯನ್ನು ಸರಿಹೊತ್ತಿಗೆ ತಂದಿದ್ದಾರೆ. ಆದ್ದರಿಂದ ಮಾನ್ಯ ಅಧ್ಯಕ್ಷರೇ, ಒಳ್ಳೆಯ ಕೆಲಸ ಮಾಡಿದರೆ ಅದು ವೇಸ್ಟ್ ಹೇಗೆ ಆಗುತ್ತದೆ ? ಆಮೇಲೆ ನಾನು ನನ್ನ ಬಜೆಟ್ ಭಾಷಣದಲ್ಲಿ ಕೇಂದ್ರ ಸರ್ಕಾರದ ಟೆಕ್ಸ್‌ಟೈಲ್ ನೀತಿ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಿದ್ದೆ. ಈ ವಿಚಾರದಲ್ಲಿ ಮಾನ್ಯ ಮೊಯಿಲಿಯವರು ಹೊಸ ಟೆಕ್ಸ್‌ಟೈಲ್ ನೀತಿಯಿಂದ ಹ್ಯಾಂಡ್‌ಲೂಮ್‌ನವರಿಗೆ ಅನಾಹುತ ಆಗಿದೆಯೆಂದು ಹೇಳಿದರು. ಇದನ್ನು ಅವರ ವೈಯಕ್ತಿಕವಾಗಿ ಅಭಿಪ್ರಾಯ ಪಟ್ಟರೋ. ಅಥವಾ ಅವರ ಪಕ್ಕದಲ್ಲಿರತಕ್ಕಂಥ ಶ್ರೀಮಾನ್ ಕೆ. ಎಚ್. ಪಾಟೀಲರ ಅಭಿಪ್ರಾಯವೋ ಗೊತ್ತಿಲ್ಲ. ಶ್ರೀ ಕೆ. ಎಚ್. ಪಾಟೀಲರು ಯಾವ ಮತದಾರ ಕ್ಷೇತ್ರದಿಂದ ಬಂದಿರುತ್ತಾರೆ ಎಂದರೆ, ಅಲ್ಲಿ ಕೈಮಗ್ಗಗಳು ಬಹಳ ಸಂಖ್ಯೆಯಲ್ಲಿವೆ. ನಾನು ಟೀಕೆ ಮಾಡಬೇಕೆಂಬ ಉದ್ದೇಶದಿಂದ ಟೀಕೆ ಮಾಡಿದ್ದಲ್ಲ. ನಿರುದ್ಯೋಗ ಸಮಸ್ಯೆಯಿಂದ ನಮ್ಮಲ್ಲಿ ಕೋಟ್ಯಾಂತರ ಜನರು ನರಳುತ್ತಿರುವಾಗ ಈ ಹೊಸ ಟೆಕ್ಸ್‌ಟೈಲ್ ಪಾಲಿಸಿಯಿಂದ ಹೊಡೆತ ಬಿದ್ದ ಹಾಗೆ ಆಗಿದೆ. ಈಗ ಇರತಕ್ಕಂಥ ಕೈಮಗ್ಗ

ನೇಕಾರರು ಬಹಳಷ್ಟು ಜನ ನಿರುದ್ಯೋಗಿಗಳಾಗುತ್ತಾರೆ ಎನ್ನುವ ಮಾತಿನಲ್ಲಿ ಸಂದೇಹ ಇಲ್ಲ. ರಿಜರ್ವ್ ಮಾಡಿದ್ದೇವೆ ಎಂದು ಹೇಳಿದ್ದಾರೆ, ಇದು ಅಪಪ್ರಚಾರ, ಹಿಂದೆ ಬ್ರಿಟಿಷರೂ ಇದನ್ನು ಮಾಡಿದ್ದರು. ಹೀಗೆ ರಿಜರ್ವ್ ಮಾಡಿದ್ದರಿಂದ ಬಟ್ಟೆ ಹೆಚ್ಚಾಗುವುದಿಲ್ಲ. ಹೊಸ ಟೆಕ್ಸ್‌ಟೈಲ್ ನೀತಿಗೆ ಆರ್ಥಿಕ ಪುಟ್ಟ ಏನಿದೆ, ಉತ್ಪಾದನೆ ಹೆಚ್ಚಾಗಬೇಕು — Availability of cloth per head hould be increased. ಈಗ ಮಿಲ್‌ಗಳ ಮೇಲೆ ಇರತಕ್ಕಂಥ ಎಲ್ಲಾ ನಿರ್ಬಂಧಗಳನ್ನು ತೆಗೆದುಹಾಕಿದರೆ, ನಿಮ್ಮ ವಾದವನ್ನೇ ಒಪ್ಪಿಕೊಳ್ಳೋಣ. ಉತ್ಪಾದನೆ ಹೆಚ್ಚಾಯಿತು, ಒಂದು ವೇಳೆ ೧೫೦ ಮಿಲಿಯನ್ ಗಜ ಬಟ್ಟೆ ಹೆಚ್ಚು ಉತ್ಪಾದನೆ ಆಯಿತು ಎಂದು ಇಟ್ಟುಕೊಳ್ಳೋಣ, ಹಾಕುವವರು ಯಾರು ? ಇದನ್ನು ಯಾರಿಗೆ ತೊಡಿಸುತ್ತೀರಿ ? ಬಟ್ಟೆ ಉತ್ಪಾದನೆ ಹೆಚ್ಚಾದ ಘೋಷಣೆಯ ಮೇಲೆ ಅದರ ಉಪಯೋಗ ಆಗುವುದಿಲ್ಲ, ೧೨೦ ಮಿಲಿಯನ್ ಟನ್ ಆಹಾರ ಧಾನ್ಯಗಳು ಕೇಂದ್ರ ಸರ್ಕಾರದ ಖಜಾನೆಯಲ್ಲಿದೆ ಆದರೆ ಶೇಕಡಾ ೪೦ರಷ್ಟು ಜನರು ಎರಡು ಹೊತ್ತು ಸರಿಯಾಗಿ ಊಟ ಮಾಡುತ್ತಿಲ್ಲ, ಆದ್ದರಿಂದ ಉತ್ಪಾದನೆ ಹೆಚ್ಚಾದ ತಕ್ಷಣ ಜನರ ಮೈಮೇಲೆ ಬಟ್ಟೆ ಬರುತ್ತದೆ ಎನ್ನುವ ಗ್ಯಾರಂಟಿ ಇಲ್ಲ. ಯಾವಾಗ ಬರುತ್ತದೆ ಎಂದರೆ, ಅವರ ಕೈಗೆ ಮೊದಲು ಕೆಲಸ ಸಿಕ್ಕಬೇಕು. ಯಾವುದೇ ಒಂದು ನೀಡಿ, ಕಂಪ್ಯೂಟರ್ ವಿಚಾರದಲ್ಲಿ ಶ್ರೀ ಕೆ. ಎಚ್. ಶ್ರೀನಿವಾಸ್ ಅವರು ತಮ್ಮದೇ ಆದಂಥ ಶೈಲಿಯಲ್ಲಿ ಹೇಳಿದರು. ಆಮೇಲೆ ಶ್ರೀ ಉಮರಬ್ಬನವರು, ಬಹಳ ಸೊಗಸಾದ ಕನ್ನಡ ಮಾತನಾಡುತ್ತಾರೆ ಒಂದು ಕಾಲದಲ್ಲಿ ಅವರು ತೀರಾ ಹತ್ತಿರದವರಾಗಿದ್ದರು, ವೈಯಕ್ತಿಕವಾಗಿಯೂ ಹೌದು, ರಾಜಕೀಯವಾಗಿಯೂ ಹೌದು. ಕಂಪ್ಯೂಟರ್ ವಿರೋಧಿ ನಾನು ಅಲ್ಲ, ಕಂಪ್ಯೂಟರ್ ತರಕೂಡದು ಎಂದು ನಾನು ಹೇಳಿಲ್ಲ. ಗಾಂಧೀಜಿಯವರು ಕೂಡ ನೂತನ ಆವಿಷ್ಕಾರದ ವಿರೋಧವಾಗಿ ಇರಲಿಲ್ಲ. ಆದರೆ ಇದನ್ನು ಎಲ್ಲಿ ಬೇಕೋ ಅಲ್ಲಿ ಉಪಯೋಗಿಸಬೇಕು, ಒಮ್ಮೆಲೆ ಎಲ್ಲಾ ಕಡೆಗೂ ಇದನ್ನು ಮಾಡಲು ಆಗುವುದಿಲ್ಲ. ಮಾನ್ಯ ಸದಸ್ಯರು ಹೇಳಿದರು, ಇಲ್ಲಿ ಹೇಳುತ್ತಾರೆ ಕಂಪ್ಯೂಟರ್ ವಿರೋಧಿಯೆಂದು, ಆಮೇಲೆ ೪ ಪುಟದ ನಂತರ ಇದನ್ನು ಉಪಯೋಗಿಸಬೇಕೆಂದು ಹೇಳುತ್ತಾರೆ ಎಂದು. ಉದ್ಯೋಗ ವಿನಿಮಯ ಕೇಂದ್ರದಲ್ಲಿ ಕಂಪ್ಯೂಟರ್ ಉಪಯೋಗ ಮಾಡುತ್ತಿದ್ದೇವೆ ಎಂದು ನಾನು ಹೇಳಿದ್ದೇನೆ. ಉದ್ಯೋಗ ವಿನಿಮಯ ಕೇಂದ್ರಗಳ ಗತಿ ಹೇಗಿದೆ ಎಂದರೆ ಮೊದಲೇ ನಿರುದ್ಯೋಗದಿಂದ ಬಳಲತಕ್ಕಂಥ ಯುವಕರು, ಬಿ.ಎ., ಬಿ.ಎಸ್ಸಿ. ಅಥವಾ ಡಬಲ್ ಗ್ರಾಜ್ಯುಯೇಟ್ ಇರಬಹುದು. ಅವರು ಅಲ್ಲಿ ಹೋದರೆ ನಿಂತುಕೊಳ್ಳುವುದಕ್ಕೆ ಜಾಗ ಇಲ್ಲ. ಹೆಸರನ್ನು ನೋಂದಾಯಿಸಬೇಕೆಂದರೆ ಅಲ್ಲಿ ದುಡ್ಡು ಕೇಳುತ್ತಾರೆ, ರಿಜಿಸ್ಟರ್ ಮಾಡಿದ್ದಕ್ಕೆ ರಸೀತಿ ಕೊಡಿ ಎಂದರೆ ಕೊಡುವುದಿಲ್ಲ. ಇದಕ್ಕಾಗಿ ಒಂದು ಕಮಿಟಿಯನ್ನು ನೇಮಕ ಮಾಡಿದ್ದು ಹೌದು. ಇದನ್ನು ನವೀಕರಣ ಮಾಡಬೇಕು, ಬೇರೆ ದೇಶದಲ್ಲಿ ಯಾವ ವ್ಯವಸ್ಥೆ ಇದೆಯೆಂದು ತಿಳಿದುಕೊಂಡು ಅದನ್ನು ನಮ್ಮಲ್ಲಿ ಕೂಡ ಮಾಡಬೇಕು. ಮೊದಲೇ ನಿರುದ್ಯೋಗಿಗಳು, ಅವರಿಗೆ ಮತ್ತೆ ಹಿಂಸೆ ಇರಕೂಡದು. ಇದನ್ನು ಐದು ವಿಭಾಗಗಳಾಗಿ ಮಾಡಿ ನಾನ್ ಮೆಟ್ರಿಕ್ಯುಲೇಟ್, ಮೆಟ್ರಿಕ್ಯುಲೇಟ್, ಟೆಕ್ನಿಕಲ್ ಗ್ರಾಜ್ಯುಯೇಟ್, ನಾನ್ ಗ್ರಾಜ್ಯುಯೇಟ್, ಹೀಗೆ ಬೇರೆ ಬೇರೆ ವಿಭಾಗ ಎಂದು ಮಾಡಿ ಪ್ರತಿಯೊಂದು ತಿಂಗಳಿನಲ್ಲೂ ಹೋಗಿ ಸಾಧ್ಯವಾದರೆ ಆಗಾಗ, ಅವರ ಮೇಲೆ ಕಣ್ಣಿಟ್ಟು ಸರಿಯಾಗಿ ಕಾರ್ಖಾನೆಗಳಿಗೆ ಹೆಸರುಗಳನ್ನು ಕಳಿಸುತ್ತಾರೆಯೋ, ಏನಾದರೂ ಅವ್ಯವಹಾರ ನಡೆಯುತ್ತಿದೆಯೋ ಎಂದು ತಿಳಿಯಲು ಕಂಪ್ಯೂಟರ್‌ನಿಂದಲೇ ಸಾಧ್ಯ.

ಶ್ರೀ ಕೆ. ಎಚ್. ಶ್ರೀನಿವಾಸ್.— ೨೧ ನೇ ಶತಮಾನಕ್ಕೆ ಸಜ್ಜಾಗಬೇಕೆಂದು ಹೇಳಿ ಗಾಂಧೀಜಿ ಕಂಪ್ಯೂಟರ್ ವಿಷಯ ತೆಗೆದುಕೊಂಡು ಗೇಲಿ ಮಾಡುತ್ತಿದ್ದೀರಲ್ಲ, ಅದಕ್ಕೆ ನಾನು ಹೇಳಿದ್ದು.

ಶ್ರೀ ರಾಮಕೃಷ್ಣ ಹೆಗಡೆ.— ಗೇಲಿ ಮಾಡುವ ಪ್ರಯತ್ನ ಆಗಿರುವುದು ತಮ್ಮಿಂದ. ಒಂದು ಕಡೆ ಗಾಂಧೀಜಿಯವರು ಹೆಸರು ಹೇಳುತ್ತಾರೆ, ಇನ್ನೊಂದು ಕಡೆ ಅರಾಕ್ ಶಾಪ್ ಕೊಡುತ್ತೇವೆ ಎಂದು ಹೇಳುತ್ತಾರೆ, ಎಂದು ಹೇಳಿದ್ದೀರಿ. ಅರಾಕ್ ಶಾಪ್ ನೀತಿ ಇಡೀ ರಾಷ್ಟ್ರಕ್ಕೇ ಸಂಬಂಧಪಟ್ಟಿದ್ದು.

ಶ್ರೀ ಕೆ. ಎಚ್. ಶ್ರೀನಿವಾಸ್.— ಕರ್ನಾಟಕದ ನೀತಿ ತಮ್ಮಿಂದ ಪ್ರಾರಂಭವಾದುದಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.— ಹೌದು. ಅದರಲ್ಲಿ ನಾಚಿಕೆ ನನಗೆ ಏನೂ ಇಲ್ಲ, ಎಂಥ ಪರಿಸ್ಥಿತಿಯಲ್ಲಿ ಅರ್ಥಖಾತೆಯನ್ನು ಶ್ರೀಮಾನ್ ನಿಜಲಿಂಗಪ್ಪನವರು ಮಂತ್ರಿಯಾಗಿದ್ದಾಗ ನನಗೆ ಕೊಟ್ಟಿದ್ದರು ಎಂದರೆ, ಆಗ ಅರ್ಥಮಂತ್ರಿಗಳಾಗಿದ್ದ ಶ್ರೀಮಾನ್ ಜತ್ತಿಯವರು ಮಂಗಳೂರಿನಲ್ಲಿ ಒಂದು ಸ್ಟೇಟ್‌ಮೆಂಟ್ ಮಾಡಿದ್ದರು. ನಮ್ಮ ಹಣಕಾಸಿನ ಪರಿಸ್ಥಿತಿ ಹೇಗೆ ಇದೆ ಎಂದರೆ ಬರುವ ತಿಂಗಳಿನಿಂದ ಸರ್ಕಾರಿ ನೌಕರರಿಗೆ

ಸಂಬಳ ಕೊಡಲಿಕ್ಕೆ ಖಜಾನೆಯಲ್ಲಿ ದುಡ್ಡು ಇಲ್ಲ ಎಂದು. ಈ ಸ್ಟೇಟ್‌ಮೆಂಟನ್ನು ಅವರು ಮಂಗಳೂರಿನಲ್ಲಿ ಮಾಡಿದ್ದರು. ಆ ಮೇಲೆ ಅವರ ಖಾತೆಯನ್ನು ನನಗೆ ಕೊಟ್ಟರು. ಆ ಹೊತ್ತಿನಲ್ಲಿ ತಕ್ಷಣ ಇದನ್ನು ಮಾಡಲಿಲ್ಲ. ಎರಡು ವರ್ಷಗಳ ನಂತರ ಪಾನ ನಿರ್ಬಂಧವನ್ನು ಸಡಿಲಿಸಿದ್ದು ಹೌದು. ನಿರ್ಬಂಧ ಮಾಡಿದರೆ ನಾವು ಸಫಲರಾಗುವುದಿಲ್ಲ, ಎಂದು ಅದನ್ನು ಸಡಿಲ ಮಾಡಲಾಯಿತು. ಒಂದು ಕೈಮಗ್ಗಕ್ಕೆ ಪವರ್‌ಲೂಮಿನಲ್ಲಿ ಎರಡು ಕೆಲಸ ಮಾಡಿದರೆ, ಕೈಮಗ್ಗದಲ್ಲಿ ೨೫ ಜನರಿಗೆ ಕೆಲಸ ಸಿಗುತ್ತದೆ ಶ್ರೀಮಾನ್ ಕೆ. ಎಚ್. ಪಾಟೀಲ ಅವರಿಗೆ ಗೊತ್ತು. ಆದ್ದರಿಂದ ನಾನು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ ಹೊರತು ಬೇರೆ ಯಾವುದೇ ಉದ್ದೇಶದಿಂದ ಅಲ್ಲ. ಕೇಂದ್ರ ಸರ್ಕಾರದ ಅರ್ಥಖಾತೆಯ ಮಂತ್ರಿ ಶ್ರೀಮಾನ್ ಪೂಜಾರಿಯವರು ನಮ್ಮ ರಾಜ್ಯಕ್ಕೆ ಬಂದಾಗೆಲ್ಲಾ, ಬೇರೆ ರಾಜ್ಯದಲ್ಲಿ ಅವರು ಇದೇ ತರಹ ಭಾಷಣ ಮಾಡುವುದಿಲ್ಲವೆಂದು ನನಗನ್ನಿಸುತ್ತದೆ. ಅವರು ಇದೇ ರಾಜ್ಯದಿಂದ ಅಲ್ಲಿಗೆ ಆರಿಸಿ ಹೋಗಿದ್ದಾರೆ, ಆದ್ದರಿಂದ ಇಲ್ಲಿ ಪುನಃ ಪುನ: ಬರುವುದು ಹೆಚ್ಚು ಸಲ ಮಂಗಳೂರಿಗೆ ಬಂದು ಹೋಗತಕ್ಕದ್ದು ಅಗತ್ಯವೆಂದು ಅವರಿಗೆ ಅನ್ನಿಸಬಹುದು. ಆದರೆ, ಕೇಂದ್ರ ಸರ್ಕಾರದ ಒಂದು ಜವಾಬ್ದಾರಿ ಸ್ಥಾನದಲ್ಲಿರುವವರು ಜನತೆಯನ್ನು ತಪ್ಪುದಾರಿಗೆ ಎಳೆಯಲು, ತಪ್ಪು ತಿಳುವಳಿಕೆ ಕೊಡತಕ್ಕದ್ದು, ಇವನ್ನು ಉದ್ದೇಶಪೂರ್ವಕವಾಗಿ ಮಾಡುತ್ತಿರುವುದು ಮಾತ್ರ ಸರಿಯಲ್ಲವೆಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ "ಕೇಂದ್ರ ಸರ್ಕಾರದವರು ಸಬ್ಸಿಡಿ ಕೊಡುತ್ತಾರೆ, ಅದಕ್ಕೆ ಎರಡು ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ಕೊಡುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ ಇದರ ಕೀರ್ತಿಯನ್ನು ಜನತಾ ಸರ್ಕಾರದವರು ತೆಗೆದುಕೊಳ್ಳುತ್ತಿದ್ದಾರೆ" ಎಂದು ಹೋದ ಕಡೆಗಳಲ್ಲೆಲ್ಲಾ ಅವರು ಹೇಳುತ್ತಿದ್ದಾರೆ

ಅವರು ನನ್ನ ಬಗ್ಗೆ ಏನೇನು ಟೀಕೆ ಮಾಡಿದ್ದಾರೆ ಎಂಬ ಬಗ್ಗೆ ಈಗ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅದರ ಅಗತ್ಯವಿಲ್ಲ. ಆದರೆ ಇದರಲ್ಲಿ ಎಷ್ಟರಮಟ್ಟಿಗೆ ನಿಜ ಇದೆ ಎಂಬುದನ್ನು ನಾವು ತಿಳಿದುಕೊಳ್ಳಬೇಕು. ಆದ್ದರಿಂದ ನಿಜ ಸಂಗತಿಯನ್ನು ಈ ಸದನದ ಮುಖಾಂತರ ಕರ್ನಾಟಕ ರಾಜ್ಯದ ಜನತೆಗೆ ತಿಳಿಸಬಯಸುತ್ತೇನೆ. ಕೇಂದ್ರ ಸರ್ಕಾರದವರು ಇದರ ಮೇಲೆ ಸಬ್ಸಿಡಿ ಕೊಡುತ್ತಿಲ್ಲ. ಎಂದು ನಾನು ಹೇಳುವುದಿಲ್ಲ. ಆದರೆ ಎಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ಕೇಂದ್ರದ ಬಡ್ಜೆಟ್‌ನಲ್ಲಿ ಪ್ರತಿವರ್ಷವೂ ಬೇರೆಬೇರೆ ಬಾಬುಗಳಿಗೆ ಇಂತಿಷ್ಟು ಸಬ್ಸಿಡಿ ಎಂದು ನಿಗದಿ ಮಾಡುತ್ತಾರೆ. ಫರ್ಟಿಲೈಜರ್ ತೆಗೆದುಕೊಂಡರೆ, ಇದರ ಮೇಲೆ ನಮಗೆ ಸ್ವಲ್ಪ ಸಬ್ಸಿಡಿ ಎಂದು ಕೊಡುತ್ತಾರೆ. ಆದರೆ ಮತ್ತೊಂದು ಕಡೆ ಅಡ್ಮಿನಿಸ್ಟ್ರೇಟಿವ್ ಪ್ರೈಸ್‌ನ್ನು ಶೇಕಡಾ ೪೫ ರಿಂದ ಶೇಕಡಾ ೫೦ರವರೆಗೆ ಹೆಚ್ಚು ಮಾಡುತ್ತಾರೆ. ಆದ್ದರಿಂದ ಇಂದಕ್ಕೊಂದು ಸಂಬಂಧವೇ ಇಲ್ಲ. ಮತ್ತೆ ಅಕ್ಕಿಯನ್ನು ತೆಗೆದುಕೊಳ್ಳೋಣ ಅಕ್ಕಿಯನ್ನು ಕೇಂದ್ರ ಕೇಂದ್ರಸರ್ಕಾರದ ಸೆಕ್ರೆಟೇರಿಟ್‌ನಲ್ಲಿ ಬೆಳೆಯುವುದಿಲ್ಲ. ಇದು ಮಾನ್ಯ ಪೂಜಾರಿ ಅವರಿಗೂ ಗೊತ್ತಿದೆ. ಅಕ್ಕಿ, ಗೋಧಿ, ಜೋಳ ಮುಂತಾದವನ್ನು ರೈತರು ಬೆಳೆಯುತ್ತಾರೆಯೇ ಹೊರತು ವಿಧಾನಸೌಧದಲ್ಲಿಯೂ ಸಹ ಬೆಳೆಯುವುದಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಇನ್ನು ಮೇಲೆ ಮಾನ್ಯ ಜಾಲಪ್ಪನವರು ಬೆಳೆಯುತ್ತಾರೆ.

ಶ್ರೀ ರಾಮಕೃಷ್ಣ ಹೆಗಡೆ.—ರೈತರು ಬೆಳೆದಿದ್ದನ್ನು ಎಫ್ ಸಿ ಐ. ನವರು ನಮ್ಮ ಮುಖಾಂತರ ಖರೀದಿ ಮಾಡುತ್ತಾರೆ. ಕೆಲವು ಸಲ ಅವರೇ ನೇರವಾಗಿ ಸಹ ಖರೀದಿ ಮಾಡುತ್ತಾರೆ. ಇವರು ಖರೀದಿ ಮಾಡುವಾಗ ರೈತರಿಗೆ ಕೊಡುವಂತಹ ದರ ಸೂಪರ್–ಫೈನ್ ಆದರೆ ಕ್ವಿಂಟಾಲ್‌ಗೆ ೨೨೮ ರೂಪಾಯಿ ೪೫ ಪೈಸೆ. ಫೈ–ವೆರೈಟಿ ಆದರೆ ಕ್ವಿಂಟಾಲ್‌ಗೆ ೨೨೨ ರೂಪಾಯಿ ೪೫ ಪೈಸೆ, ಕಾಮನ್–ವೆರೈಟಿಯಾದರೆ ಕ್ವಿಂಟಾಲ್‌ಗೆ ೨೧೬.೪೫ ಪೈಸೆ. ಆದರೆ ಇದನ್ನು ಬೆಳೆಯುವಂತಹ ರೈತರಿಗೆ ಎಷ್ಟೊಂದು ತೊಂದರೆ ಇದೆ ಎಂಬುದನ್ನು ಸಹ ನಾವು ಅರ್ಥಮಾಡಿಕೊಳ್ಳಬೇಕು. ಈಗ ನಾವು ರೈತರಿಂದ ಲೆವಿ ವಸೂಲಿ ಮಾಡುತ್ತಿಲ್ಲ. ಮಿಲ್–ಪಾಯಿಂಟಿನಿಂದ ಲೆವಿ ವಸೂಲಿ ಮಾಡಲಾಗುತ್ತಿದೆ. ಇದರಿಂದ ರೈತರಿಗೆ ತೊಂದರೆಯಾಗದಿದ್ದರೂ, ಜನರಿಗೆ ತೊಂದರೆಯಾಗುತ್ತದೆ. ನಾವು ಒಂದು ಜಿಲ್ಲೆಗೆ ಎಷ್ಟು ಕೋಟಾವನ್ನು ನಿಗದಿ ಮಾಡುತ್ತೇವೊ ಅಷ್ಟು ವಸೂಲಿಯಾಗುವವರೆಗೆ ಆ ಜಿಲ್ಲೆಯಿಂದ ಹೊರಗಡೆಗೆ ಅಕ್ಕಿ ಸಾಗಿಸುವುದನ್ನು ನಿರ್ಬಂಧ ಮಾಡುತ್ತೇವೆ. ನಮ್ಮ ಕೋಟಾ ಭರ್ತಿಯಾಗದಿದ್ದರೆ ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದವರು ನಮಗೆ ಅಕ್ಕಿ ಕೊಡುವುದಿಲ್ಲ. ಲೆವಿ ಮೂಲಕ ಇಂತಿಷ್ಟು ಶೇಖರಣೆ ಮಾಡಲೇಬೇಕೆಂದು ಅವರು ನಮಗೆ ಹೇಳುತ್ತಾರೆ. ಅದರಂತೆ ನಾವು ಶೇಖರಣೆ ಮಾಡಬೇಕಾಗುತ್ತದೆ. ಅವರು ಸೂಪರ್ ಫೈನ್ ಅಕ್ಕಿಯನ್ನು ಕ್ವಿಂಟಾಲ್‌ಗೆ ೨೨೮ ರೂಪಾಯಿ ೪೫ ಪೈಸೆಗೆ

ಖರೀದಿ ಮಾಡಿದರೆ ನಮಗೆ ಮಾರಾಟ ಮಾಡುವುದು ೨೪೦. ರೂಪಾಯಿ ೬೪ ಪೈಸೆ ದರದಲ್ಲಿ. ಫೈನ್ ವೆರೈಟಿ ಅಕ್ಕಿಗೆ ಅವರು ರೈತರಿಗೆ ಕೊಡುವ ದರ ೨೨೨ ರೂಪಾಯಿ ೪೫ ಪೈಸೆಯಾದರೆ. ನಮಗೆ ಮಾರಾಟ ಮಾಡುವುದು ೨೨೫ ರೂಪಾಯಿಗಳಿಗೆ. ಕಾಮನ್–ವೆರೈಟಿ ಅಕ್ಕಿಯನ್ನು ಅವರು ೨೧೬ ರೂಪಾಯಿಗಳ ಪ್ರಕಾರ ಖರೀದಿ ಮಾಡಿದರೆ ನಮಗೆ ಮಾರಾಟ ಮಾಡುವುದು ೨೦೪ ರೂಪಾಯಿಗಳ ಪ್ರಕಾರ ಇದರಲ್ಲಿ ಮಾತ್ರ ಸ್ವಲ್ಪ ಮಟ್ಟಿಗೆ ಸಬ್ಸಿಡಿ ಇದೆ.

ಶ್ರೀ ಕೆ. ಎಚ್. ಪಾಟೀಲ್.—ತಾವು ಬಹಳ ಸುಂದರವಾಗಿ ಮಾತನಾಡುತ್ತಿದ್ದೀರ. ಇದರಲ್ಲಿ ತಪ್ಪು ಯಾರದಿದೆ ಎಂಬುದು ನಮಗೆ ತಿಳಿಯುತ್ತಿಲ್ಲ. ಆದ್ದರಿಂದ ನೀವು ಕೇಂದ್ರದ ಅಂಕಿಅಂಶಗಳನ್ನು ಕೊಡುವುದರ ಜೊತೆಗೆ ನೀವು ರೈತರಿಂದ ಯಾವ ದರದಲ್ಲಿ ಕೊಳ್ಳುತ್ತೀರಿ ಮತ್ತು ಯಾವ ದರದಲ್ಲಿ ಜನರಿಗೆ ಮಾರಾಟ ಮಾಡುತ್ತೀರಿ ಎಂಬುದನ್ನು ಸಹ ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ನಾವು ಬಹಿರಂಗ ಮಾರುಕಟ್ಟೆಯಲ್ಲಿ ಸಹಕಾರಿ ಸಂಸ್ಥೆಗಳ ಮುಖಾಂತರ ಖರೀದಿ ಮಾಡುತ್ತೇವೆ. ನಾವು ಎರಡು ಸಂದರ್ಭಗಳಲ್ಲಿ ಖರೀದಿ ಮಾಡುತ್ತೇವೆ. ಭತ್ತಕ್ಕೆ ಸರಿಯಾದ ಬೆಲೆ ರೈತರಿಗೆ ಸಿಗದಿದ್ದಾಗ ನಾವು ಬೆಂಬಲ ಬೆಲೆ ಕೊಟ್ಟು ಖರೀದಿ ಮಾಡುತ್ತೇವೆ. ಮತ್ತೆ ನಮ್ಮ ಲೆವಿ ಸಂಗ್ರಹಣಾ ಗುರಿ ಪೂರ್ತಿಯಾಗದಿದ್ದಾಗ ಬಹಿರಂಗ ಮಾರುಕಟ್ಟೆಯಲ್ಲಿ ಖರೀದಿ ಮಾಡುತ್ತೇವೆ. ಈ ಖರೀದಿ ಮಾಡದಿದ್ದರೆ ಕೇಂದ್ರ ಸರ್ಕಾರದವರು ನಮಗೆ ಅಕ್ಕಿ ಕೊಡುವುದಿಲ್ಲ. ಅವರು ನಮಗೆ ಕಾಮನ್–ವೆರೈಟಿ ಅಕ್ಕಿಯನ್ನು ಕೊಡುತ್ತಿಲ್ಲ. ಅದನ್ನು ಎಲ್ಲಿಗೆ ಕೊಡುತ್ತಾರೋ ನನಗೆ ಗೊತ್ತಿಲ್ಲ. ಫೈನ್ ಮತ್ತು ಸೂಪರ್ ಫೈನ್ ಅಕ್ಕಿಯನ್ನು ಮಾತ್ರ ಅವರು ಕೆ.ಜಿ. ಒಂದಕ್ಕೆ ಕ್ರಮವಾಗಿ ೨.೨೫ ಮತ್ತು ೨.೪೧ರ ದರದಲ್ಲಿ ಏನು ಕೊಡುತಾರೆ, ಅದನ್ನು ನಾವು ಕೆ.ಜಿ. ಒಂದಕ್ಕೆ ಎರಡು ರೂಪಾಯಿಗಳ ದರದಲ್ಲಿ ಮಾರಾಟ ಮಾಡುತ್ತೇವೆಂದು ಹೇಳಿದ್ದೇವೆ. ಆದ್ದರಿಂದ ಇದರಲ್ಲಿ ನಮ್ಮ ಸಬ್ಸಿಡಿ ಇದೆಯೋ ಅಥವಾ ಇಲ್ಲವೋ ಎಂಬುದನ್ನು ತಾವೇ ನಿರ್ಧಾರ ಮಾಡಬೇಕು. ಅದೇರೀತಿ ಗೋಧಿಯನ್ನು ಅವರು ಕೊಳ್ಳುವುದು ಕ್ವಿಂಟಾಲ್‌ಗೆ ೧೫೭ ರೂಪಾಯಿಗಳ ಪ್ರಕಾರ. ಆದರೆ ನಮಗೆ ಅವರು ಮಾರಾಟ ಮಾಡುವುದು ಕ್ವಿಂಟಾಲ್‌ಗೆ ೧೬೨ ರೂಪಾಯಿಗಳ ಪ್ರಕಾರ. ಆದರೂ ನಾವು ಇದನ್ನು ಕೆ.ಜಿ.ಗೆ ಒಂದು ರೂಪಾಯಿ ಐವತ್ತು ಪೈಸೆಯಂತೆ ಜನರಿಗೆ ಮಾರಾಟ ಮಾಡುತ್ತಿವೆ. ಅದೇ ರೀತಿ ಲೆವಿ ಸಕ್ಕರೆಯನ್ನು ಅವರು ಖರೀದಿ ಮಾಡುವುದು ಕೆ. ಜಿ.ಗೆ ೪ ರೂಪಾಯಿ ೪೦ ಪೈಸೆಗೆ. ಆದ್ದರಿಂದ ನಾನು ಮಾನ್ಯ ಪೂಜಾರಿ ಅವರಿಗೆ ಅತ್ಯಂತ ವಿನಯಪೂರ್ವಕವಾಗಿ ಹೇಳುವುದಕ್ಕೆ ಬಯಸುತ್ತೇನೆ, ಏನೆಂದರೆ, ಕೇಂದ್ರ ಸರ್ಕಾರದವರು ಇದಕ್ಕೆಲ್ಲಾ ಸಬ್ಸಿಡಿ ಕೊಡುತ್ತಿಲ್ಲ ಎಂದು ಇದರ ಜೊತೆಗೆ ಇದು ಕೇಂದ್ರ ಸರ್ಕಾರ ಬೆಳೆದಂಥ ಅಕ್ಕಿಯಲ್ಲ. ಆದ್ದರಿಂದ ಇನ್ನು ಮುಂದೆಯಾದರೂ ಅವರು ಈ ರೀತಿ ಯಾದಂಥ ತಪ್ಪು ತಿಳಿವಳಿಕೆಯನ್ನು ನಮ್ಮ ಜನರ ಮುಂದಿಡಬಾರದೆಂದು ಹೇಳುತ್ತಿದ್ದೇನೆ.

ಮತ್ತೊಂದು ವಿಚಾರವೆಂದರೆ, ಈಗ ಕೇಂದ್ರ ಸರ್ಕಾರದವರು ಇಪ್ಪತ್ತು ಅಂಶಗಳ ಕಾರ್ಯಕ್ರಮದ ಅಡಿಯಲ್ಲಿ ಬಡವರಿಗೆ ಬಡವರಿಗೆ ಬ್ಯಾಂಕ್‌ಗಳ ಮುಖಾಂತರ ಸಾಲ ಕೊಡಿಸುವ ವ್ಯವಸ್ಥೆ ಮಾಡಿದ್ದಾರೆ. ಇದು ಮಾನ್ಯ ಪೂಜಾರಿ ಅವರ ಮುಖ್ಯವಾದ ಕೆಲಸ. ಇದು ಕೇಂದ್ರ ಸರ್ಕಾರದ ದುಡ್ಡು ಮತ್ತು ಕೇಂದ್ರ ಸರ್ಕಾರದ ಕಾರ್ಯಕ್ರಮ ಎನ್ನುವಂತಹ ಅಭಿಪ್ರಾಯ ಜನರಲ್ಲಿ ಮೂಡುವಂತೆ ಅವರು ಇಲ್ಲಿಗೆ ಬಂದಾಗಲೆಲ್ಲಾ ಮಾತನಾಡುತ್ತಾರೆ. ಆದರೆ ಇದು ಸರಿಯಲ್ಲವೆಂದು ನಾನು ಹೇಳುತ್ತೇನೆ. ಬ್ಯಾಂಕ್‌ನಲ್ಲಿರುವ ಹಣ ರಿಜರ್ವ್ ಬ್ಯಾಂಕ್‌ನ ಹಣವಲ್ಲ. ಅದೇರೀತಿ ರಿಜರ್ವ್ ಬ್ಯಾಂಕ್‌ನಲ್ಲಿರುವ ಹಣ ಸಹ ರಿಜರ್ವ್ ಬ್ಯಾಂಕ್‌ನ ಹಣವಲ್ಲ. ಇದೆಲ್ಲಾ ರೈತರ ಹಣ. ಇವನ್ನು ನಾವು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಸಾರ್ವಜನಿಕರು ಮತ್ತು ರೈತರು ಬ್ಯಾಂಕ್‌ಗಳಲ್ಲಿ ಏನು ಠೇವಣಿ ಇಡುತ್ತಾರೆ, ಅದರಲ್ಲಿ ಇಂತಿಷ್ಟು ಪರ್ಸೆಂಟ್ ಹಣವನ್ನು ರಿಜರ್ವ್ ಬ್ಯಾಂಕ್‌ನಲ್ಲಿಡಬೇಕೆಂದು ರಿಜರ್ವ್ ಬ್ಯಾಂಕ್‌ನವರು ಕೊಡುವ ಆದೇಶದಂತೆ ಬ್ಯಾಂಕ್‌ಗಳವರು ಅಲ್ಲಿಡುತ್ತಾರೆ. ಇದನ್ನು ಆಗಾಗ್ಗೆ ಅವರು ಹೆಚ್ಚುಕಡಿಮೆ ಮಾಡುವುದುಂಟು. ಮಾನ್ಯ ಸದಸ್ಯರಿಗೆ ಒಂದು ವಿಚಾರ ಹೇಳಿದರೆ ಆಶ್ಚರ್ಯವಾಗಬಹುದು. ಅದೇನೆಂದರೆ ಬ್ಯಾಂಕ್‌ಗಳಲ್ಲಿರುವ ಹಣದಲ್ಲಿ ರಾಜ್ಯಸರ್ಕಾರಕ್ಕೂ ಪಕ್ಕಿದೆ. ಇದು ಈಗಾಗಲೇ ಕೆಲವರಿಗೆ ಗೊತ್ತಿದೆ. ರಾಜ್ಯ ಸರ್ಕಾರದವರು ಕೈಕೊಂಡ ಹಲವೊಂದು ಅಭಿವೃದ್ಧಿ ಕಾರ್ಯಕ್ರಮಗಳ ಫಲದಿಂದಾಗಿಯೇ ಬ್ಯಾಂಕ್‌ಗಳಲ್ಲಿ ಹಣ ಶೇಖರಣೆಯಾಗಿರುವುದು, ಉದಾಹರಣೆಗೆ ಹೇಳಬೇಕಾದರೆ, ತುಂಗಭದ್ರಾ ಯೋಜನೆಗೆ ೧೨೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಇಟ್ಟುಕೊಳ್ಳೋಣ. ಇದರಲ್ಲಿ ಸ್ವಲ್ಪ ಭಾಗ

ಸಾಲವಾಗಿ ತಂದಿದ್ದೇವೆ. ಇದಕ್ಕೆ ನಾವು ಪ್ರತಿ ವರ್ಷವೂ ಬಡ್ಡಿ ಕೊಡಬೇಕು. ಈ ಯೋಜನೆ ಮುಗಿದ ನಂತರ ರೈತರ ಜಮೀನಿಗೆ ನೀರು ಸಿಕ್ಕಿತು. ಆಗ ಅವರು ಕಬ್ಬನ್ನು ಬೆಳೆದರು. ರೈತರು ಒಂದು ಎಕರೆಯಲ್ಲಿ ಕಬ್ಬನ್ನು ಬೆಳೆದರೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇವರು ಬಡ್ಜೆಟ್ ಮೇಲೆ ಉತ್ತರ ಕೊಡುತ್ತಿದ್ದಾರೋ ಅಥವಾ ಶ್ರೀಮಾನ್ ಪೂಜಾರಿ ಅವರಿಗೆ ಉತ್ತರ ಕೊಡುತ್ತಿದ್ದಾರೋ ?

ಶ್ರೀ ಕೆ. ಎಚ್. ಪಾಟೀಲ್.—ಇವರ ಭಾಷಣ ಕೇಳಲು ಬಹಳ ಚೆನ್ನಾಗಿದೆ. ಆದ್ದರಿಂದ ಇದನ್ನು ರೆಕಾರ್ಡ್ ಮಾಡಿ ಇಟ್ಟುಕೊಳ್ಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಒಂದು ಎಕರೆಯಲ್ಲಿ ಕಬ್ಬನ್ನು ರೈತ ಬೆಳೆದರೆ ರಾಜ್ಯಸರ್ಕಾರಕ್ಕೆ ಸಿಗುವುದು ೨೫೦ ರೂಪಾಯಿಗಳು ಮಾತ್ರ. ಆದರೆ ಕೇಂದ್ರ ಸರ್ಕಾರಕ್ಕೆ ಮೂರೂವರೆ ಸಾವಿರ ರೂಪಾಯಿಗಳು ಸಿಗುತ್ತದೆ. ಇದರಲ್ಲಿ ನಮಗೆ ಶೇಕಡಾ ೪೦ ರಷ್ಟು ಬರುತ್ತದೆ. ಇದು ಒಂದು ಭಾಗ ಎರಡನೆಯ ವಿಚಾರವೆಂದರೆ, ನೀರಿನ ಅನುಕೂಲ ಬಂದಮೇಲೆ ರೈತ ನಾಲ್ಕು ಕಾಸು ಸಂಪಾದನೆ ಮಾಡುತ್ತಾನೆ. ಒಣ ಭೂಮಿ ಇದ್ದಾಗ ಎಕರೆಗೆ ೫೦೦ ರೂಪಾಯಿಗಳವರೆಗೆ ಸಂಪಾದನೆ ಇದ್ದರೆ, ನೀರಿನ ಅನುಕೂಲ ಬಂದಮೇಲೆ ೨ ಸಾವಿರದಿಂದ ನಾಲ್ಕು ಸಾವಿರದವರೆಗೆ ರೈತನ ಸಂಪಾದನೆ ಹೆಚ್ಚಾಗುತ್ತದೆ. ಈ ರೀತಿ ತನ್ನ ಸಂಪಾದನೆ ಹೆಚ್ಚಾದಾಗ ರೈತ ಮೊದಲ ಎರಡು ಮೂರು ವರ್ಷಗಳ ಕಾಲ ಹಣವನ್ನು ಸಿಕ್ಕಾಪಟೆ ಖರ್ಚು ಮಾಡುತ್ತಾನೆ, ಮನೆಯನ್ನು ಕಟ್ಟಿಸಿಕೊಳ್ಳುತ್ತಾನೆ. ಮನೆಗೆ ರೇಡಿಯೋ ತರುತ್ತನೆ ಸ್ಟೀಲ್ ಪಾತ್ರೆಗಳು ಹಾಗೂ ಇನ್ನಿತರ ಸಾಮಾನುಗಳನ್ನು ತರುತ್ತಾನೆ.

೨-೦೦ ಪಿ.ಎಂ.

ಆದಾದ ಮೇಲೆ ಬಂದಂತಹ ದುಡ್ಡನ್ನು ರೈತ ಬ್ಯಾಂಕಿನಲ್ಲಿ ಇಡುತ್ತಾನೆ. ನಾವು ಕೈಗೊಂಡತಹ ಅಥವಾ ಸಾಲ ಮಾಡಿ ಕಟ್ಟಿಸುವಂತಹ ಪ್ರಾಜೆಕ್ಟಿನ ಫಲವಾಗಿ ಏನು ಸರ್‌ಪ್ಲಸ್ ಮನಿ ಆಗುತ್ತದೆ, ಅದನ್ನು ನಮಗೆ ಕೊಡಿ ಎಂದು ಕೇಳುತ್ತೇವೆ ರಿಜರ್ವ್ ಬ್ಯಾಂಕಿನ ದುಡ್ಡು ನಮಗೆ ಬೇಡ, ನಾಸಿಕ್‌ದಲ್ಲಿರತಕ್ಕ ದುಡ್ಡು ನಮಗೆ ಬೇಡ. ನಮ್ಮ ರೈತ ಕಷ್ಟ ಪಟ್ಟು ದುಡಿಯುತ್ತಾನೆ. ಅವನ ಬೆಳೆಯಿಂದ ಬಂದಂತಹ ಭಾಗವನ್ನು ನಮಗೆ ಕೊಡಿ ಎಂದು ಕೇಳುತ್ತೇವೆ. ಆ ಕಾನೂನು ನಮಗೆ ಇಲ್ಲ. ಮಾನ್ಯ ಪೂಜಾರಿಯವರು ಸಾಲ ಮೇಳ ಮಾಡುತ್ತಾರೆ. ಅವರು ಆ ಹಣವನ್ನು ರಿಜರ್ವ್ ಬ್ಯಾಂಕಿನಿಂದ ತಂದು ಹಂಚಿದ್ದೇವೆಂದು ದಯಮಾಡಿಟ್ಟು ತಿಳಿದುಕೊಳ್ಳಕೂಡದು. ಮತ್ತು ಜನರಲ್ಲೂ ಅಪಪ್ರಚಾರ ಮಾಡಕೂಡದು. ಕೆಲವು ಮಾನ್ಯ ಸದಸ್ಯರು ನಾವು ಹೊಸದಾಗಿ ಹಾಕಿರತಕ್ಕ ಟ್ಯಾಕ್ಸ್ ವಿಚಾರದಲ್ಲಿ ಕೆಲವು ಟೀಕೆಗಳನ್ನು ಮಾಡಿದ್ದಾರೆ ಅದರಲ್ಲಿ ಒಂದು ಟೀಕೆ ಏನೆಂದರೆ, ಅದು ಮಾನ್ಯ ಕೆ. ಹೆಚ್. ಶ್ರೀನಿವಾಸ್‌ರವರದ್ದು ಎಂದು ಕಾಣುತ್ತದೆ. ಹಿಂದೆ ನೀವು ಅರ್ಥ ಮಂತ್ರಿಯಾಗಿದ್ದಾಗ ೧೦ ಅಥವಾ ೧೨ ಪರ್ಸೆಂಟ್‌ಗಿಂತ ಹೆಚ್ಚು ಟ್ಯಾಕ್ಸ್ ಹಾಕಬಾರದೆಂದು ಹೇಳಿದ್ದೀರಿ. ಈಗ ನೀವು ಮಾಡಿದ್ದೀರಿ ಎಂದು ಹೇಳಿದರು. ನಾನು ಅವರಿಗೆ ಇಷ್ಟೇ ಹೇಳಬಯಸುತ್ತೇನೆ. ಈ ಸಲ ಹೋದ ವರ್ಷ ಎರಡೂ ಸಲ ಸೇಲ್ಸ್ ಟ್ಯಾಕ್ಸ್ ಅಥವಾ ಪರ್ಚೇಸ್ ಟ್ಯಾಕ್ಸ್ ಅನ್ನು ಹಾಕುವಾಗ ಅನೇಕ ವಿಚಾರಗಳನ್ನು ಗಮನಕ್ಕೆ ತೆಗೆದುಕೊಂಡು ಹಾಕಿದ್ದೇವೆ ಅದರಲ್ಲಿ ಮುಖ್ಯವಾದುದೇನೆಂದರೆ, ಆದಾಯ ಅಂತೂ ಬರಬೇಕು. ಅದರ ಹೊರತಾಗಿ ಸುತ್ತಮುತ್ತಲಿನ ಪ್ರದೇಶಗಳಿಗೆ ವ್ಯಾಪಾರ, ವ್ಯವಹಾರಗಳಿಗೆ ಡೈವರ್ಟ್ ಆಗಬಾರದು. ಇದರಿಂದ ನಮಗೆ ಬರತಕ್ಕಂತಹ ಹಣವೂ ಹೊರಟು ಹೋಗುತ್ತತೆ. ಮತ್ತು ಜನರಿಗೆ ತೊಂದರೆಯಾಗಬಾರದು ವ್ಯಾಪಾರಸ್ಥರಿಗೆ ಇದ್ದುದರಲ್ಲಿ ಉಚಿತಾಯವಾಗಬೇಕು ಏಕೆಂದರೆ, ಅದು ಅವರ ದುಡ್ಡು ಅವರು ಹೋದಾಗ ಅವರನ್ನು ಗೌರವದಿಂದ ನೋಡಬೇಕೆಂಬುದು ನನ್ನ ಮುಖ್ಯವಾದ ಉದ್ದೇಶ. ಅವರು ಕೇಳಿದರು, ನೀವು ಎಷ್ಟು ಆರ್ಟಿಕಲ್ಸ್ ಮೇಲೆ ೧೦-೧೨ ಪರ್ಸೆಂಟ್‌ಗಿಂತ ಹೆಚ್ಚು ಹಾಕಿದ್ದೀರೆಂದು ? ಈಗ ಸಾವಿರಾರು ಆರ್ಟಿಕಲ್ಸ್ ಇದೆ ಅದರಲ್ಲಿ ೧೨ ಪರ್ಸೆಂಟ್‌ಗಿಂತ ಹೆಚ್ಚು ಸೇಲ್ಸ್ ಟ್ಯಾಕ್ಸ್ ಇರತಕ್ಕಂಥಾದ್ದು ಕೇವಲ ೧೩ ವಸ್ತುಗಳ ಮೇಲೆ ಮಾತ್ರ. ಅವು ಯಾವುವೆಂದರೆ, Arms ಬಗ್ಗೆ all arms including guns and rifles ಕರ್ನಾಟಕದಲ್ಲಿ ೧೫ ಪರ್ಸೆಂಟ್ ಇದೆ. ಆಂಧ್ರದಲ್ಲಿ ೧೭ ಪರ್ಸೆಂಟ್, ಕೇರಳ ೨೦ ಮತ್ತು ಮಹಾರಾಷ್ಟ್ರದಲ್ಲಿ ೧೫ ಪರ್ಸೆಂಟ್ ಇದೆ. ಮಾರ್ಬಲ್ ಸ್ಲಾಬ್ಸ್, ಇದಕ್ಕೆ ನಾವು ೧೫ ಪರ್ಸೆಂಟ್ ಹಾಕಿದ್ದೇವೆ. ಬಾಕಿ ಎಲ್ಲಾ

ಕಡೆಯಲ್ಲೂ ೧೫ ಪರ್ಸೆಂಟ್ ಇದೆ. ಆಂಧ್ರದಲ್ಲಿ ಮಾತ್ರ ೧೩ ಪರ್ಸೆಂಟ್ ಡಿಕ್ಟಾ ಫೋನ್ ಅಂಡ್ ಸಿಮಿಲರ್ ಎಕ್ವಿಪ್‌ಮೆಂಟ್ಸ್‌ಗೆ ನಮ್ಮಲ್ಲಿ ೧೫ ಪರ್ಸೆಂಟ್ ಇದೆ. ಕೇರಳ ಮತ್ತು ತಮಿಳುನಾಡಿನಲ್ಲಿ ೧೫ ಪರ್ಸೆಂಟ್ ಇದೆ. ಆಂಧ್ರ ಮತ್ತು ಮಹಾರಾಷ್ಟ್ರದಲ್ಲಿ ೧೫ ಪರ್ಸೆಂಟ್ ಇದೆ. ಸೌಂಡ್ ಟ್ರಾನ್ಸ್ ಮಿಟಿಂಗ್ ಎಕ್ವಿಪ್‌ಮೆಂಟ್‌ಗೆ ಎಲ್ಲಾ ರಾಜ್ಯದಲ್ಲಿ ೧೫ ಪರ್ಸೆಂಟ್ ಇದೆ. ಆಂಧ್ರದಲ್ಲಿ ಮಾತ್ರ ಕೇವಲ ೧೨ ಪರ್ಸೆಂಟ್ ಇದೆ ಟೈಪರೈಟರ್ ಮಿಷಿನ್‌ಗೆ Tabulating Machinesಗೆ ಮೂರೂ ರಾಜ್ಯಗಳಲ್ಲಿ ಇದೆ. ಕೇರಳ, ಆಂಧ್ರದಲ್ಲಿ ೧೩ ಪರ್ಸೆಂಟ್ ಇದೆ. ಇನ್ನು ಲಿಫ್ಟ್ಸ್ ಬಗ್ಗೆ ಹೇಳುವುದಾದರೆ ಆಂಧ್ರದಲ್ಲಿ ೧೨ ಪರ್ಸೆಂಟ್, ಕೇರಳದಲ್ಲಿ ೮, ಬಾಕಿ ಎಲ್ಲಾ ಕಡೆ ೧೫ ಪರ್ಸೆಂಟ್ ಇದೆ. ನಮ್ಮಲ್ಲೂ ಕೂಡ ೧೫ ಪರ್ಸೆಂಟ್ ಇದೆ. ಸಿಮೆಂಟ್ ಮಾತ್ರ ನಮ್ಮಲ್ಲಿ ಹೆಚ್ಚು ಇದೆ. ೧೫ ಬಾಕಿ ಕಡೆ ೧೦ ರಿಂದ ೧೨ ಪರ್ಸೆಂಟ್ ಇದೆ. ಲಿಕ್ಕರ್ ಅದರ್‌ದ್ಯಾನ್ ಟ್ಯಾಡಿ ಅಂಡ್ ಫೆನ್ನಿಗೆ ನಮ್ಮಲ್ಲಿ ೧೫೦ ಪರ್ಸೆಂಟ್ ಇದೆ. ಬೇರೆ ಕಡೆಗೆ ೪೦–೩೦–೩೫ ಪರ್ಸೆಂಟ್ ಇದೆ. ಇದರ ಮೇಲೆ ಹೆಚ್ಚು ಹಾಕಿದ್ದು ಹೌದು. ಅಪಿಯಂ ಮ್ ಗಾಂಜಾ ಮತ್ತು ಭಾಂಗಿಗೆ ನಮ್ಮಲ್ಲಿ ೪೦ ಪರ್ಸೆಂಟ್ ಇದೆ. ಬಾಕಿ ಕಡೆ ೧೨–೫–೧೫ ಪರ್ಸೆಂಟ್‌ನಷ್ಟು ಇದೆ. ರೆಫ್ರಿಜಿಯೇಟರ್ ಅಂಡ್ ಕಂಡೀಷನಿಂಡಗ್ ಮೆಷಿನ್ಸ್ ಎಲ್ಲಾ ಕಡೆ ೧೫ ಪರ್ಸೆಂಟ್ ಆಂಧ್ರದಲ್ಲಿ ಮಾತ್ರ ೧೩ ಪರ್ಸೆಂಟ್ ಇದೆ. ವೈರ್‌ಲೆಸ್ ಇನ್ಸ್ಟ್ರುಮೆಂಟ್ಸ್‌ಗೆ ಎಲ್ಲಾ ಕಡೆ ೧೫ ಪರ್ಸೆಂಟ್ ಆಂಧ್ರದಲ್ಲಿ ಮಾತ್ರ ೧೩ ಪರ್ಸೆಂಟ್. ರೇಡಿಯೋ ಗ್ರಾಮ್‌ಗೆ ಆಂಧ್ರದಲ್ಲಿ ೧೩, ಕೇರಳದಲ್ಲಿ ೧೨ ಪರ್ಸೆಂಟ್ ಇದೆ. ಬಾಕಿ ಮೂರು ರಾಜ್ಯಗಳಲ್ಲಿ ೧೫ ಪರ್ಸೆಂಟ್ ಇದೆ. ಸಿನಿಮಟೊಗ್ರಾಫ್‌ಗೆ ಎಲ್ಲಾ ಕಡೆ ೧೫ ಪರ್ಸೆಂಟ್ ಇದೆ. ಆಂಧ್ರದಲ್ಲಿ ಮಾತ್ರ ೧೩ ಪರ್ಸೆಂಟ್ ಇಬೆ. ಬೈನಾಕ್ಯುಲರ್ etc ಗೆ ಎಲ್ಲಾ ಕಡೆ ೧೫ ಪರ್ಸೆಂಟ್ ಆಂಧ್ರದಲ್ಲಿ ಮಾತ್ರ ೧೨ ಪರ್ಸೆಂಟ್. ಆಮೇಲೆ ಗ್ರಾಮಫೋನ್‌ಗೆ ನಮ್ಮದೂ ಸೇರಿ ಮೂರು ರಾಜ್ಯಗಳಲ್ಲಿ ೧೫ ಪರ್ಸೆಂಟ್ ಇದೆ. ಉಳಿದ ಆಂಧ್ರ ಮತ್ತು ಮಹಾರಾಷ್ಟ್ರ ೧೨ ಪರ್ಸೆಂಟ್ ಇದೆ. ಕ್ಯಾಸೆಟ್ ರೆಕಾರ್ಡರ್ಸ್ ವಿಡಿಯೋಗೆ ಎಲ್ಲಾ ಕಡೆ ೧೫ ಪರ್ಸೆಂಟ್, ಆಂಧ್ರದಲ್ಲಿ ಮಾತ್ರ ೧೨ ಪರ್ಸೆಂಟ್ ಇದೆ. ವಿಡಿಯೋ ಕ್ಯಾಸೆಟ್‌ಗೆ ಗೋವ ಮತ್ತು ಪಾಂಡಿಚೇರಿ ತೆಗೆದುಕೊಂಡರೆ ಆಗುವುದಿಲ್ಲ. ಅವರು ಸೂರತ್‌ನಲ್ಲಿ ಹತ್ತಿರ ಒಂದು ಮಾಹೆ ದಮನ್ ಎಂದು ಇದೆ ಅಲ್ಲಿ ೨ ಪರ್ಸೆಂಟ್ ಇದೆ. ಗುಜರಾತಿನಿಂದ ಎಲ್ಲರೂ ಹೋಗಿ ಖರೀದಿ ಮಾಡುವರು. ಅದನ್ನು ಇಲ್ಲಿ ಹೋಲಿಸಿ ಕೊಳ್ಳುವುದಕ್ಕೆ ಬರುವುದಿಲ್ಲ. ಟೈಮ್ ಪೀಸಸ್ ಅಂಡ್ ಕ್ಲಾಕ್ಸ್ ೧೫ ಪರ್ಸೆಂಟ್ ನಮ್ಮಲ್ಲಿದೆ. ಬಾಕಿ ಎಲ್ಲಾ ಕಡೆ ೧೨ ಪರ್ಸೆಂಟ್ ಇದೆ. ಸ್ಕೂಟರ್, ಮೋಟಾರ್ ವೆಹಿಕಲ್ಸ್, ಮೋಟಾರ್ ಬ್ಯಾಟರೀಸ್ ಇದಕ್ಕೆ ನಮ್ಮಲ್ಲಿ ೧೫ ಪರ್ಸೆಂಟ್ ಇದೆ. ಬಾಕಿ ಎಲ್ಲಾ ಕಡೆ ೧೨ ಪರ್ಸೆಂಟ್ ಇದೆ. ಒಂದೇ ಒಂದು ಮಾತನ್ನು ಹೇಳಿಬಿಡುತ್ತೇನೆ. ರ್‍ಯಾಷನಲೈಸ್ ನಾವು ಯಾವರೀತಿ ಮಾಡಿದ್ದೇನೆ ಎಂದು ಹೇಳುತ್ತೇನೆ. ಅವರು ಎರಡು ಉದಾಹರಣೆಯನ್ನು ಕೊಟ್ಟರು. Indian made foreiah liqourಗೆ ನೀವು first at the point of first purchase sales tax ಮೊದಲು ಇತ್ತು ಈಗ last pointಗೆ ಅಲ್ಲೂ ಕೂಡ ೨ ಪರ್ಸೆಂಟ್ ಹೆಚ್ಚು ಹಾಕಿದ್ದೇನೆ. ಇದರಿಂದ ಉತ್ಪಾದನೆ ಕಡಿಮೆಯಾಗ ಬಹುದೆಂದು ಅವರು ಹೇಳಿದರು. ಕೊನೆಗೆ ರೀಟೈಲ್ ಷಾಪಿನಲ್ಲಿ ಅವರು ಟ್ಯಾಕ್ಸ್ ನೆಟ್ ಒಳಗೆ ಬರುವುದಿಲ್ಲ. ಟರ್ನ್‌ಓವರ್ ಕಡಿಮೆ ಆದರೆ ಅವರು ಎಸ್ಕೇಪ್ ಆಗುತ್ತಾರೆ. ಮತ್ತು ಇದರಲ್ಲಿ evasim ಆಗುವ ಸಾಧ್ಯತೆ ಇದೆಯೆಂದು ಹೇಳಿದರು. ಅದು ಆಗಕೂಡದು ಎನ್ನುವ ದೃಷ್ಟಿಯಿಂದ ಒಂದು ಹೊಸ ಪ್ರಯೋಗವನ್ನು ಮಾಡುತ್ತಿದ್ದೇವೆ. ಇದರಿಂದ ಎರಡು ಕಡೆ ಸೋರಿ ಹೋಗುವುದು ತಪ್ಪುತ್ತದೆ. ಒಂದು ವರ್ಷ ನೋಡೋಣ. ನಮ್ಮ ಅನುಭವದಿಂದ ಹೆಚ್ಚು ಉತ್ಪಾದನೆ ಅಂದರೆ, ಇದರಿಂದ ೩ ಕೋಟಿ ರೂ. ಹೆಚ್ಚು ಬರಬೇಕು. ಒಂದು ವೇಳೆ ಬರದೇ ಇದ್ದರೆ, ಮುಂದಿನ ವರ್ಷ ತೆಗೆದುಹಾಕೋಣ. ೨–೩ ಹೊಸ ಪ್ರಯೋಗವನ್ನು ಮಾಡಿದ್ದೇವೆ. ನಮ್ಮ ಉದ್ದೇಶ ಇಷ್ಟೆ. ನಮ್ಮ ಅಂದಾಜು ಪ್ರಕಾರ ಇದರಿಂದ ಹೆಚ್ಚು ಸೋರುವುದಿಲ್ಲ, ಇದು ಕಡಿಮೆ evasion ಆಗುತ್ತದೆ. ನಮ್ಮ ರೆವಿನ್ಯೂ ಹೆಚ್ಚಾಗುತ್ತದೆ. ಆ ಒಂದು ಉದ್ದೇಶದಿಂದ, ನಾವು ಇದನ್ನು ಮಾಡಿದ್ದೇವೆ, ಅದು ಯಶಸ್ವಿಯಾಗದೇ ಇದ್ದರೆ, ನಾವು ನಿರೀಕ್ಷಿಸಿದಂತಹ ಪ್ರತಿಫಲ ಸಿಗದೇ ಇದ್ದರೆ, ಅದನ್ನು ಮುಂದಿನ ವರ್ಷ ಚೇಂಜ್ ಮಾಡೋಣ. ಈ ಸಲ ಟ್ಯಾಕ್ಸ್ ವಿಚಾರದಲ್ಲಿ ನಾವು ಎಲ್ಲಾ ವಾಣಿಜ್ಯ ಸಂಘಗಳ ಅಂದರೆ ಚೇಂಬರ್ ಆಫ್ ಕಾಮರ್ಸ್ ಮತ್ತು ಬೇರೆ ಬೇರೆ ವರ್ತಕರ ಸಂಘಗಳು ಮತ್ತು ವ್ಯಾಪಾರಸ್ಥರ ಸಂಘಗಳು ಏನಿವೆ, ಅದರ ಪ್ರತಿನಿಧಿಗಳ ಜೊತೆಗೆ ಚರ್ಚೆ ಮಾಡಿ ಒಂದು ನಿರ್ಣಯಕ್ಕೆ ಬಂದಿದ್ದೇವೆ. ಆದರೂ ಕೆಲವು ಅಸಮಾಧಾನಗಳನ್ನು ವ್ಯಕ್ತಪಡಿಸಿದ್ದಾರೆ. ಆ ಸಮಾಧಾನ ಮುಖ್ಯವಾಗಿ ಎರಡು

ವಿಚಾರಕ್ಕೆ ಸೇರಿದ್ದು. ಮೊದಲನೆಯದು, ಟರ್ನ್‌ಓವರ್ ಟ್ಯಾಕ್ಸ್‌ನ್ನು ನಾವು ಇಳಿಸಿದ್ದೇವೆಂದು, ಟರ್ನ್‌ಓವರ್ ಟ್ಯಾಕ್ಸ್‌ನ್ನು ಅವರು ಹೇಳಿದ ಪ್ರಕಾರ ನಾವು ಟರ್ನ್‌ಓವರ್ ಟ್ಯಾಕ್ಸ್ ಹಾಕಿದಾಗ, ನಾವು ಯಾರಿಗೂ ಚಾರ್ಜ್ ಮಾಡಲಿಕ್ಕಾಗುವುದಿಲ್ಲ. ಅದನ್ನು ನಮ್ಮ ಪ್ರಾಫಿಟ್‌ನಲ್ಲಿ ನಾವು ಕೊಡಬೇಕಾಗುತ್ತದೆ.

ಆದ್ದರಿಂದ ಬಹಳ ಭಾರವಾಗುತ್ತದೆಂದು ಈ ಒಂದು ಟರ್ನ್‌ಓವರ್ ಟ್ಯಾಕ್ಸ್‌ನ್ನು ತೆಗೆಯಬೇಕೆಂದು ಹೇಳಿದ್ದಾರೆ. ಈ ಒಂದು ಟರ್ನ್‌ಓವರ್ ಟ್ಯಾಕ್ಸ್ ಎಕ್ಸೆಮ್‌ಷನ್ ಏನು ಇತ್ತು, ಅದನ್ನು ಹೆಚ್ಚು ಮಾಡಿದ್ದೇವೆ. ಮೊದಲನೆಯದಾಗಿ ಇದರಿಂದ ಸಣ್ಣಪುಟ್ಟ ವರ್ತಕರುಗಳಿಗೆ ಯಾವ ರೀತಿಯ ತೊಂದರೆಯೂ ಆಗುವುದಿಲ್ಲ. ಇನ್ನು ದೊಡ್ಡ ವರ್ತಕರು ಈ ೨ ಪರಸೆಂಟ್ ಹೆಚ್ಚು ತೆರಿಗೆಯನ್ನು ಕೊಡಬೇಕಾಗುತ್ತದೆ, ಇವರೇನು ತಮ್ಮ ಕೈಯಿಂದ ಕೊಡಬೇಕಾಗಿಲ್ಲ. ಪ್ರತಿಯೊಬ್ಬ ದೊಡ್ಡ ವರ್ತಕರು ಲಾಭ ಮಾಡುತ್ತಾರೆ ಇದರಿಂದ ಅವರಿಗೆ ಏನು ತೊಂದರೆಯಾಗುವುದಿಲ್ಲ. ಈ ವರ್ಷ ಇದರ ಬಗ್ಗೆ ಹಾಕಿರುವ ಟರ್ನ್‌ಓವರ್ ಟ್ಯಾಕ್ಸ್‌ನಿಂದ ಸುಮಾರು ೧೮ ಕೋಟಿ ರೂಪಾಯಿ ಬರಬಹುದೆಂದು ನಮ್ಮ ಅಂದಾಜು. ಇದು ದೊಡ್ಡ ಬಾಬಾಗಿರುವುದರಿಂದ ಇದನ್ನು ಬಿಟ್ಟು ಕೊಡುವುದಕ್ಕಾಗುವುದಿಲ್ಲವೆಂದು ವಿಷಾದದಿಂದ ಹೇಳುತ್ತಿದ್ದೇನೆ. ಮುಂದಿನ ವರ್ಷ ಹಣಕಾಸಿನ ಪರಿಸ್ಥಿತಿ ಸುಧಾರಿಸಿದರೆ ಇದನ್ನು ತೆಗೆಯುವ ಬಗ್ಗೆ ಯೋಚನೆ ಮಾಡಬಹುದು. ಏಕೆಂದರೆ ನಮ್ಮ ಪ್ಲಾನ್ ಮೊದಲು ಗಟ್ಟಿಯಾಗಬೇಕು, ಕನಿಷ್ಟ ಮಟ್ಟದ ಗಾತ್ರವನ್ನು ಹೆಚ್ಚು ಮಾಡಬೇಕು ಇನ್ನು ರೀಫೈನ್ಡ್ ಆಯಿಲ್ ವಿಚಾರದಲ್ಲಿ ಮಾನ್ಯ ಸದಸ್ಯರು ಅನೇಕರು ಹೇಳಿದರು, ನೀವು ವೆಜಿಟೇಬಲ್ ಆಯಿಲ್‌ಗೆ ಹಾಕಿಲ್ಲವೆಂದು, ಈ ವೆಜಿಟೆಬಲ್ ಆಯಿಲ್‌ಗೆ ಹಿಂದಿನ ವರ್ಷವೇ ತೆರಿಗೆಯನ್ನು ಹೆಚ್ಚು ಮಾಡಿದ್ದೇವೆ. ಮಾನ್ಯ ಸದಸ್ಯರಿಗೆ ಗೊತ್ತಿರಬಹುದು, ರೀಫೈನ್ಡ್ ಆಯಿಲ್‌ನ್ನು ಬಡಬಗ್ಗರು ಉಪಯೋಗಿಸುತ್ತಿಲ್ಲ, ಈ ರೀಫೈನ್ಡ್ ಆಯಿಲ್ ಟಿನ್‌ಗಳಲ್ಲಿ ಇರುತ್ತವೆ. ಈಗ ಹಾಕಿರುವ ಹೆಚ್ಚು ತೆರಿಗೆ ಓಪನ್ ಆಗಿ ಮಾರಾಟ ಮಾಡುವುದಕ್ಕೆ ಅನ್ವಯಿಸುವುದಿಲ್ಲ. ಇದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಇದರ ಬಗ್ಗೆ ಯಾರಿಗಾದರೂ ತಪ್ಪು ತಿಳುವಳಿಕೆ ಇದ್ದರೆ ಅದನ್ನು ನಿವಾರಣೆ ಮಾಡಿಕೊಳ್ಳಬೇಕು. ಬಡವರಿಗೆ ಈ ತೆರಿಗೆ ಅನ್ವಯಿಸುವುದಿಲ್ಲ. ಇದು ಮೇಲಿನ ವರ್ಗದವರಿಗೆ ಮಾತ್ರ ಅನ್ವಯಿಸುತ್ತದೆ. ಇನ್ನು ಟೊಬ್ಯಾಕೋಗೆ ಹೆಚ್ಚು ಮಾಡಿಲ್ಲವೆಂದು ಮಾನ್ಯ ಮೊಯ್ಲಿಯವರು ಹೇಳಿದರು, ಟೊಬ್ಯಾಕೋಗೆ ನಾವು ಹೆಚ್ಚು ಮಾಡಿದ್ದೇವೆ.

ಶ್ರೀ ಕೆ. ಹೆಚ್. ಪಾಟೀಲ್.— ಹುಣಸೇಹಣ್ಣಿಗೂ ಹೆಚ್ಚು ಮಾಡಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.— ಹುಣಿಸೇಹಣ್ಣು ಆರೋಗ್ಯಕ್ಕೂ ಒಳ್ಳೆಯದಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಇಷ್ಟು ಹೇಳಲಿಕ್ಕೆ ಬಯಸುತ್ತೇನೆ. ಈ ವರ್ಷದ ಟ್ಯಾಕ್ಸೇಷನ್ ಪ್ರಪೋಸಲ್‌ನಲ್ಲಿ ಆದಷ್ಟು ಮಟ್ಟಿಗೆ ಬಡವರಿಗೆ ಅದರಿಂದ ತೊಂದರೆಯಾಗಬಾರದು, ಯಾರ ಜೋಬಿನಲ್ಲಿ ದುಡ್ಡು ಇದೆಯೋ ಅವರ ಜೋಬಿನಿಂದಲೇ ಬರಬೇಕು ಎಂದು ಪ್ರಯತ್ನ ಮಾಡಿದ್ದೇವೆ. ಮಾನ್ಯ ಬಂಗಾರಪ್ಪನವರು ತಮ್ಮ ಭಾಷಣದಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪಿಸಿದರು ಅದರಲ್ಲಿ ಪ್ರತಿ ಸಲ ಭಾಷಣದ ಹಾಗೆ ಈ ವರ್ಷವೂ ಸೆನ್‌ಷೇಷನಲ್ ವಿಚಾರವನ್ನು ಪ್ರಕಟ ಮಾಡಿದ್ದಾರೆ. ಅವರು ಮೊದಲನೇ ವರ್ಷದ ಭಾಷಣದಲ್ಲಿ ನನ್ನ ಸಂಬಂಧಿಕರಿಂದ ಸರ್ಕಾರಕ್ಕೆ ೪ ಕೋಟಿ ರೂಪಾಯಿಗಳಷ್ಟು ಸೇಲ್ಸ್‌ಟ್ಯಾಕ್ಸ್ ಹಣ ಹೋಗಿದೆಯೆಂದು ಹೇಳಿದ್ದರು. ಅದು ಆದಮೇಲೆ ಅಂದಿನ ಅಧ್ಯಕ್ಷರಿಗೆ ಹೇಳಿ ಸದನದ ಒಂದು ಸಮಿತಿಯನ್ನು ಮಾಡಿ ರಿಪೋರ್ಟ್‌ನ್ನು ತರಿಸಿದ್ದು ಎಲ್ಲರಿಗೂ ಗೊತ್ತಿದೆ. ಇನ್ನು ೨ನೇ ವರ್ಷದ ಭಾಷಣದಲ್ಲಿ ರೆಕ್ಟಿಫೈಡ್ ಸ್ಪಿರಿಟ್‌ನ್ನು ಅನಧಿಕೃತವಾಗಿ ಮಾರಾಟ ಮಾಡಿ ಸರ್ಕಾರಕ್ಕೆ ೯ ಕೋಟಿ ರೂಪಾಯಿ ನಷ್ಟವಾಗಿದೆಯೆಂದು ಆರೋಪ ಮಾಡಿದರು, ಅದರ ಬಗ್ಗೆ ಒಂದು ಜುಡಿಷಿಯಲ್ ಎನ್‌ಕ್ವೈಯರಿಗೆ ಆರ್ಡರ್ ಮಾಡಿದ್ದೇವೆ, ಅದರ ರಿಪೋರ್ಟ್ ಬರುತ್ತದೆ. ಈ ವರ್ಷ ೬೫ ಕೋಟಿ ರೂಪಾಯಿಯ ವಿಚಾರವನ್ನು ಹೇಳಿದರು. ಅವರು ಬಹುಶಃ ಮುಖ್ಯಮಂತ್ರಿ ಆಗುವ ಕನಸು ಕಾಣತಕ್ಕವರು, ಅದರ ಬಗ್ಗೆ ಎಷ್ಟು ಆತುರ ಇದೆ ಎಂದು ಇದರಿಂದ ಕಾಣಿಸುತ್ತದೆ.

ಶ್ರೀ ಎಸ್ ಬಂಗಾರಪ್ಪ.—ಮುಖ್ಯಮಂತ್ರಿಯಾಗಿರತಕ್ಕಂತಹ ಕನಸು ನಾವು ಕಾಣಬೇಕಾಗುತ್ತದೆ. ಕನಸು ಕಾಣುವುದು ತಪ್ಪಾಗುತ್ತದೆಯೇನು ? ನೀವು ಒಬ್ಬರೇ ಮುಖ್ಯಮಂತ್ರಿಯಾಗಿ ಗೂಟ ಹೊಡೆದುಕೊಂಡು ಇರಬೇಕೆಂದು ಮಾಡಿದ್ದೀರಾ ? ಏನು ಸಮಾಚಾರ ನಿಮ್ಮದು ? ಇದು ಪ್ರಜಾಪ್ರಭುತ್ವ,

ನೀವು ಮುಖ್ಯಮಂತ್ರಿಯಾಗಬಹುದು, ನಾವೂ ಆಗಬಹುದು. ಮೋಸಮಾಡಿ ಮುಖ್ಯಮಂತ್ರಿ ಆಗಿರತಕ್ಕವರಿಗೆ ಗೂಟಹೊಡೆದುಕೊಂಡು ಇರಬೇಕೆಂಬ ಆಸೆ ಇದ್ದರೆ ಉಳಿದವರಿಗೆ ಏಕೆ ಇರಬಾರದು ?

ಶ್ರೀ ರಾಮಕೃಷ್ಣ ಹೆಗಡೆ.— ಈ ಸಲವೂ ಜನರು ಮೋಸ ಮಾಡಿಯೇ ಮುಖ್ಯಮಂತ್ರಿಯನ್ನು ಮಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಈ ಸಾರಿ ಈ ಬಗ್ಗೆ ನಾವು ತಕರಾರು ಮಾಡಲಿಲ್ಲ. ೧೯೮೩ನೇ ಇಸವಿಯಲ್ಲಿ ತಾವು ಮೋಸ ಮಾಡದೆ ಇದ್ದರೆ ನೀವು ಮುಖ್ಯ ಮಂತ್ರಿಯಾಗುವುದಕ್ಕೆ ನಿಮ್ಮ ಹಣೆಯಲ್ಲಿ ಬರೆದಿರಲಿಲ್ಲ. ಇದು ಕರ್ನಾಟಕಕ್ಕೆ ಗೊತ್ತಿರುವ ವಿಚಾರ.

(ಗೊಂದಲ)

ಶ್ರೀ ಎಸ್. ಆರ್. ಲಕ್ಷ್ಮಯ್ಯ.— ಅಧಿಕಾರವನ್ನು ಯಾರು ಹುಡುಕಿಕೊಂಡು ಹೋಗುವುದಿಲ್ಲ. ಅಧಿಕಾರವೇ ಬೇಕಾದವರನ್ನು ಹುಡುಕಿಕೊಂಡು ಬರುತ್ತದೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಇಂತಹ ಮುಖ್ಯ ಮಂತ್ರಿಯುವರನ್ನು ಹೊಂದಿರತಕ್ಕಂತಹ ನಿಮ್ಮ ನತದೃಷ್ಟ ರಾಜಕಾರಣಕ್ಕೆ ನನ್ನ ಅನುಕಂಪ ಇದೆ, ಅಷ್ಟೆ.

ಶ್ರೀ ಸಿ. ಭೈರೇಗೌಡರು.— ನಿಮ್ಮ ಹಾಗೆ ಮುಖ್ಯ ಮಂತ್ರಿಯ ಕನಸು ಅವರು ಕಾಣುವುದಿಲ್ಲ.

ಶ್ರೀ ಎಸ್, ಬಂಗಾರಪ್ಪ.— ಭೈರೇಗೌಡರೇ, ಇದು ಟೇಪ್ ಪ್ರಕರಣ ಅಲ್ಲ. ಇದು ನಿಮಗೆ ಎಲ್ಲಾ ಅರ್ಥವಾಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ,— ಕರ್ನಾಟಕದ ಜನತೆ ಮತ್ತು ಜನತಾ ಪಕ್ಷದ ಸಂಬಂಧವನ್ನು ಏನು ಇರಬೇಕು ಅದನ್ನು ನಮಗೆ ಬಿಟ್ಟು ಬಿಡಿ. ನಾನು ಮುಖ್ಯಮಂತ್ರಿಯಾಗಿ ಪೂರ್ಣಾವಧಿ ಅಧಿಕಾರದಲ್ಲಿ ಇರಬೇಕೆಂದು ನಾನು ಬಯಸುವುದಿಲ್ಲವೆಂದು ನಾನು ಹೇಳಿದ್ದೇನೆ ; ಈ ರೀತಿ ಯಾವ ಮುಖ್ಯ ಮಂತ್ರಿಯೂ ಇದುವರೆಗೂ ಹೇಳಿಲ್ಲ. ಅದನ್ನು ನಾನು ಹೇಳಿದ್ದೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ನೀವು ಸ್ವಲ್ಪ ದಿನ ಪಾರ್ಲಿಮೆಂಟಿಗೆ ಏಕೆ ಹೋಗಬಾರದು ?

ಶ್ರೀ ರಾಮಕೃಷ್ಣ ಹೆಗಡೆ.— ನನ್ನನ್ನು ಅಲ್ಲಿಗೆ ಕಳುಹಿಸಲು ಕೆಲವರಿಗೆ ತುಂಬಾ ಅವಸರವಾಗಿದೆಯೆಂದು ಕಾಣುತ್ತದೆ.

ಶ್ರೀ ಎಸ್. ಬಂಗಾರಪ್ಪ.— ನಮಗಿಂತ ಹೆಚ್ಚಿಗೆ ನಿಮ್ಮಲ್ಲೇ ಆತುರ ಇದೆ.

ಶ್ರೀ ರಾಮಕೃಷ್ಣ ಹೆಗಡೆ.— ನಾನು ಇಷ್ಟು ಮಾತ್ರ ಹೇಳಬಲ್ಲೇ, ಯಾವಾಗ ನಾನು ಅಲ್ಲಿಗೆ ಹೋಗತಕ್ಕಂತಹ ಪ್ರಸಂಗ ಬಂದರೂ ಅದರಿಂದ ನಿಮಗೆ ಯಾವ ತರಹದ ಅನುಕೂಲತೆಯೂ ಅದರಿಂದ ಆಗುವುದಿಲ್ಲ. ಆ ಕ್ಷಣ ನೀವು ಕಾಯುತ್ತಾ ಇದ್ದರೆ ನಿಮಗೆ ಜೀವನದಲ್ಲಿ ಅತ್ಯಂತ ದೊಡ್ಡ ನಿರಾಶೆ ಕಾದು ಕೊಂಡಿರುತ್ತದೆಂದು ಹೇಳುತ್ತೇನೆ.

ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಿದರು ಎಂದರೆ, ದಿನಾಂಕ. ೭-೯-೮೪ರಿಂದ ದಿನಾಂಕ. ೨-೨-೮೫ನೇ ತಾರೀಖಿನವರೆಗೆ ಹೋಟೆಲ್ ಉದ್ದಿಮೆಯಿಂದ ಬರತಕ್ಕಂತಹ ಸೇಲ್ಸ್ ಟ್ಯಾಕ್ಸ್‌ಗಳನ್ನು ನೀವು ವಜಾ ಮಾಡಿದ್ದೀರಿ ಇದರಿಂದ ರಾಜ್ಯಕ್ಕೆ ೬೦ ಅಥವಾ ೭೦ಕೋಟಿ ರೂಪಾಯಿಯಷ್ಟು ನಷ್ಟವಾಗಿದೆ ಮತ್ತು ಇದರ ಬಗ್ಗೆ ಏನೋ ವ್ಯವಹಾರ ನಡೆದಿದೆ ಈ ಹಣವನ್ನು ನಾನು ನಿಮ್ಮ ಪಕ್ಷಕ್ಕೆ ಬಳಸಿದ್ದೀರಿ ಎಂದು ಹೇಳಲಿಕ್ಕೆ ಬಯಸುವುದಿಲ್ಲವೆಂದು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.— ನಾನು ನಷ್ಟ ಆಗಿದೆ ಎಂದು ಹೇಳಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ. — ಈ ಹಣವನ್ನು ನೀವು ಪಕ್ಷಕ್ಕಾಗಿ ಉಪಯೋಗಿಸಿಲ್ಲವೆಂದು ಹೇಳಲಿಕ್ಕೆ ಬಯಸುವುದಿಲ್ಲವೆಂದು ಹೇಳಿದ್ದೀರಿ. ಸಮಾಚಾರ ಪತ್ರಿಕೆಗಳಲ್ಲಿ ಹೆಡ್‌ಲೈನ್‌ನಲ್ಲಿ ಬರುವುದಕ್ಕೆ ಇಷ್ಟೇ ವಿಷಯ ಸಾಕಾಗುವುದಿಲ್ಲವೆ ? ಇದರಿಂದ ಅವರಿಗೆ ಸಮಾಧಾನ ಆಗುವ ಹಾಗಿದ್ದರೆ ಆಗಲಿ. ಮಾನ್ಯ ಅಧ್ಯಕ್ಷರೇ, ಹೋಟೆಲ್ ಉದ್ದಿಮೆದಾರರಿಗೆ ೧೯೭೮ರಲ್ಲಿ ತೆರಿಗೆ ಹಾಕಿದ್ದಾಗ ಅವರೆಲ್ಲಾ ಸುಪ್ರೀಮ್

ಕೋರ್ಟಿಗೆ ಹೋಗಿದ್ದರು. ಅದಕ್ಕೂ ಮೊದಲು ಈ ಉದ್ದಿಮೆಯಿಂದ ಇಡೀ ನಮ್ಮ ರಾಜ್ಯಕ್ಕೆ ಈಗ ಸೇಲ್ಸ್‌ಟ್ಯಾಕ್ಸ್‌ನಿಂದ ಬರತಕ್ಕ ಆದಾಯ ೨ಅಥವಾ ೩ಕೋಟಿ ರೂಪಾಯಿ ಮಾತ್ರ.

ನಮ್ಮ ಹೋಟೆಲ್‌ನವರು ಕೋರ್ಟಿಗೆ ಹೋಗಿಲ್ಲ. ಆದರೆ ಉತ್ತರ ಹಿಂದೂಸ್ಥಾನದ ನಾರ್ದರ್ನ್ ಇಂಡಿಯ ಕೇಟರರ್ಸ್‌ರವರು ಸುಪ್ರೀಮ್ ಕೋರ್ಟಿಗೆ ಹೋದರು. ಸುಪ್ರೀಮ್ ಕೋರ್ಟಿನ ತೀರ್ಮಾನ ಏನಾಯಿತು ಅಂದರೆ ಮೊದಲನೇಯದಾಗಿ ಸೇಲ್ಸ್ ಟ್ಯಾಕ್ಸ್ ಎಲ್ಲಾ ಐಟಮ್‌ಗಳಿಗೆ ಆಗುವುದಿಲ್ಲ ಎಂದು. ಇದರಲ್ಲಿ ಇರತಕ್ಕಂಹ ಸಾರಾಂಶ ಏನು ಅಂದರೆ, ಹೋಟೆಲ್ಲಿಗೆ ಏನು ಅಥಿತಿಗಳು ಬರುತ್ತಾರೆ, ಅವರ ಸೇವೆಯನ್ನು ನಾವು ಮಾಡುತ್ತೇವೆ. ಆದ್ದರಿಂದ ಅದನ್ನು ಸೇಲ್ಸ್ ಎಂದು ತಿಳಿಯುವುದು ಸರಿಯಲ್ಲ, ಸೇಲ್ಸ್ ಟ್ಯಾಕ್ಸ್‌ನ್ನು ಹಾಕಬಾರದು ಎಂದು. ಹೀಗೆ ಸುಪ್ರೀಮ್ ಕೋರ್ಟಿನ ತಿರ್ಮಾನ ಅದು ಎರಡೂ ಇದೆ. ಅದರ ನಂತರ ರಿವ್ಯೂ ಪಿಟಿಶನ್ ಹಾಕಿದರು ಆರಿವ್ಯೂವಿಟಿಶನ್ ಹಾಕಿದ ಮೇಲೆ ಏನು ವಿವರವನ್ನು ಕೊಟ್ಟರು ಅದರಿಂದಲೂ ಲಿಟಿಗೇಶನ್ ಹೆಚ್ಚಿಗೆಆಯಿತು ಕೊನೆಗೆ ೧೯೮೨ರಲ್ಲಿ ಈವಿಚಾರವು ಪಾರ್ಲಿಮೆಂಟಿನಲ್ಲಿ ಚರ್ಚೆಯಾಗಿ ಕಾನ್ಸಿಟಿಟ್ಯೂಷನ್‌ಗೆ ಅಮೆಂಡ್‌ಮೆಂಟ್ ಮಾಡತಕ್ಕಂತಹ ಪ್ರಸಂಗ ಬಂತು ೪೬ನೇ ತಿದ್ದುಪಡಿ ಮಾಡಬೇಕಾಗಿ ಬಂತು. ಅದನ್ನು ಮಾಡುವಾಗ ಆಗ ಏನು ಮಾಡಿದ್ದಾರೆ ಅಂದರೆ ಯಾವ ಯಾವ ಹೋಟೆಲ್ ಮಾಲೀಕರು ಈ ಅವಧಿಯಲ್ಲಿ ಅಂದರೆ ೭-೯-೧೯೮೨ ರಿಂದ ಇದು ಆಗುವವರೆಗೆ, ಹೊಸದಾಗಿ ಅಮೆಂಡ್‌ಮೆಂಟ್ ಆಗಿ ಸೇಲ್ಸ್ ಟ್ಯಾಕ್ಸ್ ಹಾಕಬಹುದು ಎಂದು ಖಚಿತವಾಗಿ ಕಾಯಿದೆ ಆಗುವವರೆಗೆ, ಯಾರ್ಯಾರು ಹೋಟೆಲ್ ಮಾಲೀಕರು ವಸೂಲು ಮಾಡಿದ್ದರೊ ಅವರಿಂದ ಮಾತ್ರ ಟ್ಯಾಕ್ಸ್‌ನ್ನು ತೆಗೆದುಕೊಳ್ಳಬೇಕು, ಯಾರ್ಯಾರು ವಸೂಲು ಮಾಡಿಲ್ಲವೋ ಅವರಿಂದ ಇದನ್ನು ವಸೂಲು ಮಾಡಬಾರದು ಎನ್ನುವ ಮಾತನ್ನು ಹೇಳಿದ್ದಾರೆ. ಈಗ ಇಲ್ಲಿ ನಾವು ಮಾಡಿರತಕ್ಕಂತಾದ್ದು ಆ ಒಂದು ಅಭಿಪ್ರಾಯವನ್ನೇ ಇಲ್ಲಿ ಜಾರಿಯಲ್ಲಿ ತಂದಿರತಕ್ಕಂಥಾದ್ದು. ಇದರಲ್ಲಿ ದೊಡ್ಡ ದೊಡ್ಡ ಹೋಟೆಲ್ ಉದ್ದಿಮೆದಾರರು ಬರುವುದಿಲ್ಲ. ಕೇವಲ ಚಿಕ್ಕ ಹೋಟೆಲ್‌ನವರು ಅಂದರೆ ಯಾರು ಲೆಕ್ಕಪತ್ರ ಇಟ್ಟಿರುವುದಿಲ್ಲ ಅವರು ಬರುತ್ತಾರೆ. ೧೯೭೮ನೇ ಇಸವಿಯಲ್ಲಿ ಏನಾಯಿತು ಎನುವುದನ್ನು ಎಲ್ಲಿ ಹುಡುಕುತ್ತೀರಿ? ಸುಪ್ರೀಮ್ ಕೋರ್ಟಿನವರು ಸ್ಟೇ ಆರ್ಡರ್ ಕೊಟ್ಟಮೇಲೆ ಅವರು ವಸೂಲು ಮಾಡಿಲ್ಲ; ಈ ಕೇಸಿನಲ್ಲಿ ತಮಗೆ ಗುಣ ಆಗುತ್ತದೆ ಎಂದು ಹೇಳಿ. ವಸೂಲು ಮಾಡದಿದ್ದವರ ಹತ್ತಿರ ವಸೂಲು ಮಾಡಬಾರದು ಎಂದು ಪಾರ್ಲಿಮೆಂಟಿನಲ್ಲಿ ತೀರ್ಮಾನ ಆಗಿರತಕ್ಕಂತಾದ್ದು, ಈಗ ಕೂಡಾ ಯಾರು ಲೆಕ್ಕ ಇಟ್ಟಿಲ್ಲವೋ ಅಂತಹವರಿಂದ ಮಾತ್ರ ವಸೂಲು ಮಾಡ ಕೂಡದು ಎಂದು ಹೇಳಿದ್ದರಿಂದ ನಮ್ಮ ಆಫೀಸ್‌ನವರಿಗೂ ಕೂಡ ಗೊಂದಲ ಮತ್ತು ಉದ್ದಿಮೆದಾರರಿಗೂ ಕಿರುಕುಳ ಅಷ್ಟೆ ಅಲ್ಲದೆ ಲಂಚಕ್ಕೂ ಕೂಡಾ ಇದರಲ್ಲಿ ಸ್ವಲ್ಪಮಟ್ಟಿಗೆ ಅವಕಾಶ ಆಗುತ್ತದೆ. ಹೀಗೆ ಆದರೂ ಕೂಡಾ ಯಾವ ಉದ್ದಿಮೆದಾರರು ನಮ್ಮ ಕಡೆಗೆ ಅದರ ಬಗ್ಗೆ ಚರ್ಚೆ ಮಾಡಲು ಬಂದಿಲ್ಲ. ಅಥವಾ ಈ ಕುರಿತಾಗಿ ಯಾವ ದುರ್ವ್ಯವಹಾರವೂ ನಡೆದಿಲ್ಲ. ಇಲ್ಲಿ ಯಾವ ಪಕ್ಷದ ಪ್ರಶ್ನೆಯೂ ಇಲ್ಲ; ಅಥವಾ ಬೇರೆ ಯಾವ ಪ್ರಶ್ನೆಯೂ ಉದ್ಭವಿಸುವುದಿಲ್ಲ. ತಮಿಳುನಾಡಿನಲ್ಲಿ ಇದೇ ತರಹ ಕೊಟ್ಟಿದ್ದಾರೆ. ಇದರಿಂದ ನಮಗೆ ಈ ಮೂರು ವರ್ಷಗಳಲ್ಲಿ ಪ್ರತಿ ವರ್ಷವೂ ಸುಮಾರು ೨ ರಿಂದ ೩ ಲಕ್ಷ ರೂಪಾಯಿ ಗಳು ಮಾತ್ರ ಹೋಗುತ್ತದೆ,

ಅಂದರೆ ೧೯೭೮ ರಿಂದ ೧೯೮೩ರ ವರೆಗೆ ಆರು ವರ್ಷಗಳಿಗೆ ಪ್ರತೀ ವರ್ಷವೂ ೨ ರಿಂದ ೩ ಲಕ್ಷ ರೂಪಾಯಿಗಳು ಎಂದು ಹಿಡಿದರೂ ಕೂಡಾ ೧೮ ಲಕ್ಷ ರೂಪಾಯಿಗಳು ಮಾತ್ರ ಇದರಲ್ಲಿ ಹೋಗ ಬಹುದು. ಆದರೆ ಯಾವುದೂ ನಮಗೆ ಬರತಕ್ಕಂತಾದ್ದು ಹೋಗುವುದಿಲ್ಲ. ಅವರು ಕೊಡತಕ್ಕಂಥದ್ದಲ್ಲ ಏನೊಂದು ನೋಷನಲ್ ಲೈಬಿಲಿಟಿ ಇತ್ತು, ಆ ಲೈಬಿಲಿಟಿ ಯಿಂದ ಅವರನ್ನು ಮುಕ್ತರಾಗಿ ಮಾಡುತ್ತಾ ಇದ್ದೇವೆ ಅಷ್ಟೆ. ಆದುದರಿಂದ ಮಾನ್ಯ ಬಂಗಾರಪ್ಪನವರಿಗೆ ನಾನು ಹೇಳುತ್ತೇನೆ, ಇದಕ್ಕಾಗಿ ಒಂದು ನ್ಯಾಯಾಂಗ ತನಿಖೆ ಮಾಡಬೇಕೆಂದು ಹೇಳಿದರೆ ನಾನು ಮಾಡುತ್ತೇನೆ. ಅದಕ್ಕಾಗಿ ಯಾವುದೇ ದುರ್ವ್ಯವಹಾರವಾಗಲೀ ಯಾರಿಗೇ ಫೇವರ್ ಮಾಡುವುದೇ ಆಗಲಿ ಅಥವಾ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಮುಖ್ಯಮಂತ್ರಿಗಳು ಇಂತದ್ದಕ್ಕೆಲ್ಲಾ ಕೇಳದಿದ್ದರೂ ಮಾಡುತ್ತಾರೆ, ಆದರೆ ನಾವು ಕೇಳುತ್ತಿದ್ದೇವೆ. ಲೋಕಾಯುಕ್ತರನ್ನು ನೇಮಕ ಮಾಡಿ, ನಿಮ್ಮ ಮಂತ್ರಿಗಳ ಮೇಲೆ ಸಾಕಷ್ಟು ಆಪಾದನೆಗಳು ಇವೆ ಎಂದರೆ ಅದನ್ನು ಮಾಡುವುದಿಲ್ಲ. ಅದನ್ನು ಬೇಗನೆ ಮಾಡಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಹೇಳಿದ ವಿಷಯಕ್ಕೂ ಬರುತ್ತೇನೆ. ಮಾನ್ಯ ಅಧ್ಯಕ್ಷರೇ, ಲೋಕಾಯುಕ್ತದ ವಿಚಾರದಲ್ಲಿ ಹೇಳುವುದಾದರೆ, ಈ ವಿಧೇಯಕವನ್ನು ನಾವು ಪಾಸ್ ಮಾಡಿ ಸುಮಾರು ಒಂದೂವರೆ ವರ್ಷ ಆಗುತ್ತಾ ಬಂತು. ಒಂದು ವರ್ಷದಿಂದ ಅದು ಕೇಂದ್ರದಲ್ಲಿ ಹಾಗೆಯೇ ಉಳಿದಿದೆ. ಅಲ್ಲಿಂದ ರಾಷ್ಟ್ರಪತಿಯವರ ಅಂಕಿತ ಆಗಿಲ್ಲ. ಅದು ಬಂದಮೇಲೆ ಮೊದಲು ಅದರ ಬಗ್ಗೆ ಕಾರ್ಯಕರ್ತರಾಗುತ್ತೇವೆ. ಅಲ್ಲದೇ ಆ ಇಂಟೇರಿಯಮ್ ಪಿರಿಯಡ್ ಮೂರು ತಿಂಗಳಲ್ಲಿ ನಾನು ಏನು ಮಾಡುವುದಕ್ಕೂ ಬಯಸಿರಲಿಲ್ಲ. ಏಕೆಂದರೆ ನಮ್ಮ ಎದುರುಗಡೆ ಕುಳಿತಿರತಕ್ಕಂತ ಹವರು, ಇದು ಕೇರ್ ಟೇಕರ್ ಗವರ್ನ್‌ಮೆಂಟ್, ಕೇರ್‌ಟೇಕರ್ ಗವರ್ನ್‌ಮೆಂಟ್ ಎಂದು ಹೇಳುತ್ತಾ ಇದ್ದರೂ, ಆಮೇಲೆ ಈ ಕೇರ್ ಟೇಕರ್ ಗವರ್ನ್‌ಮೆಂಟ್ ಯಾರನ್ನಾದರೂ ಇಂತಹವರನ್ನು ಮಾಡಿಬಿಟ್ಟರೆ ಅದಕ್ಕೊಂದು ಬೇರೆಯಾದ ಆಪಾದನೆಯನ್ನು ನಾವು ಎದುರಿಸಬೇಕಾದೀತು ಎಂದು ಯೋಚನೆ ಮಾಡಬೇಕಾಗಿತ್ತು. ಆದರೆ ಇದಲ್ಲದೇ, ಕಳೆದ ಒಂದುವರೆ ತಿಂಗಳಿಂದ ನಾಲ್ಕು ಜನರನ್ನು ಕನ್ಸಲ್ಟ್ ಮಾಡಬೇಕಾಗಿತ್ತು. ಅದರಲ್ಲಿ ವಿರೋಧ ಪಕ್ಷದ ನಾಯಕರು, ಇಲ್ಲಿಯವರು, ಮತ್ತು ಮೇಲ್ಮನೆಯವರು, ಚೀಫ್ ಜಸ್ಟೀಸ್, ಸ್ಪೀಕರ್, ಮತ್ತು ಸಭಾಪತಿಯವರು. ನಾನು ಚೀಫ್ ಜಸ್ಟೀಸ್‌ರವರನ್ನು ಕನ್ಸಲ್ಟ್ ಮಾಡಿದ್ದೇನೆ. ಸ್ಪೀಕರ್ ರವರನ್ನು ಕನ್ಸಲ್ಟ್ ಮಾಡಿದ್ದೇನೆ, ಸಭಾಪತಿಯವರನ್ನು ಕನ್ಸಲ್ಟ್ ಮಾಡಿದ್ದೇನೆ. ಇನ್ನಿಬ್ಬರನ್ನು ಮಾಡಬೇಕಾಗಿತ್ತು, ನನಗೆ ಒಂದಲ್ಲ ಒಂದು ಕಾರಣದಿಂದ ಆಗಲಿಲ್ಲ ನಾವು ಯೋಚನೆ ಮಾಡಿದ್ದೇವೆ ೨-೩ ಹೆಸರುಗಳು ಇವೆ ಅದನ್ನು ಮಾನ್ಯ ವಿರೋಧ ಪಕ್ಷದ ನಾಯಕರುಗಳ ಹತ್ತಿರ ಅವರ ಸಲಹೆಯನ್ನು ತೆಗೆದುಕೊಂಡು ಅಪಾಯಿಂಟ್ ಮಾಡುತ್ತೇನೆ ಎಂದು ಹೇಳುತ್ತೇನೆ. ಆದಕ್ಕಿಂತಲೂ ಮೊದಲು ಕಾಯಿದೆಯನ್ನು ನಾವು ತಂದವರು ತಂದ ಮೇಲೆ ಅದನ್ನು ಜಾರಿಗೆ ಕೊಡುವ ಜವಾಬ್ದಾರಿಯೂ ನಮ್ಮದು. ನೀವು ಮಾತ್ರ ಅದರ ಬಗ್ಗೆ ಸಂಶಯವನ್ನು ವ್ಯಕ್ತ ಪಡಿಸಿದರೆ, ಅದನ್ನು ಯಾರೂ ನಂಬುವುದಕ್ಕೆ ಸಾಧ್ಯವಿಲ್ಲ. ಆ ಮೇಲೆ ಕೊನೆಯದಾಗಿ ಒಂದು ವಿಷಯ; ಇವೊತ್ತಿನ ವರ್ತಮಾನ ಪತ್ರಿಕೆಗಳಲ್ಲಿ ಒಂದು ಸುದ್ದಿ ಬಂದಿದೆ ಅದು ಸರಿ ಇರಬಹುದೆಂದು ನಾನು ತಿಳಿದುಕೊಂಡಿದ್ದೇನೆ ನಾನು ನಿನ್ನೆ ಟೆಲಿಪ್ರಿಂಟರ್‌ನಲ್ಲಿ ನೋಡಿದೆ. ಇಲ್ಲಿಯವರೆಗೂ ಅದನ್ನು ಖಂಡಿಸದೆ ಇದ್ದುದರಿಂದ ಅಥವಾ ಅದನ್ನು ಡಿನ್ಯಾ ಮಾಡದಿರುವುದರಿಂದ ಅದು ನಿಜ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅದು ಕೇಂದ್ರ ಸರಿಕಾರದ ಸಚಿವರೂ, ನನ್ನ ಮಿತ್ರರೂ ಆದಂತಹ ಶ್ರೀಮಾನ್ ವೀರೇಂದ್ರ ಪಾಟೀಲ್ ರವರ ಹೇಳಿಕೆಯ ವಿಚಾರದಲ್ಲಿ. ಅವರು ಏನು ಹೇಳಿದ್ದಾರೆ ಅಂದರೆ

> "He criticised the Karnataka Government for its non co-operation in earlier completion of Telugu Ganga project. Addressing the District Congress-I workers meeting here, he said that Andhra Pradesh Government's desire to utilise the Krishna River water was decided as Karntaka was under-utilising the allotted 700 Tmcft. of water. He further said that the Andhra Pradesh Government has spent 70 Crores for the Telugu Ganga Project already and the foundation stone for the project was laid down by the late Prime Minister Smt. Indira Gandhi, whereas the Karnataka Government had failed in expediting the works on the two-decades old Krishna Project"

ಇದ್ದದ್ದರಲ್ಲಿ ನನಗೆ ಸಂತೋಷ ಅಂದರೆ, ಅವರು Two decades ಎಂದು ಸೇರಿಸಿದ್ದಾರೆ. ಏಕೆಂದರೆ ಈ ರಾಜ್ಯದಲ್ಲಿ ಅತೀ ಹೆಚ್ಚು ಕಾಲ ನೀರಾವರಿ ಮತ್ತು ಪಿ ಡಬ್ಲ್ಯೂ. ಡಿ. ಖಾತೆಗಳನ್ನು ವಹಿಸಿಕೊಂಡು ಅವರು ದೀರ್ಘಕಾಲ ಮಂತ್ರಿಗಳು ಆಗಿದ್ದವರು. ಅವರಲ್ಲದೇ ಬೇರೆಯವರೂ ಆ ಖಾತೆಯ ಮಂತ್ರಿಗಳು ಆಗಿದ್ದರು, ಮಾನ್ಯ ಬಂಗಾರಪ್ಪನವರೂ ಆಗಿದ್ದರು.

ಶ್ರೀ ಎಸ್. ಬಂಗಾರಪ್ಪ.—ನಿಮ್ಮವರನ್ನು ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ತಿಮ್ಮಪ್ಪನವರು ಇಪ್ಪತ್ತು ವರ್ಷಗಳ ಸುದ್ದಿ ಹೇಳಿದ್ದಾರಲ್ಲ, ಅದಕ್ಕೋಸ್ಕರ ನನಗೆ ಸಂತೋಷ. ಈಗ ಈ ಒಂದು ಸ್ಟೇಟ್‌ಮೆಂಟ್ ಕೊಡಲಿಕ್ಕೆ ಯಾವ ಒಂದು ಪ್ರೊವೋಕೇಶನ್ ಬಂತೋ ನನಗೆ ಗೊತ್ತಿಲ್ಲ.

೨–೩೦ ಪಿ.ಎಂ.

ನಮ್ಮ ಮಾನ್ಯ ವೀರಪ್ಪಮೊಯ್ಲಿಯವರಿಗೆ ಮೊದಲು ಅದು ಸೇರಬೇಕು. ನಮ್ಮ ಕರ್ನಾಟಕ ರಾಜ್ಯದ ಭವಿಷ್ಯವನ್ನೇ ಮಾರಾಟ ಮಾಡಿದ್ದಾರೆ. ಕರ್ನಾಟಕ ರಾಜ್ಯವನ್ನು ಬಿಟ್ರೆಯಲ್ ಮಾಡಿದ್ದಾರೆ ಎನ್ನತಕ್ಕಂಥ ಒಂದು ಮಾತನ್ನು ಅವರು ಹೇಳಿದ್ದಾರೆ. ಕರ್ನಾಟಕ ರಾಜ್ಯದ ಹಿತಕ್ಕೆ ಯಾವುದೇ ರೀತಿಯಿಂದ ಧಕ್ಕೆ ನನ್ನಿಂದ ಆಗುವುದಾದರೆ ನಾನು ಈ ಸ್ಥಾನದಲ್ಲಿ ಒಂದು ನಿಮಿಷ ಇರುವುದಕ್ಕೆ ಬಯಸುವುದಿಲ್ಲ. ಅದು ಗಡಿ ಸಮಸ್ಯೆಯಾಗಿರಬಹುದು. ಅಥವಾ ನೀರಿನ ಸಮಸ್ಯೆಯಾಗಿರಬಹುದು. ಯಾವುದೇ ಸಮಸ್ಯೆಯಾಗಿರಲಿ, ದುರಾದೃಷ್ಟವಶಾತ್ ಕಳೆದ ೧೫–೨೦ ವರ್ಷಗಳಿಂದ ಮಾಡದೆ ಇರುವಂತಹ ಕೆಲಸವನ್ನು ನಾವು ಈಗ ಮಾಡಬೇಕಾಗಿದೆ. ಆ ಒಂದು ಜವಾಬ್ದಾರಿಯನ್ನು ಇವತ್ತು ನಾವು ಹೊತ್ತುಕೊಳ್ಳಬೇಕಾಗಿದೆ. ನಮ್ಮಲ್ಲಿ ಸಾಕಷ್ಟು ಸಂಪನ್ಮೂಲಗಳು ಇಲ್ಲ. ಅದಕ್ಕಾಗಿ ಕೇಂದ್ರ ಸರ್ಕಾರದ ಜೊತೆಯಲ್ಲಿ ಹೋರಾಟ ಮಾಡಬೇಕಾಗುತ್ತದೆ. ಆ ರೀತಿ ನಾನು ಹೋರಾಟ ಮಾಡಲು ಹೊರಟರೆ ನಿಮ್ಮ ಬಾಯಿಂದ ನಾನು ಕೇಂದ್ರ ಸರ್ಕಾರದ ಜೊತೆ ಜಗಳ ಮಾಡಲು ಹೊರಟಿದ್ದೇನೆಂದು ಕೇಳಬೇಕಾಗುತ್ತದೆ. ಆದರೆ ಮಾನ್ಯ ಕೇಂದ್ರ ಸಚಿವರಾದ ಶ್ರೀಮಾನ್ ವೀರೇಂದ್ರಪಾಟೀಲರು ಹೇಳಿದ ಬಗ್ಗೆ ನಾನು ಇಲ್ಲಿ ಪ್ರಸ್ತಾಪ ಮಾಡವುದಾದರೆ ಕಳೆದ ೨೦ ವರ್ಷಗಳಿಂದ ಏನು ನಡೆದಿದೆ ಎಂಬುದನ್ನು ಅವರು ಯೋಚನೆ ಮಾಡಬೇಕಾಗಿತ್ತು.

ಶ್ರೀ ಕೆ.ಹೆಚ್. ಪಾಟೀಲ್.—ತಮ್ಮಿಬ್ಬರನ್ನು ನಾವು ಲವ ಮತ್ತು ಕುಶರೆಂದು ತಿಳಿದುಕೊಂಡಿದ್ದೆವು ಆಗ ತಾವು ಏನೇನು ಮಾಡಿದ್ದೀರೋ ನಮಗೇನು ಗೊತ್ತು ? ಅದನ್ನು ತಾವೇ ಹೇಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಕೆ.ಹೆಚ್. ಪಾಟೀಲರೇ ನನ್ನ ಪರಿಚಯ ಅವರಿಗೆ ಇದೆ. ನಾನು ಮಾತನಾಡುವಾಗ ಪ್ರತಿಯೊಂದು ಶಬ್ದವನ್ನು ಸಹ ಯೋಚನೆ ಮಾಡಿ ಪದ ಪ್ರಯೋಗ ಮಾಡುತ್ತೇನೆ. ನಾನು ಮೊದಲು ಮಾತನಾಡುವಾಗ ಏನು ಹೇಳಿದೆ ಎಂದರೆ ನನ್ನ ಮಿತ್ರರು ಕೇಂದ್ರ ಸರ್ಕಾರದ ಮಂತ್ರಿಗಳಾಗಿದ್ದಾರೆ, ನನ್ನ ಮಿತ್ರರು ಎಂದರೆ ಯಾರು ? ಶ್ರೀಮಾನ್ ವೀರೇಂದ್ರಪಾಟೀಲರು ಅವರು ನನ್ನ ಮಿತ್ರರು ಅಲ್ಲದಿದ್ದರೆ ಮಿತ್ರರೆಂದು ಹೇಳುವ ಅಗತ್ಯವಿರಲಿಲ್ಲ. ನಾವಿಬ್ಬರೂ ಒಟ್ಟಿಗೆ ಇದ್ದೆವು ಎಂದು ಸಹ ಹೇಳಿದ್ದೇನೆ. ಆಗ ನಾನು ರಾಜ್ಯದ ಆರ್ಥಿಕ ಮಂತ್ರಿಯಾಗಿದ್ದೆ. ಮತ್ತೆ ೧೯೬೨ ರಿಂದ ೬೫ರವರೆಗೆ ಡೆವಲಪ್‌ಮೆಂಟ್ ಮತ್ತು ಸಹಕಾರಿ ಮಂತ್ರಿಯಾಗಿ ಇದ್ದೆ. ಮಾನ್ಯ ಕೆ.ಹೆಚ್. ಪಾಟೀಲ್‌ರವರಿಗೆ ಸಂಬಂಧಪಟ್ಟ ಮಂತ್ರಿಯಾಗಿದ್ದೆ. ಮತ್ತೆ ಕೃಷ್ಣಾನದಿಗೆ ಯೋಗ್ಯವಾದ ಪ್ರಾಜೆಕ್ಟ್ ಇರಲಿಲ್ಲವಾ ? ಪ್ರಾಜೆಕ್ಟ್ ಇತ್ತು. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಪ್ರಾರಂಭವಾಗಿರಲಿಲ್ಲ. ಆದರೆ ಘಟಪ್ರಭಾ ಮಲಪ್ರಭಾ ಇನ್ನೂ ಬೇರೆ ಬೇರೆ ಸಣ್ಣ ಮತ್ತು ಮಧ್ಯಮಪ್ರಮಾಣದ ಪ್ರಾಜೆಕ್ಟ್‌ಗಳು ಇದ್ದವು. ಈ ಕೃಷ್ಣಾ ವಲಯದಲ್ಲಿ ೧೯೬೨ರಿಂದ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಎನ್ನುವ ಬಗ್ಗೆ ನಾನು ಅಂಕಿಅಂಶಗಳನ್ನು ಈ ಸದನಕ್ಕೆ ಕೊಡುವುದಾದರೆ ೧೯೬೬ರಲ್ಲಿ ೧೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಮತ್ತೆ ೧೯೬೮–೬೯ನೇ ಸಾಲಿನಲ್ಲಿ ೧೧ ಕೋಟಿ ರೂಪಾಯಿಗಳು. ೧೯೬೯–೭೦ರಲ್ಲಿ ೧೫ ಕೋಟಿ ರೂಪಾಯಿಗಳು, ೧೯೭೦–೭೧ನೇ ಸಾಲಿನಲ್ಲಿ ಸುಮಾರು ೧೬ ಕೋಟಿ ರೂಪಾಯಿಗಳು, ೧೯೭೧–೭೨ನೇ ಸಾಲಿನಲ್ಲಿ ಸುಮಾರು ೨೧ ಕೋಟಿ ರೂಪಾಯಿಗಳು, ಅದೇ ರೀತಿ ೧೯೭೨–೭೩ನೇ ಸಾಲಿನಲ್ಲಿ ೧೫ ಕೋಟಿ ರೂಪಾಯಿಗಳು, ೧೯೭೩–೭೪ನೇ ಸಾಲಿನಲ್ಲಿ ೧೬ ಕೋಟಿ ರೂಪಾಯಿಗಳು ೧೯೭೪–೭೫ನೇ ಸಾಲಿನಲ್ಲಿ ೨೦ ಕೋಟಿ ರೂಪಾಯಿಗಳು, ೧೯೭೫–೭೬ನೇ ಸಾಲಿನಲ್ಲಿ ಸುಮಾರು ೨೫ ಕೋಟಿ ರೂಪಾಯಿಗಳು, ೧೯೭೬–೭೭ರಲ್ಲಿ ಸುಮಾರು ೩೩ ಕೋಟಿ ರೂಪಾಯಿಗಳು, ೧೯೭೭–೭೮ರಲ್ಲಿ ೪೩ ಕೋಟಿ ರೂಪಾಯಿಗಳು, ೧೯೭೮–೭೯ರಲ್ಲಿ ೬೧ ಕೋಟಿ ರೂಪಾಯಿಗಳು ಆಮೇಲೆ ಕ್ರಮೇಣ ೭೦ ಕೋಟಿ, ೬೪ ಕೋಟಿ, ೬೪ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ೧೯೭೨–೭೩ರಲ್ಲಿ ೬೮ ಕೋಟಿ. ಆದರೆ ನಾವು ಅಧಿಕಾರಕ್ಕೆ ಬಂದ ಮೇಲೆ ಕಳೆದ ಎರಡು ವರ್ಷಗಳಲ್ಲಿ ಸುಮಾರು ೮೨ರಿಂದ ೮೫ ಕೋಟಿ ರೂಪಾಯಿಗಳು. ಆದರೆ ಮಾನ್ಯ ಮಿತ್ರರಾದ ವೀರೇಂದ್ರಪಾಟೀಲರು

ಹೇಳಿದ್ದಾರೆ. ಅನ್ ಯುಟಿಲೈಜೆಷನ್ ಆಗಿದೆ ಅದಕ್ಕೆ ಯಾರು ಜವಾಬ್ದಾರರೆಂದು. ಇದಕ್ಕೆ ಯಾರು ಹೇಳಬೇಕು. ನಾನು ಅದನ್ನು ಅಬ್‌ಜಾರ್ಬ್ ಮಾಡಿಕೊಳ್ಳುವುದಕ್ಕೆ ಹೋಗುವುದಿಲ್ಲ. ಆಂಧ್ರಪ್ರದೇಶ ಒಂದು ದೊಡ್ಡ ರಾಜ್ಯ. ಮೇಲಾಗಿ ಅವರ ಪರ್‌ಕ್ಯಾಪಿಟಾ ಇನ್‌ಕಮ್ ಕೂಡ ಜಾಸ್ತಿ ಇದೆ. ಅವರಲ್ಲಿ ಹೆಚ್ಚು ಹೆಚ್ಚು ಸಂಪನ್ಮೂಲಗಳು ಇವೆ. ಸಂಪನ್ಮೂಲಗಳು ಇಲ್ಲದಿದ್ದರೆ ಯಾರು ಏನೂ ಮಾಡುವುದಕ್ಕೆ ಆಗುವುದಿಲ್ಲ. ಅದೇ ರೀತಿಯಲ್ಲಿ ಕಬಿನಿ ಜಲಾಶಯದ ಬಗ್ಗೆ ಹೇಳುವುದಾದರೆ ಕಳೆದ ಎರಡು ವರ್ಷಗಳಿಂದ ನಾವು ಎಷ್ಟು ಹಣ ಖರ್ಚು ಮಾಡಿದ್ದೇವೆ ಹಿಂದಿನ ಸರ್ಕಾರಗಳು ಇದ್ದಾಗ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆಂದು ಹೇಳುವುದಾದರೆ ಹಿಂದಿನ ಸರ್ಕಾರಗಳಿಗಿಂತಲೂ ನಾವು ಎರಡರಷ್ಟು ಹಣವನ್ನು ಹೆಚ್ಚು ಖರ್ಚು ಮಾಡಿದ್ದೇವೆ. ಹಿಂದಿನ ಸರ್ಕಾರವಿದ್ದಾಗ ಅಲ್ಲಿ ಕಾಲುವೆಗಳನ್ನು ಸಹ ಮಾಡಿಲ್ಲ. ಅದೇ ರೀತಿಯಲ್ಲಿ ಕಾವೇರಿ ಜಲಾಶಯದ ಬಗ್ಗೆ ಹೇಳುವುದಾದರೆ ೨೮ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಯಾವ ವರ್ಷವೂ ಖರ್ಚು ಮಾಡಿ. ಆದರೆ ನಾವು ಅಧಿಕಾರಕ್ಕೆ ಬಂದ ೩ ತಿಂಗಳಲ್ಲಿ ಸುಮಾರು ೧೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಈ ಕಾವೇರಿ ನೀರನ್ನು ಉಪಯೋಗಿಸಿ ಕೊಳ್ಳುವುದಕ್ಕಾಗಿ ಸುಮಾರು ೬೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಆದ್ದರಿಂದ ಮಾನ್ಯ ಮಂತ್ರಿಗಳಾದ ಶ್ರೀಮಾನ್ ವೀರೇಂದ್ರ ಪಾಟೀಲರವರು ಹಿಂದಿನ ನೆನಪು ಮಾಡಿಕೊಂಡು ಮಾತನಾಡಿದರೆ ಒಳ್ಳೆಯದೆಂದು ನಾನು ಭಾವಿಸುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ವೀರೇಂದ್ರಪಾಟೀಲ್‌ರವರು ಮತ್ತು ನಾನು ಮೊದಲೇ ಹೇಳಿದ ಹಾಗೆ ಸ್ನೇಹಿತರು. ಈಗ ಅವರು ಕೇಂದ್ರ ಸರ್ಕಾರದ ಸಚಿವರಾಗಿದ್ದಾರೆ. ತಾವು ಇಲ್ಲಿ ಇದ್ದೀರಿ. ಈ ಸದನದಲ್ಲಿ ಮಾನ್ಯ ವೀರೇಂದ್ರ ಪಾಟೀಲರು ಇಲ್ಲ. ತಾವು ಈಗ ಮಾತನಾಡಿದ ವಿಷಯ ಕಡತಕ್ಕೆ ಹೋಗುತ್ತದೆ. ತಾವು ಹೇಳಿದ್ದನ್ನು ಡಿಫೆಂಡ್ ಮಾಡಿಕೊಂಡು ಉತ್ತರ ಹೇಳುವುದಕ್ಕೆ ಅವರು ಈ ಸದನದ ಸದಸ್ಯರು ಅಲ್ಲ, ಕರ್ನಾಟಕ ರಾಜ್ಯದ ಹಿತದೃಷ್ಟಿಯಿಂದ ಅವರು ಆ ರೀತಿಯಲ್ಲಿ ಮಾತನಾಡುವುದು ಸರಿಯಲ್ಲವೆಂದು ನಾವು ಅವರಿಗೆ ಬೇಕಾದರೆ ಹೇಳುತ್ತೇವೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ನಾನು ಆರೋಪ ಮಾಡುತ್ತಿಲ್ಲ, ಅವರು ಬೇರೆ ಪ್ರೈವೇಟ್ ಜನರು ಅಲ್ಲ, ಅವರು ಕೇಂದ್ರ ಸರ್ಕಾರದ ಒಬ್ಬ ಮಂತ್ರಿಗಳು. ಅವರ ಹೆಸರನ್ನು ನಾನು ಪ್ರಸ್ತಾಪ ಮಾಡುವುದರಲ್ಲಿ ತಪ್ಪೇನು ಇಲ್ಲ. ಈಗ ಪ್ರಧಾನ ಮಂತ್ರಿಗಳು ಒಳ್ಳೆಯ ಕೆಲಸವನ್ನು ಮಾಡಿದಾಗ ಅವರ ಹೆಸರನ್ನು ನಾವು ಇಲ್ಲಿ ಹೇಳುವುದಿಲ್ಲವೇ ? ಅವರಿಗೆ ನಾವು ಅಭಿನಂದನೆಯನ್ನು ಸಲ್ಲಿಸುವುದಿಲ್ಲವೆ ? ನಾನು ಅವರ ಮೇಲೆ ಆರೋಪ ಮಾಡುತ್ತಿಲ್ಲ. ಅವರು ಏನು ಹೇಳಿದ್ದಾರೆ ಅನ್ ಯುಟಿಲೈಜೆಷನ್ ಎಂದು ಹೇಳಿದ್ದಾರೆ. ಅವರು ಈ ರಾಜ್ಯದಲ್ಲಿ ನೀರಾವರಿ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಅವರು ೧೯೭೭ನೇ ಇಸವಿಯಲ್ಲಿ ರಾಜಿನಾಮೆ ಕೊಟ್ಟಿದ್ದು. ಸುಮಾರು ೧೫ ವರ್ಷ ಗಳಾಯಿತು. ಕಳೆದ ೮–೧೦ ವರ್ಷಗಳಲ್ಲಿ ಅವರಿಗೆ ರಾಜ್ಯದ ಬಗ್ಗೆ ಅಷ್ಟು ಹಿತಾಸಕ್ತಿ ಇರಲಿಲ್ಲ. ನಾನು ತೆಲುಗು ಗಂಗಾ ಯೋಜನೆಯ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಈ ಬಗ್ಗೆ ಸಮರ್ಥ ರೀತಿಯಲ್ಲಿ ಮಾನ್ಯ ನೀರಾವರಿ ಸಚಿವರು ಉತ್ತರ ಕೊಟ್ಟಿದ್ದಾರೆ. ಮೇಲ್ಮನೆಯಲ್ಲಿ ಕೂಡ ಅವರೇ ಉತ್ತರ ಕೊಟ್ಟಿದ್ದಾರೆ. ಆದ್ದರಿಂದ ನಾನು ಹೆಚ್ಚು ಪ್ರಸ್ತಾಪ ಮಾಡುವುದಿಲ್ಲ. ನಾವು ಕೃಷ್ಣಾ ಜಲಾಶಯದಿಂದ ಸುಮಾರು ೬೫೦ ಟಿ.ಎಂ.ಸಿ ನೀರನ್ನು ಉಪಯೋಗ ಮಾಡಿಕೊಳ್ಳುತ್ತಿದ್ದೇವೆ. ಈಗ ನಾವು ಕೈಗೆತ್ತಿಕೊಂಡಿರುವ ಯೋಜನೆಗಳ ಪ್ರಕಾರ ನಾವು ೬೫೦ ಟಿ.ಎಂ.ಸಿ. ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುತ್ತಿದ್ದೇವೆ. ಇದರಲ್ಲಿ ಯಾರೂ ಕೂಡ ಒಂದು ಟಿ.ಎಂ.ಸಿ. ನೀರನ್ನು ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ, ಇನ್ನು ನಮಗೆ ಕೃಷ್ಣಾ ಜಲಾಶಯದ ವಾರ್ಡ್ ಪ್ರಕಾರ ೭೦೦ ಟಿ.ಎಂ.ಸಿ ಯಲ್ಲಿ ೮೪ ಟಿ.ಎಂ.ಸಿ. ನೀರು ಉಳಿಯುತ್ತದೆ. ಅಪ್ಪರ್ ತುಂಗಾ ಮತ್ತು ಅಪ್ಪರ್ ಭದ್ರಾವತಿ ಕ್ಯಾನಲ್ ಪ್ರಾಜೆಕ್ಟ್‌ಗಳು ಪೂರ್ಣಗೊಂಡರೆ ಪೂರ್ಣ ಪ್ರಮಾಣದ ನೀರನ್ನು ಬಳಸಿಕೊಳ್ಳಬಹುದು ಇದರಲ್ಲಿ ರೀಜನರೇಷನ್ ನೀರು ಸಹ ಸೇರುತ್ತದೆ. ಆದ್ದರಿಂದ ನಮಗಿರತಕ್ಕಂಥ ನೀರನ್ನು ಬೇರೆ ಯಾರೂ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ.

ತೆಲುಗು ಗಂಗಾ ವಿಚಾರದಲ್ಲಿ ಕೃಷ್ಣಾ ಐತೀರ್ಪು ಅತ್ಯಂತ ಸ್ಪಷ್ಟವಾಗಿದೆ. ಯಾರೂ ಕೂಡಾ ತಪ್ಪು ತಿಳುವಳಿಕೆ ಮಾಡತಕ್ಕಂಥ ಅವಕಾಶ ಅದರಲ್ಲಿ ಇಲ್ಲ, ಈಗ ಅವೈಲಬಿಲಿಟಿ ಆಫ್ ವಾಟರ್‌ನ ೭೫ ಪರ್ಸೆಂಟ್ ಡಿಪೆಂಡಬಿಲಿಟಿ ಮೇಲೆ ೨೦೬೫ ಟಿ.ಎಂ.ಸಿ. ಇದೆ. ಅದಕ್ಕಿಂತ ಹೆಚ್ಚು ಆದರೆ ಯಾವರೀತಿ ನಾವು ಅದನ್ನು ಹಂಚಿಕೊಳ್ಳಬೇಕೆಂದು ಅಲ್ಲಿ ತೀರ್ಮಾನ ಮಾಡಿರುತ್ತಾರೆ. ಆದುದರಿಂದ ಯಾರಾದರೂ ಇದನ್ನು ನಾವು ಉಪಯೋಗಿಸಿಕೊಳ್ಳಬಹುದೆಂದು ತಿಳಿದುಕೊಂಡರೆ ಅದು ತಪ್ಪು. ಈಗ ನೀರು ಹರಿದು ಹೋಗುತ್ತಿದೆ. ಅದನ್ನು ಕೃಷ್ಣಾ ಕೆಳಭಾಗದಲ್ಲಿರತಕ್ಕಂಥ ಆಂಧ್ರರಾಜ್ಯ, ಆಂಧ್ರ ಸರಕಾರ ಒಂದು ವರ್ಷದಲ್ಲಿ ಹೆಚ್ಚು ನೀರು ಬಂದರೆ ಅದನ್ನು ಉಪಯೋಗಿಸಿಕೊಳ್ಳಲಿಕ್ಕೆ ಅಧಿಕಾರ ಇದೆ ಎಂದು ಹೇಳಿದ್ದೇನೆ. ಅದನ್ನು ೧೦ ವರ್ಷ ಉಪಯೋಗಿಸಿಕೊಳ್ಳಲಿ, ೧೫ ವರ್ಷ ಉಪಯೋಗಿಸಿಕೊಳ್ಳಲಿ, ೨೦೦೦ನೇ ಇಸವಿಯವರೆಗೂ ಉಪಯೋಗಿಸಿಕೊಳ್ಳಲಿ, ಆದರೆ ಅದು ಯಾವ ತರಹ ಹಕ್ಕನ್ನೂ ಉಂಟುಮಾಡಲಾರದು. ಅವರಿಗೆ ಹಕ್ಕು ಬರುವುದಿಲ್ಲ. ನಾವು ಹತ್ತು ವರ್ಷ ಉಪಯೋಗಿಸಿದ್ದೇವೆ, ಮೂರುನೂರು ಕೋಟಿ ರೂಪಾಯಿ ಖರ್ಚು ಮಾಡಿರುತ್ತೇವೆ ಆದಕ್ಕಾಗಿ ನಮ್ಮ ಹಕ್ಕು ಎಂದು ಹೇಳಿದರೆ ಆಗುವುದಿಲ್ಲ. ಅದು ಬಹಳ ಸ್ಪಷ್ಟವಾಗಿದೆ. ಕೇಂದ್ರ ಸರಕಾರ ಈ ತೆಲುಗು ಗಂಗಾ ಯೋಜನೆ ವಿಚಾರದಲ್ಲಿ ೧೫ಟಿ.ಎಂ ಸಿ. ನೀರನ್ನು ಕೊಡಬೇಕೆಂದು ಏನು ಮಾಡಿರುತ್ತಾರೆ, ಅದಕ್ಕೆ ಕೇಂದ್ರ ಸರಕಾರದವರು ಒಂದು ಕಮಿಟಿ ಮಾಡಬೇಕು, ಅವರು ಅದನ್ನು ಇನ್‌ಸ್ಪೆಕ್ಟ್ ಮಾಡಬೇಕೆಂದು ಇದೆ. ಆದುದರಿಂದ, ಇದರಲ್ಲಿ ಕರ್ನಾಟಕದ ಹಿತ ಹೊರಟು ಹೋಯಿತು, ಇದನ್ನು ಆಂಧ್ರಪ್ರದೇಶಕ್ಕೆ ತೆಗೆದುಕೊಂಡು ಹೋಗಬಹುದು ಎಂದು ಯಾರಾದರೂ ತಿಳಿದುಕೊಂಡಿದ್ದರೆ ಅದು ತಪ್ಪು. ಇದಕ್ಕೆ ಯಾವುದೇ ರೀತಿಯ ಆಧಾರವೂ ಇಲ್ಲ ಎಂದು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಇದರಲ್ಲಿ ಬೇರೆ ಬೇರೆ ಉದ್ದೇಶ ಇದ್ದರೂ ಇರಬಹುದು. ಮೊದಲನೆಯದು ನಾನು ಮೇಲ್ಮನೆಗೆ ಹೋದಾಗ ಹೇಳುತ್ತೇನೆ. ಆ ಮಾನ್ಯ ಸದಸ್ಯರ ಹೆಸರನ್ನು ಇಲ್ಲಿ ತೆಗೆದುಕೊಳ್ಳುವುದಿಲ್ಲ. ಹೇಗಾದರೂ ಮಾಡಿ ಮಾನ್ಯ ದೇವೇಗೌಡರಿಗೂ, ರಾಮಕೃಷ್ಣಹೆಗಡೆಯವರಿಗೂ ಬಹಳ ಭಿನ್ನಾಭಿಪ್ರಾಯ ಇದೆ ಎನ್ನುವುದನ್ನು ತೋರಿಸಬೇಕು ಎಂದು ಮಾಡಿದ್ದಾರೆ. ನಾನು ಒಂದು ಹೇಳುತ್ತೇನೆ. ದಯವಿಟ್ಟು ಇದರಲ್ಲಿ ರಾಜಕೀಯ ನೋಡಬೇಡಿ, ಅದರಿಂದ ಪ್ರಯೋಜನ ಆಗುವುದಿಲ್ಲ. ನಾವು ಯಾವ ಪಕ್ಷದವರು ಎಂದರೆ ನಾವು ಯಾವಾಗಲೂ, ನೀವು ನಿಮಗೆ ಎಂದು ಹೇಳುತ್ತೇವೆಯೋ ಹೊರತು, ನಾವು ನಮಗೆ ಎಂದು ಹೇಳುವುದಿಲ್ಲ. ಆದುದರಿಂದ ಯಾರಾದರೂ ಈ ಒಂದು ದೃಷ್ಟಿಯಿಂದ ಇದಕ್ಕೆ ಒಂದು ಬಣ್ಣಕೊಟ್ಟು, ಇಲ್ಲಿ ತಂದು, ದೇವೇಗೌಡರಿಗೆ ಎತ್ತಿಕಟ್ಟೋಣ, ಹೆಗಡೆಯವರನ್ನು ಎತ್ತಿಕಟ್ಟೋಣ ಎಂದರೆ ಅದು ಆಗುವುದಿಲ್ಲ. ನಮ್ಮಿಬ್ಬರಲ್ಲಿ ಯಾವತರಹದ ಭಿನ್ನಾಭಿಪ್ರಾಯವೂ ಇಲ್ಲ. ನಮ್ಮ ಮಂತ್ರಿಮಂಡಲದಲ್ಲೂ ಭಿನ್ನಾಭಿಪ್ರಾಯ ಇಲ್ಲ, ನಮ್ಮ ಪಕ್ಷದಲ್ಲೂ ಭಿನ್ನಾಭಿಪ್ರಾಯ ಇಲ್ಲ. ಆದುದರಿಂದ ಈ ಒಂದು ಬೇಳೆ ಇದರಲ್ಲಿ ಬೇಯುವುದಿಲ್ಲ. ಇದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಪ್ರಜಾಪ್ರಭುತ್ವದಲ್ಲಿ ಡಿಫರೆನ್ಸ್ ಇರಬೇಕು, ಇದ್ದರೂ ತಪ್ಪಿಲ್ಲ.

ಶ್ರೀ ರಾಮಕೃಷ್ಣಹೆಗಡೆ.—ನೀವು ಯಾವ ಡಿಫರೆನ್ಸ್ ಇರಬೇಕೆಂದು ಯೋಚನೆ ಮಾಡುತ್ತಿದ್ದೀರೋ ಅದು ಇಲ್ಲ. ಆ ತರಹ ಡಿಫರೆನ್ಸ್ ನಮ್ಮಲ್ಲಿ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮಲ್ಲಿ ಯಾವುದೇ ರೀತಿಯ ಡಿಫರೆನ್ಸ್ ಇದ್ದರೂ ಕೂಡಾ ಅದಕ್ಕೆ ನಮ್ಮ ಅಭ್ಯಂತರ ಇಲ್ಲ, ಯೋಜನೇನೂ ಇಲ್ಲ.

ಮಾನ್ಯ ಅಧ್ಯಕ್ಷರೇ, ಕೆಲವು ಜನರ ಪ್ರಯತ್ನ ಇರಬಹುದು. ಮಾನ್ಯ ಎನ್.ಟಿ. ರಾಮರಾಯರೂ, ನಾವು ಅನೇಕ ರೀತಿಯಿಂದ ಬಹಳ ಹತ್ತಿರದವರಾಗಿದ್ದೇವೆ. ರಾಜಕೀಯದಲ್ಲಿ ಅಷ್ಟೇ ಅಲ್ಲ, ನೈಬರ್ ರಿಲೇಷನ್‌ಶಿಪ್ ಇರಬೇಕು, ಪರಸ್ಪರ ತಿಳುವಳಿಕೆಯಿಂದ ಕೆಲಸ ಮಾಡಬೇಕು, ಸಹಕಾರದಿಂದ ಕೆಲಸ ಮಾಡಬೇಕು, ಕೇವಲ ಇದೊಂದು ರಾಜ್ಯದ ಜೊತೆ ಮಾತ್ರ ಅಲ್ಲ, ಮಾನ್ಯ ಕರುಣಾಕರನ್‌ರವರು ಬೇರೆ ಪಕ್ಷದಲ್ಲಿದ್ದರೂ ಅವರ ಜೊತೆಗೆ ಒಳ್ಳೆಯ ಸಂಬಂಧ ಇರಬೇಕು. ಅವರು ಮಾನ್ಯ ವೀರಪ್ಪ ಮೊಯಿಲಿಯವರ ಮಿತ್ರರು, ಇದು ನಮ್ಮ ನೀತಿ. ಮಾನ್ಯ ಎಂ.ಜಿ.ಆರ್.ರವರಾಗಲೀ, ಮಾನ್ಯ ವಸಂತರಾವ್ ಪಾಟೀಲ್‌ರವರಾಗಲೀ, ಇದು ನಮ್ಮ ನೀತಿ. ಅವರು ಮಾತನಾಡಬೇಕೆಂದಾಗ ನಾವು ಏತಕ್ಕೆ ಧಿಕ್ಕರಿಸಬೇಕು. ಹೀಗೆಲ್ಲಾ ಮಾತನಾಡುವುದಕ್ಕೆ ಬರುವುದಿಲ್ಲ ಎಂದು ಏತಕ್ಕೆ ಹೇಳಬೇಕು? ಈ ಮನೆಯಲ್ಲಿ ತೀರ್ಮಾನ ಆಗಿದೆ, ಗಡಿ ವಿಚಾರದಲ್ಲಿ ಮಹಾಜನ್ ಕಮಿಷನ್ ರಿಪೋರ್ಟ್ ಕೊನೆಯದು. ಅದು ಬದಲಾವಣೆ ಆಗಕೂಡದು ಎಂದು ಹೇಳುವುದು ನನಗೆ ಗೊತ್ತಿಲ್ಲವೇ? ನಾನು ಬಾರ್ಡರ್ ವಿಚಾರ ಬಂದಾಗಲೆಲ್ಲಾ

ಕರ್ನಾಟಕದ ಹಿಂದಿನ ಸರಕಾರದ ಪ್ರತಿನಿಧಿಯಾಗಿ ಹೋದವನು ನಾನಲ್ಲವೇ? ಇಂತಹ ಪರಿಸ್ಥಿತಿಯಲ್ಲಿ, ನಾನು ಅವರ ಹತ್ತಿರ ಹೋಗಿ ಮಾತನಾಡಿದ ತಕ್ಷಣ, ಬಾರ್ಡರ್ ಬಿಟ್ಟುಕೊಟ್ಟರು, ಬೆಳಗಾಂ ಹೋಯಿತು ಎಂದರೆ ಹೇಗೆ? ನಾವು ನೈಬರ್ ಇದ್ದಾಗ ಒಬ್ಬರು ಮಾತನಾಡಬೇಕೆಂದರೆ, ಮಾತನಾಡುವುದಕ್ಕೆ ನಾವು ಒಪ್ಪಬೇಕು. ಮಾತನಾಡಿದರೆ ಅವರು ಹೇಳಿದ್ದನ್ನೆಲ್ಲಾ ಒಪ್ಪಿಕೊಂಡಂತೆ ಅಲ್ಲ. ಆದರಿಂದ ಒಂದು ಅನುಭವ ಬರುತ್ತದೆ. ನಮ್ಮ ಜನರ ರೀತಿ, ಮಹಾರಾಷ್ಟ್ರ ಜನರ ರೀತಿ ಹೇಗೆ ಎಂದು ಗೊತ್ತಾಗುತ್ತದೆ.

ಶ್ರೀ ಕೆ. ಹೆಚ್. ಪಾಟೀಲ್.—ನಾವೂ ನಿಮ್ಮನ್ನು ಕೇಳದ ಹೊರತು ಏನೂ ಹೇಳುವುದಕ್ಕೆ ಹೋಗಿಲ್ಲ. ನಾನು ಈಗತಾನೆ ಹೇಳಿದೆ, ಮಾನ್ಯ ವೀರೇಂದ್ರಪಾಟೀಲರು ಆ ರೀತಿ ಹೇಳಿದ್ದರೆ ಅದು ತಪ್ಪು ಎಂದು ಹೇಳಲಿಲ್ಲವೇ. ನೀವು ಹೇಳದೆ ನಾವು ಏನು ಹೇಳುವುದಕ್ಕೆ ಹೋಗುವುದಿಲ್ಲ. ಅಲ್ಲಿ ಏನು ತಪ್ಪಾಯಿತು ಎಂದರೆ, ರಾಮಕೃಷ್ಣಹೆಗಡೆಯವರು ಈ ರೀತಿ ಹೇಳಿಬಿಟ್ಟರು ಎಂದು, ಹೈದರಾಬಾದ್‌ನಲ್ಲಿ ಪೇಪರ್‌ನವರು ಬರೆದರು. ಅವರು ಬರೆದಮೇಲೂ, ನಾವು ರಾಮಕೃಷ್ಣಹೆಗಡೆಯವರ ಬಾಯಿಂದ ಸ್ವತಃ ಕೇಳಿದ ಹೊರತು ಏನೂ ಹೇಳುವುದಿಲ್ಲ, ಇದು ಕರ್ನಾಟಕ ರಾಜ್ಯದ ಇಂಟರೆಸ್ಟ್ ಇದೆ, ಪಕ್ಷ ಬೇರೆ ಇದ್ದರೂ ಸಹ ಇದು ರಾಜ್ಯದ ಹಿತಕ್ಕೆ ಸಂಬಂಧಪಟ್ಟದ್ದು ಎಂದು ಹೇಳಿದೆವು. ಆದರೆ ತಾವು ಏನು ತಪ್ಪು ಮಾಡಿದರೂ ಅದನ್ನು ತೆಗೆಯುವುದು ನಮ್ಮ ಕರ್ತವ್ಯ. ಅದನ್ನು ತೆಗೆಯದೆ ಇರುವುದಕ್ಕೆ ಆಗುವುದಿಲ್ಲ. ನಾವು ಹೆದರಿಕೊಂಡು ಕುಳಿತುಕೊಳ್ಳುವುದಕ್ಕೆ ಆಗುತ್ತದೆಯೇ?

ಶ್ರೀ ರಾಮಕೃಷ್ಣಹೆಗಡೆ —ಮಾನ್ಯ ಎನ್. ಟಿ. ರಾಮರಾಯರಿಗೆ ನಮ್ಮಲ್ಲಿ ಯಾವುದೇ ರೀತಿಯಾದ ಭಿನ್ನಾಭಿಪ್ರಾಯವೂ ಇಲ್ಲ. ಬೇರೆ ರೀತಿಯಿಂದ ಬರುವುದಕ್ಕೂ ಸಾಧ್ಯ ಇಲ್ಲ. ನಮ್ಮ ರಾಜ್ಯ ರಾಜ್ಯಗಳ ಸಂಬಂಧ ಹಾಗೇ ಇರುತ್ತದೆ ಅವರ ಇಂಟರೆಸ್ಟ್ ಅವರು ಕಾಪಾಡಿಕೊಳ್ಳುತ್ತಾರೆ, ನಮ್ಮ ಇಂಟರೆಸ್ಟ್ ನಾವು ಕಾಪಾಡಿಕೊಳ್ಳುತ್ತೇವೆ. ಕೃಷ್ಣಾ ಅವಾರ್ಡ್ ಇಂಪ್ಲಿಕೇಷನ್ ಏನೆಂದು ಅವರಿಗೆ ಚೆನ್ನಾಗಿ ಗೊತ್ತಿರ ಬಹುದು. ಅವರು ರಿಸ್ಕ್ ತೆಗೆದುಕೊಳ್ಳುವುದಾದರೆ ಅದನ್ನು ನಾವು ನಿಲ್ಲಿಸುತ್ತೇವೆಂದು ಹೇಳುವುದಕ್ಕೆ ಆಗುವುದಿಲ್ಲ. ರಿಸ್ಕ್ ಅವರು ತೆಗೆದುಕೊಳ್ಳುತ್ತಾರೆ ಅದನ್ನು ತೆಗೆದುಕೊಳ್ಳಬೇಡಿ ಎಂದು ಹೇಳು ವುದಕ್ಕೆ ನಾನು ಯಾರು? ಕೃಷ್ಣಾ ಅವಾರ್ಡ್ ಸ್ಪಷ್ಟವಾಗಿದೆ. ಅದಕ್ಕಿಂತ ಸ್ಪಷ್ಟವಾದ ಬೇರೆ ಯಾವ ಅವಾರ್ಡೂ ಇಲ್ಲ. ಅದರ ಬಗ್ಗೆ ಚಿಂತೆಯಾಗಲೀ, ಭಯ ಆಗಲೀ ಇಲ್ಲ ಎಂದು ಹೇಳುವುದಕ್ಕೆ ಬಯಸು ತ್ತೇನೆ.

ಇನ್ನು ಕೊನೆಯ ಒಂದು ಮಾತು, ಜನತೆಯ ವಲಯದ ಬಗ್ಗೆ. ಜನತಾ ಸೆಕ್ಟರ್ ಅಥವಾ ಪೀಪಲ್ ಸೆಕ್ಟರ್ ಬಗ್ಗೆ. ಅದರ ಬಗ್ಗೆ ಬಹಳ ಹಾಸ್ಯವಾಗಿ, ಸ್ವಲ್ಪಮಟ್ಟಿಗೆ ಲಘುವಾಗಿ, ಮಾನ್ಯ ಶ್ರೀನಿವಾಸ್ ಅವರು ಹೇಳಿದ್ದಾರೆ. ಇವತ್ತು ಅವರಿಗೆ ಏತಕ್ಕೆ ರಾವಣನ ನೆನಪಾಯಿತೋ ಗೊತ್ತಾಗಲಿಲ್ಲ. ಅವರು ಯಾವ ಸೀತೆಯನ್ನು ನೋಡಿಕೊಂಡಿದ್ದಾರೋ! ಇದ್ದಕ್ಕಿದ್ದ ಹಾಗೆ ಅವರಿಗೆ ರಾವಣನ ನೆನಪು ಹೇಗೆ ಆಗುತ್ತಿರಬಹುದು. ಜನತೆಯ ವಲಯದಲ್ಲಿ ಇಷ್ಟೆ. ಕಳೆದ ೩೫ ವರ್ಷಗಳಿಂದ ನಾವು ಹೆಚ್ಚು ಕಡಿಮೆ ಯೋಜನಾಬದ್ಧವಾದ ಕಾರ್ಯಕ್ರಮದಲ್ಲಿ ತೊಡಗಿದ್ದೇವೆ. ಈ ಒಂದು ಮೂರುವರೆದಶಕದಲ್ಲಿ ಅಭಿವೃದ್ಧಿಯಾಗಿಲ್ಲ ಎಂದು ನಾನು ಹೇಳುವುದಿಲ್ಲ. ಕಣ್ಣಿಗೆ ಕಾಣುತ್ತಿದೆ. ಔದ್ಯೋಗಿಕ ಅಭಿವೃದ್ಧಿ ಆಗಿದೆ. ಟೆಕ್ನಾಲಜಿ ಮತ್ತು ಸೈನ್ಸ್ ಫೀಲ್ಡ್‌ನಲ್ಲಿ ಅಭಿವೃದ್ಧಿಯಾಗಿದೆ. ದೊಡ್ಡ ದೊಡ್ಡ ಕಾಲೇಜು, ಆಸ್ಪತ್ರೆ, ಹೆದ್ದಾರಿ ಇದನ್ನು ನಾವು ನೋಡಿದ್ದೇವೆ. ಸ್ವಲ್ಪಮಟ್ಟಿಗೆ ನೀರಾವರಿಯೂ ಆಗಿದೆ. ಆದರೆ ಆ ಅಭಿವೃದ್ಧಿಯ ಫಲ ಹೇಗೆ ಹಂಚಿಕೆಯಾಗಬೇಕಾಗಿತ್ತು, ಹಾಗೆ ಹಂಚಿಕೆಯಾಗಿಲ್ಲ. ಇದನ್ನು ನಮ್ಮ ಯೋಜನೆ ಯಾರು ಮಾಡತಕ್ಕಂಥ ಮೇಧಾವಿಗಳು ಆಡಿದ್ದಾರೆ. ಮಾನ್ಯ ಜವಹರಲಾಲ್ ನೆಹರೂರವರು, ಪ್ಲಾನಿಂಗ್ ಕಮಿಷನ್ ಅಧ್ಯಕ್ಷರಾಗಿದ್ದಾಗ ಹೇಳಿದ್ದರು. ನನಗೆ ಇನ್ನೂ ನೆನಪಿದೆ. ಇಷ್ಟೆಲ್ಲಾ ಮಾಡಿದರೂ, ಇದರ ಫಲ ಯಾರಿಗೇ ಹೋಗಬೇಕೋ ಅವರಿಗೆ ಹೋಗುತ್ತಿಲ್ಲ ಎಂದು ಹೇಳಿದ್ದಾರೆ. ಒಂದು ಮಾತನ್ನು ಖಚಿತವಾಗಿ ನೆನಪು ಮಾಡಿಕೊಳ್ಳಬೇಕು. ನಾನು ಏನೋ ಬಹಳ ದೊಡ್ಡ ಮಾತು ಹೇಳುತ್ತೇನೆ ಎಂದು ಯಾರೂ ತಿಳಿದುಕೊಳ್ಳುವ ಅಗತ್ಯ ಇಲ್ಲ. ಆದರೆ Any extreme prosperity and extreme poverty cannot co-exist any more in our country.

ಇವತ್ತು ಇರತಕ್ಕಂತಾದ್ದು ಇದು. ಇಷ್ಟು ದಿವಸದಿಂದ ಜನ ಸಹಿಸಿಕೊಂಡು ಬಂದಿದ್ದಾರೆ. ಒಂದು ಕಡೆ ನಾವು ನೋಡುತ್ತಿದ್ದೇವೆ, ಬೇಕಾದಷ್ಟು ಅಭಿವೃದ್ಧಿ ಕೆಲಸಗಳು ಆಗಿವೆ. ಪ್ರಪಂಚದಲ್ಲಿ ೧೦ ಅತ್ಯಂತ ಅಭಿವೃದ್ಧಿ ಔದ್ಯೋಗಿಕ ದೇಶಗಳಲ್ಲಿ ನಮ್ಮದೂ ಒಂದು. ಮತ್ತೆ ತುಸು ಹೆಚ್ಚು ಕಡಿಮೆ

ಶೇಕಡ ೫೦ರಷ್ಟು ಜನರು ಸರಿಯಾಗಿ ಎರಡು ಹೊತ್ತು ಊಟ ಮಾಡುವ ಸ್ಥಿತಿಯಲ್ಲಿಲ್ಲ. ಮಹಾತ್ಮ ಗಾಂಧೀಜಿಯವರ ಎಕಾನಮಿ ಇವತ್ತು ರಿಲೆವಂಟ್ ಆಗುತ್ತದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಫಿಲಾಸಫರ್ಸ್ ಹೇಳುತ್ತಿದ್ದಾರೆ, ನಾವು ಗಾಂಧೀಜಿಯವರ ಎಕಾನಮಿ ಮರೆತು ಬಿಟ್ಟಿದ್ದೇವೆ. ನಾವು ಗಾಂಧೀಜಿಯವರು ಹೇಳಿದಂಥ ಮಾತನ್ನು ಪಾಲನೆ ಮಾಡಲು ಪ್ರಯತ್ನ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ನಾವೂ ಕೂಡ ಗಾಂಧೀಜಿಯವರ ಹೊಸ ಪರಿಚಯವನ್ನು ಮಾಡಿಕೊಳ್ಳಬೇಕು. ಅದರಲ್ಲಿ ನಾನೂ ಬದ್ಧ. ಇವತ್ತು ಎಕಾನಮಿ ತತ್ವ ಏನಿದೆ ಅದು ಆರ್ಥಿಕ ಕ್ಷೇತ್ರದಲ್ಲಿ ಒಂದು ತಾರಕವಾದ ಮಾರ್ಗ ಎಂದು ಮತ್ತೆ ಹೇಳಬೇಕಾಗಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ತಾವು ಇದುವರೆಗೂ ರಾಜಕೀಯ ಭಾಷಣವನ್ನು ಚೆನ್ನಾಗಿ ಮಾಡಿದ್ದೀರಿ. ಆದರೆ ವಿಶೇಷವಾಗಿ ಜನರಿಗೆ, ಬಡವರಿಗೆ ಕೂಳು ಬೇಕು, ಹೊಟ್ಟೆತುಂಬ ಊಟ ಬೇಕು, ಮನೆ ಬೇಕು ಈ ವಿಚಾರಗಳ ಬಗ್ಗೆ ತಾವು ಯಾವ ಸ್ಕೀಂ ಅಭಿವೃದ್ಧಿಪಡಿಸುತ್ತೀರಿ ಎಂಬುದನ್ನು ಹೇಳಲಿಲ್ಲ ಒಂದೊಂದು ಐಟಂ ಬಗ್ಗೆಯೂ ಹೇಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೆ ಡಿಪಾರ್ಟ್‌ಮೆಂಟ್ಸ್‌ನ ಡಿಮ್ಯಾಂಡ್ಸ್ ಬರುತ್ತವೆ. ಅವುಗಳಿಗೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಟ್ಟೇ ಕೊಡುತ್ತಾರೆ. ಈ ಸಲ ನಾನು ಹೇಳಿದ ಮಾತನ್ನು ಬಹಳ ಶಾಂತ ರೀತಿಯಿಂದ ಸಮಾಧಾನದಿಂದ ಎಲ್ಲಾ ಮಾನ್ಯ ಸದಸ್ಯರು ಕೇಳಿದರು. ಬಹಳ ಶಾಂತ ರೀತಿಯಿಂದ ಕೇಳಿದ್ದಾರೆ. ಅಲ್ಲದೆ ಬಹಳ ಉತ್ತಮವಾದ ಸಲಹೆಗಳನ್ನು, ಸೂಚನೆಗಳನ್ನೂ ಕೊಟ್ಟಿದ್ದಾರೆ. ಅವೆಲ್ಲವನ್ನೂ ನಾನು ಗಮನದಲ್ಲಿಟ್ಟುಕೊಂಡಿರುತ್ತೇನೆ. ಮಾನ್ಯ ಸದಸ್ಯರೆಲ್ಲರಿಗೂ ತುಂಬಾ ಕೃತಜ್ಞನಾಗಿದ್ದೇವೆ. ಹಾಗು ನಿಮ್ಮೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಸನ್ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಒಳ್ಳೆಯ ಸಹಕಾರ ಸಿಕ್ಕಿದೆ ಎಂಬ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಅದಕ್ಕೆ ನಾನೂ ಕೂಡ ಅವರ ಒಂದು ವಿಚಾರವನ್ನು ಒಪ್ಪುತ್ತೇನೆ. ಈ ಸಾರಿ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುವಾಗ, ಹಿಂದೆ ಬಳಸುತ್ತಿದ್ದ ಪದ ಪ್ರಯೋಗಗಳಿಂದ ಹೊರತುಪಡಿಸಿದ ಉತ್ತರವನ್ನು ಕೊಟ್ಟಿರತಕ್ಕಂಥಾದ್ದನ್ನು ನೋಡಿದರೆ, ಒಳ್ಳೆಯ ವಾತಾವರಣ ಉದ್ಭವವಾಗಿದೆ ಎನ್ನುವುದನ್ನು ಹೇಳುತ್ತಾ, ಒಂದು ವಿಚಾರವನ್ನು ಅವರಲ್ಲಿ ಹೇಳುತ್ತಿದ್ದೇನೆ. ಕೇಂದ್ರ ಸರ್ಕಾರದ ಒಂದು ಯೋಜನಾ ಗಾತ್ರದ ಬಗ್ಗೆ ಹಾಗೂ ಬೇರೆ ವಿವರಗಳ ಬಗ್ಗೆ ವಿವರವಾದ ಅಂಕಿಅಂಶಗಳನ್ನು ಕೊಟ್ಟಿದ್ದೇನೆ. ಈಗ ಆ ಅಂಕಿ ಅಂಶಗಳ ವಾದ ಒಂದು ಕಡೆ ಇರಲಿ. ಒಂದು ವಿಚಾರ ಅವರು ಪ್ರಸ್ತಾಪ ಮಾಡಲಿಲ್ಲ. ಕೇಂದ್ರಸರ್ಕಾರದಿಂದ ೧೯೭೩-೭೪, ೧೯೭೪-೭೫ ಮತ್ತು ೧೯೭೫-೭೬ನೇ ಸಾಲುಗಳಲ್ಲಿ ನಮ್ಮ ರಾಜ್ಯಕ್ಕೆ ಬಂದಿರತಕ್ಕ ಹಣಕಾಸಿನ ಸಹಾಯಗಳ ವಿವರಗಳನ್ನು ಕೊಡಬೇಕು. ಕೇಂದ್ರ ಹಣಕಾಸಿನ ವಿಚಾರದಲ್ಲಿ ನಾನು ಆಗಲೇ ಅಂಕಿ ಅಂಶಗಳನ್ನು ಕೊಟ್ಟು ಹೇಳಿದ್ದೇನೆ. ವರ್ಷೇ ವರ್ಷೇ ಕೇಂದ್ರದವರು ಜಾಸ್ತಿ ಕೊಟ್ಟಿದ್ದಾರೆ ಕೇಂದ್ರದಲ್ಲಿ ನಮ್ಮ ಪಕ್ಷದ ಸರ್ಕಾರ ಇದ್ದರೂ, ಇಲ್ಲಿ ಜನತಾ ಪಕ್ಷದ ಸರ್ಕಾರ ಇದ್ದರೂ ಕೂಡ ಕೇಂದ್ರದಿಂದ ಕೊಟ್ಟಿರತಕ್ಕ ಧನ ಸಹಾಯದ ವಿವರವನ್ನು ಹೇಳಬೇಕು. ಮತ್ತೊಂದು ವಿಚಾರ. ಅಕ್ಕಿಯ ವಿಚಾರದಲ್ಲಿ ಹೇಳಿದ್ದಾರೆ. ಮಾನ್ಯ ಕೆ. ಹೆಚ್. ಪಾಟೀಲರು ಕೇಳಿದರು ಆದರೆ ಅವರು ಉತ್ತರ ಕೊಡಲಿಲ್ಲ. ಕೇಂದ್ರ ಸರ್ಕಾರದವರು ಬತ್ತವನ್ನು ಕೊಳ್ಳತಕ್ಕ ದರ, ಮಾರಾಟ ಮಾಡತಕ್ಕ ದರ ಯಾವರೀತಿ ಅನ್ಯಾಯವಾಗಿದೆ ಎಂಬುದನ್ನು ಅವರು ಹೇಳಿದರು. ರಾಜ್ಯದವರು ತಾವು ಯಾವರೀತಿ ಬತ್ತವನ್ನು ಕೊಳ್ಳುತ್ತೀರಿ, ಜೋಳ ಕೊಳ್ಳುತ್ತೀರಿ, ಅವುಗಳನ್ನು ಕೊಳ್ಳತಕ್ಕ ದರ ಎಷ್ಟು ಮತ್ತು ನೀವು ಮಾರಾಟ ಮಾಡುವ ದರ ಎಷ್ಟು ಎಂಬುದನ್ನು ದಯವಿಟ್ಟು ಅದನ್ನು ಸ್ವಲ್ಪ ಹೇಳಿಬಿಟ್ಟರೆ ಸ್ವಲ್ಪ ಅನುಕೂಲವಾಗುತ್ತೆ. ಆಮೇಲೆ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಪ್ರಕಾರ, ೧೯೭೪ರಿಂದ ೧೯೭೮ರ ವರೆಗೆ ೪-೫ ವರ್ಷಗಳವರೆಗೆ ಹೋಟೆಲುಗಳ ಸೇಲ್ಸ್‌ಟ್ಯಾಕ್ಸ್ ೧೬-೧೮-೨೦ ಲಕ್ಷ ರೂಪಾಯಿ ಇದೆ in tiems of lakhs ಎಂದು ಹೇಳಿದರು ನನ್ನ ಲೆಕ್ಕದ ಪ್ರಕಾರ, ಅದು ೧೦-೧೨ ಕೋಟಿ ರೂಪಾಯಿ ಆಗುತ್ತದೆಂದು ಹೇಳಿದ್ದೇನೆ. ಅವರ ವರದಿ ಪ್ರಕಾರ, ವರ್ಷಕ್ಕೆ ೨ ಕೋಟಿ ಅಥವಾ ೩ ಕೋಟಿ ಮಾತ್ರ ಎಂದು ಹೇಳಿದ್ದಾರೆ. ಹೋಟೆಲುಗಳನ್ನು ಎರಡು ಭಾಗವಾಗಿ ವಿಂಗಡಣೆ ಮಾಡಿದ್ದಾರೆ ಸಣ್ಣ ಹೋಟೆಲುಗಳು ಮತ್ತು ದೊಡ್ಡ ಹೋಟೆಲುಗಳು ಎಂದು. ಆ ಒಂದು ಕಾನೂನು ಪ್ರಕಾರ ಮತ್ತು ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಪ್ರಕಾರ ಹಾಗೂ ನನಗೆ ಗೊತ್ತಿರುವ ಹಾಗೆ ಆ ರೀತಿ

ವಿಂಗಡಣೆ ಮಾಡುವುದಕ್ಕೆ ಬರುವುದಿಲ್ಲ. ಆದುದರಿಂದ ಅದು ಪ್ರತಿ ವರ್ಷ ಕೆಲವು ಕೋಟಿ ರೂಪಾಯಿಗಳು ಎಂದು ಇಟ್ಟುಕೊಳ್ಳೋಣ. ನಮ್ಮ ವಾದಕ್ಕಾಗಿ. ನೀವು ಹೇಳುವ ಹಾಗೆ ಕೆಲವು ಲಕ್ಷಗಳಲ್ಲ. ಹೋಟೆಲುಗಳನ್ನು ವಿಂಗಡಣೆ ಮಾಡುವಾಗ ಸಣ್ಣದು ದೊಡ್ಡದು ಎಂದು ನೀವು ಹೇಳುವುದರಿಂದ, ಲಕ್ಷಕ್ಕೆ ಇಳಿಸತಕ್ಕಂಥದ್ದು ನಿಮ್ಮ ವಾದ. ವರ್ಷದಲ್ಲಿ ಕೆಲವು ಕೋಟಿ ರೂಪಾಯಿಗಳ ನಷ್ಟ ಸ್ಪಷ್ಟವಾಗಿದೆ. ಈ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದಕ್ಕೆ ಎಗ್ಸೆಂಪ್ಷನ್ ಕೊಡತಕ್ಕಂಥದ್ದು ಸರ್ಕಾರಕ್ಕೆ ಅವಶ್ಯಕತೆ ಇರಲಿಲ್ಲ. ಅಂಕಿ ಅಂಶಗಳ ಬಗ್ಗೆ ತಾವು ಸಂಪೂರ್ಣ ವಿವರ ತರಿಸಿನೋಡುವುದು ಮುಖ್ಯ. ನೀವು ಸೆಂಟ್ರಲ್ ಅಸಿಸ್ಟೆನ್ಸ್ ಮತ್ತು ಅಕ್ಕಿ ದರ, ಇವೆರಡರ ಬಗ್ಗೆ ಮಾತ್ರ ಹೇಳಿದರೆ ಸಾಕು.

ಶ್ರೀ ರಾಮಕೃಷ್ಣ ಹೆಗಡೆ.—ಕೇಂದ್ರ ಹಣಕಾಸಿನ ಸಹಾಯದ ಬಗ್ಗೆ ಹೇಳುವುದಾದರೆ, ೧೯೮೩-೮೪ನೇ ಸಾಲಿನದು ನನ್ನ ಹತ್ತಿರ ಇಲ್ಲ, ಅದನ್ನು ಮತ್ತೆ ಕೊಡುತ್ತೇನೆ. ೧೯೮೪-೮೫ರಲ್ಲಿ ೬೫೦ ಕೋಟಿ ಯೋಜನೆ. ಕೇಂದ್ರದಿಂದ ೧೫೨ ಕೋಟಿ ರೂಪಾಯಿ ಬಂದಿದೆ. ೧೯೮೫-೮೬ರಲ್ಲಿ ೬೫೦ ಕೋಟಿ ರೂಪಾಯಿಗಳ ಯೋಜನೆ ಇದೆ. ಇದಕ್ಕೆ ಕಾವೇರಿ ಯೋಜನೆ ಸೇರಿಸಿದರೆ ೭೧೫ ಕೋಟಿ ರೂಪಾಯಿಗಳು ಆಗುತ್ತಿದೆ. ಇದಕ್ಕೆ ಕೇಂದ್ರ ಸರ್ಕಾರದಿಂದ ೧೯೧ ಕೋಟಿ ರೂಪಾಯಿ ಬಂದಿದೆ. ಹೋದ ವರ್ಷಕ್ಕಿಂತ ೪೦ ಕೋಟಿ ರೂಪಾಯಿ ಹೆಚ್ಚಿದೆ. ಕಾರಣ ಏನೆಂದರೆ ೮ನೇ ವಿತ್ತೀಯ ಆಯೋಗದ ಏನು ಶಿಫಾರಸ್ ಇದೆ, ಅದರ ಪ್ರಕಾರ ಕೇಂದ್ರ ಸರ್ಕಾರದ ಡಿವಿಸಿಬಲ್ ಪೂಲ್‌ನಿಂದ ಸ್ವಲ್ಪ ಹೆಚ್ಚು ಸಿಕ್ಕಿದೆ. ಇದು ನಮ್ಮ ರಾಜ್ಯ ಒಂದಕ್ಕೇ ಅಲ್ಲ. ಇತರ ರಾಜ್ಯಗಳಿಗೂ ಸಿಕ್ಕಿದೆ. ಆ ಮೇಲೆ ಅಕ್ಕಿ ವಿಚಾರದಲ್ಲಿ ಪುನಃ ಹೇಳಿದರು.

೩-೦೦ ಪಿ.ಎಂ.

ಆಮೇಲೆ ೧೯೭೦ನೇ ಇಸವಿಯ ಹೇಳಿಬಿಡುತ್ತೇನೆ. ಸೆಂಟ್ರಲ್ ಅಸಿಸ್ಟೆನ್ಸ್ ೧೯೭೦-೭೧ರಲ್ಲಿ ೧೦೨ ಕೋಟಿ, ೧೯೮೧-೮೨ರಲ್ಲಿ ೧೧೦ ಕೋಟಿ ೧೯೮೨-೮೩ರಲ್ಲಿ ೧೧೩ ಕೋಟಿ, ೧೯೮೩-೮೪ರಲ್ಲಿ ೧೨೯ ಕೋಟಿ ೧೯೮೪-೮೫ರಲ್ಲಿ ೧೫೫ ಕೋಟಿ.

ಆಮೇಲೆ ಅಕ್ಕಿ ವಿಚಾರ. ನಾವು ಯಾವ ದರದಲ್ಲಿ ಖರೀದಿ ಮಾಡುತ್ತೇವೆ, ಯಾವ ದರದಲ್ಲಿ ಮಾರಾಟ ಮಾಡುತ್ತೇವೆ ಎಂದು ಕೇಳಿದರು. ನಾವು ಯಾವ ದರದಲ್ಲಿ ಖರೀದಿ ಮಾಡಲು ನಾವು ಏನು ಬಡಬಗ್ಗರಿಗೆ ಎರಡು ವರ್ಷದ ಹಿಂದೆ ಯಾರು ಡಿಸ್ಟ್ರಿಬ್ಯೂಷನ್ ಅಂಗಡಿಗಳಿವೆ ಅಂತಹ ಅಂಗಡಿಗಳ ಮೂಲಕ ಪಡೆಯತಕ್ಕಂಥ ಗ್ರಾಹಕರಿಗೆ ನಾವು ರೂ. ೧.೯೫ ಪೈಸೆ, ೨ ರೂ. ೨.೫ ಪೈಸೆಗಳಂತೆ ಕೊಡುತ್ತಿದ್ದೇವೆ. ಸ್ವಲ್ಪಮಟ್ಟಿಗೆ ಇದನ್ನು ಹೆಚ್ಚು ಮಾಡಿದ್ದೇವೆ. ಇದರಿಂದ ಪ್ರತಿವರ್ಷ ೨೮ ಕೋಟಿ ರೂ. ಗಳು ಹೆಚ್ಚು ಸಬ್ಸಿಡಿ ಕೊಡತಕ್ಕಂಥ ಒಂದು ಪರಿಸ್ಥಿತಿ ಬಂತು. ಈಗ ನಾವು ಖರೀದಿ ಮಾಡತಕ್ಕಂಥದ್ದು ಕೇವಲ ಸಪೋರ್ಟ್ ಪ್ರೈಸ್ ಕೊಡಲಿಕ್ಕೆ ನಾವು ಮಾರ್ಕೆಟ್ ಎಂಟರ್ ಮಾಡುತ್ತೇವೆ ಅಥವಾ ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದವರು ನಮಗೆ ಹೇಳುತ್ತಾರೆ. ನೀವು ಇಂತಿಷ್ಟು ಪ್ರೊಕ್ಯೂರ್ ಮಾಡಿರುವುದು ಸಾಲದು, ಶಾರ್ಟ್ ಬೀಳುತ್ತದೆ ಎಂದು. ನಮ್ಮ ಪಾಲು ಇಂತಿಷ್ಟು ಇರಬೇಕೆಂಬುದನ್ನು ಫುಲ್‌ಫಿಲ್ ಮಾಡಲಿಕ್ಕೆ ನಾವು ಓಪನ್ ಮಾರ್ಕೆಟ್‌ನಲ್ಲಿ ಖರೀದಿ ಮಾಡುತ್ತೇವೆ.

ಮತ್ತೊಂದು ತಪ್ಪು ತಿಳಿವಳಿಕೆ ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ಇರುವಂತೆ ಕಾಣುತ್ತದೆ. ಇದರ ಅರ್ಥ ಅವರದೆಲ್ಲವನ್ನೂ ಅಸೆಸ್ ಮಾಡಲಾಗಿರುತ್ತದೆ. ಪ್ರತಿಯೊಬ್ಬರನ್ನೂ ಕರೆದು ಪ್ರತಿ ವರ್ಷವೂ ಎಷ್ಟು ಅವಧಿ ಇದೆ ಅಷ್ಟರಲ್ಲಿ ಕಾಗದಪತ್ರ ಹಾಜರು ಮಾಡಿ ಎಂದೂ. ಒಂದು ವರ್ಷ ಕಾಗದ ಪತ್ರ ಇಟ್ಟಿಲ್ಲವಾದರೆ ಅಥವಾ ಸಣ್ಣಪುಟ್ಟ ಹೋಟೆಲ್‌ಗಳವರು ಇಟ್ಟಿಲ್ಲವೆಂದು ಮನದಟ್ಟು ಆದರೆ ಅಂತಹ ವಿಚಾರದಲ್ಲಿ ಮಾತ್ರ ನಾವು ವಸೂಲು ಮಾಡುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಆದರೂ ನೀವು ಕಲೆಕ್ಟ್ ಮಾಡಬಹುದು.

ಶ್ರೀ ರಾಮಕೃಷ್ಣ ಹೆಗಡೆ.—ಎಲ್ಲಿ ಕಾಗದಪಟ್ಟಿ ಇಟ್ಟಿದ್ದಾರೋ ಅವರನ್ನು ನಾವು ಬಿಡುವುದಿಲ್ಲ. ಅವರು ಏನು ಹೇಳುತ್ತಾರೆಂದರೆ ಸುಪ್ರೀಂ ಕೋರ್ಟಿನ ತೀರ್ಮಾನದ ಪ್ರಕಾರ ಟ್ಯಾಕ್ಸ್ ಲಯಬಿಲಿಟಿ ಇಲ್ಲವೆಂದು ತಿಳಿದುಕೊಂಡು ಕಲೆಕ್ಟ್ ಮಾಡದೇ ಇದ್ದವರು ಯಾರು ಇದ್ದಾರೋ ಅವರನ್ನು ಬಿಡಬೇಕೆಂದು

ಇದೆ. ನಾವು ಅದನ್ನೇ ಮಾಡಿದ್ದು. ಪ್ರತಿಯೊಬ್ಬರದ್ದೂ ಅಸೆಸ್‌ಮೆಂಟ್ ಮಾಡುತ್ತಾರೆ. ಅವರು ಲಯಬಿಲಿಟಿ ಇಲ್ಲವೆಂದು ತೋರಿದರೆ ಅದನ್ನು ಮಾತ್ರ ನಾವು ಬಿಡುತ್ತೇವೆ. ಇಲ್ಲದಿದ್ದರೆ ಪ್ರತ್ಯೇಕವಾಗಿ ಬಿಡುವುದು ಕಷ್ಟವಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೇ, ಒಂದು ಸಂತೋಷದ ಸಂಗತಿ ಏನೆಂದರೆ ಸನ್ಮಾನ್ಯ ಮುಖ್ಯಮಂತ್ರಿಯವರು ಬಹಳ ಸಮಾಧಾನದಿಂದ ಹೆಚ್ಚು ಚುಚ್ಚುಮಾತುಗಳನ್ನು ಬಳಸದೆ ಉತ್ತರ ಕೊಟ್ಟಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಆರೋಪ ಮಾಡುವುದನ್ನು ಬಿಟ್ಟು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ಟ್ರೆಂಡ್ ಜಾಸ್ತಿಯಾಗಲಿ ಎಂದು ಹೇಳುತ್ತೇನೆ. ಆಗ ನಮಗೂ ಕೂಡ ಸಹಕರಿಸಲು ಸಾಧ್ಯವಾಗುತ್ತದೆ. ಇನ್ನು ಮುಂದೆ ಹೀಗೆ ಆದರೆ ಬಹಳ ಒಳ್ಳೆಯದು. ಅಂಕಿ ಅಂಶಗಳ ಬಗ್ಗೆ ಒಂದು ಮುಖ ಅವರು ಕೊಟ್ಟಿದ್ದಾರೆ. ನಾನು ಇನ್ನೊಂದು ಮುಖ ಇಟ್ಟಿದ್ದೇನೆ. ಆದ್ದರಿಂದ ಅವರು ಹೇಳಿದ್ದೆಲ್ಲವನ್ನೂ ಒಪ್ಪುತ್ತೇವೆ ಎಂದು ಹೇಳೊಲ್ಲ ಅದು ಅವರಿಗೂ ಗೊತ್ತಿದೆ, ನಮಗೂ ಗೊತ್ತಿದೆ. ಯಾವಾಗಲೂ ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ರಿಸೋರ್ಸಸ್ ಪ್ರಥಮ ವರ್ಷದಲ್ಲೇ ಹೆಚ್ಚು ಬರುವುದಿಲ್ಲ. Tempo has to be built up and at a stretch taxation dosage ಕೊಡುವುದಕ್ಕೂ ಆಗುವುದಿಲ್ಲ ರಿಸೋರ್ಸಸ್ ಕನ್‌ಸ್ಟ್ರೆಂಟ್ಸ್ ಇರುವುದು ಪ್ರಥಮ ವರ್ಷ, ಎರಡನೇ ವರ್ಷ ಮತ್ತು ಮೂರನೇ ವರ್ಷ ಪ್ಲಾನ್‌ನಲ್ಲಿ ಹೆಚ್ಚು ಖರ್ಚು ಮಾಡಲಿಕ್ಕೆ ಬರುವುದಿಲ್ಲ. As the tempo goes on the expenditure in the two years. ಅದು ಹೆಚ್ಚಾಗಲೇಬೇಕು. ೪೦%, ೬೦% ಅದು ಒಂದನೇ ಪಂಚವಾರ್ಷಿಕ ಯೋಜನೆಯಿಂದ ೬ನೇ ಯೋಚನೆವರೆಗೆ ಎಲ್ಲಾ ಖರ್ಚು ಮಾಡಿರುವ ಎಲ್ಲ ಹಂತವನ್ನು ನೋಡಿದರೆ ಎರಡು ಮೂರು ವರ್ಷಗಳಲ್ಲಿ ಕಡಿಮೆಯಾಗಿದ್ದುದು, ಬಾಕಿ ವರ್ಷದಲ್ಲಿ ೪೦ ಪರ್ಸೆಂಟ್ ೬೦ ಪರ್ಸೆಂಟ್ ಜಾಸ್ತಿಯಾಗುತ್ತದೆಂದು ಹೇಳಿದ್ದಾರೆ. ನಾವೂ ಒಪ್ಪುತ್ತೇವೆ ಆದರೆ ಈ ಟ್ರೆಂಡನ್ನು ನಾವೇ ಆಗಲೀ, ನೀವೇ ಆಗಲಿ, ಯಾರೇ ಇದ್ದರೂ ಮಾಡಬೇಕು. ಈಗ Central Assistance, Centrally sponsored Scheme ನಲ್ಲಿ ಕೂಡ ಈ ಕೊನೆಯ ೬ನೇ ಯೋಜನೆಯಲ್ಲಿ ಅದರ ೨ನೇ ವರ್ಷಗಳಲ್ಲಿ ೫೦ ಪರ್ಸೆಂಟ್ ೬೦ ಪರ್ಸೆಂಟ್ ಜಾಸ್ತಿಯಾಗಿದೆ. ಸ್ಟೇಟ್ ಪ್ಲಾನ್ ಎಕ್ಸ್‌ಪೆಂಡಿಚರ್ ಕೂಡ ಅದೇರೀತಿ ಆಗತಕ್ಕಂಥಾದ್ದು. ಇದು ಏನೂ ಆಶ್ಚರ್ಯ ತರತಕ್ಕ ವಿಚಾರವೇನೂ ಇಲ್ಲ.

ಒಂದು ವಿಚಾರ ಆಗಾಗ ಪ್ರಸ್ತಾಪವಾಗುತ್ತಲೇ ಇದೆ. ಅದು ಓವರ್ ಡ್ರಾಫ್ಟ್ ವಿಷಯವಾಗಲಿ ಅಥವಾ ಡೆಫಿಸಿಟಿ ವಿಚಾರವಾಗಲಿ ಇದು ಅಪ್ರಸ್ತುತ. ಈಗ ಕೇಂದ್ರ ಸರ್ಕಾರದವರು ಅದನ್ನೆಲ್ಲ ಸಾಲ ವೆಂದು ಯಾವಾಗ ಮಾತು ಕೊಟ್ಟರೋ ಇನ್ನು ಚರ್ಚೆ ಮಾಡುವುದು ಬೇಡ. ತಮ್ಮನ್ನು ಟೀಕೆ ಮಾಡುವವ ಪ್ರಶ್ನೆ ಇಲ್ಲ ರೆಕಾರ್ಡ್‌ನಲ್ಲಿದ್ದುದನ್ನು ಹೇಳುತ್ತಿದ್ದೇನೆ ಅಷ್ಟೆ. ವಾದವಾಗಲೀ ಸಂಘರ್ಷಣೆ ಯಾಗಲೀ ಇಲ್ಲ. ತಾವು ದಯವಿಟ್ಟು ೧೯೮೪-೮೫ರ ಸಪ್ಲಿಮೆಂಟರಿ ಎಸ್ಟಿಮೇಟ್ ಓದಬೇಕು ಏಕೆಂದರೆ ತಾವು ೧೯೮೨ನೇ ಇಸವಿ ಜೂನ್‌ಗೆ ಓವರ್‌ಡ್ರಾಫ್ಟ್ ಇತ್ತೆಂದು ಹೇಳಿದ್ದೀರಿ. ತಾವು ದಯವಿಟ್ಟು ಓವರ್‌ಡ್ರಾಫ್ಟ್ ಚಾರ್ಟ್ ನೋಡಿದರೆ ೭೭ ಕೋಟಿ ರೂ. ಜೂನ್‌ನಲ್ಲಿ ಇರಲಿಲ್ಲ. It may be amount 54 crores maximum. ಆಮೇಲೆ ನಾಲ್ಕೈದು ತಿಂಗಳಲ್ಲಿ ೧೯೮೨ನೇ ಇಸವಿಯಲ್ಲಿ ಆಗ ಕೇಂದ್ರ ಸರ್ಕಾರದಿಂದ ಒಂದು ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್ ೭೭ ಕೋಟಿ ಎಂದು ತೆಗೆದು ಕೊಂಡರು, ಇದು ಸರಿಯಲ್ಲ. ಆಗ ಒಂದು ವಿಚಾರ ಮಂಡನೆ ಮಾಡಿದ್ದೆವು. ನಮಗೂ ಕೂಡ ೬೭ ಕೋಟಿ ರೂ. ಕೊಡಬೇಕೆಂದು ಕೇಂದ್ರಕ್ಕೆ ವಾದ ಮಾಡಿ ಕಾಗದ ಬರೆದಿದ್ದೆವು. ಅವರು ಕೊಟ್ಟಿಲ್ಲ. ಈ ವೇಸ್ ಅಂಡ್ ಮೀನ್ಸ್‌ನಲ್ಲಿ ಏನು ಹೇಳುತ್ತಾರೆ? ಕೆಲವೊಮ್ಮೆ ವರ್ಷದಲ್ಲಿ ಕೆಲವು ತಿಂಗಳಲ್ಲಿ ಸ್ವಲ್ಪ ಹೆಚ್ಚು ಖರ್ಚು ಮಾಡಿ ಆಮೇಲೆ ಮುಂದೆ ಎರಡು ಮೂರು ತಿಂಗಳಲ್ಲಿ ಕೊಡುವುದನ್ನು ಅಡ್ವಾನ್ಸಾಗೇ ಕೊಡಿ ಎನ್ನುವುದು ಪ್ರತಿವರ್ಷ ನಡೆಯತಕ್ಕಂಥಾದ್ದು. ಆದರೆ ತಾವು ಏನು ವಿಶೇಷವಾಗಿ ೨೭ ಕೋಟಿ ತೆಗೆದು ಕೊಂಡಿದ್ದಾರೆ ಎಂದು ಹೇಳಿದಿರಿ ಅದು ತಗೊಂಡಿದ್ದರೆ, ನೀವು ಅಧಿಕಾರಕ್ಕೆ ಬಂದ ಮೇಲೆ ಆ ೭೭ ಕೋಟಿ ಹಿಂದೆ ಕೊಟ್ಟಿದ್ದರೆ You should have found a place in the supplementary estimate.

೧೯೮೨–೮೩ರಿಂದು ಸಪ್ಲಿಮೆಂಟರಿ ಎಸ್ಟಿಮೇಟ್ ನನ್ನ ಬಳಿ ಇದೆ. ಅದರಲ್ಲಿ ಆ ಎಂಟ್ರಿ ಇಲ್ಲ. ಅದು ಮಾಮೂಲಾಗಿ ಕೊಡತಕ್ಕಂಥಾದ್ದು, ಬರತಕ್ಕಂಥಾದ್ದು ಅಡ್ಜಸ್ಟ್ ಆಗಿ ಹೋಗಿದೆಯೋ ಹೊರತು ವಿಶೇಷವಾಗಿ ತಮ್ಮ ಮೇಲೆ ಒಂದು ಲಯಬ್ಲಿಟಿ ಬರ್ಡನ್ ತಂದು ಕೂರಿದ್ದಲ್ಲ. ಉದಾಹರಣೆಗೆ ೧೯೮೪–೮೫ರಲ್ಲಿ ಸಪ್ಲಿಮೆಂಟರಿ ಎಸ್ಟಿಮೇಟ್‌ನಲ್ಲಿ ಒಂದು ಕಾಲಂ ಇದೆ ಅದನ್ನು ತಮ್ಮ ಗಮನಕ್ಕೆ ತಂದರೆ ಅಲ್ಲಿ ಪೇಜ್ ೩೨ ಏನಾಗಿದೆ ಎಂದರೆ, ಇದನ್ನು It is for understanding of the whole matter clearly. What was provided for adjusting ways and means was 20 crores in the State Budget A sum of Rs. 25 crores is provided in the budget for this item. item No. 2. As against this sum the Govt. of India have released a sum of Rs. 120 crores. The difference is included since the entireamont is papable during the current year itself supplementary appropriation is necessary. That means——— ೧೨೪ ಕೋಟಿ ಆಗಲೇ ನೀವು ತೆಗೆದುಕೊಂಡಿದ್ದೀರಿ. ೧೯೮೪–೮೫ರ ಬಾಬಿನಲ್ಲಿ ನೀವು ಕೊಟ್ಟಿದ್ದರೆ......

ಶ್ರೀ ರಾಮಕೃಷ್ಣ ಹೆಗಡೆ — ಅವರು ಹೇಳುವುದು ನಿಜ. ಓವರ್‌ಡ್ರಾಫ್ಟ್ ಎಂದು ಪ್ರತ್ಯೇಕ ಇದ್ದರೆ ಆ ರೀತಿ ತೋರಿಸಬೇಕು ಓವರ್‌ಡ್ರಾಫ್ಟ್ ಎಂದು ಇರಲಿಲ್ಲ. The Central Government allowed State Govt. to have a additional ways and means of 71 crores.......ಅದು ಬರಬೇಕಲ್ಲ. ಈ ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್‌ನಲ್ಲಿ ಕಾಣುವುದೇ ಇಲ್ಲವಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ. — ಮುಂದೆ ೮೩ರಲ್ಲಿ ತೆಗೆದುಕೊಂಡಾಗ ಅದು ಬರಬೇಕಾಗಿತ್ತು. Ways and means to adjust for the Overdraft. ೧೯೮೨–೮೩ರಲ್ಲಿ ಆ ಎಂಟ್ರಿ ಇಲ್ಲ, That means we have adjusted within ourselves. ಎಕ್ಸ್‌ಟ್ರಾ ಏನೂ ಕೊಟ್ಟಿದ್ದಿಲ್ಲ. ಅದು ಕಂಡಿದ್ದರೆ ೧೨೦ ಕೋಟಿ ೧೯೮೪–೮೫ ರಲ್ಲಿ ಕೇಂದ್ರ ಸರ್ಕಾರ ವೇಸ್ ಅಂಡ್ ಮೀನ್ಸ್ ತಮಗೆ ಏನು ಕೊಟ್ಟಿದ್ದಾರೆ ಅದನ್ನು ಮಾರ್ಚ್ ೮೫ರೊಳಗೆ ರೀಪೇ ಮಾಡಿದ್ದೀರಿ. ಆದುದರಿಂದ ಇದು Jugglery of words—ಹೊರತು ಅಲ್ಲಿರತಕ್ಕಂಥಾದ್ದು ಏನೂ ಅಲ್ಲ. It is for setting records right. ಅನೇಕ ಐಟಂಗಳನ್ನು ಕೊಟ್ಟಿದ್ದೀರಿ, ಡಿ.ಪಿ.ಐ.ಪಿ. ೬೮ ಪರ್ಸೆಂಟ್, ಜಾಸ್ತಿ ಇದೆ. It is fully Government of India sponsored project. This clarification I have given just to set the record straight. ತಾವು ವಾದ ಮಾಡತಕ್ಕದ್ದು ಸರಿಯಲ್ಲ. ಡಿ.ಪಿ.ಎ.ಪಿ.ಯಲ್ಲಿ ಅನೇಕ ಕಾರ್ಯಕ್ರಮಗಳು ಇವೆ. ಆಮೇಲೆ ಇನ್ನೊಂದು ಪ್ರಶ್ನೆ. ನಾವು ಅಧಿಕಾರವನ್ನು ಬಿಟ್ಟು ಕೊಟ್ಟಾಗ There was a net trading surplus of Rs 1.50 crores.

ಶ್ರೀ ಎಂ.ಎಸ್. ಕೃಷ್ಣನ್.— ಮಾನ್ಯ ಮುಖ್ಯಮಂತ್ರಿಗಳು ಬಹಳ ಜಾಣ್ಮೆಯಿಂದ ಉತ್ತರವನ್ನು ಕೊಟ್ಟಿದ್ದಾರೆ. ಅನೇಕ ಅಂಕಿಅಂಶಗಳನ್ನು ಇವತ್ತಿನ ದಿವಸ ನಮ್ಮ ಮುಂದೆ ಇಟ್ಟಿದ್ದಾರೆ. ಮುಖ್ಯವಾದ ಅಂಶ ಹೇಳಿರುವುದು ಏನೆಂದರೆ ಜನತಾಪಕ್ಷ ಬಂದ ನಂತರ ಪ್ರತಿವರ್ಷ ನಾವು ಹೆಚ್ಚು ಹೆಚ್ಚು ಖರ್ಚು ಮಾಡಿದ್ದೇವೆ ಎಂದು ಹೇಳಿದ್ದಾರೆ. ಇನ್‌ಟರ್ಮ್ಸ್ ಆಫ್ ಮನಿ ಹೆಚ್ಚು ಆಗಿರಬಹುದು. ಓವರ್ ದಿ ಪಿರೀಡ್ ನೋಡಿದರೆ ರಿಸೋರ್ಸಸ್ ಮತ್ತು ಎಕ್ಸ್‌ಪೆಂಡಿಚರ್–ಅಟ್ ಕಾನ್‌ಸ್ಟೇಂಟ್ ಪ್ರೈಸಸ್ ಬಗ್ಗೆ ತೆಗೆದು ನೋಡಿದರೆ ಪರ್‌ಫಾರ್ಮೆನ್ಸ್ ಅಷ್ಟು ಜಾಸ್ತಿಯಾಗಿಲ್ಲ, ನಾನು ಮಾತನಾಡುವಾಗ ಹೇಳಿದೆ. ನಾನು ಅಂಕಿ ಅಂಶಗಳನ್ನು ಕೂಡ ಹೇಳಿದೆ. ಅವತ್ತಿನ ದಿವಸ ತಾವು ಇರಲಿಲ್ಲ ಆದ್ದರಿಂದ ತಾವು ಗಮನಿಸದೇ ಇರಬಹುದು. ಅಂದರೆ ನಿಮ್ಮ ಎಲ್ಲಾ ಅಂಕಿಅಂಶಗಳನ್ನು ತೆಗೆದುಕೊಂಡರೆ ನೀವು ಅಡ್ವಾನ್ಸಾಗಿ ಹೋಗಿದ್ದೀರಿ ಎನ್ನುವ ಅಭಿಪ್ರಾಯ ಬರುತ್ತದೆ. ಸರ್ಕಾರ ತಯಾರು ಮಾಡಿರುವ ಡಾಕ್ಯುಮೆಂಟ್ಸ್ ಅಂದರೆ ಕರ್ನಾಟಕ ಏಕನಾಮಿಕ್ ಕೌನ್ಸಿಲ್ — ಥಿಂಕ್ ಟ್ಯಾಂಕ್ ಅವರು ಮಾಡಿರುವ ಡಾಕ್ಯುಮೆಂಟ್ಸನ್ನು ನೋಡಿದರೆ ಯು ಆರ್ ಸ್ಟ್ಯಾಗ್‌ನೇಟಿಂಗ್ ಎನ್ನುವ ಅಭಿಪ್ರಾಯವನ್ನು ಅವರೇ ಹೇಳಿದ್ದಾರೆ. ಹೀಗಿರಬೇಕಾದರೆ ಬಹಳ ಅಡ್ವಾನ್ಸಾಗಿ ಹೋಗಿದ್ದೇವೆಂದು ಹೇಳಿದ್ದೀರಿ. ಕಾಂಗ್ರೆಸ್ ಪಕ್ಷದವರೂ ಕೂಡ ಕೇಳುತ್ತಾ ಇದ್ದರು. ಈಗ ನೀವು ಬಂದಿದ್ದೀರಿ. ಅವರಿಗಿಂತ ಹೆಚ್ಚು ಪರ್‌ಫಾರ್‌ಮೆನ್ಸ್ ಹೇಳುವ ಹಾಗಿದ್ದರೆ ಅದು ಬೇರೆ ಸಮಾಚಾರ. ಮೂಲಭೂತವಾಗಿ ಕಾನ್‌ಸ್ಟೆಂಟ್ ಪ್ರೈಸಸ್ ಎಷ್ಟು ದೂರ ಬೆಳವಣಿಗೆಯಾಗಿದೆ. have you stagnated or Growing ? ಮತ್ತೆ ತಾವು ಪ್ರೊಫೆಷನಲ್ ಟ್ಯಾಕ್ಸ್

ಬಗ್ಗೆ ಏನೂ ಹೇಳಲಿಲ್ಲ. ಗಾಂಧಿ ಬಜಾರಿನಲ್ಲಿ ದೊಡ್ಡ ಪಬ್ಲಿಕ್ ಮೀಟಿಂಗ್ ಮಾಡಿದಿರಿ, ನಾನೂ ಕೂಡ ಆ ಮೀಟಿಂಗ್‌ನಲ್ಲಿದ್ದೆ. ಅಲ್ಲಿ ಪ್ರೊಫೆಷನಲ್ ಟ್ಯಾಕ್ಸನ್ನು ತೆಗೆದುಹಾಕುತ್ತೇವೆ ಎಂದು ಹೇಳಿದಿರಿ. ಅದೆಲ್ಲಾ ಪತ್ರಿಕೆಯಲ್ಲಿ ಬಂದಿದೆ. ಬೇಕಾದರೆ ಕೊಡುತ್ತೇನೆ. ಪ್ರೊಫೆಷನಲ್ ಟ್ಯಾಕ್ಸ್ ತೆಗೆದುಹಾಕುತ್ತೇವೆ ಎಂದು ಗಾಂಧಿಬಜಾರ್ ಮೀಟಿಂಗ್‌ನಲ್ಲಿ ಹೇಳಿದಿರಿ, ಅಲ್ಲಿ ಜನ ಎಲ್ಲಾ ಚಪ್ಪಾಳೆ ತಟ್ಟಿದರು.

ಶ್ರೀ ಎಸ್. ಬಂಗಾರಪ್ಪ.— ಓಟ್ ಗೋಸ್ಕರ.

ಶ್ರೀ ಎಂ. ಎಸ್ ಕೃಷ್ಣನ್.— ಅದು ಓಟ್ ಆದಮೇಲೆ ನಡೆದದ್ದು. ಓಟ್ ಆದಮೇಲೆ ವಿಜಯೋತ್ಸವ ಆಚರಿಸುವ ಸಂದರ್ಭದಲ್ಲಿ ಗಾಂಧಿಬಜಾರಿನಲ್ಲಿ ಮೀಟಿಂಗ್ ನಡೆಯಿತು. ಅಲ್ಲಿ ನಾನೂ ಇದ್ದೆ.

ಶ್ರೀ ಎಸ್. ಬಂಗಾರಪ್ಪ.— ಓಟ್‌ಗಿಂತ ಮುಂಚೆ ವೃತ್ತಿ ತೆರಿಗೆಯನ್ನು ತೆಗೆದುಹಾಕುತ್ತೇವೆಂದ ಹೇಳಿದ್ದರೆ ಆ ಪ್ರಶ್ನೆ ಬೇರೆ. ಓಟ್ ಆದ ಮೇಲೆ ವಿಜಯೋತ್ಸವ ಆಚರಣೆಯ ಸಂದರ್ಭದಲ್ಲಿ ಹೇಳಿದ್ದರೆ ಅವರು ಹೇಳಲಿಲ್ಲ ಎಂದು ಕುಳಿತುಕೊಂಡು ಹೇಳುತ್ತಿದ್ದರು ಮರೆತಿದ್ದರೆ ಮಾರ್ಜಿನ್ ಕೊಡಿ.

ಶ್ರೀ ರಾಮಕೃಷ್ಣ ಹೆಗಡೆ.— ಹೋದ ವರ್ಷ ಬಜೆಟ್ಟಿಗೆ ಉತ್ತರ ಕೊಡುವಾಗ ಹೇಳಿದೆ. ಪ್ರಪೋಸಲ್ ಇತ್ತು, ೧೫೦೦ ರೂಪಾಯಿ ಕನ್ಸಾಲಿಡೇಟೆಡ್ ಪೇ ಅಂದರೆ ಎಲ್ಲಾ ಸೇರಿ ೧೫೦೦ ರೂಪಾಯಿ ಯಾರಿಗೆ ವರಮಾನ ಇರುತ್ತದೋ ಅಲ್ಲಿಯವರೆಗೆ ಎಕ್ಸೆಂಪ್ಟ್ ಮಾಡುತ್ತೇವೆ ಎನ್ನುವ ಪ್ರಪೋಸಲ್ ಇತ್ತು. ಆಮೇಲೆ ಇಲ್ಲಿ ಚರ್ಚೆಯಾಗತಕ್ಕಂಥ ಸಂದರ್ಭದಲ್ಲಿ ಮಾನ್ಯ ಕೃಷ್ಣನ್‌ರವರು ಮತ್ತು ಇನ್ನಿತರ ಸದಸ್ಯರು ಇಲ್ಲ ಮೊದಲು ಯಾವ ರೀತಿ ಇಟ್ಟಿದ್ದಿರೋ ಬೇಸಿಕ್ ೧೨೦೦ ರೂಪಾಯಿ ಎಂದು ಅದನ್ನೇ ಇಡಬೇಕು ಎಂದು ಹೇಳಿದರು ಆಗಬಹುದು ಎಂದು ಹೇಳಿದೆ ಅದೇ ರೀತಿ ವಿಚಾರವನ್ನು ಇಟ್ಟಿದ್ದೇನೆ. ಆಗ ಅಫಿಷಿಯಲ್ಲಾಗಿ ಜಾರಿಗೆ ಬಂದಿರಲಿಲ್ಲ. ಅನೇಕ ಜನರ ಹತ್ತಿರ ವಸೂಲು ಮಾಡಿಬಿಟ್ಟರು. ಚುನಾವಣೆ ಮುಗಿದ ಮೇಲೆ ಹಳೇ ಪದ್ಧತಿಯನ್ನು ಮಾಡುತ್ತೇವೆ ಮೊದಲಿನಂತೆ ತರುತ್ತೇವೆ ಎಂದು ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ — ೧೯೮೫ರ ಚುನಾವಣೆಯಲ್ಲಿ ವೃತ್ತಿ ತೆರಿಗೆಯನ್ನು ತೆಗೆದು ಹಾಕುತ್ತೇವೆ ಎಂದು ಹೇಳಿದಿರಿ. ಅದನ್ನು ಒಪ್ಪಿಕೊಳ್ಳುತ್ತೀರಿ. ಅನಂತರ ಬಂದಾಗಲೂ ಅದೇ ವೃತ್ತಿ ತೆರಿಗೆಯನ್ನು ತೆಗೆದುಹಾಕುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತಾ ಬಂದಿರಿ ಅದು ಚುನಾವಣಾ ಪ್ರಣಾಳಿಕೆಯಲ್ಲಿ ಇದೆಯೋ ಇಲ್ಲವೋ ಗೊತ್ತಿಲ್ಲ. ೧೯೮೩ ರ ಮಾರ್ಚ್ ತಿಂಗಳ ಚುನಾವಣೆಯಲ್ಲಿ ೧೯೮೩ ರಲ್ಲಿ ಕೊಟ್ಟಿರತಕ್ಕ ಮಾತನ್ನು ಏಕೆ ಮರೆತಿರೋ ಗೊತ್ತಿಲ್ಲ. ಹೆಗಡೆಯವರ ಸರ್ಕಾರದಲ್ಲಿ ರಾಜಕಾರಣ ಬೆಳೆದ ಹಾಗೆ ಜನರಿಗೆ ಕೊಟ್ಟಿರತಕ್ಕ ಮಾತುಗಳೂ ಹೆಚ್ಚಾಗಿ ಮರೆತು ಹೋಗುವುದು ಸಹಜ ಎನ್ನುವ ಭಾವನೆ ಬರುತ್ತದೆ.

ಶ್ರೀ ಎಂ. ಎಸ್ ಕೃಷ್ಣನ್.— ಪ್ರೊಫೆಷನಲ್ ಟ್ಯಾಕ್ಸ್ ಬಗ್ಗೆ ಬೇಸಿಕ್ ಪೇ ೧೨೦೦ ರೂಪಾಯಿ ಪ್ಲಸ್ ಡಿ. ಎ ಎಲ್ಲಾ ಸೇರಿ ಟೋಟಲ್ ಮಾಡಿದ್ದು ತಪ್ಪು. ಈಗ ೧೨೦೦ ರೂಪಾಯಿ ಬೇಸಿಕ್ ಪೇ ಎಂದು ಏನು ಮಾಡಿದಿರಿ ಇದು ಸ್ವಾಗತಾರ್ಹವಾದಂಥ ಅಂಶ. ಆದರೆ ಮೂಲಭೂತವಾಗಿ ಪ್ರೊಫೆಷನಲ್ ಟ್ಯಾಕ್ಸನ್ನು ರದ್ದು ಮಾಡುತ್ತೇವೆ ಎಂದು ಹೇಳಿದಿರಿ ಅದಕ್ಕೆ ಉತ್ತರ ಹೇಳಲಿಲ್ಲ ಹಿಂದೆ ಪ್ರೊಫೆಷನಲ್ ಟ್ಯಾಕ್ಸನ್ನು ರದ್ದು ಮಾಡುತ್ತೇವೆಂದು ಹೇಳಿದಿರಿ ಈಗ ಇಲ್ಲ. ಅಂದರೆ ನಾವೇನೂ ಹೇಳುವುದಕ್ಕಾಗುವುದಿಲ್ಲ ಆಮೇಲೆ ಪ್ರೈಸಸನ್ನು ತೆಗೆದುಕೊಂಡರೆ, ಅದು ಕೇಂದ್ರದ ನೀತಿ. ಅದರಂತೆ ಬೆಲೆಗಳು ಇಲ್ಲೂ ಜಾಸ್ತಿಯಾಗಿವೆ ಅಂದರೆ ಅದು ಸಮಂಜಸವಾಗುವುದಿಲ್ಲ ಇಲ್ಲಿ ಪ್ರೈಸಸನ್ನು ಕಡಿಮೆ ಮಾಡಲಿಕ್ಕೆ ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆ ಎನ್ನುವುದು ಮುಖ್ಯವಾದಂಥ ಅಂಶ. ಇದು ಅಖಿಲ ಭಾರತ ಮಟ್ಟದಲ್ಲಿದೆ. ಆದರೆ ಇಲ್ಲಿ ಡಿಸ್ಟ್ರಿಬ್ಯೂಷನ್ ಸಿಸ್ಟಂ ನಮ್ಮದು ಇದೆ. ಆಮೇಲೆ ಫೇರ್ ಪ್ರೈಸ್ ಷಾಪ್ಸನ್ನು ವೈಡೆನ್ ಮಾಡುವುದು ರೂರಲ್ ಏರಿಯಾಕ್ಕೆ ಹಾಕುವುದು—ಇದೆ. ಆಮೇಲೆ ಸ್ಟ್ರಿಂಜೆಂಟ್ ಆಕ್ಷನ್ ಎಗೆನೆಸ್ಟ್ ಬ್ಲಾಕ್‌ಮಾರ್ಕೆಟ್. ಇದನ್ನು ಬೇರೆ ಕಡೆ ಮಾಡಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಕೇರಳದಲ್ಲಿ ಬಹಳ ದೊಡ್ಡ ರೀತಿಯಲ್ಲಿ ಮಾಡಿದ್ದಾರೆ. ಅಲ್ಲಿ ನಮ್ಮ ರಾಜ್ಯಕ್ಕಿಂತ ಕಡಿಮೆ ಇದೆ. ಬೆಂಗಳೂರು ಈಸ್ ದಿ ಕಾಸ್ಟ್ಲಿಯೆಸ್ಟ್ ಸಿಟಿ. ಆದುದರಿಂದ ಇದರ ಬಗ್ಗೆ ತಾವು ಸ್ಪಷ್ಟವಾಗಿ ಹೇಳಬೇಕು. ತಮಗೆ ಎಕಾನಮಿ ಬಗ್ಗೆ ಹೇಳುವುದಿಲ್ಲ. ಗಾಂಧಿಯನ್ ಎಕಾನಮಿ ಬಗ್ಗೆ ಅಭಿಮಾನ ಇದೆ, ಒಪ್ಪಿಕೊಳ್ಳುತ್ತೀರಿ, ನಾವೂ ನೀವೂ ಮಾತನಾಡೋಣ. ಆದರೆ ಫಾರಿನ್ ಎಂಟ್ರೀಸ್ ಯಾರು ಒಪ್ಪಿಕೊಂಡಿದ್ದಾರೆ.

ಶ್ರೀ ಕೆ. ಹೆಚ್. ಪಾಟೀಲ್.— ಗಾಂಧಿಯವರು ಸೆರೆ ಕುಡಿ ಎಂದು ಹೇಳಿದರೆ. ಗಾಂಧಿ ಎಕಾನಮಿ ಬೆಟರ್ ದ್ಯಾನ್ ರಾಜೀವ್‌ಗಾಂಧಿ ಎಕಾನಮಿ.

ಶ್ರೀ ಎಂ.ಎಸ್. ಕೃಷ್ಣನ್.— ಮಹಾತ್ಮಾಗಾಂಧಿಯವರ ಹೆಸರನ್ನು ಅವರಿಗೆ ಇಷ್ಟ ಬಂದಾಗ ಬಳಸಿ ಕೊಳ್ಳುತ್ತಾರೆ. ಆ ರೀತಿ ಬಳಸಿಕೊಳ್ಳುವುದಕ್ಕೆ ಹೋಗಬೇಡಿ. ಪಬ್ಲಿಸಿಟಿಗಾಗಿ ಬೇಕಾದರೆ ಬಳಸಿಕೊಳ್ಳ ಬಹುದು I don't think that economy will succeed only a socialisticecono-my can succeed. ತಾವು ಟ್ಯಾಕ್ಸೇಷನ್ ಮೆಷರ್ಸ್ ಏನು ಹೇಳಿದಿರಿ. ಅದನ್ನು ರೀಕನ್ಸಿಡರ್ ಮಾಡ ಬೇಕು ಎಂದು ಕೇಳಿಕೊಳ್ಳುತ್ತೇನೆ. ಅದನ್ನು ರಿಕನ್ಸೀಡರ್ ಮಾಡಿ. ನಾವು ಪಾಯಿಂಟ್ ಔಟ್ ಮಾಡಿದ್ದೇವೆ ಎಲ್ಲರೂ ಹೇಳಿದ್ದಾರೆ. ಅದನ್ನು ರೀಕನ್ಸಿಡರ್ ಮಾಡಬೇಕು ಎಂದು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.— ರೇಟ್ ಆಫ್ ಟ್ಯಾಕ್ಸೇಷನ್? ಯಾವುದರ ಮೇಲೆ.

ಶ್ರೀ ಎಂ.ಎಸ್. ಕೃಷ್ಣನ್.— ಸೇಲ್ಸ್ ಟ್ಯಾಕ್ಸ್ ಕೆಲವು ಐಟಂಗಳ ಮೇಲೆ ಬಹಳ ಜಾಸ್ತಿ ಇದೆ.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಸದಸ್ಯರು ಏನು ವಿವರಿಸಿದ್ದಾರೆ. ಆ ಎಲ್ಲಾ ದೃಷ್ಟಿಯನ್ನು ಇಟ್ಟುಕೊಂಡು ಮಾಡಿರುವುದು ಆದಾಯ ಡೈವರ್ಷನ್ ಆಫ್ ಟ್ರೇಡ್ ಆಗಕೂಡದು, ಬಡವರಿಗೆ ಮತ್ತು ಮಧ್ಯಮ ವರ್ಗದವರಿಗೆ ಭಾರ ಬೀಳಕೂಡದು ಎಂದು ಮಾಡಿದ್ದೇನೆ. ಒಂದು ವರ್ಷ ನೋಡೋಣ ಆಮೇಲೆ ಬೇಕಾದರೆ ಚೇಂಜ್ ಮಾಡೋಣ ಎಂದು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ನಿನ್ನೆ ನಾವು ತೀರ್ಮಾನ ಮಾಡಿದ್ದೇವೆ. ಟ್ಯಾಕ್ಸ್‌ಗೆ ಸಂಬಂಧಪಟ್ಟಂತೆ ಎಲ್ಲ ಮಸೂದೆಗಳನ್ನೂ ಪಾಸು ಮಾಡುವುದು ಎಂದು. ನಾನು ಮೊದಲೇ ಹೇಳಿರುವಂತೆ ಇದಕ್ಕೆ ತಮ್ಮೆಲ್ಲರ ಸಹಕಾರಬೇಕೆಂದು ಕೇಳಿಕೊಳ್ಳುತ್ತೇನೆ. ಮೊಯ್ಲಿಯವರು ಕೇಳಿದರು. ವೇಸ್ ಅಂಡ್ ಮೀನ್ಸ್ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಬರಬೇಕಾಗಿತ್ತು ಎಂದು. ಅದು ಸಪ್ಲಿಮೆಂಟರಿ ಬಜೆಟ್‌ನಲ್ಲಿ ಬರುವುದಿಲ್ಲ. ಅದರಲ್ಲಿ ಬರತಕ್ಕಂಥ ಐಟೆಂ ಅಲ್ಲ. ಯಾವುದು ತೋರಿಸುತ್ತಾರೆಂದರೆ ರಿಸೀಟ್ಸ್ ಅಂಡ್ ಡಿಸ್ಬರ್ಸ್‌ಮೆಂಟ್ಸ್. ವೇಸ್ ಅಂಡ್ ಮೀನ್ಸ್ ನಮಗೆ ೫೦ ಕೋಟಿನೋ ೪೦ ಕೋಟಿನೋ ಏರುತ್ತಿರುತ್ತದೆ ಮತ್ತೆ ೨೦ ಕೋಟಿ ಹೆಚ್ಚು ಮಾಡಬೇಕಾಗಿರುತ್ತದೆ. ಇದು ಜನರಲ್ ಆಗಿರುತ್ತದೆ. ಪ್ರತ್ಯೇಕವಾದ ಐಟೆಂ ತೋರಿಸುವುದಿಲ್ಲ ಅಷ್ಟೇ.

ಶ್ರೀ ಕೆ. ಎಚ್. ಶ್ರೀನಿವಾಸ.— ಅಧ್ಯಕ್ಷರೇ, ಈ ಜನತಾ ವಲಯದ ಬಗ್ಗೆ ನಾನೇನೂ ಲಘುವಾಗಿ ಪ್ರಶ್ನೆ ಮಾಡಿದ್ದಲ್ಲ. ಅದಕ್ಕೆ ನಿರ್ದಿಷ್ಟವಾದ ಅರ್ಥ ಕಲ್ಪನೆಯಾಗಬೇಕೆಂದು ನಾನು ಮುಖ್ಯಮಂತ್ರಿ ಗಳನ್ನು ಪ್ರಶ್ನೆ ಮಾಡಿದ್ದೆ. ಆದರೆ ಅದಕ್ಕೆ ಉತ್ತರ ಕೊಡಬೇಕಾದರೆ ಅಲ್ಲಿ ಗಾಂಧೀಜಿಯನ್ನು ತಂದಿರಿ. ಈ ಬಜೆಟ್ ಭಾಷಣದಲ್ಲಿ ಗಾಂಧೀಜಿಯವರನ್ನು ತರಲಿಲ್ಲ. ಬೇರೆ ಕಡೆ ತೆಗೆದುಕೊಂಡಿದ್ದೀರಿ ರಾಜೀವ ಗಾಂಧಿಯವರನ್ನು ಟೀಕೆ ಮಾಡುವುದಕ್ಕಾಗಿ ಗಾಂಧೀಜಿಯನ್ನು ಬಳಸಿಕೊಂಡಿರಿ. ಈ ಜನತಾ ವಲಯಕ್ಕೆ ಅರ್ಥ ಕೊಡುವುದಕ್ಕೋಸ್ಕರ ತಾವು ಗಾಂಧೀಜಿಯನ್ನು ಬಳಸಿಕೊಳ್ಳಲಿಲ್ಲ. ಇಲ್ಲಿ ಏನು ಹೇಳುತ್ತೀರಿ ಎಂದರೆ ‘‘ಪ್ರಜೆಗಳನ್ನು ಸಂಪೂರ್ಣವಾಗಿ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಒಳಗೊಳ್ಳುವಂತೆ ಮಾಡುವುದ ರಿಂದ ಅದರ ಪ್ರಯೋಜನಗಳು ಸಮಾಜದ ಎಲ್ಲ ವರ್ಗಗಳಿಗೂ ಮುಟ್ಟುತ್ತದೆ ಎಂದು ನನ್ನ ಅಭಿಪ್ರಾಯ.’’ ಈ ಮಾತನ್ನು ನಾನು ಒಪ್ಪುತ್ತೇನೆ. ಮತ್ತು ಗಾಂಧೀಜಿಯವರು ನಮ್ಮ ಕೃಷ್ಣನ್ ಒಪ್ಪಲಿ, ಬಿಡಲಿ, ಪ್ರಪಂಚದ ಎಲ್ಲ ಭಾಗಗಳಲ್ಲೂ ಮತ್ತೆ ಇವತ್ತು ರೆಲೆವೆಂಟ್ ಆಗಿ ಕಾಣುತ್ತಿದ್ದಾರೆಂಬು ದನ್ನು ಒಪ್ಪಿಕೊಳ್ಳುತ್ತೇನೆ. ಮತ್ತು ಶಿವಮಾರ್ಕರ್ ಥರದ ಅರ್ಥ ಶಾಸ್ತ್ರಜ್ಞರು ಇತ್ತೀಚೆಗೆ ಹೊಸದಾಗಿ ಗಾಂಧೀಜಿಯ ಮಾರ್ಗಗಳನ್ನು ತಮ್ಮ ಭಾಷಣದಲ್ಲಿ ಅರ್ಥಶಾಸ್ತ್ರಜ್ಞರಾಗಿ ಏನು ಬರೆದಿದ್ದಾರೆ ಎಂಬುದನ್ನು ನಾನು ಗಮನಿಸಿದ್ದೇನೆ. ಆ ದೃಷ್ಟಿಯಿಂದಲೇ ಇದಕ್ಕೆ ನಿಶ್ಚಿತವಾದಂಥ ರೂಪು ಕೊಡುವಂಥಾ ಯಾವ ಪ್ರಯತ್ನವನ್ನೂ ಮಾಡಿಲ್ಲ. ಈ ಬಜೆಟ್‌ನಲ್ಲಿ ಬರೀ ಶಬ್ದ ಪ್ರಯೋಗ ಮಾಡಿದ್ದೀರಿ ಅಷ್ಟೇ. ಆಮೇಲೆ ಬಿಟ್ಟುಬಿಟ್ಟಿರಿ ಅಷ್ಟೇ. ಅದಕ್ಕಾಗಿಯೇ ನಾನು ನಿಮ್ಮನ್ನು ಅರ್ಥ ಏನು ಎಂದು ಕೇಳಿದ್ದು. ಅದಕ್ಕೆ ಮತ್ತೆ ನೀವು ಗಾಂಧೀಜಿಯವರ ಫೋಟೋ ಎದುರು ಹಿಡಿದು ನಿಲ್ಲಿಸಿಬಿಟ್ಟಿರಿ. ಹೊರತು ಸ್ಪಷ್ಟನೆ ನೀಡಲಿಲ್ಲ. ಆ್ಯಂಟಿ ಪಾವರ್ಟಿ ಮೆಷರ್ಸ್ ಹೇಳುವುದರಲ್ಲಿ ಅರ್ಥವಿಲ್ಲ. ಎಲ್ಲ ಜನರೂ ತಮ್ಮ

ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂಥ ಅದರ ಪ್ರಯೋಜನ ಅವರಿಗೆ ತಕ್ಷಣ ಸಿಗಬೇಕು ಎನ್ನುವಂತಹ ಯಾವ ಸ್ಕೀಮನ್ನು ನೀವು ಇಲ್ಲಿ ಮುಂದಿಟ್ಟಿದ್ದೀರಿ ಹೇಳಿ ? ತಾವು ಮುಂದಿಡಲಿಲ್ಲವೆಂದು ನನ್ನ ಅಭಿಪ್ರಾಯ ಇದೆ. ಈ ಸಲ ಮಾಡದೇ ಹೋದರೂ ದಯವಿಟ್ಟು ಮುಂದಿನ ಸಲವಾದರೂ ಮಾಡುತ್ತೇವೆ ಎಂದು ಹೇಳಿದರೆ ಅಷ್ಟರಮಟ್ಟಿಗೆ ನಾವು ಸಮಾಧಾನಪಟ್ಟುಕೊಳ್ಳುತ್ತೇವೆ ಅಷ್ಟೇ. ಒಳ್ಳೊಳ್ಳೆಯ ಶಬ್ದಗಳನ್ನು ಪ್ರಪಂಚದಲ್ಲಿ ಎಲ್ಲೆಲ್ಲಿ ಸಿಗುತ್ತವೆ ಅವುಗಳನ್ನು ಅಲ್ಲಿಂದ ಆರಿಸಿಕೊಂಡು ಬಂದು ಇಲ್ಲಿ ಬಜೆಟ್‌ನಲ್ಲಿ ಸೇರಿಸಿಕೊಳ್ಳುವಂಥ ಸಂಪ್ರದಾಯ ಪಾಲಿಸುತ್ತಿದ್ದೀರಿ ಎನ್ನುವ ಆತಂಕ ಅಷ್ಟೆ.

ಶ್ರೀ ರಾಮಕೃಷ್ಣ ಹೆಗಡೆ.— ನಾನು ಆಗಲೇ ಸಂಕ್ಷೇಪವಾಗಿ ಹೇಳಿದ್ದೇವೆ. ಈ ಜನತಾ ವಲಯದಲ್ಲಿ ಮೂರು ಮುಖ್ಯ ಕ್ಷೇತ್ರಗಳಿವೆ. ಒಂದು ಆರ್ಥಿಕ, ಮತ್ತೊಂದು ಶೈಕ್ಷಣಿಕ ಹಾಗೂ ಮೂರನೆಯದು ರಾಜಕೀಯ ಕ್ಷೇತ್ರ. ರಾಜಕೀಯವಾಗಿ ವಿಕೇಂದ್ರೀಕರಣವಾಗುವ ಪ್ರತಿಯೊಂದು ಹಂತದಲ್ಲೂ ಜನರದೇ ಸಂಪೂರ್ಣ ಇನ್‌ವಾಲ್ವ್‌ಮೆಂಟ್ ಅದರಲ್ಲಿ ಇರಬೇಕು. ಆರ್ಥಿಕ ಕಾರ್ಯಕ್ರಮಗಳಲ್ಲಿ ನಾನು ಉದಾಹರಣೆ ಕೊಟ್ಟಿದ್ದೇನೆ. It is not exhaustive, only illustrative ಎಂದು. ಇದರಡಿಯಲ್ಲಿ ಇಂಪ್ಲಾಯ್‌ಮೆಂಟ್ ಗ್ಯಾರಂಟಿ ಸ್ಕೀಮ್ ಬಂತು. ಡ್ರೈ ಲ್ಯಾಂಡ್ ಡೆವಲಪ್‌ಮೆಂಟ್ ಸ್ಕೀಂ ಬಂತು. ಎರಡು ರೂ.ಗೆ ಒಂದು ಕೇಜಿ ಅಕ್ಕಿ ಬಡಬಗ್ಗರಿಗೆ ಕೊಡುವುದು—ಇವೆಲ್ಲ ಯಾವ ವರ್ಗ ಆರ್ಥಿಕ ಪ್ರಯೋಜನಗಳಿಂದ ವಂಚಿತವಾಗಿದೆಯೋ ಅಂಥವರಿಗೆ ಸಿಗತಕ್ಕಂಥಾದ್ದು. ಈ ಶೈಕ್ಷಣಿಕ ಕ್ಷೇತ್ರದಲ್ಲಿ ನಾವು ಕೆಲಸ ಮಾಡದೇ ಇದ್ದರೆ ಅವರಿಗೆ ಸರಿಯಾದ ರೀತಿಯಲ್ಲಿ ಭಾಗವಹಿಸಲು ಅವಕಾಶವಾಗುವುದಿಲ್ಲ. ಹಿಂದೆ ಎಲ್ಲಾ ಆಗಿದ್ದು ಇದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಮಾತನಾಡಿದಾಗ ಎರಡು ಪ್ರಶ್ನೆಯನ್ನು ಕೇಳಿದ್ದೆ. ಒಂದು ಕಾವೇರಿ ಬೇಸಿನ್‌ಗೆ ಯಾವ ರೀತಿಯಾಗಿ ತಾವು ಹೆಚ್ಚಿನ ಆದ್ಯತೆ ಕೊಟ್ಟು ಹಣ ಖರ್ಚು ಮಾಡಿ ತ್ವರಿತ ಗತಿಯಲ್ಲಿ ಕೆಲಸ ಮಾಡುತ್ತಿದ್ದೀರೋ ಅದೇ ರೀತಿ ಕೃಷ್ಣಾ ಬೇಸಿನ್‌ನಲ್ಲಿರತಕ್ಕ ಪ್ರೋಜೆಕ್ಟ್‌ಗಳಾದ ಅಪ್ಪರ್ ಕೃಷ್ಣಾ ಪ್ರೋಜೆಕ್ಟ್‌ನಿಂದ ಹಿಡಿದುಕೊಂಡು ಮೇಜರ್ ಇರಿಗೇಷನ್ ಇವುಗಳಿಗೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ಕೇಳಿದ್ದೆ. ಆದರೆ ಅದರ ಬಗ್ಗೆ ಮುಖ್ಯಮಂತ್ರಿಗಳು ಹೇಳಿಲ್ಲ. ಬರೀ ಕಾವೇರಿ ಬೇಸಿನ್ ಬಗ್ಗೆ ಹೇಳಿದರು. ನೀವು ಹೇಳದೇ ಇದ್ದರೂ ಕೂಡ ಮಾನ್ಯ ದೇವೇಗೌಡರು ಪದೇಪದೇ ಹೇಳಿ ಕೆಲಸ ಮಾಡಿಸಿಕೊಳ್ಳುತ್ತಾರೆ. ಆದರೆ ಇದು ಬರಗಾಲ ಪೀಡಿತ ಪ್ರದೇಶ. ಬೀದರ್, ಬಿಜಾಪುರ, ರಾಯಚೂರು, ಗುಲ್ಬರ್ಗ ಮುಂತಾದ ಕಡೆಗಳಲ್ಲೆಲ್ಲ ಲಾಭ ಆಗತಕ್ಕಂಥ ದೃಷ್ಟಿಯಿಂದ ಅದಕ್ಕೆ ಆದ್ಯತೆ ಕೊಡತಕ್ಕಂಥಾದ್ದು ನಿಮ್ಮ ಕರ್ತವ್ಯ. ನಾನು ಪದೇ ಪದೇ ಹೇಳುತ್ತಿದ್ದೇನೆ. ಆ ಕಡೆ ಇವರ ಲಕ್ಷ್ಯ ಸ್ವಲ್ಪ ಕಡಿಮೆ ಇದೆ. ಅದಕ್ಕೇ ಸೌತ್, ನಾರ್ತ್ ಎಂದು ಬೇರೆ ಬೇರೆ ಮಾಡಿ ನಮಗೆ ಚೀಫ್ ಇಂಜಿನಿಯರ್‌ನ್ನು ಕೂಡ ಬೇರೆ ಕಳಿಸಿಬಿಟ್ಟಿದ್ದಾರೆ. ದುಡ್ಡು ಕೊಡುತ್ತಾರೋ ಇಲ್ಲವೋ ಬೇರೆ ಮಾತು. ಅದಕ್ಕೆ ನೀವೇ ಅದನ್ನು ವಹಿಸಿಕೊಂಡು ಪ್ರತ್ಯಕ್ಷವಾಗಿ ಹೆಚ್ಚಿನ ಹಣ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಎರಡನೆಯದಾಗಿ ಮಾನ್ಯ ಜೆ. ಹೆಚ್. ಪಟೇಲರು ಪಬ್ಲಿಕ್ ಸೆಕ್ಟರ್ ಬಗ್ಗೆ ಒಂದು ಕಡೆ ಸ್ಪೀಚ್ ಮಾಡಿದ್ದು, ಅನೇಕ ಕಡೆ ಲುಕ್ಸಾನುಗಳಲ್ಲಿ ನಡೆಯುತ್ತಿರುವ ಪಬ್ಲಿಕ್ ಸೆಕ್ಟರ್ ಫ್ಯಾಕ್ಟರಿಗಳನ್ನು ಪ್ರೈವೇಟ್‌ನವರಿಗೆ ವಹಿಸಿಕೊಡುತ್ತೇವೆಂದು ಹೇಳಿದ್ದಾರೆ. ಆದುದರಿಂದ ಈ ಪಬ್ಲಿಕ್ ಸೆಕ್ಟರ್ ಬಗ್ಗೆ ಖಚಿತವಾಗಿ ತಮ್ಮ ನಿಲುವೇನು ? ಅದರಲ್ಲಿ ತಮಗೆ ವಿಶ್ವಾಸ ಇದೆಯೋ ? ಇಲ್ಲವೋ ? ಎಂಬುದನ್ನು ತಿಳಿಸಿ ಈಗ ರೋಗಗ್ರಸ್ತವಾಗಿರುವ ಪಬ್ಲಿಕ್ ಸೆಕ್ಟರುಗಳು ಚೇತರಿಸಿಕೊಳ್ಳಲು ಏನು ಪ್ರೋತ್ಸಾಹ ಕೊಡಬೇಕೋ ಅದನ್ನು ಕೊಡುತ್ತೀರೋ, ಇಲ್ಲವೋ ಎಂಬುದನ್ನು ಸ್ಪಷ್ಟವಾಗಿ ಹೇಳಿಬಿಡಿ.

ಶ್ರೀ ರಾಮಕೃಷ್ಣ ಹೆಗಡೆ.—ಮೊದಲನೇ ಪ್ರಶ್ನೆಗೆ ಉತ್ತರವಿಷ್ಟೇ. ಕಳೆದ ಎರಡು ಮೂರು ವರ್ಷಗಳಲ್ಲಿ ಕೃಷ್ಣಾ ವಲಯದ ನೀರಾವರಿ ಯೋಜನೆಗಳಿಗೆ ನಾವು ಹೆಚ್ಚಿಗೆ ಖರ್ಚು ಮಾಡಿದ್ದೇವೆ. ಅದು ಸಾಲದು ಎಂದು ನನಗೂ ಗೊತ್ತು. ಬರುವ ೫ ವರ್ಷಗಳಲ್ಲಿ ನೀರಾವರಿಗಾಗಿ ೧,೦೦೦ ಕೋಟಿ ರೂ.ಗಳನ್ನು ೭ನೇ ಯೋಜನೆಯಲ್ಲಿ ಇಟ್ಟಿದ್ದೇವೆ. ಇದರಲ್ಲಿ ೩೩೫ ಕೋಟಿ ಕಾವೇರಿ ವಲಯದ ಯೋಜನೆಗಳಿಗೆ. ಬಾಕಿಯದು ಕೃಷ್ಣಾ ವಲಯದ ಯೋಜನೆಗಳಿಗೆ ಆಗುತ್ತದೆ. ಇದಕ್ಕೆ ಹೊರತಾಗಿ ಕೂಡ ಎಕ್ಸ್‌ಟರ್ನಲ್‌ನಲ್ಲಿ ಫೈನಾನ್ಸ್ ನಮಗೆ ಸಿಕ್ಕಿದರೆ ಅದರ ಸಂಪೂರ್ಣವಾದ ಪ್ರಯೋಜನ ಪಡೆದುಕೊಳ್ಳಬೇಕೆಂದು ನಮ್ಮ ಉದ್ದೇಶ ಇದೆ. ನಾನು ಈ ವಿಚಾರದಲ್ಲಿ ಕೇಂದ್ರ ಸರ್ಕಾರದ ನೀರಾವರಿ ಮಂತ್ರಿಗಳಿಗೆ ಪತ್ರ ಬರೆದಿದ್ದೇನೆ. ಅವರ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ನಾಡಿದ್ದು ೯ನೇ

ತಾರೀಖಿಗೆ ಮತ್ತೆ ನಮ್ಮ ರಾಜ್ಯದ ಸಂಸತ್ಸದಸ್ಯರೆಲ್ಲ ಚರ್ಚೆ ಮಾಡುತ್ತಿದ್ದೇವೆ. ಮೊನ್ನೆ ತಾನೇ ನಾನು ಶ್ರೀ ಚವಾನ್ ಶಂಕರಾನಂದರವರ ಜೊತೆ ಟೆಲಿಫೋನ್ ಮಾಡಿ ೯ನೇ ತಾರೀಖಿಗೆ ದಯವಿಟ್ಟು ಮೀಟಿಂಗ್ ಫಿಕ್ಸ್ ಮಾಡಿ, ನಮ್ಮ ಆಫೀಸರ್ ಜೊತೆ ಬರುತ್ತೇನೆ, ಏನಾದರೂ ಒಂದು ತೀರ್ಮಾನ ಮಾಡೋಣ ಎಂದು. ಆದ್ದರಿಂದ ಕೃಷ್ಣಾ ವಲಯದ ಯೋಜನೆಗಳಿಗೆ ಸಾಕಷ್ಟು ಹಣ ಒದಗಿಸಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಇನ್ನು ಪಬ್ಲಿಕ್ ಸೆಕ್ಟರ್ ಅಂಡರ್‌ಟೇಕಿಂಗ್ ವಿಚಾರದಲ್ಲಿ ಹೇಳಿದರು. ನಾನೇ ಅದಕ್ಕೆ ಉತ್ತರ ಕೊಡಲಿಲ್ಲ. ಏಕೆಂದರೆ ಕೈಗಾರಿಕಾ ಮಂತ್ರಿಗಳ ಬೇಡಿಕೆ ಬರುತ್ತದೆ. ಆ ಸಂದರ್ಭದಲ್ಲಿ ಚರ್ಚೆಯಾಗಿ ಅದರ ಮೇಲೆ ಹೆಚ್ಚು ಬೆಳಕನ್ನು ಹಾಕಬಹುದು ಎಂದು. ಆದರೆ ಇಷ್ಟು ಮಾತ್ರ ಒಂದು ಸಣ್ಣ ಮಾತನ್ನು ಸೂಚ್ಯವಾಗಿ ಬಜೆಟ್‌ನಲ್ಲಿ ಹೇಳಿದ್ದೇನೆ. ಪಬ್ಲಿಕ್ ಸೆಕ್ಟರ್ ಇಂಡಸ್ಟ್ರೀಸ್ ಇವತ್ತು ಯಾವ ಸಾಮಾಜಿಕ ಹೊಣೆಯನ್ನು ಹೊರಬೇಕಾಗಿತ್ತೋ ಸಾಮಾಜಿಕ ಪ್ರತಿಫಲವನ್ನು ಕೊಡಬೇಕಾಗಿತ್ತೋ ಆ ಫಲವನ್ನು ಕೊಡುವುದರಲ್ಲಿ ಯಶಸ್ವಿಯಾಗಿಲ್ಲ. ಇದು ನಾವೆಲ್ಲ ಒಪ್ಪಿಕೊಳ್ಳುತ್ತೇವೆ. ಈಗ ಎಸ್‌ಟಿಸಿ ಲಾಭ ಮಾಡುತ್ತದೆ. ಮೊನ್ನೆ ನಾನು ಹೇಳಿದೆನಲ್ಲ. ೩೦೦ ಕೋಟಿ ರೂ. ೪೦೦ ಕೋಟಿ ರೂ. ಅದೇ ರೀತಿ ಮನೋಪಲಿ...

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಮಾರಾರ್ಜಿಯವರಿಂದ ಪುರಸ್ಕೃತವಾದ ಈ ಪಬ್ಲಿಕ್ ಸೆಕ್ಟರನ್ನು ಮತ್ತು ಈ ಯೋಜನೆಗಳಿಗೆ ಅವರನ್ನು ಹಿರಿಯಣ್ಣನಾಗಿ ಇಟ್ಟುಕೊಂಡಿರುವ ಜನತಾ ಪಕ್ಷದವರು ಪಬ್ಲಿಕ್ ಸೆಕ್ಟರ್ ಬಗ್ಗೆ ಹೇಳುವುದು ಸರಿಯಲ್ಲ. ಈ ಪಬ್ಲಿಕ್ ಸೆಕ್ಟರ್ ಫೇಲ್ ಆದರೆ ನಿಮ್ಮ ಗೌರ್ನಮೆಂಟೇ ಫೇಲ್ ಆಗುತ್ತದೆ. ಅದರಲ್ಲಿ ಡಿಫೆಕ್ಟ್ ಇದ್ದರೆ ನಿಮ್ಮಂಥವರು ತಿದ್ದಲು ಪ್ರಯತ್ನ ಮಾಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಮಾತು ಮುಗಿಸುವುದಕ್ಕಿಂತ ಮುಂಚೆ ನಿಮ್ಮ ಅಭಿಪ್ರಾಯವನ್ನು ಹೇಳಿಬಿಡುತ್ತೀರಲ್ಲ.

೩–೩೦ ಪಿ. ಎಂ.

ನಾನು ಬೇಡ ಎಂದು ಯಾವಾಗ ಹೇಳಿದೆ ? ತಮಗೆ ಉದಾಹರಣೆ ಕೊಡುತ್ತೇನೆ. ಇದರ ಬಗ್ಗೆ ಚರ್ಚೆ ಇವೊತ್ತು ಇಲ್ಲ. ಆದ್ದರಿಂದ ನಾನು ಹೇಳಲಿಕ್ಕೆ ಹೋಗುವುದಿಲ್ಲ. ಸೂಚ್ಯವಾಗಿ ತಿಳಿಸಬೇಕೆಂದರೆ ೩೫ ಸಾವಿರ ಕೋಟಿ ರೂಪಾಯಿಗಳನ್ನು ಪಬ್ಲಿಕ್ ಸೆಕ್ಟರ್‌ನಲ್ಲಿ ಹಾಕಿದ್ದೇವೆ. ಈ ೩೫ ಸಾವಿರ ಕೋಟಿ ರೂಪಾಯಿ ಹಣ ಯಾರದು ? ನಮ್ಮ ಜನತೆಗೆ ಅದರಿಂದ ಪ್ರತಿಫಲ ಏನು ಸಿಕ್ಕಿತು ಎಂಬುದನ್ನು ನೋಡಬೇಕಾಗುತ್ತದೆ. ನಾನು ಇದು ಐಡಿಯಾಲಾಜಿಕಲ್ ಎಂದು ಹೇಳುವುದಿಲ್ಲ. for me it is not just an ideological question. ಇದರಿಂದ ಜನತೆಗೆ ಪ್ರತಿಫಲ ಸಿಕ್ಕಬೇಕು. ಅದು ಇಲ್ಲದಿದ್ದರೆ ನಾವು ಪಬ್ಲಿಕ್ ಸೆಕ್ಟರ್ ಅಂಡರ್-ಟೇಕಿಂಗ್ಸ್ ಎಲ್ಲಾ ಒಟ್ಟಿಗೆ ತೆಗೆದುಕೊಂಡು ನೋಡಿದರೆ ಕೇವಲ ಎರಡು ಪರ್‌ಸೆಂಟ್ ಮಾತ್ರ ರಿಟರ್ನ್ ಬರುತ್ತದೆ. ಅದರಲ್ಲಿ ಐದಾರು ಬಿಟ್ಟರೆ ಬಾಕಿ ಎಲ್ಲದರಲ್ಲಿಯೂ ಕೋಟ್ಯಾನು ಕೋಟಿ ರೂಪಾಯಿ ಲಾಸ್. ಈಗ ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್, ಆಯಿಲ್ ಅಂಡ್ ನ್ಯಾಚುರಲ್ ಗ್ಯಾಸ್ ಕಮಿಷನ್, ಇಂಡಿಯನ್ ಆಯಿಲ್ ಕಾರ್ಪೊರೇಷನ್, ಏನು ಇವೆ, ಅಲ್ಲಿ ಬೆಲೆ ಹೆಚ್ಚು ಮಾಡಿದರೆ ಆಯಿತು ಅಷ್ಟೆ. ನಾನು ಮಾನ್ಯ ಕೃಷ್ಣನ್‌ರವರಲ್ಲಿ ಕೇಳುತ್ತೇನೆ ಸ್ಟೀಲ್ ದರ ಏತಕ್ಕೆ ಹೆಚ್ಚು ಆಗಬೇಕು ? ಅಷ್ಟಾದರೂ ಕೂಡ ಪ್ರತಿದಿವಸ ಒಂದೂವರೆ ಕೋಟಿ ರೂಪಾಯಿ ಸೇಯಿಲ್‌ನವರು ಏತಕ್ಕೆ ಲುಕ್ಸಾನು ಮಾಡಬೇಕು. ಇದು ಯಾರ ದುಡ್ಡು ? ಕೆಲವು ಕಮ್ಯುನಿಸ್ಟ್ ದೇಶಗಳಲ್ಲಿ ಅಲ್ಲಿಯ ವಾತಾವರಣವೇ ಬೇರೆ. ಅಲ್ಲಿಯ ಪರಿಸ್ಥಿತಿಯೇ ಬೇರೆ. ಅಲ್ಲಿಯ ಡಿಸಿಪ್ಲಿನ್ನೇ ಬೇರೆ ಮತ್ತು ಅಲ್ಲಿಯ ಜವಾಬ್ದಾರಿಯೇ ಬೇರೆ. ಇವೊತ್ತು ನಾವು ಅದೇ ರೀತಿಯ ವಾತಾವರಣ ನಮ್ಮಲ್ಲಿ ಇದ್ದರೆ ಪ್ರತಿಯೊಂದರಲ್ಲೂ ಲಾಭ ಮಾಡಬಹುದು. ಆದರೆ ನಮ್ಮಲ್ಲಿ ಆ ವಾತಾವರಣ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರು ತಮ್ಮ ಪ್ರಶ್ನೆಗೆ ಉತ್ತರ ಕೊಡಲಿಕ್ಕೆ ನಮ್ಮನ್ನು ಬಿಡುತ್ತಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಸದಸ್ಯರು ಕೈಗಾರಿಕೆ ಖಾತೆ ಡಿಮ್ಯಾಂಡ್ ಬಂದಾಗ ಹೇಳಬಹುದು. ನಾನು ಇಲ್ಲಿಯೇ ಹಾಜರು ಇರುತ್ತೇನೆ. ಆ ದಿವಸ ವಿವರವಾಗಿ ಚರ್ಚೆ ಮಾಡೋಣ. ಇವೊತ್ತು ನಮ್ಮ ಭದ್ರಾವತಿ ಕಾರ್ಖಾನೆಯಲ್ಲಿ ಪ್ರತಿ ತಿಂಗಳಿಗೆ ಒಂದು ಕೋಟಿ ರೂಪಾಯಿ ನಷ್ಟವಾಗುತ್ತಿದೆ ಇದಕ್ಕೆ ಕಾರಣ ಬೇರೆ ಬೇರೆ ಇರಬಹುದು. ನಮ್ಮ ಮಾನ್ಯ ಖರ್ಗೆಯವರು ನಮ್ಮ ಭಾಗಕ್ಕೆ ಹೆಚ್ಚು ಹಣ ಕೊಡಿ ಎಂದು ಕೇಳಿದರು. ಅಲ್ಲಿ ನಷ್ಟ ಆಗದೇ ಇದ್ದರೆ ಆ ದುಡ್ಡು ಕೃಷ್ಣಾಕ್ಕೆ ಹಾಕಬೇಕೋ, ಮತ್ತೆ ಯಾವ ಒಳ್ಳೆಯ ಕೆಲಸಕ್ಕೆ ಹಾಕಬೇಕೋ ಹಾಕುತ್ತಿದ್ದೆವು.

ಶ್ರೀ ಕೆ. ಹೆಚ್. ಪಾಟೀಲ್.—ಒಂದು ಕೋ-ಆಪರೇಟೀವ್ ದಿವಾಳಿ ಆಯಿತು ಅಂದರೆ, ಎಲ್ಲಾ ಕೋ-ಆಪರೇಟೀವ್ ಮೂವ್‌ಮೆಂಟ್ ಬಿಡಬೇಕೇ ? ತಪ್ಪು ಮಾಡಿದವರನ್ನು ಜೈಲಿಗೆ ಹಾಕಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಪಬ್ಲಿಕ್ ಸೆಕ್ಟಾರ್ ಹೋಗಬೇಕೆಂದು ನಾನು ಹೇಳಿಲ್ಲ. ಭದ್ರಾವತಿ ಕಾರ್ಖಾನೆ ವಿಚಾರದಲ್ಲಿ ಏನಾದರೂ ಪ್ರಪೋಸಲ್ ಬಂದಿದ್ದರೆ ಅದು ಕೇಂದ್ರದಿಂದ ಟಾಟಾ ಅವರನ್ನು ಕೇಳಬೇಕೆಂದು ಕೇಂದ್ರ ಸರ್ಕಾರದಿಂದ ಹೋಗಿದೆ.

ಶ್ರೀ ಕೆ. ಎಚ್. ಪಾಟೀಲ್.—ಕೇಂದ್ರ ಸರ್ಕಾರದ ವಿಚಾರ ಬೇಡ, ನಾವು ಸರಿಪಡಿಸೋಣ.

ಶ್ರೀ ರಾಮಕೃಷ್ಣ ಹೆಗಡೆ.—ಈಗ ಅದರ ಬಗ್ಗೆ ಚರ್ಚೆ ಬೇಡ. ಒಂದು ಪರಿಸ್ಥಿತಿ ಏನು ಬಂದಿದೆ. ಪ್ರತಿಯೊಂದು ಪಬ್ಲಿಕ್ ಸೆಕ್ಟಾರ್ ಅಂಡರ್‌ಟೇಕಿಂಗ್‌ನಲ್ಲೂ ಅದು ಲಾಭದಾಯಕವಾಗಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಲಾಭದಾಯಕವಾಗಿ ಕೆಲಸ ಮಾಡದೇ ಇದ್ದರೆ, ಯಾವ ಉದ್ದೇಶದಿಂದ ಅವುಗಳನ್ನು ಸ್ಥಾಪನೆ ಮಾಡಿದ್ದೇವೆಯೋ ಆ ಉದ್ದೇಶ ಹಾಳಾಗುತ್ತದೆ.

ಶ್ರೀ ಕೆ ಬಿ. ಶಾಣಪ್ಪ —ಅಧ್ಯಕ್ಷರೆ, ಮಾನ್ಯ ಸಭಾನಾಯಕರು ಪ್ರತಿಯೊಂದು ಸಾರಿ ಮಾತನಾಡಿದಾಗ ಸೇಲ್ಸ್‌ಟ್ಯಾಕ್ಸ್ ಆಗಲಿ ಅಥವಾ ಬೇರೆ ಟ್ಯಾಕ್ಸ್ ಆಗಲಿ, ಅದನ್ನು ಎಕ್ಸ್‌ಪೆರಿಮೆಂಟಲ್ ಬೇಸಿಸ್ ಮೇಲೆ ಒಂದು ವರ್ಷದ ಸಲುವಾಗಿ ನೋಡೋಣ ಲಾಭದಾಯಕ ಆಗದೇ ಇದ್ದರೆ ಪುನಃ ಮುಂದೆ ಮಾಡೋಣ ಎಂದು ಹೇಳಿದ್ದಾರೆ. ಅವರು ಹೇಳಿದ ಹಾಗೆ ೫ ವರ್ಷದವರೆಗೂ ಇರುವುದಿಲ್ಲ. ಮುಂದಿನ ವರ್ಷ ಮಾನ್ಯ ದೇವೇಗೌಡರಿಗೋ ಅಥವಾ ಮಾನ್ಯ ಜೆ. ಹೆಚ್. ಪಟೇಲ್‌ರಿಗೋ ಬಿಟ್ಟರೆ ಅವರೂ ಎಕ್ಸ್‌ಪೆರಿಮೆಂಟಲ್ ಬೇಸಿಸ್ ಆಗಿಯೇ ಈ ಟ್ಯಾಕ್ಸ್ ಕಂಟಿನ್ಯೂ ಮಾಡುತ್ತಾರೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಎಕ್ಸ್‌ಪೆರಿಮೆಂಟಲ್ ಬೇಸಿಸ್ ಅಂದರೆ ಆ ಅರ್ಥ ಇಲ್ಲ. ಹೋದ ವರ್ಷ ಕೆಲವು ಸರಕುಗಳ ಮೇಲೆ ನಾವು ಕಡಿಮೆ ಮಾಡಿದ್ದೇವೆ. ಕೆಲವು ಸರಕುಗಳ ಮೇಲೆ ಸ್ವಲ್ಪ ಹೆಚ್ಚು ಮಾಡಬೇಕೆಂದು ಮಾಡಿದ್ದೇವೆ. ನಮ್ಮ ಅನುಭವ ಏನು ಡೈವರ್ಷನ್ ಆಫ್ ಟ್ರೇಡ್ ಆಯಿತು. ಆದರಿಂದ ಕನಿಷ್ಟ ಪಕ್ಷ ನಾಲ್ಕೈದು ಕೋಟಿ ರೂಪಾಯಿ ಕಡಿಮೆಯಾಗಿರಬಹುದು. ಈಗ ಸೆಸ್ಸ್ ತೆಗೆದುಕೊಳ್ಳಿ ೨ ಪರ್‌ಸೆಂಟ್‌ನಿಂದ ೧ ಪರ್‌ಸೆಂಟ್‌ಗೆ ಇಳಿಸಿದ್ದೇವೆ. ಒಂದು ಪರ್‌ಸೆಂಟ್ ಮಾಡಿದರೂ ಕೂಡ ಆದರಿಂದ ಆದಾಯ ನಮಗೆ ಹೆಚ್ಚು ಬರುತ್ತದೆ. ಪ್ರತಿಯೊಂದು ಐಟಮ್ ಮೇಲೂ ನೋಡಬೇಕು. ಯಾವುದೇ ಟ್ಯಾಕ್ಸೇಷನ್ ಪ್ರಪೋಸಲ್ ಶಾಶ್ವತ ಅಲ್ಲ. ಮಾರ್ಜಿನಲ್ ಅಡ್ಜಸ್ಟ್‌ಮೆಂಟ್ ಮಾಡಿಕೊಳ್ಳಲಿಕ್ಕೆ ಅವಕಾಶ ಇದೆ, ಮಾಡಿಕೊಳ್ಳಬೇಕು.

ಶ್ರೀ ಬಿ. ಬಸವಲಿಂಗಪ್ಪ.—ನಾನು ಹೋದ ಸಾರಿ ಬಡ್ಜೆಟ್ ಅಧಿವೇಶನದಲ್ಲಿ ಮಾತನಾಡಿದ್ದೆ ಈಗ ಸ್ವಲ್ಪ ಮಾತನಾಡಿದ್ದೇನೆ. ಈ ಸಾರಿ ಮಾತನಾಡಿದ್ದರಲ್ಲಿ ಏನೇನು ಹೇಳಿದ್ದೇನೆ ಎಂದರೆ ಹೆಗಡೆಯವರು ಅಧಿಕಾರಕ್ಕೆ ಬಂದ ಮೇಲೆ ಒಂದೆರಡು ವರ್ಷಗಳಲ್ಲಿ ಏನೇನು ಭರವಸೆಗಳ ಬಾವುಟವನ್ನು ಹಾರಿಸಿದರು. ಈ ದೇಶದಲ್ಲಿ ಅವರ ಬಗ್ಗೆ ಕಾರ್ಯಗತ ಮಾಡಲಿಕ್ಕೆ ಸಿದ್ಧರಾಗಿದ್ದಾರೋ ? ಅಥವಾ ಹಾಗೆಯೇ ಭರವಸೆಯ ಬಾವುಟಗಳನ್ನು ಹಾರಿಸಿಕೊಂಡು ಹೋಗುತ್ತಾರೋ ? ಇದು ಒಂದನೆಯದು. ಇನ್ನು ಎರಡನೆಯದು ಅಂದರೆ ಬಡ್ಜೆಟ್‌ನಲ್ಲಿ ಷೆಡ್ಯೂಲ್ ಕ್ಯಾಸ್ಟ್ ಮತ್ತು ಬ್ಯಾಕ್‌ವರ್ಡ್‌ಕ್ಲಾಸ್‌ನವರಿಗೆ ಎಷ್ಟು ಹಣ ನಿಗದಿ ಮಾಡಿದ್ದಾರೆ ಒಂದು ತಲೆಗೆ ಎರಡೂವರೆ ರೂಪಾಯಿ ಷೆಡ್ಯೂಲ್‌ಕ್ಯಾಸ್ಟ್‌ನವರಿಗೆ, ಒಂದು ರೂಪಾಯಿ ಬ್ಯಾಕ್‌ವರ್ಡ್‌ಕ್ಲಾಸ್‌ನವರಿಗೆ ಎಂದು ನಿಗದಿ ಮಾಡಿದ್ದಾರೆ. ಇದು ಬಡ್ಜೆಟ್‌ನಲ್ಲಿ ಇಟ್ಟಿರುವ ಪ್ರಾವಿಜನ್. ಇದು ಏನಾಗಿದೆ ಅವರ ಮೂಗಿನ ತುದಿಗೆ ತುಪ್ಪ ಹಚ್ಚಿ , ತುಪ್ಪದ ವಾಸನೆ ಕುಡಿದುಕೊಂಡಿರಿ ಎಂದು ಹೇಳಿದ ಹಾಗಾಗಿದೆ ಇನ್ನು ಮೂರನೆಯದು ಅಂದರೆ ಸೇಲ್ಸ್‌ಟ್ಯಾಕ್ಸ್, ಎಂಟ್ರಿಟ್ಯಾಕ್ಸ್ ಹಾಕಿದ್ದೀರಿ. ಆದರೆ ಒಂದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಕರ್ನಾಟಕ ರಾಜ್ಯದಲ್ಲಿ ಸೇಲ್ಸ್ ಅಂಡ್ ಪರ್ಚೇಸ್ ನಡೆಯು

ತಕ್ಕದ್ದಕ್ಕೆ ಧಕ್ಕೆ ಬಂದು ಬೇರೆ ರಾಜ್ಯಗಳಿಗೆ ವ್ಯಾಪಾರ ಮಾಡಲಿಕ್ಕೆ ಹೋಗುವುದಾದರೆ ನಿಮಗೆ ಸೇಲ್ಸ್ ಟ್ಯಾಕ್ಸ್ ಬರುವುದಿಲ್ಲ ಅದಕ್ಕೆ ತಮ್ಮ ನೀತಿ ಏನು ? ಅದರ ಬಗ್ಗೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೆ, ಮಾನ್ಯ ಸದಸ್ಯರ ಕೊನೆಯ ಪ್ರಶ್ನೆಗೆ ನಾನು ಮೊದಲು ಬರುತ್ತೇನೆ ಬೇರೆ ರಾಜ್ಯಗಳಿಗೆ ಡೈವರ್ಟ್ ಆಗುತ್ತದೆ ಎಂದು ತಾವು ಏನು ಹೇಳುತ್ತಿದ್ದೀರಿ, ಅದರ ಬಗ್ಗೆ ನಾನು ಮೊದಲೇ ಹೇಳಿದೇನೆ. ತಮಗೆ ಅಂಕಿಸಂಖ್ಯೆ ಕೊಡುವುದಾದರೆ, ೧೯೮೨ನೇ ಇಸವಿಯಲ್ಲಿ ಕಮರ್ಷಿಯಲ್ ಟ್ಯಾಕ್ಸ್‌ನಿಂದ ಎಷ್ಟು ಆದಾಯ ಇತ್ತೋ ಹೆಚ್ಚು ಕಡಿಮೆ ಅದರ ಎರಡರಷ್ಟು ಆದಾಯ ನಮಗೆ ಆಗುತ್ತದೆ. ಈ ವರ್ಷ ನಮಗೆ ೭೦೦ ಕೋಟಿ ರೂಪಾಯಿ ಬರುತ್ತಿದೆ. ೧೯೮೦ರಲ್ಲಿ ೩೩೦ ಕೋಟಿ ರೂಪಾಯಿಯಷ್ಟು ಇತ್ತು. ಆದ್ದರಿಂದ ಇಷ್ಟೇ ಇರಬೇಕೆಂದು ಒಂದೇ ನಿರ್ದಿಷ್ಟವಾದ ಧೋರಣೆ ಇಟ್ಟುಕೊಂಡು ಹೋಗಲಿಕ್ಕೆ ಆಗುವುದಿಲ್ಲ. ಯಾವುದಾದರೂ ಒಂದು ವಸ್ತು ಹೆಚ್ಚು ಖರ್ಚಾಗತಕ್ಕದ್ದಕ್ಕೆ ಆಂಧ್ರದಲ್ಲಿ ಬಹಳ ಹೆಚ್ಚು ಮಾಡಿದರೆ ಆಗ ನಾವು ಸ್ವಲ್ಪ ಹೆಚ್ಚು ಮಾಡಬೇಕು. ಅದರಲ್ಲಿ ನಾವು ಬಹಳ ಕಡಿಮೆ ಮಾಡಿದ್ದೇವೆ. ನಾವು ಬಹಳ ಹೆಚ್ಚು ಮಾಡಿದರೆ ಸಾಮಾನ್ಯವಾಗಿ ಅಲ್ಲಿಗೆ ಹೋಗುತ್ತಾರೆ ಏಕೆಂದರೆ ಎರಡೂ ರಾಜ್ಯಗಳ ಗಡಿ ಬಹಳ ಹತ್ತಿರದಲ್ಲಿ ಇವೆ.

ಶ್ರೀ ರಾಮಕೃಷ್ಣ ಹೆಗಡೆ.—ತಮಿಳುನಾಡು ೨೦ ಮೈಲಿ ದೂರದಲ್ಲಿದೆ. ಆಂಧ್ರಪ್ರದೇಶ ೪೦ ಮೈಲಿ ದೂರದಲ್ಲಿದೆ. ಆದ್ದರಿಂದ ಈ ರೀತಿಯ ಧೋರಣೆಯನ್ನು ಇಟ್ಟುಕೊಳ್ಳಬೇಕು. ಹರಿಜನ ಗಿರಿಜನ ಮತ್ತು ಹಿಂದುಳಿದ ವರ್ಗಗಳವರಿಗೆ ಕೊಟ್ಟಿರುವುದರಲ್ಲಿ ತಲಾ ಇಷ್ಟಿಷ್ಟು ಆಗುತ್ತದೆ ಎಂದು ಮಾನ್ಯ ಬಸವಲಿಂಗಪ್ಪನವರು ಹೇಳಿರುತ್ತಾರೆ. ತಲಾ ಎರಡು-ಎರಡೂವರೆ ಆದರೂ ಕೂಡ ನೂರಕ್ಕೆ ಎಂಬತ್ತರಷ್ಟು ಹೆಚ್ಚು ಮಾಡಬೇಕು. ಮಾಡಬಾರದೆಂದು ನಾನು ಹೇಳುವುದಿಲ್ಲ. ಭರವಸೆಗಳ ಬಾವುಟ ಎಂದು ಹೇಳಿದ್ದಾರೆ. ನಾವು ೧೯೮೩ರಲ್ಲಿ ಆರಿಸಿ ಬಂದಿದ್ದೇವೆ, ೧೯೮೩–೮೫ರವರೆಗೆ ನಾವು ಕೊಟ್ಟಂತಹ ಆಶ್ವಾಸನೆಗಳನ್ನು ನೂರಕ್ಕೆ ಎಂಬತ್ತರಷ್ಟು ನಾವು ಪೂರೈಸಿದ್ದೇವೆ. ಅದಕ್ಕಾಗಿ ಜನ ನಮ್ಮನ್ನು ಪುನಃ ಆರಿಸಿ ಕಳುಹಿಸಿದ್ದಾರೆ. ನಾವು ಈ ಸಾರಿ ಚುನಾವಣೆಯಲ್ಲಿ ಆರಿಸಿ ಬಂದು ನಾಲ್ಕು ತಿಂಗಳು ಕೂಡ ಆಗಿಲ್ಲ ಈ ನಾಲ್ಕು ತಿಂಗಳುಗಳಲ್ಲಿ ಅನೇಕ ಕಾರ್ಯ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ನಾವು ಕೊಟ್ಟಂತಹ ಭರವಸೆಗಳನ್ನು ಜಾರಿಗೆ ತರುತ್ತಿದ್ದೇವೆ. ಈಗ ಯಾವುದೇ ದೊಡ್ಡ ಚುನಾವಣೆಗಳು ಬರುತ್ತಿಲ್ಲ. ಜಿಲ್ಲಾ ಪರಿಷತ್ ಚುನಾವಣೆ ಬರಬಹುದು. ಅದು ಬರುತ್ತದೆಂದು ನಮಗೆ ಗೊತ್ತಿರಲಿಲ್ಲ. ಜಿಲ್ಲಾ ಪರಿಷತ್ ಮಸೂದೆ ಒಂದು ವರ್ಷದಿಂದ ಕೇಂದ್ರದಲ್ಲಿ ನೆನೆಗುದಿಯಲ್ಲಿ ಬಿದ್ದಿತ್ತು. ಅದು ಬರುವುದು ವರ್ಷವಾಗುತ್ತದೆಯೋ, ಆರು ತಿಂಗಳು ಆಗುತ್ತದೆಯೋ ಎಂದು ಹೇಳುವುದಕ್ಕೆ ಆಗುತ್ತಿರಲಿಲ್ಲ ಅಂತೂ ಈಗ ಬಂದಿದೆ, ಬರಲಿ. ಪ್ರಾಮಾಣಿಕವಾಗಿ ನಾವು ಕೊಟ್ಟಂತಹ ಭರವಸೆಗಳನ್ನು ಈಡೇರಿಸುವ ದಿಶೆಯಲ್ಲಿ ನಡೆದುಕೊಳ್ಳುತ್ತೇವೆ. ನಾವು ಕೊಟ್ಟಂತಹ ಭರವಸೆಗಳನ್ನು ಜಾರಿಗೆ ತಂದಿದ್ದೇವೆ.

ಶ್ರೀ ಬಿ. ಎ. ಉಮರಬ್ಬ.—ನಮ್ಮ ಜಿಲ್ಲೆಯಲ್ಲಿ ಮಳೆ ಹೋಗುತ್ತಾ ಇದೆ, ಯಕ್ಷಗಾನ ಪ್ರಾರಂಭ ವಾಗುತ್ತಾ ಇದೆ. ಯಕ್ಷಗಾನ ಕಲೆಯ ಬಗ್ಗೆ ನಿಮ್ಮ ಪ್ರೋತ್ಸಾಹ ಕಾಣುತ್ತಿಲ್ಲ. ಈಗ ಮುನ್ನೂರು ಸಿಸಿ ದ್ವಿಚಕ್ರ ವಾಹನಗಳಿಗೆ ಇದ್ದಂತಹ ೧೯ ರೂಪಾಯಿ ತೆರಿಗೆಯನ್ನು ೩೦ ರೂಪಾಯಿಗಳವರೆಗೂ ಸುಮಾರು ಶೇಕಡ ೫೦ರಷ್ಟು ಕರವನ್ನು ಏರಿಸಿದ್ದೀರಿ. ಸಾಮಾನ್ಯವಾದ ಯಾವುದೇ ಉತ್ಪಾದನೆಯನ್ನು ಹೆಚ್ಚಿಸಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ದ್ವಿಚಕ್ರ ವಾಹನಗಳಿಗೆ ಕರವನ್ನು ಏರಿಸಿದ್ದು ನಿಜ ಅದನ್ನು ಪರಿಷ್ಕರಣ ಮಾಡಿ ಸ್ವಲ್ಪ ಕಡಿಮೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಶೇಕಡ ೫೦ಕ್ಕಿಂತ ಸ್ವಲ್ಪ ಕಡಿಮೆ ಮಾಡುತ್ತೇನೆ. ಯಕ್ಷಗಾನ ಕಲೆ ದಕ್ಷಿಣ ಕನ್ನಡದ್ದೆ ಅಲ್ಲ. ಅದು ಉತ್ತರ ಕನ್ನಡ ಜಿಲ್ಲೆಯದು ಹೌದು. ಯಕ್ಷಗಾನ ಕಲೆಗೆ ಪ್ರೋತ್ಸಾಹ ಕೊಡಬೇಕು ನಿಜ. ನಮಗೆ ಯಕ್ಷಗಾನದ ಬಗ್ಗೆ ಇಂತಹ ಕೆಲಸ ಆಗಬೇಕೆನ್ನುವ ಒಂದು ಸೂಚನೆಯೂ ನಮಗೆ ಬಂದಿಲ್ಲ. ಮಾನ್ಯ ಉಮರಬ್ಬರವರು ಕೂಡ ಏನೂ ಬರೆದಿಲ್ಲ. ಯಾವುದಾದರೂ ಸಂಸ್ಥೆ ಇದ್ದು ಸಹಾಯ ಮಾಡಬೇಕೆಂದು ಕೇಳಿದರೆ ಸಂತೋಷದಿಂದ ಮಾಡುತ್ತೇನೆಂದು ಹೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಎ. ಉಮರಬ್ಬ.—ಮಾನ್ಯ ಶಿವರಾಮಕಾರಂತರ ಒಂದು ಸಂಸ್ಥೆಯಿದೆ, ಕಾರಣಾಂತರ ಗಳಿಂದ ಅದು ಸರಿಯಾಗಿ ನಡೆಯುತ್ತಿಲ್ಲ. ಮಾನ್ಯ ಶಿವರಾಮಕಾರಂತರು ನನಗಿಂತ ಉತ್ತಮವಾದ

ಸಲಹೆಗಳನ್ನು ಕೊಡಬಲ್ಲರು. ಇದನ್ನು ಪರ್ಯಾಲೋಚಿಸಿ ತಮಗಿರುವ ಅನುಕಂಪವನ್ನು ಅನುಷ್ಠಾನಕ್ಕೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

SRI BLALIUS D SOUZA.—Sir, the Hon'ble Chief Minister in his Budget Speech has stated that he will rationalise the sales tax and see that no diversion of trade to other Statrs take place. Now he has increased the entry tax which may result in diversion of trade particularly textile industry to the other neighbouring States where the tax rate is less.

SRI RAMAKRISHNA HEGDE.—Sir, there is no such possibility of diversion of trade in the textile industry because textile is an essential commodity. There is a gereral impression that entry tax has multi-point effect and many traders who met me also gave me this kind of impression, but it does not have the multi point effect. Regarding aboilition of octroi, it was done with a view to remove the difficulties, harassment and corruption involved in connection with the octroil and we have imposed entry tax in lieu of octori and therefore we cannot remove it.

ಶಾಸನ ಕಾರ್ಯಕಲಾಪಗಳು

೧೯೮೫ನೇ ಇಸವಿಯ ರಾಜ್ಯದ ಬಳಕೆ ಉಪಯೋಗ ಹಾಗೂ ಮಾರಾಟಕ್ಕಾಗಿ ಸ್ಥಳೀಯ ಪ್ರದೇಶದೊಳಗೆ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕ.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೆ, (ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ) ೧೯೮೫ನೇ ಇಸವಿಯ ರಾಜ್ಯದ ಬಳಕೆ, ಉಪಯೋಗ ಹಾಗೂ ಮಾರಾಟಕ್ಕಾಗಿ ಸ್ಥಳೀಯ ಪ್ರದೇಶದೊಳಗೆ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎ ಲಕ್ಷ್ಮೀಸಾಗರ್ —ಮಾನ್ಯ ಅಧ್ಯಕ್ಷರೆ, ಈ ವಿಧೇಯಕದ ಮೇಲೆ ಸದಸ್ಯರು ವಿಪುಲವಾದ ಚರ್ಚೆಯನ್ನು ಮಾಡಿದ್ದಾರೆ. ತಮ್ಮ ಟೀಕೆಟಿಪ್ಪಣಿಗಳನ್ನು ತಿಳಿಸಿದ್ದಾರೆ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಅಧ್ಯಕ್ಷರೆ ಎಂಟ್ರಿ ಟ್ಯಾಕ್ಸ್ ೧ ರೂಪಾಯಿ ಇದ್ದುದನ್ನು ೨ ರೂಪಾಯಿ ಮಾಡಿದ್ದಾರೆ ಹೇಗೆ ? ನಮ್ಮ ರಾಜ್ಯದಲ್ಲಿ ಕಡಿಮೆ ವ್ಯಾಪಾರ ಆಗುತ್ತದೆ ಎಂದು ಚೇಂಬರ್ಸ್ ಆಫ್ ಕಾಮರ್ಸ್‌ನವರು ರೆಪ್ರಸೆಂಟೇಶನ್ಸ್ ಮಾಡಿದ್ದಾರೆ. ದಯವಿಟ್ಟು ಈಗಲಾದರೂ ಇದನ್ನು ಕಡಿಮೆ ಮಾಡಬೇಕೆಂದು ಹೇಳುತ್ತಾ ನಾನು ಈ ಮಸೂದೆಯನ್ನು ವಿರೋಧಮಾಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸಭಾಧ್ಯಕ್ಷರೆ, ಈ ತಿದ್ದುಪಡಿ ವಿಧೇಯಕದ ಬಗ್ಗೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಹೇಳಿದಹಾಗೆ ಏನೂ ಬದಲಾವಣೆಯಾಗುವುದಿಲ್ಲವೆಂದು ಅವರೇ ತಿಳಿಸಿದ್ದಾರೆ. ಸಾಕಷ್ಟು ಇದರ ಬಗ್ಗೆ ಚರ್ಚೆಯಾಗಿದೆ ಈ ತಿದ್ದುಪಡಿ ಮಸೂದೆಯನ್ನು ಪಾಸ್ ಮಾಡಿಕೊಡಬೇಕೆಂದು ಸನ್ಮಾನ್ಯ ಸದಸ್ಯರುಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.